Azim Premji University
ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ
ಒಂದು ಪ್ರಕಟಣೆ

ಲರ್ನಿಂಗ್ ಕರ್ವ್

ಸಂಚಿಕೆ 3, ಮಾರ್ಚ್ 2016

# ಶಾಲೆಗಳಲ್ಲಿ ಸಾಮರ್ಥ್ಯವರ್ಧನೆಯ ಪರಿಸರ





05 ದೃಷ್ಟಿಕೋನಗಳು

55 ಅನುಭವಗಳು ಮತ್ತು ಒಳನೋಟಗಳು

105 ವಿದ್ಯಾರ್ಥಿವಾಣಿ

**ಸಂಪಾದಕ ಮಂಡಳಿ**
ಚಂದ್ರಿಕಾ ಮುರಳೀಧರ್
ಇಂದುಮತಿ ಎಸ್
ಮಧುಮಿತಾ ಸುಧಾಕರ್
ಪ್ರೇಮಾ ರಘುನಾಥನ್
ಸೈಲೇನ್ ರೂಟ್ರೆ

**ಸಲಹೆಗಾರರು**
ರಾಂಗೋಪಾಲ್ ವಲ್ಲತ್
ಎಸ್. ಗಿರಿಧರ್
ಉಮಾಶಂಕರ್ ಪೆರಿಯೋಡಿ

**ಭಾಷಾಂತರ ಪರಿಷ್ಕರಣೆ ಮತ್ತು ಕನ್ನಡ ಆವೃತ್ತಿ ಸಂಪಾದನೆ**
ಜೈಕುಮಾರ್ ಮರಿಯಪ್ಪ

**ವಿನ್ಯಾಸ**
ಪೆಂಟಗಾನ್ ಕಮ್ಯುನಿಕೇಷನ್ ಪ್ರೈ. ಲಿಮಿಟೆಡ್
+91 080 22212942/946

**ಮುದ್ರಣ**
ಎಸ್ ಸಿ ಪಿ ಎಲ್, ಬೆಂಗಳೂರು - 560 062
+91 80 2686 0585, 98450 42233
www.scpl.net

ದಯವಿಟ್ಟು ಗಮನಿಸಿರಿ: ಈ ಸಂಚಿಕೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಆಯಾ ಲೇಖಕರದ್ದೇ ಆಗಿರುತ್ತವೆ ಮತ್ತು ಅಜೀಂ ಪ್ರೇಂಜಿ ಪ್ರತಿಷ್ಠಾನವು ಆ ಬಗ್ಗೆ ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.

---

"ಲರ್ನಿಂಗ್ ಕರ್ವ್ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಒಂದು ಶೈಕ್ಷಣಿಕ ಪ್ರಕಟಣೆಯಾಗಿದ್ದು ಸಾರ್ವಕಾಲಿಕ ಮಹತ್ವವುಳ್ಳ ಮತ್ತು ಮೌಲ್ಯವುಳ್ಳ ಸಾಂದರ್ಭಿಕ ಹಾಗು ನಿರ್ದಿಷ್ಟ ವಿಷಯಾಧಾರಿತ ಚರ್ಚಾ ವಿಷಯಗಳನ್ನು ಶಿಕ್ಷಕರು, ಶಿಕ್ಷಕರ ಶಿಕ್ಷಕರು , ಶಾಲಾ ಮುಖ್ಯಸ್ಥರು, ಶಿಕ್ಷಣಾಧಿಕಾರಿಗಳು ಶಿಕ್ಷಣ ಕಾರ್ಯಕರ್ತರು,ತಂದೆತಾಯಿಗಳು ಹಾಗು ಸರ್ಕಾರೇತರ ಸಂಸ್ಥೆಗಳಿಗೆ ತಲುಪಿಸುವ ಘನೋದ್ದೇಶವನ್ನು ಹೊಂದಿದೆ.ಇದು ವಿಭಿನ್ನ ಅಭಿಪ್ರಾಯಗಳನ್ನು ಮತ್ತು ದೃಷ್ಟಿಕೋನಗಳನ್ನು ವ್ಯಕ್ತ ಪಡಿಸಲು ವೇದಿಕೆಯನ್ನು ಒದಗಿಸುವುದೇ ಅಲ್ಲದೆ ಹೊಸ ಹೊಸ ಮತು ತಜ್ಞ ವಿಚಾರಧಾರೆಗಳನ್ನು, ಆಲೋಚನೆಯನ್ನು ಪ್ರಚೋದಿಸುವ ದೃಷ್ಟಿಕೋನಗಳನ್ನು ಹಾಗು ನವೀನ ಬೋಧನಾ ವಿಧಾನಗಳ ಕಥೆಗಳನ್ನು ತಿಳಿಸಲು ಉತ್ತೇಜಿಸುತ್ತದೆ.ಶೈಕ್ಷಣಿಕ ರಂಗದ ಈ ವಿಚಾರ ಮಂಥನದಲ್ಲಿ ವಿದ್ವತ್ತು ಮತ್ತು ವೃತ್ತಿನಿರತ ಅನುಭವಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರಯತ್ನ ನಮ್ಮದಾಗಿದೆ."

---

# ಸಂಪಾದಕೀಯ



ಮಕ್ಕಳನ್ನು ಸಮಾಜದ ಅತ್ಯುತ್ತಮವಾದ ನಾಗರಿಕರನ್ನಾಗಿ ರೂಪಿಸುವುದು ಸಮಾಜದ ಸೂಕ್ಷ್ಮ ಪ್ರತಿರೂಪವಾಗಿರುವ ಶಾಲೆಯ ಅತ್ಯಂತ ಪ್ರಮುಖ ಕೆಲಸಗಳಲ್ಲಿ ಒಂದು. 'ಸಶಕ್ತಗೊಳಿಸು ಅಥವಾ ಸಾಮರ್ಥ್ಯ ವರ್ಧನೆ' ಎಂಬ ಪದವನ್ನು ಅರ್ಥಕೋಶವು ಈ ರೀತಿಯಾಗಿ ವ್ಯಾಖ್ಯಾನಿಸಿದೆ: ಸಮರ್ಥರನ್ನಾಗಿ ಮಾಡುವುದು, ಅಧಿಕಾರ, ಸಾಧನ ಅಥವಾ ಸಾಮರ್ಥ್ಯವನ್ನು ನೀಡುವುದು, ಸಕ್ಷಮರನ್ನಾಗಿಸುವುದು, ಅಧಿಕೃತಗೊಳಿಸುವುದು, ಸಾಧ್ಯವಾಗುವಂತೆ ಅಥವಾ ಸುಲಭವಾಗುವಂತೆ ಮಾಡುವುದು" (ರ್‍ಯಾಂಡಮ್ ಹೌಸ್ ಅರ್ಥಕೋಶ). ಈ ಸಂಚಿಕೆಯಲ್ಲಿ ನಾವು ಭಾರತದಾದ್ಯಂತದ ಈ ಪ್ರಕ್ರಿಯೆಯ ಭಾಗವಾಗಿದ್ದ ವೃತ್ತಿನಿರತ ಶಿಕ್ಷಕರ/ಶಿಕ್ಷಕಿಯರ, ಶಿಕ್ಷಣ ತಜ್ಞರ ಮತ್ತು ವಿದ್ಯಾರ್ಥಿಗಳ ಅನುಭವಗಳನ್ನು ನಿರೂಪಿಸುವ ಲೇಖನಗಳನ್ನು ಒಗ್ಗೂಡಿಸಿದ್ದೇವೆ– 12,000 ಅಡಿ ಎತ್ತರದಲ್ಲಿರುವ ದೂರದ ಲೇಹ್‌ನ ಒಂದು ಶಾಲೆಯಿಂದ ಕೂಡಾ ಒಂದು ಲೇಖನವಿದೆ. ಔಪಚಾರಿಕ ಕಲಿಕೆ ಮತ್ತು ಶಾಲೆ ಎರಡನ್ನೂ ಒಂದೇ ಅರ್ಥದಲ್ಲಿ ಬಳಸುವುದರಿಂದ ಶಿಕ್ಷಕರನ್ನು ಸಹಜ ಸಾಮರ್ಥ್ಯವರ್ಧಕರೆಂದು ಪರಿಗಣಿಸಲಾಗಿದೆ.

ಕಲಿಯುವುದಕ್ಕೆ ಅಡೆತಡೆಯೊಡ್ಡುವ ಅಂಶಗಳು ಅನೇಕ. ಕಲಿಕೆಗಿರುವ ಬಹುಮುಖ್ಯ ತೊಡಕುಗಳಿಗೆ ಕಾರಣವೂ ಅನೇಕ, ಅವುಗಳಲ್ಲಿ ಕೆಲವು ಹೀಗಿವೆ: ಬಡತನ, ದುರ್ಗಮ ಸ್ಥಳಗಳು, ವಲಸೆ, ನಿರ್ಬಲೀಕರಣ, ಸಾಮಾನ್ಯ ಅನುಕೂಲತೆಗಳ ಕೊರತೆ. ಇವುಗಳಲ್ಲಿ ಒಂದೊಂದೂ ಆತಂಕವೇ ಅದು ಅಲ್ಲದೇ ಅನೇಕ ಬಾರಿ ಇವು ಒಂದಕ್ಕೊಂದು ಕೂಡಿಕೊಂಡು ಮಗುವಿಗೆ ಕೈನಿಲುಕಿನಲ್ಲೇ ಇರುವ ಸೌಲಭ್ಯವನ್ನು ಬಳಸಲು ಅದು ಆಗದಂತೆ ಮಾಡಿಬಿಡುತ್ತವೆ.

ಆದುದರಿಂದ ಶಾಲಾ ಶಿಕ್ಷಣದಲ್ಲಿ "ಸಾಮರ್ಥ್ಯ ವರ್ಧನೆ" ಎಂಬ ಪದವನ್ನು ಒಂದು ಸೂಚಕವಾಗಿ ಬಳಸಿದಾಗ, ಅದನ್ನು ಶೈಕ್ಷಣಿಕ ಮತ್ತು ಜೀವನ ಕೌಶಲ್ಯಗಳನ್ನು ಪಡೆಯಲು ತೊಂದರೆ ಇರುವ ಮಕ್ಕಳಿಗೆ ಅಗತ್ಯವಾದ ಸಮಗ್ರ ಬಹುಮುಖಿ ಚಟುವಟಿಕೆಗಳು ಎಂದು ಹೇಳಬಹುದು. ಶಾಲೆಯು ತಾನು ಯಾರಿಗೆ ಸೇವೆ ಒದಗಿಸುತ್ತಿದೆಯೋ ಆ ಸಮುದಾಯವನ್ನು ತೊಡಗಿಸಿಕೊಂಡು ಕೆಲಸ–ಮಾಡಬೇಕೆಂಬುದು ಈ ವಿಚಾರದಲ್ಲಿ ಇನ್ನೂ ಪ್ರಸ್ತುತವಾಗುತ್ತದೆ. ಯಾಕೆಂದರೆ, ಈ ವಿಚಾರವನ್ನು ಕಾರ್ಯರೂಪಕ್ಕೆ ತರಲು ಶಾಲೆಗಳಿಗೆ ಇಂಥ ಇಡೀ ಸಮುದಾಯದ ಪಾಲ್ಗೊಳ್ಳುವಿಕೆ ಬೇಕೇ ಬೇಕು. ಮಕ್ಕಳ ಶೈಕ್ಷಣಿಕ, ವರ್ತನಾ, ಭಾವನಾ ಮತ್ತು ಆರೋಗ್ಯದ ಅನುಭವಗಳನ್ನು ಸಮೃದ್ಧಪಡಿಸುವಲ್ಲಿ ಸಮುದಾಯದ ಭಾಗವಹಿಸುವಿಕೆಯು ಬಹು ಮುಖ್ಯ. ಅಂತಹ ಸಮುದಾಯದ ಪಾಲ್ಗೊಳ್ಳುವಿಕೆಯು ಸ್ವಾಭಾವಿಕವಾಗಿ ತರಗತಿಯೊಳಗಿನ ಕಲಿಕೆಯನ್ನು ರೂಪಿಸಲು, ಮಗುವಿನ ತುರ್ತು ಅಗತ್ಯಗಳಿಗೆ ಮತ್ತು ಆಕೆಯ ಹಿನ್ನಲೆಗಳಿಗನುಗುಣವಾಗಿ ಸ್ಪಂದಿಸಲು ಮಾಡಲಾಗುವ ಪ್ರಯತ್ನಗಳಿಗೆ ಹಾಗು ಶಾಲೆಯ ಗುರಿಗಳಲ್ಲಿ ಪೋಷಕ–ಪಾಲಕರ/ಮನೆಯ/ಕುಟುಂಬದ ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು ನಡೆಸುವ ಪ್ರಯತ್ನಗಳಿಗೆ ಸಹಜವಾಗಿ ಉತ್ತೇಜನ ನೀಡುತ್ತದೆ.

ಈಗ ನಾವು ಸಹಜವಾಗಿ ಮಕ್ಕಳು ತಾವು ತರಗತಿಯೊಳಗಿನ ಕಲಿಕೆಯ ಅಂಗಭಾಗವಾಗಿದ್ದೇವೆಂದು ಪರಿಭಾವಿಸುವಂತೆ ಅವರನ್ನು ಸಮರ್ಥರಾಗಿಸಲು ಒಂದು ಶಾಲೆಯು ಏನೇನು ಮಾಡಬೇಕು ಎಂಬ ಅಂಶದೆಡೆಗೆ ಬರುತ್ತೇವೆ. ಏಕೆಂದರೆ ಒಂದು ಆದರ್ಶ ಪರಿಸ್ಥಿತಿಯಲ್ಲಿ ಪ್ರತಿ ಮಗುವೂ ತನ್ನ ಕಲಿಕೆಯ ಪ್ರಾಥಮಿಕ ಜವಬ್ದಾರಿಯನ್ನು ತಾನೆ ತೆಗೆದುಕೊಳ್ಳು–ವಂತಾಗಬೇಕು. ಶಾಲೆಯ ಒಟ್ಟಾರೆ ಮುಂಗಾಣ್ಕೆಯನ್ನು ಶಾಲೆಯು ಮಾತ್ರವೇ ಹೊಂದಿರಲು ಸಾಧ್ಯ ಮತ್ತು ಅದು ಹೊಂದಿರುತ್ತದೆ ಕೂಡ, ಆದರೆ ಒಬ್ಬೊಬ್ಬ ವಿದ್ಯಾರ್ಥಿಯ ಯಶಸ್ಸು, ಅವನ ಉದ್ದೇಶ ಮತ್ತು ಗುರಿಗಳು–ಅವುಗಳು ವ್ಯಕ್ತವಾಗಿರಲಿ ಅಥವಾ ಇಲ್ಲದಿರಲಿ – ಆಯಾ ವಿದ್ಯಾರ್ಥಿಯನ್ನೇ ಅವಲಂಬಿಸಿರುತ್ತವೆ. ಶಾಲೆಯ ಪರಿಸರ (ಹೆಚ್ಚಿನ ಸಂದರ್ಭಗಳಲ್ಲಿ ಶಾಲೆಯ ಮುಖ್ಯ ದ್ವಾರದಲ್ಲಿಯೇ ಕಂಡುಬರುತ್ತದೆ.) ಮತ್ತು ಅದರ ವಿದ್ಯಾರ್ಥಿಗಳ ಸಾಧನೆಗಳ ನಡುವೆ ಸಂಬಂಧವಿದೆ–ಯೆಂಬುದು ಬಹಳ ಸ್ಪಷ್ಟ.

ಮಕ್ಕಳು ಅರ್ಧಕ್ಕೆ ಶಾಲೆ ಬಿಡುವ ಪ್ರಮಾಣ ಅದರಲ್ಲೂ ಸರಕಾರಿ ಶಾಲೆಗಳಲ್ಲಿ ಶಾಲೆ ಬಿಡುವ ಪ್ರಮಾಣ ಹತಾಶೆಗೊಳಿಸುವಷ್ಟು ಹೆಚ್ಚಿನ ಪ್ರಮಾಣದಲ್ಲಿದೆ ಎಂಬ ವಿಷಯವು ಸರ್ವವಿದಿತ ಮತ್ತು ಸುದಾಖಲಿತ. ಇದಕ್ಕೆ ಹಲವಾರು ಕಾರಣಗಳಿರಬಹುದು– ಮನೆಯಿಂದ ಶಾಲೆಗಿರುವ ದೂರ, ಪರೀಕ್ಷೆಯಲ್ಲಿ ನಪಾಸು, ಅಸಮರ್ಪಕ ಸೌಲಭ್ಯಗಳು–ಅದರಲ್ಲೂ ಕಿಶೋರಿಯರಿಗೆ ಅಸಮರ್ಪಕ ಸೌಲಭ್ಯಗಳು, ಇತ್ಯಾದಿ. ಹೀಗಿದ್ದರೂ ನಿಜವಾದ ಕಾರಣ ಕುಟುಂಬದ ನಿರೀಕ್ಷೆಗಳು ಮತ್ತು ಒದಗಿಸಲ್ಪಡುವ

ಶಿಕ್ಷಣದ ನಡುವೆ ತಾಳಮೇಳವಿಲ್ಲದಿರುವುದೇ ಆಗಿರಲು ಸಾಧ್ಯವಿದೆ-ಇಲ್ಲಿ ಓದು ಬರಹ ಮತ್ತು ಲೆಕ್ಕ ಮಾಡುವುದನ್ನು ಕಲಿತ ಮಾತ್ರಕ್ಕೆ ಯುವ ಜನ ಸಮರ್ಥರಾಗಲಾರರು. ನಿಜವಾಗಿಯೂ, ಅನೇಕ ಸಂದರ್ಭಗಳಲ್ಲಿ ಇದಕ್ಕೆ ತದ್ವಿರುದ್ಧವಾಗಿರುವುದೇ ಆಗಬಹುದು-ಇಲ್ಲಿ ವಿದ್ಯಾರ್ಥಿಗಳು ಕೆಲಸಕ್ಕೆ ಸೇರಿ ದುಡಿಯುವಷ್ಟೂ ಸಮರ್ಥರಾಗಿರುವುದಿಲ್ಲ ಅಥವಾ ನೆಮ್ಮದಿಯಿಂದ ತಮ್ಮ ಕೌಟುಂಬಿಕ ಮತ್ತು ಪಾರಂಪರಿಕ ವೃತ್ತಿಗಳಿಗೆ ಮರಳಿ ಹೋಗಲೂ ಸಾಧ್ಯವಾಗುವುದಿಲ್ಲ. ಶಿಕ್ಷಕ ಮತ್ತು ಪೋಷಕರು ಪಾಲ್ಗೊಂಡು ಈ ಕಾರಣಗಳಲ್ಲಿ ಕೆಲವನ್ನು ಪರಿಹರಿಸುವ ಪ್ರಯತ್ನವು ಸಾಮರ್ಥ್ಯವರ್ಧನೆ ಪ್ರಕ್ರಿಯೆಯ ಒಂದು ಭಾಗವಾಗುತ್ತದೆ.

ಇನ್ನೊಂದು ಸವಾಲೆಂದರೆ ಕಲಿಕಾ ಮಾಧ್ಯಮದ ಭಾಷೆಯೇ ಬೇರೆ ಹಾಗು ಮಕ್ಕಳ ಮನೆಯ ಭಾಷೆಯೇ ಬೇರೆಯಾಗಿರುವುದು. ಆ ಕಾರಣದಿಂದ ವಿವಿಧ ವಿಷಯಗಳನ್ನು ಕಲಿಯುವಾಗ ಮಕ್ಕಳು ನಮ್ಮ ತರಗತಿಯಲ್ಲಿ ಇವೆರಡನ್ನು ಹೊಂದಾಣಿಕೆ ಮಾಡಲು ಪ್ರತಿದಿನ ಸೆಣಸಾಟ ಮಾಡಬೇಕಾಗುತ್ತದೆ. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿಯುವ-ಸಕಾರಣವಾಗಿಯೇ ಇದನ್ನು ಉತ್ತಮ ಬದುಕಿಗೆ ರಹದಾರಿಯೆಂದು ಕಾಣಲಾಗಿದೆ-ಬಯಕೆಯನ್ನು ಕನಿಷ್ಠ ಪ್ರಾಥಮಿಕ ಶಾಲೆಯಲ್ಲಾದರೂ ವಿದ್ಯಾರ್ಥಿಯ ಮನೆ ಭಾಷೆಯಲ್ಲಿ ಶಿಕ್ಷಣ ನೀಡಿದಾಗ ದೊರಕುವ ಸಹಜ ಅನುಕೂಲಗಳೊಂದಿಗೆ ರಾಜಿಮಾಡಿಸಿಕೊಡುವುದು ಸಾಮರ್ಥ್ಯವರ್ಧನೆಯತ್ತ ನಮ್ಮ ಪಯಣದ ಒಂದು ಭಾಗವಾಗಿದೆ. ಇದು ಭಾರತಕ್ಕೇ ವಿಶಿಷ್ಟವಾದ ಒಂದು ಗುಣಲಕ್ಷಣ. ಇಲ್ಲಿ ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳಲು ನಿರ್ಧರಿಸಿರುವ ಅಸಂಖ್ಯಾತ ಆಕಾಂಕ್ಷೀ ಯುವ ಜನತೆಯು ವಿಶ್ವವಿದ್ಯಾಲಯದ ಹಂತವನ್ನು ತಲುಪಿದಾಗ ಅಡೆತಡೆಗಳನ್ನು ಎದುರಿಸುತ್ತಾರೆ.

ಶಾಲೆಯೆಂಬುದು ನಿಂತ ನೀರಲ್ಲ. ಅದು ಕಾಲದೊಂದಿಗೆ ಬದಲಾಗುತ್ತಿರುತ್ತದೆ; ಮತ್ತು ಬದಲಾಗಬೇಕು ಕೂಡ ಇಲ್ಲದೇ ಹೋದಲ್ಲಿ ಅದು ತತ್ಕಾಲಕ್ಕೆ ಅಪ್ರಸ್ತುತವಾಗುತ್ತದೆ ಯಾವ ಶಾಲೆಯೂ ಹೀಗಾಗುವ ಅಪಾಯವನ್ನು ಎದುರುಹಾಕಿ-ಕೊಳ್ಳುವಂತಿಲ್ಲ. ತನ್ನಿಂದ ಏನನ್ನು ನಿರೀಕ್ಷಿಸಲಾಗಿದೆಯೋ ಅದನ್ನೆಲ್ಲಾ ಶಾಲೆಯು ಪೂರೈಸುವಂತೆ ನೋಡಿಕೊಳ್ಳ-ಬೇಕಾದರೆ ಅದಕ್ಕೆ ಸಂಬಂಧಿಸಿದವರೆಲ್ಲರೂ-ಶಿಕ್ಷಕರು, ಪೋಷಕರು, ಶಾಲಾ ಸಮಿತಿಗಳು ಹಾದಿಯಲ್ಲಿರುವ ಅಡೆತಡೆಗಳನ್ನು ಗುರುತಿಸಿ ನಿಭಾಯಿಸಿ ಬದಲಾವಣೆಗೆ ಚಾಲನೆ ನೀಡಬೇಕು, ಪ್ರೋತ್ಸಾಹಿಸಬೇಕು ಮತ್ತು ಅದನ್ನು ಸುಸ್ಥಿರಗೊಳ್ಳಬೇಕು; ಸಾಮಾಜಿಕ ಮೌಲ್ಯಗಳು ಮತ್ತು ಗುರಿಗಳು ಶಾಲಾ ಸಂಸ್ಕೃತಿಯ ಪ್ರಮುಖ ಉಪಾಂಗಗಳಾಗಿದ್ದು ವಿದ್ಯಾರ್ಥಿಗಳ ಪೀಳಿಗೆಗಳು, ನನ್ನನ್ನೂ ಒಳಗೊಂಡು ಅನ್ಯ ಸಮಾಜದ ರೀತಿ ನೀತಿಯ ಭಾಗವಾಗಿ ಹೋಗಿ ತಮ್ಮ ಪ್ರಗತಿಯಲ್ಲಿ ಹಿನ್ನಡೆಯನ್ನು ಅನುಭವಿಸಿರುವ ಸಾಧ್ಯತೆಗಳೇ ಹೆಚ್ಚು. ಆದರೆ ನಾವು ಇಂದು ಹೆಚ್ಚು ಆಶಾವಾದಿಯಾಗಿರಲು ಸಾಧ್ಯವಿದೆ.

ಏಕೆಂದರೆ ಈಗ ವ್ಯವಸ್ಥೆಯನ್ನು ನಿರ್ದಿಷ್ಟವಾಗಿ ಭಾರತೀಯ ಅಗತ್ಯಗಳಿಗೆ ಹೊಂದಿಕೆಯಾಗುವಂತೆ ರೂಪಿಸಲಾಗುತ್ತಿದೆ.

ಈ ಸಂಚಿಕೆಯಲ್ಲಿ ಜವಬ್ದಾರಿಯುತ ನಾಗರಿಕರಾಗಿ ಸಮುದಾಯವನ್ನು ಪ್ರಕ್ರಿಯೆಯಲ್ಲಿ ಒಳಗೊಳ್ಳುವಂತೆ ಮಾಡಿ ಮಕ್ಕಳ ಸಾಮರ್ಥ್ಯವರ್ಧನೆ ಮಾಡುವ ವಿಷಯವನ್ನು ವಿಷದವಾಗಿ ಹೇಳುವ ಲೇಖನಗಳನ್ನು ಕೊಡಲಾಗಿದೆ. ತಮ್ಮ ಸಮಸ್ಯೆ ಮತ್ತು ಕಾಳಜಿಗಳನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಜೊತೆ ಜೊತೆಯಾಗಿ ಶೋಧಿಸುವ ಹಾಗೂ ಮಾತುಕತೆಯ ಮೂಲಕ ಧೋರಣೆಯ ಬದಲಾವಣೆಗಳನ್ನು ಸಾಧ್ಯವಾಗಿಸಿದ ಸಹಯೋಗಿ ಕಲಿಕೆಯನ್ನು ಸುಗಮ-ಗೊಳಿಸುವ ವಿಧಾನಗಳನ್ನು ಕುರಿತ ಲೇಖನಗಳನ್ನು ಈ ಸಂಚಿಕೆಯಲ್ಲಿ ನಾವು ನೀಡುತ್ತಿದ್ದೇವೆ. ಒಂದು ಲೇಖನವಂತೂ ಕಲಿಕೆಯ ಪ್ರಕ್ರಿಯೆಯ ಮೇಲೆ ಶಾಲೆಯ ವಾಸ್ತುಶಿಲ್ಪದ ಪ್ರಭಾವವನ್ನು ಕೂಡಾ ಶೋಧಿಸುತ್ತದೆ ಮತ್ತು ಆ ಮೂಲಕ ಒಂದು ಜೀವಿಯಾಗಿ ನಾವು ಹೇಗೆ ನಮ್ಮ ಸುತ್ತಲಿನ ಪರಿಸರಕ್ಕೆ ಅನುಕೂಲಕರವಾಗಿ ಇಲ್ಲವೇ ಪ್ರತಿಕೂಲಕರವಾಗಿ ಸ್ಪಂದಿಸುತ್ತೇವೆ ಎಂಬ ನಮಗೆ ಈಗಾಗಲೇ ಗೊತ್ತಿರುವ ಸತ್ಯವನ್ನು ನಾವು ಮತ್ತೆ ಹೊಸದಾಗಿ ಮನಗಾಣುತ್ತಿದ್ದೇವೆ.

ಇಲ್ಲಿನ ಎಲ್ಲಾ ಲೇಖನಗಳ ಬಗ್ಗೆ ಓದುಗರು ತಮ್ಮ ಅಭಿಪ್ರಾಯವನ್ನು ನೀಡುತ್ತಾರೆಂದು ನಾವು ಆಶಿಸುತ್ತೇವೆ ಮತ್ತು ಓದುಗರಾದ ನೀವು ಒಬ್ಬ ವಿದ್ಯಾರ್ಥಿಯಾಗಿ ಮತ್ತು ಶಿಕ್ಷಕ/ಶಿಕ್ಷಕಿಯಾಗಿ ಶಾಲೆಯಲ್ಲಿ ನೀವು ಸಾಮರ್ಥ್ಯಗಳಿಸಿ ಪ್ರಜಾಪ್ರಭುತ್ವದ ಮತ್ತು ಸರ್ವ ಧರ್ಮಸಮಭಾವದ ಸಮಾಜದ ನಿರ್ಮಾಣದತ್ತ ನಿಮ್ಮನ್ನು ಕೊಂಡೊಯ್ದ ನಿಮ್ಮ ಪಯಣದ ಅನುಭವಗಳನ್ನು ಹೇಳುತ್ತೀರೆಂದು ನಂಬುತ್ತೇವೆ.

**ಪ್ರೇಮಾ ರಘುನಾಥ್,**
ಸಂಪಾದಕರು, ಲರ್ನಿಂಗ್ ಕರ್ವ್
prema.raghunath@azimpremjifoundation.org

# ಈ ಸಂಚಿಕೆಯಲ್ಲಿ

## ವಿಭಾಗ ಎ – ದೃಷ್ಟಿಕೋನಗಳು


ಒಳಾಂಗಣ, ಹೊರಾಂಗಣ 06
**ಜೇನ್ ಸಾಹಿ**

ಸಶಕ್ತಗೊಳಿಸುವ ಸ್ಥಳಾವಕಾಶಗಳು: ಅಷ್ಟೊಂದು ಮಹತ್ವದ್ದೇ? 12
ಇಬ್ಬರು ಗೆಳೆಯರ ನಡುವಿನ ಸಂಭಾಷಣೆ
**ಶಶಿಧರ ಜಗದೀಶನ್**

ಭವಿಷ್ಯದ ಪ್ರಜೆಗಳ ಪೋಷಣೆ: ಶಾಲೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ 18
**ನಜರುಲ್ ಹಕ್ ಮತ್ತು ಸುಜಿತ್ ಸಿನ್ಹಾ**

ಚಪಾತಿ ಹಾಗೂ ಶೈಕ್ಷಣಿಕ ಬದಲಾವಣೆ ಸವಾಲುಗಳು 26
**ಶಶಿ ನಾಯರ್**

ಸಮಾವೇಶಿ ಶಿಕ್ಷಣ: ಮುಂದಿರುವ ದಾರಿ 29
**ಪ್ರಮೀಳಾ ಬಾಲಸುಂದರಮ್**

ಶಾಲಾ ಆವರಣವನ್ನು ಶೋಷಣೆ ಮುಕ್ತವಾಗಿಸಿ ಸುರಕ್ಷಿತತೆಗೆ ಅನುವುಗೊಳಿಸುವುದು 33
**ಸೌಮ್ಯ ಭಾಸ್ಕರನ್, ಶೇಖರ್ ಶೇಷಾದ್ರಿ**

ವಿದ್ಯಾ ಲಭ್ಯತೆಯ ಬಗ್ಗೆ ಒಂದು ವಿಭಿನ್ನ ಆಲೋಚನೆ 37
**ಸುಮನ್ ಭಟ್ಟಾಚಾರ್ಜಿಯ**

ವ್ಯವಸ್ಥೆ ಮತ್ತು ಮೋಡಿಯ ಮೂಲಕ ಉತ್ತಮ ಕಲಿಕಾ ವಾತಾವರಣವನ್ನು ರಚಿಸುವುದು 42
**ಸೌಮಿಲ್ ಮಜುಂದಾರ್**

ತರಗತಿಯ ಹೊರಗೂ ಸಶಕ್ತಗೊಳಿಸುವ ಸ್ಥಳಗಳ ಅಗತ್ಯತೆ 47
**ಶ್ರೀಪರ್ಣಾ ತಮ್ಹಾಣೆ**

ಏನಿದು ಬರಿ ಮಣ್ಣಿನ ಮುದ್ದೆಯೇ? 51
**ಲಲಿತ ಮಂಜುನಾಥ್**


## ವಿಭಾಗ ಬಿ – ಅನುಭವಗಳು ಮತ್ತು ಒಳನೋಟಗಳು


12,000 ಅಡಿಗಳ ಎತ್ತರದಲ್ಲಿ ಸಮರ್ಥ ಕಲಿಕಾ ವಾತಾವರಣದ ನಿರ್ಮಾಣ 56
ಎಸ್‌ಇಸಿಎಂಓಎಲ್ (SECMOL) ಪರ್ಯಾಯ ಸಂಸ್ಥೆ
**ಅವಿನಾಶ್ ಕುಮಾರ್**

ಚೈತನ್ಯ ಸಂಸ್ಕೃತಿ: ಕಲಿಕೆಗೆ ಸಶಕ್ತ ಆಂತರಿಕ ಪರಿಸರದ ಸೃಷ್ಟಿ 64
ಪ್ರೇರಣಾ ಶಿವಪುರಿ ಮತ್ತು ಶ್ರೀನಿವಾಸನ್

ಕಲಿಕಾ ವರ್ಧನೆಗಾಗಿ ಹೊಸ ವಿಧಾನ 68
ಇ ಎಸ್ ರಾಮಮೂರ್ತಿ

ನಲಿ ಕಲಿ: ಕಲಿಕೆಗೆ ಸಾಮರ್ಥ್ಯವರ್ಧನೆ ಇನ್ನೂ ಹೆಚ್ಚಿನದನ್ನು ಮಾಡಬಹುದೇ? 72
ನಮಿತಾ ಗುಪ್ತಾ

ಶಾಲೆಗಳಲ್ಲಿ ಸಾಮರ್ಥ್ಯವರ್ಧನೆಯ ವಾತಾವರಣ ಸೃಷ್ಟಿ 76
ನಿವೇದಿತಾ ಬೆಡದೂರ್

ಧೋರಣೆಯಲ್ಲಿ ಬದಲಾವಣೆ 81
ಅರುಣ್ ವಿ. ಪ್ರಸಾದ್

ಅವಶ್ಯವಾಗಿ ಬೇಕಾದ ಸಂಸ್ಕೃತಿ 85
ಕರ್ಪಗಮ್ ಎಸ್.

ಅಜೀಂ ಪ್ರೇಂಜಿ ಶಾಲೆಗಳಲ್ಲಿ ಕಲಿಕಾ ವಾತಾವರಣದ ನಿರ್ಮಾಣ 89
ತಪಸ್ಯಾ ಸಹಾ

ವಲಸೆ ಕಾರ್ಮಿಕರ ಮಕ್ಕಳ ಸಾಮರ್ಥ್ಯ ವರ್ಧನೆ 93
ಶುಭ

ದಿನದ ಆರಂಭ 98
ಸುರೇಂದ್ರ ಕುಂತಳ್

ಶಾಲೆಗಳಲ್ಲಿ ಬಾಲಕಿಯರಿಗೆ ಸಾಮರ್ಥ್ಯ ವರ್ಧನೆಯ ವಾತಾವರಣವನ್ನು ಸೃಷ್ಟಿ ಮಾಡುವುದು 102
ನಿರ್ಮಲಾ ವಿ.ಜಿ.

## ವಿಭಾಗ ಸಿ – ವಿದ್ಯಾರ್ಥಿವಾಣಿ

ಇನ್ವೆಂಚರಿಂಗ್ ಸಪ್ತಾಹ 106
ಅನನ್ಯ ರಾಮ್‌ಗೋಪಾಲ್

ನನ್ನ ಶಾಲೆಯ ಸೋಪಾನ 108
ಅಂಕಿತ ಕೊಡವೂರ್

ಶಿಕ್ಷಕರು ಕಟ್ಟಲೂ ಬಹುದು ಕೆಡವಲೂಬಹುದು 110
ಗುರುರಾಜ್ ಕೆ.ಎಸ್.

ಭ್ರಮನಿರಸಿತ ವಿದ್ಯಾರ್ಥಿನಿಯ ಲೇಖನಿಯಿಂದ 113
ಸಂವಿದಾ ಎಸ್. ವೆಂಕಟೇಶ್

# ದೃಷ್ಟಿಕೋನಗಳು



# ಒಳಾಂಗಣ, ಹೊರಾಂಗಣ

ಜೇನ್ ಸಾಹಿ

ಒಮ್ಮೆ ಟ್ಯಾಗೂರರನ್ನು ನೀವು ನಿಮ್ಮದೇ ಶಾಲೆಯನ್ನು ಪ್ರಾರಂಭಿಸಲು ಕಾರಣ ಏನು ಎಂದು ಪ್ರಶ್ನಿಸಿದಾಗ, ನನ್ನ ಶಾಲಾದಿನಗಳಲ್ಲಿ, ಸಾಲು, ಸಾಲಾಗಿರುವ ಬೆಂಚುಗಳು, ಖಾಲಿ ಗೋಡೆಗಳು, ಎತ್ತರದಲ್ಲಿರುವ ಕಿಟಕಿಗಳಿಂದ ಕೂಡಿದ ಒಂದು ಕೋಣೆಗೆ ನನ್ನನ್ನು ಸೀಮಿತಗೊಳಿಸಿಕೊಂಡ ದಾರುಣ ಅನುಭವದ ನೆನಪುಗಳೇ ಕಾರಣ. ಅಂದಿನಿಂದಲೂ ನಾನು ಸ್ವಾತಂತ್ರ್ಯವನ್ನು ಮತ್ತು ಪ್ರಕೃತಿಯೊಂದಿಗಿನ ಒಡನಾಟದ ಅನುಭವವನ್ನು ಮಕ್ಕಳಿಗೆ ನೀಡಬೇಕೆಂದು ಹಂಬಲಿಸುತಿದ್ದೆ ಎಂದರು[1]. ಶಾಲೆಗಳು ಸದಾ ಕಾಲ ದೇಹಕ್ಕೆ ಮತ್ತು ಮನಸ್ಸಿಗೆ ಪರಿಮಿತಿಯನ್ನು ಹೇರುವ ತಾಣಗಳಾಗಿದ್ದು ದೈಹಿಕ ಚಲನೆ ಮತ್ತು ಕಾಲ್ಪನಿಕ ಶಕ್ತಿಯನ್ನು ಪ್ರಚೋದಿಸುವ ಅಥವಾ ಅದಕ್ಕೆ ಸವಾಲು ಹಾಕುವ ಅವಕಾಶಗಳೇ ಇಲ್ಲದಿರುವಂತಹವು. ಸಾಮಾನ್ಯವಾಗಿ ಮನೆಯ ಪ್ರಪಂಚ ಮತ್ತು ನಾವು ವಾಸಿಸುವ ಗ್ರಾಮದ ಪರಿಸರಕ್ಕೆ ತದ್ವಿರುದ್ಧವಾಗಿ ತರಗತಿಕೋಣೆಯು ಕೂಡಿಹಾಕಿದಂತಿರುವ, ಕಿಕ್ಕಿರಿದ ಮತ್ತು ಸ್ನೇಹಪರವಲ್ಲದ ತಾಣವಾಗಿದೆ.

ಶಾಲೆಯು ಗೋಚರವಾಗುವಂತಹ, ಆದರೆ ಅಮೂರ್ತವಾದ ಒಂದರ ಮೇಲೆ ಇನ್ನೊಂದು ಪೇರಿಸಿದಂತಿರುವ ಅನೇಕ ಅಂಶಗಳಿಗೆ ನೆಲೆದಾಣವಾಗಿರುತ್ತದೆ: ಕಟ್ಟಡದ ವಿನ್ಯಾಸ ಮತ್ತು ಭೌತಿಕ ಪರಿಸರ, ಪ್ರತಿಯೊಬ್ಬರೂ ತಮ್ಮದೇ ಆದ ವಿಶಿಷ್ಟ ಅನುಭವ ಮತ್ತು ಸೂಕ್ಷ್ಮತೆಯನ್ನು ಹೊಂದಿರುವ ಮಕ್ಕಳು ಮತ್ತು ಶಿಕ್ಷಕರು, ಮನೆ ಹಾಗೂ ಸಮುದಾಯದ ಹತ್ತಿರದಲ್ಲಿನ ಪರಿಸರದ ಭಾಷೆ, ಇತಿಹಾಸ ಮತ್ತು ಇದಲ್ಲದೇ ಅನೇಕಾನೇಕ ಸಾಧ್ಯತೆಗಳು ಮತ್ತು ಮಿತಿಗಳಿಗೆ ಎಡೆಮಾಡಿಕೊಟ್ಟಿರುತ್ತದೆ.

ಮಾನವನ ದೇಹದಲ್ಲಿರುವಂತೆಯೇ ಒಂದು ಶಾಲೆಯೂ ನಮ್ಯತೆ ಮತ್ತು ಪೆಡಸುತನವನ್ನು ಹೊಂದಿದೆ. ಇದು ಅತೀ ತೆಳುವಾದ ಪೊರೆಯಿಂದ ಒಳ ಮತ್ತು ಹೊರಗನ್ನು ಬೇರ್ಪಡಿಸಿದಂತಿರುವ ಒಂದಕ್ಕೊಂದು ಸಂಪರ್ಕವಿರುವ ವ್ಯವಸ್ಥೆಯನ್ನು ಅವಲಂಬಿಸಿದೆ. ಒಂದು ಶಾಲೆಯ ಸುಸ್ಥಿತಿಯು ಅದರ ಒಳಗಿನ ಮತ್ತು ಹೊರಗಿನ ಪರಿಸರದ ಅಂಶಗಳನ್ನು ಗುರುತಿಸಿ ಪೋಷಿಸುವುದನ್ನು ಅವಲಂಬಿಸಿದೆ.

ನಾನು ನಲವತ್ತು ವರ್ಷಗಳ ಹಿಂದೆ ಬೆಂಗಳೂರಿನ ಹೊರವಲಯದಲ್ಲಿರುವ ಗ್ರಾಮವಾದ ಸಿಲ್ವೆಪುರಕ್ಕೆ ಮೊದಲ ಬಾರಿ ಬಂದಾಗ ಅಲ್ಲಿನ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಹೋಗುತ್ತಿರಲಿಲ್ಲ. ಗಾರೆ ಕೆಲಸದವರು, ಬಡಗಿ ಮತ್ತು ನಮ್ಮ ಮನೆಯನ್ನು ಕಟ್ಟಲು ಬರುತ್ತಿದ್ದವರ ಮಕ್ಕಳಲ್ಲಿ ಅನೇಕರು ಶಾಲೆಗೆ ಹೋಗಲು ಬಯಸುತ್ತಿದ್ದರು. ಈ ಮಕ್ಕಳಿಗೆ ಶಾಲೆ ಒಂದು ಆವೃತ ಮತ್ತು ಗದ್ದಲದಿಂದ ಕೂಡಿದ ಅನಿವಾರ್ಯ ತಾಣಗಳೆನಿಸಿದರೆ ಹೇಗೆ ಎಂದು ನಾನು ಆಲೋಚಿಸ-ಲಾರಂಭಿಸಿದೆ. ಮುಕ್ತವಾಗಿ ತಮ್ಮ ಮನೆ ಹೊರಗೆ ಮತ್ತು ಒಳಗೆ, ಹಾಗೂ ಸ್ವಲ್ಪ ಮಟ್ಟಿಗೆ ತಮ್ಮ ಗ್ರಾಮದ ಒಳ-ಹೊರಗೆಲ್ಲಾ ಓಡಾಡುತ್ತಿರುವ ಈ ಮಕ್ಕಳ ಪರಿಸ್ಥಿತಿಗೆ ಇದು ತದ್ವಿರುದ್ಧವಾಗಿರುವಂತೆ ಕಾಣುತಿತ್ತು.

ಈ ಕಾರಣದಿಂದಲೇ ನಾನು ಶಾಲೆಯನ್ನು ಒಳಗೆ ಮತ್ತು ಹೊರಗೆ ಎರಡೂ ಕಡೆ ಸುಲಭವಾಗಿ ಓಡಾಡುವಂತೆ ವಿನ್ಯಾಸಗೊಳಿಸಿ ಇವೆರಡನ್ನೂ ಕಲಿಯುವ ಸಾಮರ್ಥ್ಯವನ್ನು ಹೊಂದಿರುವ ಸ್ಥಳಗಳನ್ನಾಗಿ ಅರ್ಥನೀಡುವಂತೆ ಮಾಡಿದೆ.

---

[1] Rabindranath Tagore, 'My School' in *Personality* pp.119-120. 2002 Edition. New Delhi: Rupa.

[2] Primo Levi, (1981) *The Search for Roots.* p.5. Translated by Peter Forbes (2001), Penguin Books.



ಅನಿವಾರ್ಯವಾಗಿ ಶಾಲೆಯ ಆವರಣದ ವಿನ್ಯಾಸ ಮತ್ತು ಅದರ ಕಟ್ಟಡಗಳು ಮಗುವಿನ ಹಾಗೂ ಪ್ರಪಂಚದ ನಡುವಿನ ಸಂಬಂಧವನ್ನು ವ್ಯಕ್ತಪಡಿಸುತ್ತವೆ. ಟ್ಯಾಗೂರರಿಗೆ ನೆನಪಿರುವಂತಹ ಒಂದು ಅನ್ಯಲೋಕದ ಹಾಗೂ ಪ್ರತಿಕೂಲ ಪರಿಸರವನ್ನು ಹೊಂದಿರುವಂತಹ ತಾಣಗಳಾಗಿದ್ದರೂ, ಇವು ಆಟ ಆಡುವುದಕ್ಕೆ ಮತ್ತು ಕಾರ್ಯವೆಸಗಲು ಆಹ್ವಾನ ನೀಡುತ್ತಿರುವ ಸಾಧ್ಯತೆಗಳನ್ನುಳ್ಳ ತಾಣಗಳಾಗಿಯೂ ಇರಬಹುದು. ಒಳಗಿನ ಮತ್ತು ಹೊರಗಿನ ಜಾಗಗಳನ್ನು ಸ್ಪಷ್ಟವಾಗಿ ಬೇರ್ಪಡಿಸಿದಂತಿರುವ ಆವರಣಗಳನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿ, ಪಡಸಾಲೆಗಳು, ಅಂಗಳಗಳು, ತಗ್ಗಿನ ಗೋಡೆಗಳು ಮತ್ತು ಜಾಲರಿಯನ್ನು ಉಪಯೋಗಿಸಿ ಒಳಗಿನ ಮತ್ತು ಹೊರಗಿನ ಎರಡೂ ಜಾಗಗಳನ್ನು ಉಪಯೋಗಿಸಿ ಕಾರ್ಯವೆಸಗುವಂತೆ ಮಾಡಬಹುದು. ಗೋಡೆಗಳನ್ನು ಆವರಿಸುವಂತೆ ಬಳ್ಳಿಗಳನ್ನು ಬೆಳೆಸಬಹುದು ಮತ್ತು ಕೆಲಸ ಮಾಡಲು ಅಥವಾ ಆಟವಾಡಲು ನೆರಳಿರುವಂತೆ ಮಾಡಬಹುದು. ಪುಸ್ತಕವಾಗಲಿ, ಆಟದ ವಸ್ತುಗಳಾಗಲೀ ಕೈಗೆಟಕುವಂತಿರಬೇಕು ಮತ್ತು ಮಕ್ಕಳು ತಮಗೆ ಆಸಕ್ತಿ ಇರುವ ತಾಣಗಳಲ್ಲಿ ಅದನ್ನು ಸುಂದರವಾಗಿಸುವುದಕ್ಕೆ ತಮ್ಮ ಕೊಡುಗೆಯನ್ನು ನೀಡುವಂತೆ ಇರಬೇಕು. ಖಾಲಿ ಗೋಡೆಗಳನ್ನು ಮಾರ್ಪಡಿಸಲು ಬದಲಾಯಿಸಲು ಸಾಧ್ಯವಿಲ್ಲದಂತಿರುವ ಚಿತ್ರಗಳು ಮತ್ತು ಮುದ್ರಣಗಳನ್ನು ಉಪಯೋಗಿಸದೆ ಮಕ್ಕಳೇ ಬರೆದಿರುವ ಮತ್ತು ಚಿತ್ರಿಸಿರುವ ವಸ್ತುಗಳಿಂದ ಗೋಡೆಗಳನ್ನು ಅಲಂಕರಿಸಿ ಚಲನಶೀಲತೆಯುಳ್ಳ ಮತ್ತು ನಮನೀಯತೆಯನ್ನು ಹೊಂದಿರುವ ಪ್ರದೇಶಗಳನ್ನಾಗಿ ಮಾಡಬಹುದು

ಶೀಘ್ರವಾಗಿ ಬದಲಾಗುತ್ತಿರುವ ಸಮಾಜದಲ್ಲಿ ಮಕ್ಕಳು ಬೆಳೆಯಲು ಮತ್ತು ಕಲಿಯಲು ಆರೋಗ್ಯಪೂರ್ಣವಾದ ಪರಿಸರವನ್ನು ನಿರ್ಮಿಸಲು ಬೇಕಾಗಿರುವ ಅಂಶಗಳನ್ನು ನಾವು ಗುರುತಿಸಲು ಸಾಧ್ಯವಿದೆಯೇ? ಹಳೆಯ ಶಾಲಾ ಕಟ್ಟಡಗಳನ್ನು ಈಗ ಹೊಸ ಕಟ್ಟಡಗಳು ಆಕ್ರಮಿಸುತ್ತಿವೆ. ಇಲ್ಲಿ ಅತೀ ದುಬಾರಿಯ ಮತ್ತು ಹೆಚ್ಚು ಬಾಳಿಕೆ ಬರುವ ವಸ್ತುಗಳನ್ನು ಉಪಯೋಗಿಸಲಾಗಿರುತ್ತದೆ. ಆದರೆ ಇವು ಹೆಚ್ಚು ಸೌಂದರ್ಯವನ್ನಾಗಲೀ ಅಥವಾ ಅನುಕೂಲವನ್ನಾಗಲೀ ಒದಗಿಸುತ್ತಿರುವುದಿಲ್ಲ. ಅವು ಒಂದರ್ಥದಲ್ಲಿ ಕ್ರಿಯಾತ್ಮಕವಾಗಿ ಮತ್ತು ಐಶಾರಾಮವನ್ನು ಹೊಂದಿರುವಂತೆ, ಚಿತ್ತಾಕರ್ಷಕವಾಗಿ ಕಾಣಬಹುದಾದರೂ, ಬೆಳೆಯುವ ಮಕ್ಕಳ ಅಗತ್ಯತೆಗೆ ಪೂರೈಸುವಂತೆ ಇರದಿರುವದೇ ಹೆಚ್ಚು.

ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಗಳಲ್ಲಿ ಮರಗಳು, ಬಂಡೆಗಳು ಮುಕ್ತ ಆವರಣಗಳಿರುತ್ತವೆ. ಆದರೆ ಅವುಗಳ ಮಹತ್ವವನ್ನು ಯಾರೂ ಪರಿಗಣಿಸಿರುವುದಿಲ್ಲ. ಎಷ್ಟೇ ಸೌಲಭ್ಯಗಳನ್ನು ಹೊಂದಿದ್ದರೂ ನೈಜವಲ್ಲದ, ಬದಲಾವಣೆ ಇಲ್ಲದ ಆಟದ ಮೈದಾನಗಳ ಬಗ್ಗೆ ಮಕ್ಕಳು ಒಮ್ಮೆಲೆ ಒಲವು ತೋರುವುದಿಲ್ಲ, ಮಕ್ಕಳು ಹೆಚ್ಚಿಗೆ ಇಷ್ಟಪಡುವುದು ಮಾರ್ಪಾಡಿಗೆ ಒಳಗಾಗಬಲ್ಲ, ವಯಸ್ಕರ ಕಣ್ಗಾವಲು ಮತ್ತು ನಿಯಂತ್ರಣವಿಲ್ಲದೇ ತಾವೇ ರೂಪಿಸಿಕೊಳ್ಳಬಲ್ಲ, ಬದಲಾಯಿಸಬಲ್ಲ ಮತ್ತು ಹೊಣೆಗಾರಿಕೆಯನ್ನು ಅನುಭವಿಸುವಂತಹ ಕಚ್ಚಾ ಪ್ರದೇಶಗಳು ಎಂಬುದನ್ನು ಇತ್ತೀಚಿನ ಸಂಶೋಧನೆ ತೋರಿಸಿಕೊಟ್ಟಿದೆ[ii]. ವಿಪರ್ಯಾಸ ಎಂದರೆ ಆರ್ಥಿಕವಾಗಿ ಹೆಚ್ಚು ಅನುಕೂಲತೆಯನ್ನು ಹೊಂದಿರುವ ಮಕ್ಕಳೇ ಹೆಚ್ಚಾಗಿ ಸಂಕುಚಿತ ಮತ್ತು ನಿಯಂತ್ರಣಕ್ಕೆ ಒಳಗಾಗಿರುವ ಜೀವನವನ್ನು ಎದುರಿಸಬೇಕಾಗುತ್ತದೆ. ಏಕೆಂದರೆ ಇವರಿಗೆ ಮನೆ ಮತ್ತು ಶಾಲೆ ಇವರೆಡೂ ವಲಯಗಳಲ್ಲಿ ಕಟ್ಟುನಿಟ್ಟಾದ ನಿಯಂತ್ರಣಕ್ಕೆ ಒಳಗಾದ ಪರಿಸರವಿರುತ್ತದೆ.

ಮಕ್ಕಳು ತಾವೇ ಸಹಜ ಸಂಪರ್ಕವನ್ನು ಕಂಡುಕೊಳ್ಳುವಂತಹ ತಾಣಗಳಲ್ಲಿ ಇರಬೇಕೇಹೊರತು ತಮ್ಮ ಪ್ರಪಂಚವನ್ನು ಕಿತ್ತು ಬೇರ್ಪಡಿಸಿ ಅಂಕಣಗಳಾಗಿ ವಿಭಾಗಿಸಲ್ಪಟ್ಟ ಪ್ರದೇಶಗಳಲ್ಲ. ಲೋರಿಸ್ ಮಾಲಗುಜ್ಜಿಯವರು ಅತೀ ಸುವ್ಯವಸ್ಥಿತ ಅತಿಯಾಗಿ ನಿಗದಿಪಡಿಸಿ ರಚಿಸಿದ ಪರಿಸರದ ಪರಿಣಾಮಗಳನ್ನು ಹೀಗೆ ಸಂಗ್ರಹಿಸಿ ಹೇಳಿದ್ದಾರೆ:

**ಹೇಳುತ್ತಾರೆ ಅವರು ಮಗುವಿಗೆ:**

ನೋಡು ಮಗೂ, ಆಟಾನೇ ಬೇರೆ ಅಭ್ಯಾಸಾನೇ ಬೇರೆ

ವಾಸ್ತವ ಪ್ರಪಂಚವೇ ಬೇರೆ ಭಾವನಾ ಜಗತ್ತೇ ಬೇರೆ

ವಿಜ್ಞಾನವೇ ಬೇರೆ ಕಲ್ಪನಾ ವಿಹಾರವೇ ಬೇರೆ

ಆಕಾಶವೇ ಬೇರೆ ಭೂಮಿಯೇ ಬೇರೆ

ವಿಚಾರವೇ ಬೇರೆ ಕನಸೇ ಬೇರೆ

ಎಂದೂ ಇವುಗಳು ಜೊತೆಯಾಗಿ ಸೇರಲಾರವು.

ಶಾಲಾ ಪರಿಸರ ಇಡೀ ಪ್ರಪಂಚವಿದ್ದಂತೆ. ಇಲ್ಲಿ ಕಲಿಕೆಯ ಅಗತ್ಯತೆಗಳನ್ನು ಅಲ್ಲಿನ ಭೌತಿಕ, ಸಂವೇದನಾತ್ಮಕ ವಾಸ್ತವವಾಗಿ ತಂದಿರಿಸಬೇಕು ಇದಕ್ಕೆ ಮಕ್ಕಳು ಪರ್ಯಾಲೋಚನೆಯಿಂದ, ವಾಸ್ತವಿಕತೆಯಿಂದ ಮತ್ತು ಕಲ್ಪಕತೆಯಿಂದ ಸಂಬಂಧ ಬೆಳೆಸಿ ನೆಲೆಯೂರುವಂತೆ ಇರಬೇಕು.

ತಮ್ಮ ಸುತ್ತಲಿನ ಪರಿಸರದಲ್ಲಿ ತಮ್ಮ ಕೆಲಸ ಮಾಡುತ್ತಾ, ಆಟ ಆಡುತ್ತಾ ಓದುತ್ತಾ ಕಲಿಯುತ್ತಾ ಸುತ್ತಲ ಪರಿಸರದೊಂದಿಗೆ ಅಕ್ಕರೆಯ ಸಂಬಂಧ ಬೆಸೆದುಕೊಳ್ಳಲು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಉದಾಹರಣೆಗೆ, ನಾನು ಕೆಲಸ ಮಾಡುತ್ತಿರುವ ಶಾಲೆಯಲ್ಲಿ ಪ್ರತಿ ದಿನ ಬೆಳಗ್ಗೆ ಮಕ್ಕಳು ಮುಖ್ಯ ಕೋಣೆಯ ಮಧ್ಯದಲ್ಲಿ ತಾವು ಉದ್ಯಾನದಲ್ಲಿ ಅಥವಾ ಮನೆಯಲ್ಲಿ ಕಂಡ ವಸ್ತುಗಳಿಂದ ಒಂದು ಮಂಡಲವನ್ನು ರಚಿಸುತಿದ್ದರು. ವಿವಿಧ ವಿನ್ಯಾಸದ ಹುಲ್ಲು, ಬೀಜಗಳು, ಕಾಯಿಗಳು, ಹೂವುಗಳು ಮತ್ತು ಎಲೆಗಳಿರುತ್ತಿದ್ದವು. ಆದರೆ ಇವು ಒಂದೇ ರೀತಿಯಾಗಿರದೆ ಋತುಮಾನ, ಇದನ್ನು ಮಾಡಿದ ಮಕ್ಕಳ ಆಯ್ಕೆ ಮತ್ತು ಚತುರತೆಯನ್ನು ಪ್ರತಿಬಿಂಬಿಸುವಂತೆ ಇರುತಿದ್ದವು. ಇದು ಮಕ್ಕಳಿಗೆ ನೈಸರ್ಗಿಕವಾಗಿ ಪ್ರಪಂಚದಲ್ಲಿ ಆಗುವ ಬದಲಾವಣೆಗಳನ್ನು ಗಮನಿಸುವುದಕ್ಕೆ ಸಹಾಯಕವಾಗುತಿತ್ತಲ್ಲದೇ ಮಾದರಿಗಳು, ವಿನ್ಯಾಸಗಳು, ಸಮರೂಪತೆ, ಆಕಾರ, ಮೈಮೆರಗು,ಬಣ್ಣಗಳ ಬಗ್ಗೆ ಪರಿಶೋಧಿಸಲು ಅನುವು ಮಾಡಿಕೊಡುತಿತ್ತು.

ಮಕ್ಕಳು ಉದ್ಯಾನವನವನ್ನು ಆಡುವುದಕ್ಕೆ ಮಾತ್ರವಲ್ಲದೇ ಅದರ ಸುಸ್ಥಿತಿಯನ್ನು ಕಾಪಾಡಲು ಕೆಲಸ ಮಾಡುತಿದ್ದರಿಂದ ಕಲಿಕೆಗೆ ಅದೊಂದು ಸಮೃದ್ಧ ಸಂಪನ್ಮೂಲವಾಗಿತ್ತು. ಉದಾಹರಣೆಗೆ, ಬೀಜ ನೆಡಲು ಮಾಡಿದ ಎತ್ತರದ ಪಾತಿಗಳ ಅನುಕೂಲಗಳನ್ನು ಇನ್ನಿತರ ವಿಧಾನದ ನೆಡುವಿಕೆಯೊಂದಿಗೆ ಮಕ್ಕಳು ಹೋಲಿಕೆ ಮಾಡಲು ಮತ್ತು ವ್ಯತ್ಯಾಸಗಳನ್ನು ತಿಳಿಯಲು ಬಳಸಬಹುದಾಗಿತ್ತು. ಅಥವಾ, ಸಾವಯವ ಕಸವನ್ನು ವಿಂಗಡಿಸಿ ಅಥವಾ ಮಿಶ್ರಣ ಮಾಡಿ ಜೈವಿಕವಾಗಿ ಕೊಳೆಯುವುದು ಎಂದರೆ ಏನು ಎಂದು ತಿಳಿಯಬಹುದಾಗಿತ್ತು.



ತಮ್ಮ ಸುತ್ತಲಿನ ಪ್ರಕೃತಿಯಲ್ಲಿ ಬೆಳವಣಿಗೆ ಮತ್ತು ಕೊಳೆಯುವಿಕೆಯನ್ನು ವೀಕ್ಷಿಸಿ ಅವುಗಳ ಬದಲಾವಣೆಯನ್ನು ದಾಖಲಿಸಬಹುದಾಗಿತ್ತು – ಇದ್ದಕಿದ್ದಂತೆ ಸುರಿದ ಮಳೆಯಿಂದ ಹುಟ್ಟಿಕೊಂಡ ಅಣಬೆ ಬೂಷ್ಟುಗಳು, ಕಂಡು ಕೇಳರಿಯದ ಶಂಖದ ಹುಳು, ಬಸವನ ಹುಳುಗಳು ಅಥವಾ ಒಂದು ದೊಡ್ಡ ಜೇಡನ ಬಲೆಯ ಎಳೆಗಳು ಉಳಿಯುವ ಸುದೀರ್ಘಕಾಲ – ಇವೆಲ್ಲವೂ ಹೊರಗಿನ ತಾಣವನ್ನು ಕಲಿಕೆಗೆ ಸಂಪದ್ಭರಿತ ಸಂಪನ್ಮೂಲವನ್ನಾಗಿಸಿತ್ತು.

ಶಾಲೆಯ ಹೊರಗೂ ವಿದ್ಯಾರ್ಥಿಗಳು ಜೀವನದೊಂದಿಗೆ ಸಂಪರ್ಕವನ್ನು ಹೊಂದಿರಬೇಕಾದ ಅಗತ್ಯವಿದೆ. ಮಕ್ಕಳು ಶಾಲೆಗೆ ಬರುವಾಗ ದೈಹಿಕವಾಗಿ ಮಾತ್ರ ಬರದೆ ಹೊರಗಿನಿಂದ ಹೆಕ್ಕಿಕೊಂಡ ಅನೇಕ ಅಭಿಪ್ರಾಯಗಳು, ಅನಿಸಿಕೆಗಳು, ಆಲೋಚನೆಗಳು ಮತ್ತು ಅನುಭವಗಳನ್ನೂ ತರುತ್ತಾರೆ. ಮಕ್ಕಳಿಗೆ ತಮ್ಮದೇ ಆಯ್ಕೆಯ ವಾರ್ತೆಗಳನ್ನು ಸೇರಿಸಿಕೊಳ್ಳಲು ದಿನಚರಿಯನ್ನು ಇಡುವಂತೆ ಮಾಡುವುದು ಒಂದು ಮಾರ್ಗವಾಗಿದೆ. ಮಕ್ಕಳು ಚಿತ್ರ ರಚಿಸಬಹುದು, ಪ್ರಮುಖವಾದ ಘಟನೆಯ ಬಗ್ಗೆ ಬರೆಯಬಹುದು ಅಥವಾ ಹೇಳಿ ಬರೆಸಬಹುದು. ಈ ವಿಷಯಗಳು ವಯಸ್ಕರಿಗೆ ಸಣ್ಣ ವಿಷಯಗಳಂತೆ ಕಾಣಬಹುದು. ಆದರೆ, ಮನೆಯಲ್ಲಿ ನಡೆಯುವ ಕಲಹ, ಹೊಸ ಬಟ್ಟೆಯ ಖರೀದಿ, ನಾಯಿ ಮರಿಯ ಜನನ, ಕೊಟ್ಟ ಭಾಷೆಯನ್ನು ಮುರಿದಿದ್ದು, ವೈದ್ಯರ ಭೇಟಿ ಅಥವಾ ಬಸ್ಸಿನಲ್ಲಿ ಮಾಡಿದ ಪ್ರಯಾಣ, ಇವೆಲ್ಲವೂ ಮಕ್ಕಳ ಮನಸ್ಸಿನಲ್ಲಿ ದಾಖಲಿಸಿಕೊಳ್ಳಲು ಯೋಗ್ಯವಾದುದ್ದಾಗಿರುತ್ತವೆ. ಅನುಭವಗಳನ್ನು ವ್ಯಕ್ತಪಡಿಸಲು, ಇನ್ನೊಬ್ಬರಿಗೆ ಹಂಚಿಕೊಳ್ಳಲು ಮತ್ತು ವಿಸ್ತರಿಸಲು ಭಾಷೆಯನ್ನು ಬಳಸುವ ಅವಶ್ಯಕತೆ ಇದೆ.

ಮಕ್ಕಳ ಕಲಿಕೆಗೆ ಮನೆಯ ಮತ್ತು ಗ್ರಾಮದ ಸುತ್ತಲಿರುವ ಪ್ರದೇಶವೇ ಶ್ರೀಮಂತ ಪಠ್ಯವಾಗಿದೆ. ಮಕ್ಕಳಿಗೆ ಭೂಗೋಳ, ಇತಿಹಾಸ, ಅರ್ಥಶಾಸ್ತ್ರ ಮತ್ತು ವಿಜ್ಞಾನವನ್ನು ಬೋಧಿಸಲು ಅವರಿಗೆ ಚಿರಪರಿಚಿತವಿರುವ ವಿಷಯಗಳಿಂದಲೇ ಪ್ರಾರಂಭಿಸಬಹುದು. ಉದಾಹರಣೆಗೆ, ಇತಿಹಾಸದ ತರಗತಿಯಲ್ಲಿ ತಮ್ಮ ಮನೆಯಲ್ಲಿರುವ ಯಾವುದಾದ–ರೊಂದು ಆಸಕ್ತಿದಾಯಕ ವಸ್ತುವನ್ನು ಆಯ್ಕೆ ಮಾಡಿ ತರುವಂತೆ ಹೇಳಲಾಯಿತು. ಆಯ್ಕೆ ಮಾಡಿದ ವಸ್ತುಗಳು ಬಾಗಿಲ ಚೌಕಟ್ಟು, ಬಂದೂಕು, ಹೊಲಿಗೆ ಯಂತ್ರ ಮತ್ತು ಹೊಗೆ ರಹಿತ ಇಜ್ಜಿಲ ಒಲೆ ಮುಂತಾದುವಾಗಿದ್ದವು. ಮಕ್ಕಳು ಇವುಗಳ ಬಗ್ಗೆ ಚರ್ಚಿಸಿದರು ಮತ್ತು ತಾವು ನಿಜವಾಗಿಯೂ ತಿಳಿಯ ಬಯಸುವ ವಸ್ತುಗಳ ಬಗ್ಗೆ ಒಟ್ಟಾಗಿ ಕೆಲವೊಂದು ಪ್ರಶ್ನೆಗಳನ್ನು ತಯಾರಿಸಿದರು. ಇದರಲ್ಲಿ ಅತ್ಯಾಶ್ಚರ್ಯಕರವಾದ

ಪ್ರಶ್ನೆಗಳೆಂದರೆ "ಭೂತಗಳನ್ನು ಬಂದೂಕಿನಿಂದ ಹೊಡೆಯಬಹುದೆ?" ಎಂಬುದರೊಂದಿಗೆ, ಹೆಚ್ಚು ಸಾಂಪ್ರದಾಯಿಕವಾದ ಪ್ರಶ್ನೆಗಳಾದ ಎಷ್ಟು ವರ್ಷ ಹಳೆಯದು, ಯಾವ ವಸ್ತುವಿನಿಂದ ತಯಾರಿಸಿದ್ದು ಮತ್ತು ಈ ವಸ್ತುವಿನ ಬಳಕೆ ಏನು? ಎನ್ನುವಂತಹ ಪ್ರಶ್ನೆಗಳಿದ್ದವು. ಈ ಚಟುವಟಿಕೆಯು ಮಕ್ಕಳಿಗೆ ಕಾಲಾನುಕ್ರಮಣಿಕೆಯನ್ನು ಬರೆಯಲು ಮಾಹಿತಿಯನ್ನು ಒದಗಿಸಿತು ಮತ್ತು ಇದು ಅವರಿಗೆ ಗತಕಾಲದ ಬಗ್ಗೆ ಅರಿವನ್ನು ನೀಡಿದ್ದಲ್ಲದೇ ಹೊಸದಾಗಿ ಆವಿಷ್ಕರಿಸಿದ ವಸ್ತುಗಳು ಮತ್ತು ನವೀನ ಮಾದರಿಯ ತಂತ್ರಜ್ಞಾನ ಹೇಗೆ ವಿಷಯ ಮತ್ತು ವಸ್ತುಗಳಲ್ಲಿ ಬದಲಾವಣೆಯನ್ನು ತರಲು ಕಾರಣವಾಯಿತು ಎನ್ನುವುದನ್ನು ಅರಿಯಲು ಸಹಾಯಕವಾಯಿತು.

ಮಕ್ಕಳು ತಮ್ಮ ದೈನಂದಿನ ನಿರ್ದಿಷ್ಟ ವಿಷಯದಿಂದಲೂ ಕಲಿಯುವುದನ್ನು ಪ್ರಾರಂಭಿಸಬಹುದು: ಮನೆಯನ್ನು ಕಟ್ಟಲು ಉಪಯೋಗಿಸಿರುವ ವಸ್ತುಗಳು, ತಾವು ಧರಿಸುವ ಬಟ್ಟೆ, ತಾವು ತಿನ್ನುವ ಆಹಾರ, ಕೆಲವು ಸಮಸ್ಯೆಗೆ ಕಂಡುಕೊಳ್ಳುವ ಪರಿಹಾರಗಳು, ಮುಂತಾದುವುದರಿಂದಲೂ ಕಲಿಕೆಯ ಪ್ರಾರಂಭವಾಗುತ್ತದೆ. ಹೊರಗಿನ ಅನೇಕ ಶಕ್ತಿಗಳು, ಆಯ್ಕೆ ಮತ್ತು ಸಾಧ್ಯತೆಗಳ ಮೇಲೆ ಹೇಗೆ ಪ್ರಭಾವವನ್ನು ಬೀರಬಲ್ಲವು ಎಂಬುದು ಮಕ್ಕಳಿಗೆ ಶೀಘ್ರವಾಗಿ ತನಗೆ ತಾನೇ ಸ್ಪಷ್ಟವಾಗಲು ಪ್ರಾರಂಭವಾಗುತ್ತದೆ.

ನಾವು ನಮ್ಮ ಗತಕಾಲವನ್ನು ಅಸಹಜವಾಗಿ ವೈಭವೀಕರಿಸದಂತೆ ಅಥವಾ ಇಂದಿನ ವಿದ್ಯಮಾನವನ್ನು ಶುದ್ಧಿಕರಿಸಲು ಪ್ರಯತ್ನಿಸದೇ ಇಂದಿನ ಅನಿಶ್ಚಿತತೆ ಮತ್ತು ಸವಾಲುಗಳೊಂದಿಗೆ ನಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಸಮಾಜ ಅಧ್ಯಯನವು ನಿರೀಕ್ಷಿಸುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಸುತ್ತಲಿನ ಸಮುದಾಯಗಳ ಜೀವನ ಶೈಲಿ ಮತ್ತು ವೇಗ ನಾಟಕೀಯವಾಗಿ ಬದಲಾವಣೆಗೆ ಒಳಪಟ್ಟಿದೆ. ಕೌಟುಂಬಿಕ ಜೀವನದ ಮಾದರಿಗಳು, ಮಗುವಿನ ಪಾಲನೆಯ ಶೈಲಿಗಳು, ಪುರುಷರು ಮತ್ತು ಮಹಿಳೆಯರ ಉದ್ಯೋಗಗಳು, ತಿನ್ನುವ ಅಭ್ಯಾಸಗಳು, ಸಂಘರ್ಷವನ್ನು ಪರಿಹರಿಸಿಕೊಳ್ಳುವ ವಿಧಾನಗಳು ಮತ್ತು ಮನೋರಂಜನೆಯ ಮೂಲಗಳು ಇವುಗಳೆಲ್ಲವೂ ಸಮುದಾಯಗಳು ನಗರೀಕರಣವನ್ನು ಅಪ್ಪಿಕೊಳ್ಳುವ ಧಾವಂತದಲ್ಲಿ ರೂಪಾಂತರದ ಸ್ಥಿತಿಯಲ್ಲಿವೆ. ನಮ್ಮ ನೆರೆಹೊರೆಯು ವ್ಯವಸಾಯ ಆಧಾರಿತ ಆರ್ಥಿಕತೆಯಿಂದ ಅರೆ ನಗರ ವ್ಯವಸ್ಥೆಗೆ ಅದು ನೀಡುವ ಅನುಕೂಲಗಳು ಮತ್ತು ಸಮಸ್ಯೆಗಳೊಂದಿಗೆ ಬದಲಾಗುತ್ತಿದೆ.

ಈ ಬದಲಾವಣೆಗಳು ನಮಗೆಲ್ಲರಿಗೂ ಪ್ರಶ್ನೆಗಳನ್ನು ಹಾಕುತ್ತಿವೆ ಮತ್ತು ಈ ವಿಪ್ಲವಗಳು ತಮ್ಮ ಜೀವನದ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರುತ್ತಿವೆ ಎಂಬುದು ಮಕ್ಕಳಿಗೆ ಚೆನ್ನಾಗಿ ಅರಿವಿದೆ. ಹೆಚ್ಚುತ್ತಿರುವ ಕಸ ವಿಲೇವಾರಿಯ ಸಮಸ್ಯೆ, ತೀವ್ರವಾದ ನೀರಿನ ಅಭಾವ ಅಥವಾ ಸ್ಥಳೀಯ ಪೋಲೀಸರ ಹೆಚ್ಚುತ್ತಿರುವ ಅಧಿಕಾರ, ಇಂತಹಾ ಕೆಲವು ಸಮಸ್ಯೆಗಳನ್ನು ಚರ್ಚಿಸುವ ಮೂಲಕ ಮತ್ತು ಪರ್ಯಾಯಗಳನ್ನು ಚಿಂತಿಸುವ ಮೂಲಕ ಪರಿಹರಿಸಿಕೊಳ್ಳುವ ಅಗತ್ಯವಿದೆ.

ಭೂಪ್ರದೇಶಗಳಲ್ಲಾಗುತ್ತಿರುವ ಬದಲಾವಣೆಗಳು – ಬೆಳೆ ಬೆಳೆಯುತ್ತಿದ್ದ ಹೊಲ-ಗದ್ದೆಗಳು ಹೇಗೆ ನಿವೇಶನಗಳಾಗಿ ಮಾರ್ಪಾಡಾಗುತ್ತಿವೆ, ಅಥವಾ ಹೇಗೆ ನೀರು ತುಂಬಿದ ಕೆರೆಗಳು ಒಣಗಿ ಅಲ್ಲಿ ಇಟ್ಟಿಗೆ ಗೂಡುಗಳು ಆಕ್ರಮಿಸುತ್ತಿವೆ ಅಥವಾ ನೀರು ತುಂಬಿದ ಬಾವಿಗಳು ಪಾಳು ಬಾವಿಗಳಾಗುತ್ತಿವೆ ಎಂಬ ನಾಟಕೀಯವೆನಿಸುವ ಬದಲಾವಣೆಗಳನ್ನು ಅಧ್ಯಯನ ಮಾಡಿ ಅದರಲ್ಲಿ ತಮ್ಮ ಪಾತ್ರವೇನು ಮತ್ತು ತಮ್ಮ ಗ್ರಾಮದ ಭವಿಷ್ಯವೇನು ಎಂದು ಮಕ್ಕಳು ಚಿಂತಿಸಲು ಪ್ರಾರಂಭಿಸುವಂತಾಗಬೇಕು.

ಈ ಹಿಂದೆ ಹೇಳಿರುವಂತೆ ಅನೇಕ ಗೋಚರ ಮತ್ತು ಗುಪ್ತ, ಸುಸ್ಪಷ್ಟ ಮತ್ತು ಅತ್ಯಂತ ನವಿರಾದ ಪದರಗಳು ಒಂದು ಶಾಲಾ ವಾತಾವರಣವನ್ನು ನಿರ್ಮಿಸುತ್ತವೆ. ಶಾಲೆಯ ಭೌತಿಕ ಪರಿಸರ ಮತ್ತು ಅದರ ಸುತ್ತಲಿನ ವಾತಾವರಣ ಶಾಲೆಯಿರುವ ಸ್ಥಳದ ಒಂದು ಆಯಾಮ. ಅತ್ಯಂತ ಕನಿಷ್ಠವಾಗಿ ಗುರುತಿಸಲ್ಪಡುವ ಮತ್ತು ಹೇಳಲ್ಪಡುವ ಇನ್ನೊಂದು ಆಯಾಮವೆಂದರೆ, ಶಾಲೆಯ ಸಂಸ್ಕೃತಿ ಅಥವಾ ತತ್ವಗಳು ಹಾಗೂ ವಿಶಿಷ್ಠ ಗುಣಲಕ್ಷಣಗಳು. ಪಾತ್ರ ಮತ್ತು ಸಂಬಂಧಗಳ ನಿರ್ವಹಣೆಯ ವಿಧಾನಗಳು, ಕಲಿಕೆಯ ಬಗ್ಗೆ ಎದ್ದು ಕಾಣುವ ಮನೋಧೋರಣೆಗಳು ಮತ್ತು ಹೊಣೆಗಾರಿಕೆಯ ಭಾವನೆ ಹಾಗೂ ಇತರರ ಬಗ್ಗೆ ಇರುವ ಕಾಳಜಿ ಮತ್ತು ಶಾಲೆಯಲ್ಲಿ ಅನುಸರಿಸುವ ಅಭ್ಯಾಸಗಳು, ಒಂದು ಶಾಲೆಯಲ್ಲಿನ ಸಂಸ್ಕೃತಿ/ತತ್ವಗಳನ್ನು ಹೆಚ್ಚು ಸುಸ್ಪಷ್ಟವಾಗಿ ಕಾಣುವಂತೆ ಮಾಡುತ್ತವೆ.

ಶಾಲೆಯ ಸಂಸ್ಕೃತಿ/ತತ್ವಗಳು ಅಥವಾ ಗುಣಲಕ್ಷಣಗಳು ಅಲ್ಲಿ ಬಳಸುವ ಪದಗಳಿಂದ ಪ್ರತಿಬಿಂಬಿತವಾಗುತ್ತವೆ: ಯಾರು ಅದನ್ನು ಹೇಳಿದರು ಮತ್ತು ಯಾರಿಗೆ ಹೇಳಿದರು, ಇದನ್ನು ಹೇಳಿದ ಕಾರಣವೇನು. ತಾವು ಕೇಳುವ, ಓದುವ, ಬಳಸುವ ಪದಗಳಿಗೆ ಮಕ್ಕಳು ತಮ್ಮನ್ನು ಸಂಬಂಧಿಸಿಕೊಳ್ಳುವರೇ?

ಚಿತ್ರದ ಮೂಲಕವಾಗಲೀ, ಪದಗಳ ಮೂಲಕವಾಗಲೀ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು ಮಕ್ಕಳಿಗೆ ಕಾಲ ಮತ್ತು ಅವಕಾಶಗಳ ಅಗತ್ಯವಿದೆ. ತ್ವರಿತವಾಗಿ ಉತ್ತರವನ್ನು ಕೊಡುವಂತೆ ಒತ್ತಡವನ್ನು ಹೇರುವುದರಿಂದ ಅವುಗಳನ್ನು ಅರ್ಥಮಾಡಿಕೊಳ್ಳದೇ, ಮನದಟ್ಟು ಮಾಡಿಕೊಳ್ಳದೇ ಬೇರೊಬ್ಬರ ಅಭಿಪ್ರಾಯಗಳನ್ನು ಪುನರುಚ್ಚರಿಸುವಂತೆ ಮಾಡಬಹುದು.

ಆಂಗ್ಲ ಕಾದಂಬರೀಕಾರರಾದ ಫಿಲಿಪ್ ಪುಲ್‌ಮನ್ ಸೃಜನಾತ್ಮಕ ಕ್ರಿಯೆಯನ್ನು, ಸಮಯ, ಮೌನ, ಸಾಹಸ ಮನೋಭಾವ ಮತ್ತು ತಾಳ್ಮೆಯ ಅವಶ್ಯಕತೆ ಇರುವ ರಾತ್ರಿ ವೇಳೆಯಲ್ಲಿ ತೆರೆದ ಸಮುದ್ರದಲ್ಲಿ ಮಾಡುವ ಮೀನುಗಾರಿಕೆಗೆ ಹೋಲಿಸುತ್ತಾರೆ. ಇಷ್ಟೆಲ್ಲಾ ಇದ್ದರೂ ಫಲಿತಾಂಶವನ್ನು ಹೀಗೆ ಎಂದು ಹೇಳಲಾಗುವುದಿಲ್ಲವೆಂದು ಹೇಳುತ್ತಾರೆ. ಶೈಲಿಯ ಮೇಲೆ ಗಮನಹರಿಸಿ, ಮಕ್ಕಳನ್ನು ವಿವಿಧ ಪ್ರಕಾರಗಳು ಮತ್ತು ತಂತ್ರಗಳನ್ನು ಅನುಸರಿಸುವಂತೆ ಮಾಡಲು ಶಿಕ್ಷಕರು ಬಳಸುವ ಅಪ್ಪಣೆ ವಿಧಾನಗಳ ಬಗ್ಗೆ ಇವರು ಹಳಹಳಿಸುತ್ತಾರೆ. ಫಲಿತಾಂಶವನ್ನು ಅಳೆಯಲು ಒಂದು ಸಾಮಾನ್ಯ ಅವಶ್ಯಕತೆಗಳಿರುವ ಪಟ್ಟಿಯನ್ನು ಬಳಸಲಾಗುವುದು ಮತ್ತು ಅವುಗಳನ್ನು ಪರಿಣಾಮಕಾರಿ ಬೋಧನೆ ಎಂದು ತೋರಿಸಲು ಪುರಾವೆಗಳಾಗಿ ಒದಗಿಸಲಾಗುವುದು ಎನ್ನುತ್ತಾರೆ.

ಒಂದು ಎಳೆ ವಯಸ್ಸಿನ ಮಗು, ಭಾಷೆಯನ್ನು ಬಳಸಲು ಕಲಿಯುವುದು ಸಂಭಾಷಣೆಯಲ್ಲಿ ಪಾಲ್ಗೊಳ್ಳುವ, ಆಲಿಸುವ ಮತ್ತು ಅಲ್ಲಲ್ಲಿ ಕೇಳಿಸಿಕೊಳ್ಳುವುದರಿಂದಾಗಿ. ಅನಂತರ, ನಿಧಾನವಾಗಿ ತನ್ನದೇ ಆದ ವಿಷಯಗಳು ಮತ್ತು ಕಥೆಗಳನ್ನು ಇತರರೊಂದಿಗೆ ಹೇಳಿಕೊಂಡು ಹಂಚಿಕೊಳ್ಳುವ ವಿಧಾನವನ್ನು ಕಂಡುಕೊಳ್ಳುವುದು. ಇದರಂತೆಯೇ ನೋಟದ ಭಾಷೆಗಳ ಪರಿಶೋಧನೆಯನ್ನು ಮಾಡುವಾಗ ಮಗು, ವಸ್ತುಗಳೊಂದಿಗೆ ತನ್ನ ಒಡನಾಟದಿಂದ ಜ್ಞಾನವನ್ನು ನಿರ್ಮಿಸಿಕೊಳ್ಳುತ್ತದೆ. ಕಲೆ ಎಂದರೆ ಬರೀ ವಸ್ತುಗಳನ್ನು ತಯಾರಿಸುವುದಲ್ಲ. ಇದು ಹೆಚ್ಚಾಗಿ ಅವಲೋಕಿಸುವುದು, ಆಲಿಸುವುದು, ಆಘ್ರಾಣಿಸುವುದು ಮತ್ತು ಸ್ಪರ್ಶಗಳನ್ನು ಕಲಿಯುವುದನ್ನು ಒಳಗೊಂಡಿದೆ. ಇದು ವಸ್ತುಗಳು, ಜನರು ಮತ್ತು ವಿಷಯಗಳೊಂದಿಗಿನ ಪ್ರತಿಸ್ಪಂದನೀಯ ಸಂಬಂಧದಿಂದ ಪ್ರಾರಂಭವಾಗುತ್ತದೆ.

ಪುಲ್ಮನ್‌ರವರು ಹೇಳಿರುವಂತೆ, ನಮಗೆಲ್ಲರಿಗೂ ಕೆಲವೊಮ್ಮೆ ಅನಿರ್ಬಂಧಿತ ಸಮಯ ಮತ್ತು ಅವಕಾಶದ ಅಗತ್ಯವಿದೆ. ಚಿತ್ರವನ್ನ ಪೂರ್ಣಗೊಳಿಸಲು, ಒಂದು ಗಣಿತದ ಸಮಸ್ಯೆಯನ್ನು ಬಿಡಿಸಲು ಅಥವಾ ಏನನ್ನಾದರೂ ನಿರ್ಮಿಸಲು ಎಲ್ಲಾ ಮಕ್ಕಳಿಗೂ ಒಂದೇ ರೀತಿಯ ಕಾಲಾವಕಾಶ ಸಾಕೆಂದು ನಾವು ತೀರ್ಮಾನಿಸಿಕೊಳ್ಳುವುದು ಸರಿಯಲ್ಲ. ಎಳೆ ಮಕ್ಕಳು ತಮಗಿರುವ ಸುಸ್ಥಿರವಾದ ಗಮನ ಕೇಂದ್ರೀಕರಣದ ಸಾಮರ್ಥ್ಯದಿಂದ ನಮ್ಮನ್ನು ಚಕಿತಗೊಳಿಸಬಹುದು.

ನಾವು ಮಕ್ಕಳಿಗೆ ಸಾಕಷ್ಟು ನೀಡಲಾಗದಿರುವ ಅಂಶಗಳಲ್ಲಿ ಒಂದೆಂದರೆ, ಸ್ವಾಯತ್ತತೆಯ ಭಾವನೆ. ಸ್ಥಳ, ಸಮಯ ಮತ್ತು ವಿಷಯಗಳು ಹೆಚ್ಚಾಗಿ ಯಾರು, ಯಾವಾಗ, ಎಷ್ಟು ಸಮಯ ಏನನ್ನು ಮಾಡಬೇಕು ಎಂದು ನಿರ್ಧರಿಸುವ ಕೆಲಸ ಶಿಕ್ಷಕರಿಂದ ಆಗುತ್ತವೆ. ಮೂರು ವರ್ಷಗಳ ಹಿಂದೆ ಮಕ್ಕಳಿಗೆ ಕೆಲವೊಂದನ್ನಾದರೂ ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ನೀಡುವ ಒಂದು ಸಣ್ಣ ಪ್ರಯೋಗವನ್ನು ಪ್ರಾರಂಭಿಸಿದೆವು. ವಾರಕ್ಕೆ ಒಂದು ಬಾರಿ ಶುಕ್ರವಾರ 'ಮುಕ್ತ ಆಯ್ಕೆ' ಸಮಯದಲ್ಲಿ ಮಕ್ಕಳು ತಮಗೆ ಬೇಕಾದ ಯಾವುದಾದರೊಂದು ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಇಂತಹ ಚಟುವಟಿಕೆಗಳೆಂದರೆ, ನಾಟಕ, ಅಡುಗೆ, ಕಾಗದವನ್ನು ಮಡಚಿ ಮಾಡುವ ಆಕೃತಿಗಳು, ಬಣ್ಣ ತುಂಬುವುದು, ವಿನ್ಯಾಸಗಳ ತಯಾರಿಕೆಯಾಗಿದೆ, ಗಣಕ ಯಂತ್ರದಲ್ಲಿ ಕಲೆ ಮೂಡಿಸುವುದು, ಆಕೃತಿಗಳನ್ನು ಉಪಯೋಗಿಸಿ ವಿನ್ಯಾಸಗಳನ್ನು ನಿರ್ಮಾಣ ಮಾಡುವುದು ಮತ್ತು ಜೇಡಿ ಮಣ್ಣನ್ನು ಬಳಸಿ ಆಕೃತಿಗಳನ್ನು ಮಾಡುವುದಾಗಿದೆ. ಮಕ್ಕಳು ಒಂಟಿಯಾಗಿ, ಜೋಡಿಯಾಗಿ ಅಥವಾ ಗುಂಪಿನಲ್ಲಿ ಚಟುವಟಿಕೆಯನ್ನು ಮಾಡಬಹುದು ಮತ್ತು ಯಾವ ವಯೋಮಾನದವರ ಜೊತೆಯಲ್ಲಾದರೂ ಬೆರೆತು ತೊಡಗಿಕೊಳ್ಳುವಂತೆ ಆಯ್ಕೆ ಮಾಡಿಕೊಳ್ಳಬಹುದು. ಇಲ್ಲಿ ಶಿಕ್ಷಕರ ಹಸ್ತಕ್ಷೇಪ ಬಹಳ ಕಡಿಮೆ. ಆದರೆ ಅವಧಿಯ ಕೊನೆಯಲ್ಲಿ ಮಕ್ಕಳು ತಾವು ಏನನ್ನು ಮಾಡಿರುವರೆಂದು ಇತರರಿಗೆ ಪ್ರದರ್ಶಿಸಬೇಕು ಮತ್ತು ಅದರ ಬಗ್ಗೆ ಹೇಳಬೇಕು.

ಈ ರೀತಿಯ ಸ್ವಾತಂತ್ರ್ಯ ಎಲ್ಲಾ ಸಮಯದಲ್ಲೂ ಸೂಕ್ತವಾಗುವುದಿಲ್ಲ, ಸಾಧ್ಯವಾಗುವುದಿಲ್ಲ ಅಥವಾ ಅಪೇಕ್ಷಣೀಯವಲ್ಲ ಮತ್ತು ಹೆಚ್ಚಿನ ಸಮಯದಲ್ಲಿ ನಿರ್ದಿಷ್ಟವಾದ ನಿರ್ದೇಶನದ ಅವಶ್ಯಕತೆ ಇರುವುದು ಸ್ಪಷ್ಟ. ಕೆಲವೊಂದು ವಲಯಗಳಲ್ಲಿ ಹೊಸ ಜ್ಞಾನವನ್ನು ಮಧ್ಯದಲ್ಲಿ ಕಲಿಸಬೇಕಾಗುತ್ತದೆ. ಆದರೆ ಶಾಲೆಗಳು ಮಕ್ಕಳ ವಿಭಿನ್ನ ಸಾಮರ್ಥ್ಯ, ಅಪೇಕ್ಷಣೀಯ ಕಲಿಕಾ ಶೈಲಿ ಮತ್ತು ಆಸಕ್ತಿಗೆ ಅನುಗುಣವಾಗಿ ಇದನ್ನು ಕಾರ್ಯಗತಗೊಳಿಸಲು ಪ್ರಯತ್ನಿಸಬೇಕೇ ವಿನಾ ಅದರ ವಿರುದ್ಧವಾಗಲ್ಲ.

ಪರಿಸರದ ಬಗ್ಗೆ ಆಲೋಚಿಸುವಾಗ ನಾವು ಅನೇಕ ಪದರಗಳನ್ನು ಪರಿಗಣಿಸಬೇಕು. ಆರೋಗ್ಯಕರವಾದ ಪರಿಸರವೆಂದರೆ ಒಂದಕ್ಕೊಂದು ಸಂಪರ್ಕವನ್ನು ಹೊಂದಿರುವಂತಹದ್ದು ಕಟ್ಟಡದ ಒಳಗಿನ ಆವರಣಕ್ಕೆ ಹೊರಗಿನ

ಸ್ಥಳಗಳ ಸಂಪರ್ಕ, ಶಾಲೆಯ ಒಳಗಿನ ಕಲಿಕೆ ಮತ್ತು ಅದರ ಪರಿಧಿಯ ಆಚೆಗಿನ ಜೀವನದೊಂದಿಗೆ ಸಂಪರ್ಕ, ನಿಮ್ಮೊಳಗೆ ಏನು ನಡೆಯುತ್ತಿದೆ ಎಂಬುದನ್ನು ಆಲೋಚಿಸಿ ಸಂಪರ್ಕ ಏರ್ಪಡಿಸಿಕೊಳ್ಳಲು ಬೇಕಾಗಿರುವ ಅವಕಾಶ, ಕನಸು ಮತ್ತು ಕಲ್ಪನೆ ಹಾಗೂ ಅದನ್ನು ಹಂಚಿಕೊಳ್ಳಲು ಸ್ಥಳ ಮತ್ತು ಸಮಯ. ಇದಲ್ಲದೇ ಏನನ್ನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎನ್ನುವುದನ್ನು ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಗಳು.

ಇನ್ನೂ ಸಮತೋಲಿತವಾದ ಭವಿಷ್ಯವನ್ನು ಸಾಧಿಸುವ ಸಲುವಾಗಿ, ಇಲ್ಲಿ ಮತ್ತು ಈಗಲೇ ಬೇಕಾದ ಅಗತ್ಯತೆಗಳನ್ನು ಮನಸ್ಸಿನ ಒಳಾಂಗಣ ಪ್ರಕ್ರಿಯೆ ಮತ್ತು ಸುತ್ತಲಿನ ಪ್ರಕೃತಿಯ ಹೊರಾಂಗಣದ ವಸ್ತು ವಿಶೇಷಗಳು ಒಂದನ್ನೊಂದು ಮುಕ್ತವಾಗಿ ರೂಪಿಸುವಂಥ ಮತ್ತು ಸಮೃದ್ಧಗೊಳಿಸುವಂಥ ಸಹಭಾಗಿ ಕಲಿಕೆಯ ಟ್ಯಾಗೂರರ ಸ್ವಪ್ನ ನಮಗೆ ಸ್ಫೂರ್ತಿಯಾಗಿದೆ.





**ಜೇನ್** ಅವರು ಬೆಂಗಳೂರಿನ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ ಮತ್ತು ಮುಂಬೈನ ಸಮಾಜ ವಿಜ್ಞಾನದ ಟಾಟಾ ಇನ್ಸ್ಟಿಟ್ಯೂಟ್‌ನಲ್ಲಿ ಅರೆಕಾಲಿಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು 1975 ರಿಂದ ಬೆಂಗಳೂರಿನ ಹೊರವಲಯದಲ್ಲಿರುವ ಒಂದು ಪದ್ಧತಿಯೇತರ ಶಾಲೆಯಾದ ಸೀತಾ ಶಾಲೆಯಲ್ಲಿ ಕೆಲಸಮಾಡಿದ್ದಾರೆ. ಇತ್ತೀಚೆಗೆ ಅವರು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರನ್ನು jane.sahi@azimpremjifoundation.org ಯಲ್ಲಿ ಸಂಪರ್ಕಿಸಬಹುದು.



# ಸಶಕ್ತಗೊಳಿಸುವ ಸ್ಥಳಾವಕಾಶಗಳು: ಅಷ್ಟೊಂದು ಮಹತ್ವದ್ದೇ?

## ಇಬ್ಬರು ಗೆಳೆಯರ ನಡುವಿನ ಸಂಭಾಷಣೆ

**ಶಶಿಧರ ಜಗದೀಶನ್**

ಬಹಳ ದಿನಗಳ ಅನಂತರ ಇಬ್ಬರು ಗೆಳೆಯರು ಭೇಟಿಯಾಗಿದ್ದರು, ಅದರಲ್ಲಿ ಒಬ್ಬರು ಶಾಲಾ ಶಿಕ್ಷಕರು (ಶಿ). ಅವರಿಬ್ಬರೂ ಲೋಕಾಭಿರಾಮವಾಗಿ ಮಾತಿಗೆ ತೊಡಗಿದಾಗ ಶಿಕ್ಷಣದ ಬಗ್ಗೆ ಅವರ ಸಂಭಾಷಣೆಯ ವಿಷಯ ಹೊರಳಿತು.

ಗೆಳೆಯ: ನಿಮ್ಮ ಶಾಲೆ ನಿಜಕ್ಕೂ ಬಹಳ ಸುಂದರವಾಗಿದೆ ಮತ್ತು ಇಲ್ಲಿನ ಮಕ್ಕಳು ಬಹಳ ಖುಷಿಖುಷಿಯಾಗಿ ಸ್ನೇಹಪರರಾಗಿ ಕಾಣುತ್ತಾರೆ. ಆದರೆ, ಇಂತಹಾ ಶಾಲೆಗಳನ್ನು ಪ್ರಾರಂಭಿಸಲು ಮತ್ತು ಅದನ್ನು ನಡೆಸಲು ಪ್ರಚಂಡ ಶಕ್ತಿ, ಉತ್ಸಾಹ ಬೇಕಾಗುತ್ತದೆ ಎಂದು ನನಗೆ ಅನಿಸುತ್ತೆ. ಶಿಕ್ಷಣಕ್ಕೆಂದೇ ವಿಶೇಷವಾದ ವಾತಾವರಣ ನಿಜಕ್ಕೂ ಬೇಕೇ?

ಶಿಕ್ಷಕ: ಇಲ್ಲಿ ಎರಡು ಪ್ರಶ್ನೆಗಳಿವೆ ಎಂದು ನನಗೆ ತೋರುತ್ತಿದೆ. ಶಿಕ್ಷಣದ ಗುರಿ ಏನು, ಮತ್ತು ಶಾಲಾ ವಾತಾವರಣ ಮಕ್ಕಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ? ಎಂದು, ಹೌದೇ?

ಗೆ: ಒಂದು ನಿಮಿಷ ತಾಳಿ, ಶಾಲಾ ವಾತಾವರಣ ಅಷ್ಟೊಂದು ಮುಖ್ಯ ಎಂದು ಅನಿಸೋಲ್ಲ. ಮಕ್ಕಳು ಎಲ್ಲ ರೀತಿಯ ಸನ್ನಿವೇಶಗಳಲ್ಲೂ ಕಲಿಯಬಲ್ಲರು ಅಂತ ನಮಗೆ ತಿಳಿದಿದೆ. ಉದಾಹರಣೆಗೆ, ಯುದ್ಧದಿಂದ ನಲುಗಿರುವ ಜಾಗಗಳಲ್ಲಿ, ಕಡುಬಡತನದಲ್ಲಿ, ದ್ವೇಷ ಮತ್ತು ಕೌಟುಂಬಿಕ ಹಿಂಸೆಯ ನಡುವೆ, ಹೀಗೆ, ಈ ಎಲ್ಲಾ ಪರಿಸ್ಥಿತಿಗಳಲ್ಲೂ ಅವರು ಕಲಿಯಬಲ್ಲರು. ಹೀಗಿರುವಾಗ, ಸಶಕ್ತೀಕರಣ ಸ್ಥಳಗಳು ಎನ್ನುವ ತಲೆಬಿಸಿಯೇಕೆ? ಇದು ಹೇಗೆ ಮುಖ್ಯವಾಗುತ್ತದೆ?

ಶಿ: ನಿಮ್ಮ ವಿಷಯವನ್ನೇ ಹೇಳಿ. ನಿಮ್ಮ ಮಗು ಅಂತಹಾ ಪ್ರತಿಕೂಲ ವಾತಾವರಣದಲ್ಲಿ ಬೆಳೆಯಲಿ ಎಂದು ಬಯಸುವಿರಾ?

ಗೆ: ಖಂಡಿತಾ ಇಲ್ಲ ! ರೂಢಿಗತವಾಗಿರುವ ಶಿಕ್ಷಣವನ್ನು ಪಡೆದೂ, ನಾವು ಇಂದು ಚೆನ್ನಾಗಿಯೇ ಇದ್ದೇವೆ ಅಲ್ಲವೇ?

ಶಿ: ನಿಮ್ಮ ಬಗ್ಗೆ ನನಗೆ ಗೊತ್ತಿಲ್ಲ – ಆದರೆ ನಾನಂತೂ ಚೆನ್ನಾಗಿಲ್ಲ!

ಗೆ: ಹಾಗಂದ್ರೆ ಏನರ್ಥ? ನಾವು ಚೆನ್ನಾಗಿಯೇ ಇದ್ದೇವೆ! ನಾವು ಸಮಾಜದಲ್ಲಿ ಯಶಸ್ವೀ ವ್ಯಕ್ತಿಗಳಾಗಿದ್ದೇವೆ, ಸಂಭಾವಿತರೂ ಎನಿಸಿಕೊಂಡಿದ್ದೇವೆ . . . .

ಶಿ: ಹೌದು! ನಾವು ಸ್ವಲ್ಪ ಮಟ್ಟಿಗೆ ಯಶಸ್ವೀ ಮತ್ತು ಕ್ರಿಯಾಶೀಲರು ಆಗಿದ್ದೇವೆ – ಆದರೆ ಸಮಾಜದ ವಿಶಾಲಾರ್ಥದಲ್ಲಿ ಮತ್ತು ನಿರ್ದಿಷ್ಟವಾಗಿ ವೈಯಕ್ತಿಕ ಮಟ್ಟದಲ್ಲಿ ನೋಡಿ. ನಮ್ಮ ಸಮಾಜ ಆರೋಗ್ಯವಾಗಿದೆ ಅಂತಾಗಲೀ, ವೈಯಕ್ತಿಕವಾಗಿ ಜನರು ಬಹಳ ಸಂತೋಷವಾಗಿದ್ದಾರೆ ಎಂದಾಗಲಿ ನನಗೆ ಅನಿಸ್ತಾ ಇಲ್ಲ.

ಗೆ: ಸಮಾಜದಲ್ಲಿ ಅನೇಕ ಸಮಸ್ಯೆಗಳಿವೆ, ಆದರೆ ಒಬ್ಬ ವ್ಯಕ್ತಿಯಾಗಿ ಇವುಗಳನ್ನು ನಾವು ಹೇಗೆ ಸರಿಪಡಿಸಬಹುದು? ಅಲ್ಲದೇ, ಇದಕ್ಕೂ ಶಿಕ್ಷಣಕ್ಕೂ ಏನು ಸಂಬಂಧ?

ಶಿ: ಸಮಾಜವನ್ನು ಸರಿಮಾಡುವ ಮೊದಲು, ಯಾವುದರಿಂದ ಸಮಾಜ ಈ ರೀತಿ ಇದೆ ಎಂದು ನಾವು ನೋಡೋಣವೇ? ಅನಂತರ, ನಮಗೆ ಶಿಕ್ಷಣ ಮತ್ತು ಸಮಾಜದ ನಡುವಿರುವ



ಸಂಬಂಧವನ್ನು ಕಾಣಲು ಸಾಧ್ಯವಾಗಬಹುದು. ಪ್ರಾಯಶಃ ನಾನು ಈ ಸಂಬಂಧವನ್ನು ನೋಡುತ್ತಿರುವ ವಿಧಾನದಲ್ಲಿ ಕಾಣಬಹುದು

ಗೆ: ಓಹೋ! ಇದು ಒಬ್ಬ ಸಮಾಜಶಾಸ್ತ್ರಜ್ಞರಿಗೆ, ಅರ್ಥಶಾಸ್ತ್ರಜ್ಞರಿಗೆ ಮತ್ತು ತತ್ವಶಾಸ್ತ್ರಜ್ಞರಿಗೆ ಕೇಳಬೇಕಾದ ಪ್ರಶ್ನೆ. ನಿಮಗೂ ಮತ್ತು ನನಗಲ್ಲ! ಆದರೆ ಈ ವಿಷಯವನ್ನು ಕುರಿತು ನಾನು ಆಲೋಚಿಸುವುದೇ ಆದರೆ, ನಮ್ಮ ವ್ಯವಸ್ಥೆ ಬಹಳ ಭ್ರಷ್ಟವಾಗಿದೆ ಎಂದು ಹೇಳಲು ಬಯಸುತ್ತೇನೆ. ಅತೀ ಶ್ರೀಮಂತರು ಮತ್ತು ರಾಜಕಾರಿಣಿಗಳ ನಡುವೆ ಒಂದು ಹೊಂದಾಣಿಕೆ ಇದೆ. ಕಳಪೆ ಆಡಳಿತವಿದೆ ಮತ್ತು ನಮಗೆ ಅರ್ಥವಾಗದ, ಅರಿವಿರದ ಅನೇಕ ಲಕ್ಷಾಂತರ ಅಂಶಗಳಿವೆ. ವ್ಯಕ್ತಿಯನ್ನು ಸಮಾಜದಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ ಎಂದು ನಾನು ಕೇಳಿದ್ದೇನೆ.

ಶಿ: ಸರಿ, ಇದು ಬಹಳ ಸಂಕೀರ್ಣವಾದ ವಿಷಯ ಅಂತ ನಾನು ಒಪ್ಕೋತೀನಿ ಹಾಗೇ ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರದ ಬಗ್ಗೆ ಮಾತನಾಡಲು ನಿಜವಾಗಲೂ ನನಗೆ ಸಾಮರ್ಥ್ಯವಿಲ್ಲ. ಆದರೆ ನಾವು ಈ ಮಾನವೀಯತೆಯ ಅಂಶದ ಮೇಲೆ ಗಮನ ಹರಿಸಬಹುದಲ್ಲ? ನಾವು ಯಾಕೆ ಭ್ರಷ್ಟರಾಗಿದ್ದೇವೆ, ಏಕೆ ಶೋಷಣೆ ಮಾಡುವವರು ಮತ್ತು ದಪ್ಪಚರ್ಮದವರು ಆಗಿದ್ದೇವೆ ಅಂತಾ?

ಗೆ: ಬಹುಶಃ ಇದೂ ಮಾನವನ ಸ್ವಭಾವದ ಒಂದು ಭಾಗವಾಗಿರಬಹುದು.

ಶಿ: ನಿಮ್ಮ ಪ್ರಕಾರ ಮಾನವ ಸ್ವಭಾವ ಎಂದರೆ, ಏನು ಅರ್ಥ?

ಗೆ: ಮನುಷ್ಯರು ಪ್ರಾಣಿವರ್ಗದ ಒಂದು ಭಾಗ, ಇಲ್ಲಿ ಸ್ವಯಂ ರಕ್ಷಣೆ ಮತ್ತು ತನ್ನ ಪೀಳಿಗೆಯ ರಕ್ಷಣೆಗೆ ತಮ್ಮ ತಮ್ಮ ಕ್ಷೇತ್ರಾಧಿಕಾರ ಸ್ಥಾಪನೆಯನ್ನು ನಾವು ಕಾಣಬಹುದು. ಪ್ರೈಮೇಟ್ ವರ್ಗದ ಪ್ರಾಣಿಗಳಲ್ಲೂ ಹಿಂಸೆ, ಪ್ರಾಬಲ್ಯವನ್ನು ನೋಡಬಹುದು. ಹೀಗಾಗಿ ಇವೆಲ್ಲಾ ನಮ್ಮ ಸ್ವಭಾವದ ಒಂದು ಭಾಗವಷ್ಟೇ ....

ಶಿ: ಆದರೆ ಮನುಷ್ಯರು ದಯಾಳುಗಳು, ಪರಹಿತ ಚಿಂತಕರು ಮತ್ತು ಸಹಾನುಭೂತಿಯುಳ್ಳವರೂ ಆಗಿರಬಹುದಲ್ಲವೇ! ಈ ಗುಣಗಳು ಪ್ರಾಣಿಗಳಲ್ಲೂ ಇದೆ ಎಂದು ನಾನು ಕೇಳಿದ್ದೇನೆ. ಏನಾದರಾಗಲಿ, ಮನುಷ್ಯರಿಗೆ ಕಲಿಯುವ ಅತ್ಯದ್ಭುತ ಸಾಮರ್ಥ್ಯವಿದೆ, ಇದನ್ನು ಒಪ್ಪುವಿರಾ? ಈಗ ನಾವು, ಶಿಕ್ಷಣ ಒಬ್ಬ ವ್ಯಕ್ತಿಯ ಮೇಲೆ ಮತ್ತು ಸಮಾಜದ ಮೇಲೆ ತನ್ನ ಪ್ರಭಾವವನ್ನು ಬೀರಬಲ್ಲುದೇ ಎಂದು ನಮ್ಮನ್ನು ಕೇಳಿಕೊಳ್ಳಬೇಕು.

ಗೆ: ಖಂಡಿತವಾಗಲೂ ಆಗತ್ತೆ! ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶ ಅವರು ಜೀವನೋಪಾಯವನ್ನು ಹೆಚ್ಚಿಸಿಕೊಂಡು ಅದರಿಂದ ಗಳಿಕೆಯನ್ನು ಹೆಚ್ಚಿಸಿಕೊಳ್ಳಲಿ ಎಂದು. ಈ ಅರ್ಥದಲ್ಲಿ ಶಿಕ್ಷಣ ವ್ಯಕ್ತಿಗತವಾಗಿ ಮತ್ತು ಸಮಾಜದ ಮೇಲೆ ಈ ಎರಡರ ಮೇಲೂ ಪ್ರಭಾವವನ್ನು ಬೀರುತ್ತದೆ.

ಶಿ: ಖಂಡಿತಾ, ಆದರೆ ಶಿಕ್ಷಣದ ಬಗ್ಗೆ ಕೃಷ್ಣಮೂರ್ತಿಯವರ ಕೆಲವು ಅಂತರ್ನೋಟವನ್ನು ಇಲ್ಲಿ ನಿಮ್ಮೊಡನೆ ಹಂಚಿಕೊಳ್ಳಬಹುದೇ? ನಾನು ಇತ್ತೀಚೆಗಷ್ಟೇ ಅವರ ಕೆಲವು ಪುಸ್ತಕಗಳನ್ನು ಓದುತ್ತಿದ್ದೆ.[1]

'ಶಾಲೆ' ಎನ್ನುವ ಪದ ಸ್ಕೂಲ್ ಎನ್ನುವ ಆಂಗ್ಲ ಪದದ ಕನ್ನಡ ರೂಪ. ಸ್ಕೂಲ್ ಪದದ ಅರ್ಥ, ವಿರಾಮ ಅಥವಾ ವ್ಯವಧಾನ ಎಂದಾಗುತ್ತದೆ. ಇಲ್ಲಿ ವ್ಯವಧಾನದಿಂದ ಕಲಿಯುವುದು ಅಥವಾ ಕಲಿಯಲು ವ್ಯವಧಾನವನ್ನು ಹೊಂದುವುದು ಎಂಬ ಅರ್ಥವನ್ನು ಕೊಡುತ್ತದೆ. ಈ ಸ್ಥಳ, ಭವಿಷ್ಯದ ಪ್ರಜೆಗಳನ್ನು ಸಜ್ಜುಗೊಳಿಸಲು ಇರುವಂತಹದ್ದು, ಯಾಕೆಂದರೆ ಶಾಲೆಗಳು ಇರುವುದೇ ಅದಕ್ಕೆ. ಇಲ್ಲಿ ಮನುಷ್ಯರನ್ನು ಯಾಂತ್ರಿಕ, ತಂತ್ರಜ್ಞಾನದ ಸಾಧನಗಳಾಗಿ, ಕೆಲಸ ಅಥವಾ ಉದ್ಯೋಗಕ್ಕಾಗಿ ತಯಾರುಮಾಡುವುದು ಮಾತ್ರ ಆಗಬಾರದು. ಈ ಸ್ಥಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ವಿಕಸನ ಹೊಂದುವುದಕ್ಕಾಗಿ ಇರುವಂತಹದ್ದು. ಉದ್ಯೋಗ ಅಥವಾ ವ್ಯವಹಾರಕ್ಕೆ ತಯಾರು ಮಾಡುವುದು ಮುಖ್ಯ, ಆದರೆ, ಇಲ್ಲಿ ಯಾರೇ ಆದರೂ, ನಿರ್ಭಯದಿಂದ, ಯಾವುದೇ ಗೊಂದಲಗಳಿಲ್ಲದೇ, ಬಹು ಪ್ರಾಮಾಣಿಕ ಮನುಷ್ಯರಾಗಿ ವಿಕಸನಹೊಂದುವುದು ಪ್ರಮುಖವಾಗುತ್ತದೆ. ಇಂತಹ ಉತ್ತಮವಾದ ಮನುಷ್ಯರನ್ನು ತಯಾರು ಮಾಡುವುದು – ಇಲ್ಲಿ ಉತ್ತಮ ಎನ್ನುವ ಪದವನ್ನು ಅದರ ಸೂಕ್ತ ಅರ್ಥದಲ್ಲಿ ಉಪಯೋಗಿಸುತ್ತಿದ್ದೇನೆ, ಬರೀ ಗೌರವನ್ನು ಸೂಚಿಸುವುದಕ್ಕಲ್ಲ. ಉತ್ತಮ ಎಂದರೆ ಪರಿಪೂರ್ಣ ಮಾನವರಾಗಿ. ಅಂದರೆ, ವಿಭಜನೆ ಇಲ್ಲದೇ, ಭಗ್ನಗೊಳ್ಳದೇ, ಗೊಂದಲವಿಲ್ಲದೇ ಇರುವವರಾಗಿ ಬೆಳೆಯುವುದು ಎಂದರ್ಥ.

[1] Beginnings of Learning and
The Whole Movement Of Life Is Learning,
by J. Krishnamurti

"ಖಂಡಿತವಾಗಿಯೂ, ಶಾಲೆ ಎನ್ನುವುದು ವ್ಯಕ್ತಿಯೊಬ್ಬ ಜೀವನದ ಸಮಗ್ರತೆಯ ಬಗ್ಗೆ, ಪರಿಪೂರ್ಣತೆಯ ಬಗ್ಗೆ ಕಲಿಯುವ ಸ್ಥಳ. ಇಲ್ಲಿ ಬೋಧಕರು ಮತ್ತು ಬೋಧನೆಯನ್ನು ಪಡೆವವರು ಹೊರಗಿನ ವಿಶ್ವವನ್ನು, ಜ್ಞಾನದ ಪ್ರಪಂಚವನ್ನು ಪರಿಶೋಧಿಸುವಂತಹದ್ದಾಗಿದೆ. ಇದಲ್ಲದೇ, ಅವರು ತಮ್ಮ ಚಿಂತನೆ, ಸ್ವಭಾವಗಳ ಬಗ್ಗೆಯೂ ಶೋಧನೆಯನ್ನು ಮಾಡುವ ಸ್ಥಳ. ಇದರಿಂದಾಗಿ ಅವರು ತಮ್ಮ ಚಿಂತನೆಯು ಹೇಗೆ ದಾರಿ ತಪ್ಪುವುದು, ತಮ್ಮನ್ನು ನಿಯಂತ್ರಣಕ್ಕೆ ಒಳಪಡಿಸುತ್ತಿರುವುದು ಏನು, ಯಾವುದು ಎನ್ನುವುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಯಂತ್ರಣಕ್ಕೆ ಒಳಪಡಿಸುವುದು ಎಂದರೆ ಅತ್ಯಂತ ಹೆಚ್ಚಿನ ಮತ್ತು ಕ್ರೂರ ಪ್ರಾಮುಖ್ಯತೆಯನ್ನು ನೀಡುವ 'ನಾನು' ಎನ್ನುವುದಕ್ಕಾಗಿದೆ. ಈ ರೀತಿಯ ನಿಯಂತ್ರಣಕ್ಕೆ ಒಳಪಡುವುದರಿಂದ ಮತ್ತು ಆ ಕ್ಲೇಶದಿಂದ ಮುಕ್ತರಾಗುವುದು ಜಾಗೃತಿ ಮೂಡಿದಾಗ ಮಾತ್ರ. ಇಂತಹ ಸ್ವಾತಂತ್ರ್ಯ ಅಥವಾ ಮುಕ್ತತೆ ಇರುವಲ್ಲಿ ಮಾತ್ರವೇ ನಿಜವಾದ ಕಲಿಕೆಯು ಸಾಧ್ಯವಾಗುತ್ತದೆ."

ಗೆ: ಇದು ಅಗಾಧವಾದ ಕಾರ್ಯವಾಗಿ ಮತ್ತು ಸ್ವಲ್ಪ ಬೆದರಿಕೆ ಹುಟ್ಟಿಸುವಂತೆ ಕಾಣುತ್ತದೆ. ವಾಸ್ತವವಾಗಿ ಶಿಕ್ಷಣ ಈ ರೀತಿಯ ದೊಡ್ಡ ಸವಾಲನ್ನು ಸ್ವೀಕರಿಸಲು ಸಾಧ್ಯವೇ? ಶಿಕ್ಷಣದ ಉದ್ದೇಶದ ಬಗ್ಗೆ ಕೃಷ್ಣಮೂರ್ತಿಯವರ ಚಿಂತನೆಯನ್ನು ಅನುಮೋದಿಸುವಿರಾದರೆ, ಯಾವ ರೀತಿಯ ಪರಿಸರವನ್ನು ಸೃಷ್ಟಿಸಲು ನೀವು ಬಯಸುವಿರಿ?

ಶಿ: ಇದು ಬೆದರಿಕೆ ಹುಟ್ಟಿಸುವಂತೆ ಕಾಣಬಹುದು, ಆದರೆ ನಾನು ಈ ಸುತ್ತಲಿನ ಪ್ರಪಂಚದ ಸ್ಥಿತಿ ಗತಿಯನ್ನು ನೋಡಿದಾಗ, ಶಿಕ್ಷಣ ನೀಡಲು ನನಗೆ ಇನ್ಯಾವುದೇ ದಾರಿ ಕಾಣಿಸುತ್ತಿಲ್ಲ. ಇಂತಹಾ ಶಿಕ್ಷಣವು ಏನನ್ನು ಬೇಡುತ್ತದೆ ಎನ್ನುವುದರ ಬಗ್ಗೆ ನಾನು ಮತ್ತು ನನ್ನ ಸಹೋದ್ಯೋಗಿಗಳು ಯೋಚಿಸುವುದು ಹೇಗೆ ಎಂಬುದನ್ನು ಹೇಳುತ್ತೇನೆ. ಮೊಟ್ಟ ಮೊದಲಿಗೆ, ಬೋಧಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಪರಸ್ಪರ ನಂಬಿಕೆ ಮತ್ತು ಪ್ರೀತಿಯನ್ನು ಆಧರಿಸಿದ್ದಾಗಿರಬೇಕೆ ಹೊರತು ಅಧಿಕಾರ ಮತ್ತು ಭಯವನ್ನಲ್ಲ. ಮಾನವನ ಮನೋಭೂಮಿಕೆಯನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಟ್ಟಾಗಿ ಪರಿಶೋಧಿಸಬೇಕಾಗಿರುವಾಗ, ಅವರು ಪರಸ್ಪರ ಅಪನಂಬಿಕೆ ಮತ್ತು ಭಯವನ್ನು ಹೊಂದಿದ್ದರೆ, ಇದು ಸಾಧ್ಯವಾಗಲಾರದು.

ಗೆ: ನೀವು ಹೇಳುವುದು ಸರಿ, ನಾವು ನಮ್ಮ ಶಿಕ್ಷಕರನ್ನು ಕಂಡರೆ ಯಾವ ರೀತಿ ಹೆದರುತ್ತಿದ್ದೆವು ಎನ್ನುವುದು ನನಗೆ ಇನ್ನೂ ನೆನಪಿದೆ. ಸ್ನೇಹಪರರಾದ ಮತ್ತು ದಯಾಳುವಾದ ಕೆಲವು ಶಿಕ್ಷಕರನ್ನು ಬಿಟ್ಟರೆ, ನಾವು ಎಂದಿಗೂ ಶಿಕ್ಷಕರೊಂದಿಗೆ ಅನ್ಯೋನ್ಯತೆಯ ಭಾವನೆಯನ್ನು ಹೊಂದಿರಲಿಲ್ಲ. ವಯಸ್ಕರಾಗಿ ಮತ್ತು ಮಗುವಿನ ಹೊಣೆಗಾರರಾಗಿ ನಾವು ಎಷ್ಟೇ ಅತ್ಯುತ್ತಮ ಸಂಬಂಧಗಳನ್ನು ಹೊಂದಿದ್ದರೂ ಕೆಲವೊಮ್ಮೆ ನೀವು ಮಕ್ಕಳಿಗೆ ಗದರಿಸಿ ಹೇಳ ಬೇಕಾಗಿ ಬರುತ್ತದಲ್ಲವೇ? ಅವರು ಒಬ್ಬರಿಗೊಬ್ಬರು ಹಾನಿ ಉಂಟುಮಾಡುವುದನ್ನು ಕಂಡಾಗ ನೀವು ಏರಿದ ಧ್ವನಿ ಎತ್ತಿ ಮಾತಾಡಬೇಕಲ್ಲವೇ, ಮತ್ತು ಕೆಲವೊಂದು ಕಟ್ಟುಪಾಡುಗಳನ್ನು ಹಾಕಲು ಪ್ರಯತ್ನಿಸಬೇಕಾ–ಗುತ್ತದಲ್ಲವೇ? ಅವರು ಎಂದೂ ನಿಮಗೆ ಹೆದರಿಲ್ಲ ಎಂದು ಹೇಳಬೇಡಿ!

ಶಿ: ಇದೊಂದು ಒಳ್ಳೆಯ ಅಂಶ, ಮತ್ತು ನಾವು ಭಯದಲ್ಲಿಡುವುದನ್ನು ಎಲ್ಲಾ ರೀತಿಯಲ್ಲಿ ಬಿಟ್ಟುಬಿಟ್ಟಿದ್ದೇವೆ ಎಂದು ನಾನು ಹೇಳುತ್ತಿಲ್ಲ. ಆದರೂ, ನೀವು ಭಯವನ್ನು ವ್ಯವಸ್ಥಿತವಾಗಿ ಉಪಯೋಗಿಸಿಕೊಂಡಾಗ ಅಥವಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ವ್ಯವಹಾರಕ್ಕೆ ಭಯವೇ ಚಲಾವಣೆಯಲ್ಲಿದ್ದಾಗ ಇದೊಂದು ಬೇರೆಯ ವಿಷಯವಾಗುತ್ತದೆ. ಭಾರತದಲ್ಲಿನ ಹಲವು ಶಾಲೆಗಳಲ್ಲಿ ಮಕ್ಕಳಿಗಿರುವ ಭಯದ ಬಗ್ಗೆ ಕೆಲವು ಶಿಕ್ಷಕರು ಕೆಲವು ವರ್ಷಗಳ ಹಿಂದೆ ಒಂದು ಸಮೀಕ್ಷೆಯನ್ನು ಮಾಡಿದರು. ಅದರಲ್ಲಿ ಕೆಲವರ ಪ್ರತಿಕ್ರಿಯೆಗಳು ನನಗೆ ಇನ್ನೂ ನೆನಪಿದೆ. ಅವುಗಳೆಂದರೆ:

'ಹೋಂವರ್ಕ್, ಘಟಕ ಪರೀಕ್ಷೆಗಳು ಮತ್ತು ಅಪಾಯಕಾರಿ ಪ್ರಾಣಿಗಳು,' 'ಕತ್ತಲೆ, ಗಣಿತ ಶಿಕ್ಷಕರು ಮತ್ತು ಈಜುಕೊಳದ ಆಳವಾದ ಪ್ರದೇಶಗಳು,' 'ಪ್ರಕೃತಿ ವಿಕೋಪಗಳು, ತಂದೆ, ಶಿಕ್ಷಕರು ಮತ್ತು ಘಟಕ ಪರೀಕ್ಷೆಗಳು,' ದೇವರು, ಹಾವುಗಳು, ಕೆಲವು ಶಿಕ್ಷಕರು.'



ಗೆ: ಹಮ್ ..... ನನಗೆ ನೀವು ಹೇಳುವುದು ತಿಳಿಯಿತು. ಸಾಂಪ್ರದಾಯಿಕ ಶಿಕ್ಷಣದಲ್ಲಿ ಮಕ್ಕಳನ್ನು ಕಲಿಯುವಂತೆ ಪ್ರೇರೇಪಿಸಲು ಭಯವನ್ನು ಪ್ರಮುಖ ಸಾಧನವನ್ನಾಗಿ ಬಳಸಿಕೊಳ್ಳುವುದು ಕಂಡುಬರುತ್ತದೆ. ಅಲ್ಲದೇ, ಅದರ ಬಗ್ಗೆ ಯೋಚಿಸಿದಾಗ, ಶಾಲೆಗಳು ಬಹಳಷ್ಟು ಪೈಪೋಟಿ, ಹೋಲಿಕೆ, ಸನ್ಮಾನ ಮತ್ತು ಶಿಕ್ಷೆಯನ್ನು ಉಪಯೋಗಿಸುವುದು ಕಂಡುಬರುತ್ತದೆ. ಇದು ಕಲಿಕೆಗೆ ಹಾನಿಕಾರಕ ಎಂದು ಹೇಳುವಿರಾ?

ಶಿ: ಹೌದು! ಇದು ಕಲಿಕೆಯನ್ನು ತೀವ್ರವಾಗಿ ಕುಂಠಿತಗೊಳಿಸುತ್ತದೆ ಹಾಗೂ ಪ್ರಮುಖವಾಗಿ, ದುಷ್ಟ ಸಮಾಜವನ್ನು ಸೃಷ್ಟಿಸುತ್ತದೆ. ಆಸಕ್ತಿದಾಯಕ ವಿಷಯವೆಂದರೆ, ಭಯವು ಶೈಕ್ಷಣಿಕ ಕಲಿಕೆಯನ್ನು ರಾಜಿಮಾಡಿಕೊಳ್ಳುವಂತೆ ಮಾಡುತ್ತದೆ ಮತ್ತು ಪೈಪೋಟಿ, ಸನ್ಮಾನ ಮತ್ತು ಶಿಕ್ಷೆಗಳು ಅಲ್ಪಕಾಲೀನ ಲಾಭಗಳನ್ನು ನೀಡುತ್ತವೆಯಾದರೂ ದೀರ್ಘಾವಧಿಯಲ್ಲಿ ಸಂವೇದನಾರಹಿತ ಮತ್ತು ಅಸುರಕ್ಷಿತ ಮನೋ–ಭಾವವನ್ನು ಹೊಂದಿರುವ ಮಾನವರನ್ನು ಸೃಷ್ಟಿಸುತ್ತದೆ ಎಂದು ವೈಜ್ಞಾನಿಕ ಸಂಶೋಧನೆಗಳು ನಿಸ್ಸಂದಿಗ್ಧವಾಗಿ ತೋರಿಸಿವೆ.

ಗೆ: ನೀವು ಶಿಕ್ಷಣ ಮತ್ತು ಸಮಾಜದ ನಡುವೆ ಸಂಪರ್ಕವಿದೆ ಎಂದು ಹೇಳುತ್ತಿರುವುದು ನನಗೆ ಈಗ ಅರ್ಥವಾಗುತ್ತಿದೆ. ಆದರೆ ಇದುವರೆಗೂ ನಾವು ಸಾಂಪ್ರದಾಯಿಕ ಶಿಕ್ಷಣದ ಕೆಟ್ಟ ಪರಿಣಾಮಗಳ ದೃಷ್ಟಿಯಿಂದ ಮಾತ್ರ ನೋಡಲು ಪ್ರಯತ್ನಿಸುತ್ತಿದ್ದೇವೆ ಎನಿಸುತ್ತಿದೆ. ನೀವು ಅನುಸರಿಸಬೇಕೆಂದಿರುವ ವಿಧಾನದಲ್ಲಿನ ಸುಸ್ಪಷ್ಟ ಫಲಿತಾಂಶಗಳ ಬಗ್ಗೆ ಹೇಳಿ.

ಶಿ: ಮೊದಲಿಗೆ ಒಂದು ಹೊಣೆರಾಹಿತ್ಯದ ಹೇಳಿಕೆ. ಶಿಕ್ಷಣ ಕ್ಷೇತ್ರದಲ್ಲಿ ನೀವು ಹೆಚ್ಚು ತೊಡಗಿಸಿಕೊಂಡಷ್ಟೂ, ಆದಷ್ಟೂ ಕಡಿಮೆ ಸಿದ್ಧಾಂತವಾಗಿ ಹೇಳುವುದು ಮತ್ತು ಫಲಿತಾಂಶವನ್ನು ಕುರಿತು ಖಾತರಿ ನೀಡಲು ಸಾಧ್ಯವಿಲ್ಲದಂತೆ ಕಾಣುತ್ತದೆ. ಹೀಗಿದ್ದರೂ ಈ 23 ವರ್ಷಗಳಲ್ಲಿ ಮಕ್ಕಳೊಂದಿಗೆ ಕೆಲಸಮಾಡಿ ನಮಗಿರುವ ಅನುಭವದಿಂದಾಗಿ ಕೆಲವೊಂದು ವಿಷಯಗಳನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುತ್ತದೆ.

ಗೆ: ಉದಾಹರಣೆಗೆ?

ಶಿ: ಪರೀಕ್ಷೆ ಅಥವಾ ಇನ್ಯಾವುದೇ ವಿಷಯಕ್ಕಾಗಿಯಲ್ಲದೇ ಕಲಿಸುವುದಕ್ಕಾಗಿಯೇ ಬೋಧಿಸುವುದು ಸಾಧ್ಯವಿದೆ. ವಾಸ್ತವವಾಗಿ, ಮೊದಲ ದಿನದಿಂದಲೇ ವಿದ್ಯಾರ್ಥಿಗಳನ್ನು ಆಲೋಚಿಸಲು, ಪ್ರಶ್ನಿಸಲು ಮತ್ತು ಪರಿಕಲ್ಪನೆಗಳನ್ನು ಅವರು ಅರ್ಥಮಾಡಿಕೊಂಡಿದ್ದಾರೆಯೊ ಇಲ್ಲವೋ ಎಂದು ಅರಿಯಲು ಪ್ರೋತ್ಸಾಹಿಸಲಾಗುತ್ತದೆ. ಅವರಿಗಿರುವ ಗ್ರಹಣಾ ಶಕ್ತಿ ಆಳವಾದದ್ದು ಮತ್ತು ಹೊಸ ವಿಷಯಗಳನ್ನು ಕಲಿಯಲು ಅವರಿಗಿರುವ ಸಾಮರ್ಥ್ಯ ಇದರಿಂದ ವೃದ್ಧಿಸುತ್ತದೆಂದು ನಮಗೆ ತಿಳಿದಿದೆ. ಹೀಗಾಗಿ ಕಲಿಕೆಯು ಸಾಮಾನ್ಯಕಲಿಕೆಯನ್ನು ಮೀರಿ ಮುಂದುವರೆಯುತ್ತದೆ. ನಮ್ಮ ದಿನ ನಿತ್ಯದ ಒಡನಾಟದಲ್ಲಿಯೂ ವಿದ್ಯಾರ್ಥಿಗಳೊಂದಿಗಿನ ನಮ್ಮ ತೊಡಗಿಸಿ–ಕೊಳ್ಳುವಿಕೆಯನ್ನು ಅರ್ಥಮಾಡಿಕೊಳ್ಳುವಿಕೆಯನ್ನು ಕೇಂದ್ರವಾಗಿರಿಸಿ ಪ್ರಾರಂಭಿಸಿದ ಕೂಡಲೇ ಅನೇಕ ಸೂಕ್ಷ್ಮವಾದ ಆದರೆ ಪ್ರಮುಖವಾದ ವಿಷಯಗಳು ಘಟಿಸಲು ಪ್ರಾರಂಭಿಸುತ್ತವೆ. ಒಂದು ಮಗುವು ನಿಯಮವನ್ನು ಮುರಿದಿದ್ದರೂ ನಾವು ಪ್ರತಿಯೊಂದನ್ನು ಅರ್ಥಮಾಡಿಕೊಳ್ಳುವಿಕೆಯ ದೃಷ್ಟಿಕೋನದಿಂದ ನೋಡಿದಾಗ ......

ಗೆ: ಹೀಗಿದ್ದರೂ ದಿನ ನಿತ್ಯ ನೀವು ಪ್ರೇರಣೆ ಮತ್ತು ಪ್ರತಿರೋಧದ ಸವಾಲು ಎದುರಿಸುತ್ತಿಲ್ಲವೇ? ಅಲ್ಲದೇ, ನಿಮ್ಮ ಪರಿಸರ ಪ್ರೋತ್ಸಾಹಿಸದಿದ್ದರೂ, ಮಕ್ಕಳು ಹೇಗಿದ್ದರೂ ತಮ್ಮನ್ನು ಇನ್ನೊಬ್ಬರೊಡನೆ ಹೋಲಿಸಿ–ಕೊಳ್ಳುತ್ತಾರೆ. ಈ ರೀತಿಯ ಅತಿ ನಿಯಮಾಧೀನ ಪರಿಸ್ಥಿತಿಯನ್ನು ಹೇಗೆ ನಿರ್ವಹಿಸುವಿರಿ?

ಶಿ: ನೀವು ನೇರ ವಿಷಯಕ್ಕೆ ಬಂದಿರಿ! ನಾನು ಹೇಳಿದ ಹಾಗೆ, ಶಿಕ್ಷಣದ ಸಣ್ಣ ಗುರಿಗಳಾದ – ಎಲ್ಲಾ ಸಾಮಾನ್ಯ ಶಾಲೆಗಳಲ್ಲೂ ನಡೆಯುವಂತೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಅಗೌರವಯುತವಾಗಿ ನಡೆಸಿಕೊಳ್ಳದೇ ಕೌಶಲ್ಯಗಳು ಮತ್ತು ಪರಿಕಲ್ಪನೆಗಳಲ್ಲಿ ಪರಿಣಿತಿಯನ್ನು ಹೊಂದುವಂತೆ ಮಾಡಲು ನಮಗೆ ಸಾಧ್ಯವಿದೆ. ಆದರೆ ನಕಾಶೆಯನ್ನು ದೊಡ್ಡದಾಗಿ ಹರಡಿದ ಕೂಡಲೇ ನೀವು ಮಾನವನ ಪ್ರಚಂಡ ನಿಯಮಾಧೀನ ನಡವಳಿಕೆಯ ಸವಾಲನ್ನು ಎದುರಿಸಬೇಕಾಗುತ್ತದೆ. ಇದರಿಂದಾಗಿ ನಾವು ನಮ್ಮನ್ನು ಇತರರೊಂದಿಗೆ ಪರಸ್ಪರ ಹೋಲಿಸಿಕೊಳ್ಳುವಾಗ ನಮ್ಮ ಪೂರ್ವಾಗ್ರಹಗಳು, ಭಯ, ಆತಂಕಗಳು, ಕಳವಳಗಳು, ನಿರೀಕ್ಷೆಗಳು ಮತ್ತು ಆಸೆಗಳು, ಸುಖ ಮತ್ತು ದುಃಖ, ಬೇರೆಯವರೊಂದಿಗೆ ನಮ್ಮನ್ನು ಹೋಲಿಸಿಕೊಳ್ಳುವ ಅಗತ್ಯತೆ ಹಾಗೂ ನಾವು ಚಿಂತಿಸುವ ಮತ್ತು ಕಾರ್ಯವೆಸಗುವ ನಿರ್ದಿಷ್ಟ ವಿಧಾನಗಳನ್ನು ಎದುರಿಸಬೇಕಾಗುತ್ತದೆ.

ಗೆ: ಹಾಗಾದರೆ ಈ ಸವಾಲುಗಳನ್ನು ನೀವು ಹೇಗೆ ಎದುರಿಸುವಿರಿ?

ಶಿ: ವಿನಮ್ರತೆಯಿಂದ ಎಂದು ಆಶಿಸುತ್ತೇನೆ! ಏನು ಮಾಡಬೇಕೆಂಬ ಆಲೋಚನೆ ಎಂದರೆ, ನಮ್ಮ ಸ್ವಯಂ ನಿಯಮಾಧೀನತೆಯ ಬಗ್ಗೆ, ಗುರುತಿಸುವಿಕೆ ಮತ್ತು ವಿಭಜನೆ, ನಂಬಿಕೆಗಳು ಮತ್ತು ಅಸುರಕ್ಷಿತತೆ, ಹಾಗೂ ಇವು ಬೃಹತ್ ಸಮಾಜದಲ್ಲಿ ಹೇಗೆ ವರ್ತಿಸುತ್ತವೆ ಎಂದು ಅರಿವನ್ನು ಮೂಡಿಸುವಂತಹ ಪರಿಸರವನ್ನು ನಿರ್ಮಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಗೆ: ವಿದ್ಯಾರ್ಥಿಗಳಿಗೆ ತಮ್ಮ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಇಲ್ಲವೆಂದಾಗ ಏನು ಮಾಡುವಿರಿ?

ಶಿ: ನೀವು ಅವರಿಗೆ ಬಲವಂತ ಮಾಡುವುದಾಗಲೀ, ಒತ್ತಡ ಹೇರುವುದಾಗಲೀ ಮಾಡುವಂತಿಲ್ಲ, ಅದಂತು ಖಂಡಿತ! ಅವರ ಬಗ್ಗೆ ಸ್ವ-ಅರಿವನ್ನು ಮೂಡಿಸಿಕೊಳ್ಳುವಂತೆ ಅವರನ್ನು ಆಹ್ವಾನಿಸಬಹುದು ..... ಮತ್ತು ಹೀಗೆ ಮಾಡಲು, ಪರ್ಯಾಲೋಚನೆ ಮತ್ತು ಪ್ರಶ್ನಿಸಲು ಅವಕಾಶ-ವಿರುವಂತೆ ಶಾಲೆಯು ವಿನ್ಯಾಸಗೊಂಡಿರಬೇಕು. ಸಹಕಾರ ಮತ್ತು ಜೊತೆಯಲ್ಲಿ ಕಾರ್ಯ ನಿರ್ವಹಿಸುವುದರ ಬಗ್ಗೆ ಒತ್ತನ್ನು ನೀಡುವ ವಿದ್ಯಾರ್ಥಿಗಳ ಒಂದು ಶಕ್ತಿಶಾಲಿ ಸಮುದಾಯ ನಮ್ಮದು. ಇದು ನಮ್ಮನ್ನು "ಸಂಬಂಧಗಳ ದರ್ಪಣದಲ್ಲಿ" ನಮ್ಮನ್ನು ನಾವೇ ನೋಡಿಕೊಳ್ಳುವಂತೆ ಸಹಜವಾಗಿ ಒತ್ತಾಯಿಸುತ್ತದೆ. ಇದರೊಂದಿಗೆ, ಪ್ರಪಂಚದ ಎಲ್ಲೆಡೆ ಜನರು ವಿಭಿನ್ನ ಸನ್ನಿವೇಶಗಳಲ್ಲಿ ಜೀವನವನ್ನು ಹೇಗೆ ಎದುರಿಸುವರು ಎಂದೂ ನಾವು ಕಲಿಯುತ್ತೇವೆ. ಅನಂತರ ಪ್ರಕೃತಿಯೊಂದಿಗೆ ಅತಿ ನಿಕಟವಾಗಿ ಸಮಯವನ್ನು ಕಳೆಯುತ್ತೇವೆ ಮತ್ತು ಒಂದು ದಿನದಲ್ಲಿ ಮೌನವಾಗಿ ಪರ್ಯಾಲೋಚನೆಯಲ್ಲಿ ತೊಡಗುವಂತೆ ಅವಕಾಶಗಳನ್ನೂ ಮಾಡಿ-ಕೊಂಡಿದ್ದೇವೆ. ವಿದ್ಯಾರ್ಥಿಗಳು ಬಹಳ ಕಷ್ಟ ಎಂದು ಕಂಡುಕೊಂಡಿರುವುದೆಂದರೆ ಪ್ರತಿ ದಿನದಲ್ಲಿನ ಅರ್ಧ ತಾಸಿನ ಮೌನದ ಸಮಯ. ಇದು ಬಹಳ ಕಷ್ಟ ಎನ್ನಿಸುವ ಅಂಶವೆಂದರೆ ಬಹಳ ಪ್ರಕಟವಾಗಿ ಕಾಣುವುದು! ನಾವು ಯಾವುದೇ ನಿರ್ದಿಷ್ಟ ಕಾರ್ಯದಲ್ಲಿ ಅಥವಾ ಮನೋರಂಜನೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳದೇ ಇದ್ದಾಗ ನಮ್ಮಲ್ಲಿಯೇ ಒಂದು ರೀತಿಯ ತಲ್ಲಣವನ್ನು ನಾವು ಅನುಭವಿಸುತ್ತೇವೆ.

ಗೆ: ಆದರೆ ಮಕ್ಕಳು ಈ ಅನುಭವಗಳನ್ನು ಬೇರೆ ರೀತಿಯಲ್ಲಿಯೇ ಅನುಭವಿಸುತ್ತಿರಬಹುದು, ಉದಾಹರಣೆಗೆ, ನಿಮ್ಮ ಮೌನದ ಸಮಯವನ್ನು ಮಕ್ಕಳು ಯೋಜನೆ ಮಾಡಿಕೊಳ್ಳುವುದಕ್ಕಾಗಿ ಅಥವಾ ಹಗಲುಗನಸು ಕಾಣುವುದಕ್ಕಾಗಿ ಎಂದು



ಅರ್ಥಮಾಡಿಕೊಂಡಿರಬಹುದು. ನಿಮ್ಮ ಶಾಲೆಯು ಚೈತನ್ಯವಾಗಿರಿಸಿಕೊಂಡಿರುವ ಪ್ರಶ್ನೆಗಳನ್ನು ಅವರು ನಿಜವಾಗಿಯೂ ಪರಿಶೋಧಿಸುತ್ತಿರುವರೆಂದು ನೀವು ಹೇಗೆ ಖಚಿತಪಡಿಸಿಕೊಳ್ಳುವಿರಿ?

ಶಿ: ನಿಜವಾಗಲೂ ನಿಮಗೆ ಕಠಿಣ ಪ್ರಶ್ನೆಗಳನ್ನು ಕೇಳುವ ಜಾಣ್ಮೆ ಇದೆ! ಹೌದು ನಾವು ಪ್ರತಿಯೊಬ್ಬರೂ ನಮ್ಮದೇ ಆದ ರೀತಿಯಲ್ಲಿ ಅರ್ಥೈಕೆಯನ್ನು ಕಾಣುತ್ತೇವೆ. ನಾವು ವಿದ್ಯಾರ್ಥಿಗಳೊಡನೆ ಮಾತನಾಡುವಾಗ ಕಾಳಜಿ ಮತ್ತು ಉತ್ಸಾಹವನ್ನು ತುಂಬುತ್ತೇವೆ. ಉದಾಹರಣೆಗೆ ಒಬ್ಬ ಸಾಮಾನ್ಯ ಹಿರಿಯ ವಿದ್ಯಾರ್ಥಿಯು ಒಂದು ವಾರದಲ್ಲಿ ಸುಮಾರು ಮೂರು ತಾಸುಗಳಷ್ಟು ಇಂತಹಾ ಸಂಭಾಷಣೆಯು ಅವಧಿಗಳಲ್ಲಿ ತೊಡಗಿಕೊಳ್ಳ-ಬೇಕಾಗುತ್ತದೆ. ದೊಡ್ಡವರೊಂದಿಗೆ ಅನೌಪಚಾರಿಕ ಮಾತುಕತೆಯಲ್ಲೂ ಇವರು ತೊಡಗಿಕೊಳ್ಳಬಹುದು. ಈ ವಿಷಯಗಳು ಶಾಲಾ ನಿಯಮಗಳು, ಅವರ ಪರಸ್ಪರ ಸಂಬಂಧಗಳು ಮತ್ತು ವಿಶ್ವದಲ್ಲಿ ತಮಗಿರುವ ಸ್ಥಾನವನ್ನು ಅರ್ಥಮಾಡಿಕೊಳ್ಳುವುದನ್ನು ಒಳಗೊಂಡಿರುತ್ತದೆ. ಇಲ್ಲಿನ ಪ್ರತಿಯೊಂದು ಕಾರ್ಯದಲ್ಲೂ ನಾವು ಆಶಿಸುವುದು ಏನೆಂದರೆ ಕ್ಷಣದಿಂದ ಕ್ಷಣಕ್ಕೂ ನಮ್ಮಲ್ಲಿ ಮೂಡುವ ಆಲೋಚನೆಗಳು ಮತ್ತು ಭಾವನೆಗಳಿಗೆ ನಿಜವಾಗಿಯೂ ಒಟ್ಟಾಗಿ ನಾವು ಗಮನ ನೀಡಿಬಹುದೇ ಎಂದು. ನನ್ನನ್ನು ನಂಬಿ, ವಾಸ್ತವವಾಗಿಯೂ ಇದು ಆಗ್ರಹಪೂರ್ವಕವಾಗಿ ಗಮನ ಬೇಡುತ್ತಿರುವಂಥಹದ್ದು. ಇಲ್ಲಿ ನಾವೆಲ್ಲರೂ ನಮ್ಮ ಪ್ರಯಾಣದ ಪ್ರಾರಂಭದಲ್ಲಿರುವವರು.

ಗೆ: ಹಾಗಾದರೆ, ನಮ್ಮೆಲ್ಲರಲ್ಲಿ ಪ್ರಶ್ನಾತೀತವಾಗಿ ಆನುವಂಶಿಕವಾಗಿ ಬಂದಿರುವ ನಿರ್ಬಂಧಗಳಿಂದ ಮುಕ್ತರಾಗಿ ಸ್ನೇಹಪರ ಮತ್ತು ಸಹಾನುಭೂತಿಯುಳ್ಳ ಮಾನವರಾಗುವಂತೆ ವಿದ್ಯಾರ್ಥಿಗಳನ್ನು ಪೋಷಿಸಿ, ಬೆಳೆಸುವ ಆಶಯ ಹೊಂದಿದ್ದೀರೆಂದು ಹೇಳುತ್ತಿರುವು-ದಾಗಿ ನಾನು ಊಹಿಸುತ್ತೇನೆ.



**ಶಶಿಧರ** ಅವರು 1994ರಲ್ಲಿ ಸೈರಕಸ್ ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ. ಇವರು 27 ವರ್ಷಕ್ಕಿಂತಲೂ ಹೆಚ್ಚು ಸಮಯ ಶಿಕ್ಷಕರಾಗಿ ಇದ್ದವರು. ಇವರಿಗೆ ಯುವಜನತೆಯೊಂದಿಗೆ ಸಂವಾದ ಮಾಡುವುದು ಮತ್ತು ಕಾರ್ಯ ನಿರ್ವಹಿಸುವುದು ಹೆಚ್ಚಿನ ಆನಂದವನ್ನು ನೀಡುತ್ತದೆ. ಇವರು ಬೆಂಗಳೂರಿನಲ್ಲಿರುವ ಸೆಂಟರ್ ಫಾರ್ ಲರ್ನಿಂಗ್‌ನಲ್ಲಿ ಪ್ರೌಢ ಶಾಲಾ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಇವರನ್ನು jshashidhar@gmail.com ಇಲ್ಲಿ ಸಂಪರ್ಕಿಸಬಹುದು.



# ಭವಿಷ್ಯದ ಪ್ರಜೆಗಳ ಪೋಷಣೆ: ಶಾಲೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ.

ನಜರುಲ್ ಹಕ್ ಮತ್ತು ಸುಜಿತ್ ಸಿನ್ಹಾ

"ಸಾರಭರಿತ ಮತ್ತು ಸದೃಢ ಶಿಕ್ಷಣವು ಯಾವಾಗಲೂ ಮಕ್ಕಳ ಭೌತಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ರೂಪುಗೊಂಡು ಬೇರೂರುತ್ತದೆ ಹಾಗೂ ಪೋಷಕರು, ಶಿಕ್ಷಕರು, ಸಹ ವಿದ್ಯಾರ್ಥಿಗಳು ಮತ್ತು ಸಮುದಾಯದ ನಡುವಿನ ಒಡನಾಟದಿಂದ ಅದಕ್ಕೆ ಪೋಷಣೆ ದೊರೆಯುತ್ತದೆ," ಎಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005 ಹೇಳುತ್ತದೆ. ಹೀಗಿದ್ದರೂ, ಶಾಲೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯ ಅನೇಕ ವಿಧಾನಗಳಿರಲು ಅವಕಾಶವಿದೆ.

ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಕಾಯ್ದೆ 2009, (RTE Act) 6 ರಿಂದ 14ರ ವಯೋಮಾನದಲ್ಲಿರುವ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಅವಕಾಶ ಕಲ್ಪಿಸುವ ಒಂದು ಕಾನೂನು. ಶಾಲೆಗಳನ್ನು ಪ್ರಜಾಸತ್ತಾತ್ಮಕವಾಗಿಸಲು ಈ ಕಾಯ್ದೆಯೊಳಗೇ ನಿರ್ದಿಷ್ಟ ಏರ್ಪಾಟುಗಳನ್ನು ಕಲ್ಪಿಸಲಾಗಿದೆ. ಶಾಲಾ ನಿರ್ವಹಣಾ ಸಮಿತಿಯನ್ನು (ಎಸ್‌ಎಂಸಿ) ರಚಿಸಿ ಶಾಲಾ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ತನ್ಮೂಲಕ ಶಾಲೆಗಳನ್ನು ವಿನ್ಯಾಸಗೊಳಿಸಿ ನಡೆಸಲು ತಂದೆತಾಯಿಯರು ಮತ್ತು ಸ್ಥಳೀಯ ಸಮುದಾಯದವರು ತಾವು ನಿರ್ವಹಿಸಬೇಕಾಗಿರುವ ನಿರ್ದಿಷ್ಟವಾದ ಪಾತ್ರವನ್ನು ಕುರಿತು ವಿಶೇಷವಾದ ಏರ್ಪಾಟುಗಳನ್ನು ಮಾಡಲಾಗಿದೆ.

ಇದೊಂದು ಒಳ್ಳೆಯ ನಡೆಯಾಗಿದ್ದರೂ, ಇಂತಹ ಪಾಲ್ಗೊಳ್ಳುವಿಕೆಯನ್ನು ತಾಂತ್ರಿಕ ಪ್ರಯತ್ನವೆಂದು ನೋಡಬಹುದಾಗಿದ್ದು, ಇದರ ಗುರಿ ಶಾಲೆಯು ಪರಿಣಾಮಕಾರಿಯಾಗಿ ನಡೆಯುವಂತೆ ಮಾಡುವುದಾಗಿದೆ. ಆದರೂ, ನಮ್ಮ ಮಕ್ಕಳು ಇಂದಿನ (ಮತ್ತು ನಾಳಿನ) ಪ್ರಜೆಗಳೂ ಹೌದು. ಸಮುದಾಯ ಮತ್ತು ಶಾಲೆಗಳ ಬಾಂಧವ್ಯವು ಸತ್ವಯುತವಾಗಿದ್ದು ಮಗುವಿನ ಮತ್ತು ಸಮುದಾಯದ ಭವಿಷ್ಯಕ್ಕೆ ಸಂಬಂಧಿಸಿರಬೇಕು. ಶಾಲೆ ಮತ್ತು ಸಮುದಾಯದ ಯಶಸ್ವೀ ಬೆಸೆಯುವಿಕೆಯು ಸಾಧ್ಯವಾಗಿರುವ ಕೆಲವು ಉದಾಹರಣೆಗಳು ನಮ್ಮ ದೇಶದಲ್ಲಿದೆ ಮತ್ತು ಇವು ಶಿಕ್ಷಣವನ್ನು ಅರ್ಥಪೂರ್ಣವಾಗಿಸಲು ಕೊಡುಗೆಯನ್ನೂ ನೀಡಿವೆ. ಇಲ್ಲಿ ಇಂತಹಾ ಮೂರು ನಿದರ್ಶನಗಳನ್ನು ನಾವು ಚರ್ಚಿಸೋಣ: ಮಹಾರಾಷ್ಟ್ರದ ವಿಜ್ಞಾನ ಆಶ್ರಮ ಐಬಿಟಿ ಮಾದರಿ, ಆಶ್ರಮ ಶಾಲೆಗಳಲ್ಲಿನ ಶಿಕ್ಷಣ ಮಿತ್ರ ಕಾರ್ಯಕ್ರಮ, ಮತ್ತು ಪಶ್ಚಿಮ ಬಂಗಾಳದಲ್ಲಿರುವ ಸ್ವನಿರ್ಭರ್ ಪ್ರಯೋಗ.

## ಮಹಾರಾಷ್ಟ್ರದಲ್ಲಿನ 8 – 10ನೇ ತರಗತಿಯ ಸರ್ಕಾರಿ ಶಾಲೆಗಳಲ್ಲಿರುವ ವಿಜ್ಞಾನ ಆಶ್ರಮ ಮಾದರಿ


ವಿಜ್ಞಾನ ಆಶ್ರಮ ಮಾದರಿಯನ್ನು ಮಹಾರಾಷ್ಟ್ರದ ಪಾವಲ್‌ನಲ್ಲಿ ಡಾ. ಎಸ್. ಕಲಬಾಗ್ 1983ರಲ್ಲಿ ಪ್ರಾರಂಭಿಸಿದರು. ನಮ್ಮಲ್ಲಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಥವಾ ಜ್ಞಾನ ಪ್ರಸರಣಾ ವ್ಯವಸ್ಥೆಯಲ್ಲಿ, ನಮ್ಮ ಸಮಾಜದಲ್ಲಿನ ಎಲ್ಲಾ ವರ್ಗಗಳೂ ಸಮಾನವಾಗಿ ಜ್ಞಾನವನ್ನು ಪಡೆದುಕೊಳ್ಳುತ್ತಿಲ್ಲ, ಹೀಗಾಗಿ ಬಡ ಜನರು ಕೆಲವು ಮೂಲಭೂತವಾದ ಬೌದ್ಧಿಕ ಕೌಶಲ್ಯಗಳಲ್ಲಿ ಅತೀವ ನ್ಯೂನತೆಯನ್ನು ಹೊಂದುವಂತಾಗಿದೆ ಎಂಬ ವಿಷಯ ಡಾ. ಕಲಬಾಗ್ ಅವರ ಗಮನಕ್ಕೆ ಬಂದಿತು. ಇದಲ್ಲದೇ ಈ ರೀತಿಯ ನ್ಯೂನತೆಯಿಂದಾಗಿ ತಮ್ಮ ಸುತ್ತಲೂ ಲಭ್ಯವಿರುವ ಜ್ಞಾನವನ್ನು ಬಳಸಿಕೊಳ್ಳಲು ಅವರು ಅಶಕ್ತರಾಗಿದ್ದಾರೆ ಎಂದೂ ಅವರು ಕಂಡುಕೊಂಡರು. ಗ್ರಾಮೀಣ ಸಮುದಾಯದವರ ವಾಸ್ತವಿಕ ಅವಶ್ಯಕತೆಗಳಿಗೆ ಬೇಕಾಗಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಜ್ಞಾನದ ಪ್ರಸರಣದ ಬಗ್ಗೆ ಅವರು ಹೆಚ್ಚಿನ ಕಾಳಜಿಯನ್ನು ಹೊಂದಿದ್ದರು ಮತ್ತು ತಾಂತ್ರಿಕಜ್ಞಾನವನ್ನು ಒದಗಿಸಲು ಶೈಕ್ಷಣಿಕ ವ್ಯವಸ್ಥೆಯೊಂದೇ ಪರಿಣಾಮ-ಕಾರಿಯಾದ ವ್ಯವಸ್ಥೆಯೆಂದು ಅವರು ಭಾವಿಸಿದ್ದರು. ಹೀಗಾಗಿ

"ಶಿಕ್ಷಣ ವ್ಯವಸ್ಥೆಯ ಮೂಲಕ ಗ್ರಾಮೀಣಾಭಿವೃದ್ಧಿ" ಎಂದು ಹೇಳಿರುವ ಗುರಿಯ ಸಾಧನೆಗೆ ಕಾರ್ಯ ನಿರತವಾದ **ವಿಜ್ಞಾನ ಆಶ್ರಮವು** ಅಸ್ತಿತ್ವಕ್ಕೆ ಬಂದಿತು.

ವ್ಯವಸ್ಥೆಯ ಒಳಗೇ ಕಲ್ಪಿಸಲಾದ ಅನೌಪಚಾರಿಕ ಕಾರ್ಯಕ್ರಮವಲ್ಲದೇ, ಡಾ. ಕಲಬಾಗ್‌ರವರು ಶಾಲಾ ಮಕ್ಕಳಿಗೆ 'ಸರಳ ತಂತ್ರಜ್ಞಾನದ ಪರಿಚಯ' (ಇಂಟ್ರಡಕ್ಷನ್ ಟು ಬೇಸಿಕ್ ಟೆಕ್ನಾಲಜಿ – ಐಬಿಟಿ) ಎಂಬ ಒಂದು ಪಠ್ಯಕ್ರಮವನ್ನು ವಿನ್ಯಾಸಗೊಳಿಸಿದರು. 8–10ನೇ ತರಗತಿಯ ವಿದ್ಯಾರ್ಥಿಗಳಿಗೆ ಔಪಚಾರಿಕವಾಗಿ ಮತ್ತು ಅಭಿವೃದ್ಧಿಪಡಿಸಿದ ಒಂದು ಪಠ್ಯಕ್ರಮವಾಗಿ ಐಬಿಟಿಯು ಪ್ರಸ್ತುತ ನಾಲ್ಕು ರಾಜ್ಯಗಳ 122 ಶಾಲೆಗಳಲ್ಲಿ (ಮಹಾರಾಷ್ಟ್ರ, ಕರ್ನಾಟಕ, ಛತ್ತೀಸಘಡ ಮತ್ತು ಗೋವಾ) ನಡೆಯುತ್ತಿದೆ. 10ನೇ ತರಗತಿಯ ಸರ್ಕಾರಿ ಶೈಕ್ಷಣಿಕ ಮಂಡಳಿಯ ಪರೀಕ್ಷೆಗೆ ಒಂದು ವಿಷಯವನ್ನಾಗಿ ಮಹಾರಾಷ್ಟ್ರ ಸರ್ಕಾರವು ಐಬಿಟಿಯನ್ನು ಮಾನ್ಯಗೊಳಿಸಿದೆ.

ಐಬಿಟಿಯು ಒಂದು ವಿನೂತನವಾದ ಪಠ್ಯಕ್ರಮ ಮತ್ತು ಇದರ ಸಂಪೂರ್ಣ ಪಠ್ಯಕ್ರಮವು ನಾಲ್ಕು ವಿಷಯಗಳನ್ನು ಹೊಂದಿದೆ: ವ್ಯವಸಾಯ/ಪಶುಸಂಗೋಪನೆ; ಗೃಹ/ಆರೋಗ್ಯ; ಇಂಜನೀಯರಿಂಗ್/ಮಟೀರಿಯಲ್, ಶಕ್ತಿ/ಪರಿಸರ. ಇಲ್ಲಿ ನಮ್ಮ ಪ್ರಸ್ತುತ ಚರ್ಚೆಯು ಐಬಿಟಿ ವಿನ್ಯಾಸದ ತತ್ವಗಳ ಮೇಲೆ ಹೆಚ್ಚು ಕೇಂದ್ರಿತವಾಗಿದೆ ಮತ್ತು ಇದು ಶಾಲೆ–ಸಮುದಾಯದ ನಡುವಿನ ಸತ್ವಯುತವಾದ ಸರಪಣಿಯನ್ನಾಗಿ ರೂಪಿಸುವ ಸಾಧನೆ ಮಾಡಿದ್ದು ಹೇಗೆ ಎಂಬುದರ ಬಗ್ಗೆಯಾಗಿದೆ.

ಇದರ ಮೂಲ ಮಾದರಿಯು ಈ ಕೆಳಗಿನ ಎರಡು ವಲಯಗಳನ್ನು ಆಧರಿಸಿದೆ –




**ಸಂಪೂರ್ಣವಾದ ವಿಜ್ಞಾನ ಆಶ್ರಮ ಶೈಕ್ಷಣಿಕ ಮಾದರಿಗೆ ನಾಲ್ಕು ತತ್ವಗಳಿವೆ:**

### ಮಾಡಿ ಕಲಿ

ಪೂರ್ವಾಪೇಕ್ಷಿತ ಪರಿಕಲ್ಪನೆಗಳನ್ನು ನೈಜ ಜೀವನದಲ್ಲಿ ಅನುಭವಿಸಿ ಕಲಿಯುವವರೆಗೆ ಯಾರೂ ತರಗತಿಯಲ್ಲಿ ಕಲಿಯುವುದು ಸಾಧ್ಯವಾಗಲಾರದು. ಇದು ಎಲ್ಲಾ ರೀತಿಯ ಶಿಕ್ಷಣಕ್ಕೂ ಅನ್ವಯಿಸುತ್ತದೆ ಅದರಲ್ಲೂ ವೈಜ್ಞಾನಿಕ ಶಿಕ್ಷಣಕ್ಕೆ ಹೆಚ್ಚಾಗಿ ಅನ್ವಯಿಸುತ್ತದೆ.

### ಬಹು ಕೌಶಲ್ಯ ತರಬೇತಿ

ಕೌಶಲ್ಯಗಳು ಯಾರೊಬ್ಬರ ಆಲೋಚನೆಗಳು ಮತ್ತು ಅವಿಷ್ಕಾರಗಳನ್ನು ಮೂರ್ತಗೊಳಿಸುವ ಸಾಧನಗಳು. ಕೌಶಲ್ಯಗಳ ತರಬೇತಿಗಳು ವಿದ್ಯಾರ್ಥಿಗಳನ್ನು ಪರಿಣಿತ ಕರಕುಶಲಿಗಳನ್ನಾಗಿಸುವ ಉದ್ದೇಶವನ್ನು ಹೊಂದಿರದೇ (ವಾಸ್ತವಿಕವಾಗಿ ವಿಜ್ಞಾನ ಆಶ್ರಮ ಮಾದರಿಯು ತನ್ನನ್ನು ಒಂದು ವೃತ್ತಿಪರ ತರಬೇತಿ ಕಾರ್ಯಕ್ರಮವೆಂದು ಪರಿಗಣಿಸುತ್ತಿಲ್ಲ) ಬುದ್ಧಿಮತ್ತೆಯನ್ನು ಬಲಗೊಳಿಸಲು ವಿವಿಧ ಕೌಶಲ್ಯಗಳು ಆವಶ್ಯಕ ಎಂದು ಪರಿಗಣಿಸುತ್ತದೆ. ಇದು "ತಾಂತ್ರಿಕ ಸಾಕ್ಷರತೆ"ಯನ್ನು ಪಡೆಯಲು ಅನುಕೂಲವನ್ನು ಒದಗಿಸುತ್ತದೆ.

### ಶಾಲೆ ಮತ್ತು ಸಮುದಾಯದ ನಡುವೆ ಇಮ್ಮುಖ ಸಂಬಂಧ

ಶಾಲೆಯು ವಿದ್ಯಾರ್ಥಿಗಳ ಮೂಲಕ ಸಮುದಾಯಕ್ಕೆ ವಿವಿಧ ಸೇವೆಗಳನ್ನು (ಶುಲ್ಕ ಪಾವತಿಸಿದ ಸೇವೆಗಳು) ಒದಗಿಸಬೇಕು ಮತ್ತು ಈ ರೀತಿಯಾದ ಸೇವೆಗಳನ್ನು ಒದಗಿಸುವಾಗ ವಿದ್ಯಾರ್ಥಿಗಳು ತಾವು ಗಳಿಸಬೇಕಾಗಿರುವ ಜ್ಞಾನಕ್ಕೆ ಅನುಗುಣವಾಗಿ (ನೈಜ ಜೀವನದ ಸನ್ನಿವೇಶದಲ್ಲಿ) ಪ್ರಾಯೋಗಿಕವಾದ ಮತ್ತು ಆರ್ಥಿಕತೆಗೆ ಸಂಬಂಧಿಸಿದ ಕೌಶಲ್ಯಗಳನ್ನು ಕಲಿಯಬಹುದಾಗಿದೆ. ಇದರಿಂದಾಗಿ ಶಾಲಾ ಕಾರ್ಯನಿರ್ವಹಿಸುವಿಕೆಯಲ್ಲಿ ಸಮುದಾಯವು ಹಿತಾಸಕ್ತಿದಾರನಾಗಿ ಶಾಲೆಯನ್ನು ಆರ್ಥಿಕವಾಗಿ ಸ್ಥಿರಗೊಳಿಸುವಂತಾಗುತ್ತದೆ.

### ಬೋಧಕನೇ ಉದ್ಯಮಿ

ವಿ. ಆ.ವು, ತರಬೇತಿ ಹೊಂದಿರುವ "ಶಾಲೆ ಬಿಟ್ಟ" ಒಬ್ಬ ವ್ಯಕ್ತಿಯನ್ನು ಬೋಧಕರನ್ನಾಗಿ ಶಾಲೆಯಲ್ಲಿ ನೇಮಿಸುತ್ತದೆ. ಅವರು ತಮ್ಮ ವ್ಯವಹಾರವನ್ನು ಶಾಲೆಯಲ್ಲಿರುವ ಅನುಕೂಲಗಳನ್ನು ಬಳಸಿಕೊಂಡು ನಡೆಸುತ್ತಾರೆ ಮತ್ತು ವಿದ್ಯಾರ್ಥಿಗಳಿಗೆ ಅನುಭವಾತ್ಮಕವಾಗಿ ಕಲಿಯುವ ತರಬೇತಿಯನ್ನು ಕೊಡುತ್ತಾರೆ. ಈ ಕಾರ್ಯಾಚರಣೆಯಿಂದ ಅವರು ಆದಾಯವನ್ನು

ಗಳಿಸುತ್ತಾರೆ, ಸಮುದಾಯವೂ ಅಲ್ಪ ಖರ್ಚಿನಲ್ಲಿ ಸೇವೆಗಳನ್ನು ಪಡೆಯುತ್ತದೆ ಮತ್ತು ವಿದ್ಯಾರ್ಥಿಗಳು ಉತ್ತಮ ಶಿಕ್ಷಣವನ್ನು ಪಡೆಯುತ್ತಾರೆ.

ಶಾಲೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯ ಬಗ್ಗೆ ಚಿಂತಿಸುವಾಗ, ಕೊನೆಯ ಎರಡು ಅಂಶಗಳು ಬಹು ಮುಖ್ಯವಾದುವು. ಶಾಲೆಗಳು ಮತ್ತು ವಿದ್ಯಾರ್ಥಿಗಳು ಒಂಟಿಯಾಗಿ ಕಾರ್ಯವೆಸಗುತ್ತಿಲ್ಲ ಅವರು ತಾವು ವಾಸಿಸುತ್ತಿರುವ ಜಾಗದಲ್ಲಿರುವ ಸಮುದಾಯದ ಭಾಗವಾಗಿದ್ದಾರೆ ಎಂಬುದು ಸ್ಪಷ್ಟವಾಗಿ ಗುರುತಿಸಲ್ಪಡುತ್ತಿದೆ. ಆದರೆ ಇದಕ್ಕೆ ಎರಡು ರೀತಿಯ ಪರಿಣಾಮಗಳಿವೆ: ಅ) ಒಂದು ಮಗು ಮುಂದೆ ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ತನ್ನ ಕುಟುಂಬ ಮತ್ತು ಸಮುದಾಯಕ್ಕೆ ಮರಳುವಾಗ ಅದರ ಭವಿಷ್ಯದ ಮೇಲೆ ಆಗುವ ಪರಿಣಾಮ ಆ) ಮಹಾರಾಷ್ಟ್ರದಲ್ಲಿ ಐಬಿಟಿಯನ್ನು ನಡೆಸುತ್ತಿರುವ ಅನೇಕ ಶಾಲೆಗಳು ಸಾಕಷ್ಟು ದೂರ ಪ್ರದೇಶಗಳಲ್ಲಿದ್ದರೂ ಗ್ರಾಮಸ್ಥರಿಗೆ ಅನೇಕ ಸೇವೆಗಳನ್ನು ಒದಗಿಸುತ್ತಿರುವುದರಿಂದ ಸಮುದಾಯಕ್ಕೆ ಅನ್ವಯವಾಗುವಂತಹದ್ದು. ಈ ಪ್ರಕ್ರಿಯೆಯಲ್ಲಿ, ಶಾಲೆಗಳು ಅಲ್ಪ ಆದಾಯವನ್ನು ಗಳಿಸುತ್ತಿದ್ದು, ಇದು ಐಬಿಟಿ ತರಬೇತಿಯನ್ನು ನಡೆಸಲು ಬಳಕೆಯಾಗುತ್ತಿದೆ. ವಿದ್ಯಾರ್ಥಿಗಳು ನೈಜ ಜೀವನದ ಸನ್ನಿವೇಶದಲ್ಲಿ ಸಮಸ್ಯೆಗಳನ್ನು ಬಿಡಿಸುವುದನ್ನು ಕಲಿಯುತ್ತಿದ್ದಾರೆ ಮತ್ತು ಸುತ್ತಲೂ ವಾಸಿಸುತ್ತಿರುವ ಜನರೂ ಇದರಿಂದ ಲಾಭ ಪಡೆಯುತ್ತಿದ್ದಾರೆ.

ನಾವು ಈ ಮೊದಲೇ ಹೇಳಿರುವಂತೆ ಐಬಿಟಿಯು ಸಂಪೂರ್ಣವಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಆಧರಿಸಿರುವ ಒಂದು ತರಬೇತಿಯಾಗಿದೆ ಮತ್ತು ಈ ಉಪಕ್ರಮದ ಹಿಂದಿರುವ ಸಾಮಾನ್ಯ ಆಲೋಚನೆಯು ಗ್ರಾಮೀಣ ಜನರನ್ನು ಸಾಮರ್ಥ್ಯಗಳಿಂದ ಸಬಲರನ್ನಾಗಿಸಿ ತಂತ್ರಜ್ಞಾನದ ನವೀನ ಅಭಿವೃದ್ಧಿಗಳ ಲಾಭದ ದುರ್ಬಳಕೆಯನ್ನು ತಪ್ಪಿಸುವಂತೆ ಸಜ್ಜುಗೊಳಿಸುವುದಾಗಿದೆ. ಅನೇಕ ನವೀನ ತಂತ್ರಜ್ಞಾನಗಳನ್ನು ಈ ಶಾಲೆಗಳ ಮೂಲಕ ಗ್ರಾಮದಲ್ಲಿ ಪರಿಚಯಿಸಿರುವುದು ಕಂಡುಬರುತ್ತದೆ (ಇಲ್ಲದಿದ್ದಲ್ಲಿ ಇದು ಅಸಾಧ್ಯವೆನಿಸುವಂತಹದ್ದಾಗಿದೆ). ಈ ತಂತ್ರಜ್ಞಾನಗಳು ಮತ್ತು ಸೇವೆಗಳಲ್ಲಿ ಕೆಲವು ನೇರವಾಗಿ ಗ್ರಾಮಸ್ಥರ ಜೀವನೋಪಾಯಕ್ಕೆ ಅವಶ್ಯವಿರುವ ಮತ್ತು ಉತ್ಪಾದಕತೆಗೆ ಸಂಪರ್ಕವನ್ನು ಏರ್ಪಡಿಸುವಂತಹದ್ದಾಗಿವೆ. ಅವುಗಳೆಂದರೆ:

ವ್ಯವಸಾಯ – ಪಶುಸಂಗೋಪನೆ

ಹನಿ ನೀರಾವರಿ, ಹನಿ ಸಿಂಪರಣೆ, ಬಿತ್ತನೆ, ಅಸೋಲಾ ಕೃಷಿ, ಕೀಟ ನಿಯಂತ್ರಣ, ಮಣ್ಣು ಪರೀಕ್ಷೆ ಮುಂತಾದವು.

ಶಕ್ತಿ/ಪರಿಸರ:

ಸೌರಶಕ್ತಿ ಕುಕ್ಕರ್, ಎಲ್ಇಡಿ ದೀಪಗಳು, ಜೈವಿಕ ಅನಿಲ, ಹೀರು ಗುಂಡಿ, ಜಲಾನಯನ ಪ್ರದೇಶ ಮುಂತಾದವು.

ಆಹಾರ ಸಂಸ್ಕರಣೆ

ಬಿಸಿಲಿನಲ್ಲಿ ಒಣಗಿಸುವಿಕೆ, ಜಲ ಪರೀಕ್ಷಣೆ ಮುಂತಾದವು.

ಇಂಜಿನೀಯರಿಂಗ್

ಫೆರ್ರೋ ಸಿಮೆಂಟ್, ಬಿದಿರು ಸಂಸ್ಕರಣೆ, ಕಡಿಮೆ ವೆಚ್ಚದ ಮನೆಗಳು, ಶೌಚಾಲಯಗಳು, ಪೆಡಲ್ ಪವರ್ ಮುಂತಾದವು.

ಬೋಧಕನು ಸಮುದಾಯದಲ್ಲಿರುವ ಒಬ್ಬ ಉದ್ಯಮಿ–ಯಾಗಿರಬೇಕು. ಐಬಿಟಿಯು ನಾಲ್ಕು ಉಪ ವಿಷಯಗಳನ್ನು ಹೊಂದಿದೆ ಮತ್ತು ಪ್ರತಿಯೊಂದು ವಿಷಯವನ್ನು ೮ ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಬೋಧಿಸಲು ಪರಿಣಿತ ಬೋಧಕರ ಅವಶ್ಯಕತೆಯನ್ನು ಹೊಂದಿದೆ. ಉದಾಹರಣೆಗೆ: ಶಾಲೆಗೆ ಒಬ್ಬ ಪರಿಣಿತ ವ್ಯವಸಾಯಗಾರ, ಪರಿಣಿತ ವೆಲ್ಡರ್, ಪರಿಣಿತ ಪ್ರಯೋಗಾಲಯ ವ್ಯಕ್ತಿ ಮತ್ತು ವಿದ್ಯುತ್ ಹಾಗೂ ಶಕ್ತಿಯ ಬಳಕೆಯ ಬಗ್ಗೆ ಸಾಕಷ್ಟು ಕೌಶಲ್ಯವನ್ನು ಹೊಂದಿರುವವರ ಅಗತ್ಯವಿದೆ. ಸಮುದಾಯದಲ್ಲಿ ಈಗಾಗಲೇ ಇರುವ ಉದ್ಯಮಿಗಳನ್ನು ತೊಡಗಿಸಿಕೊಳ್ಳುವುದರಿಂದ ಎರಡು ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸುತ್ತವೆ: ಮೊದಲನೆಯದಾಗಿ, ಸಮುದಾಯವು ತಾನು ಶಾಲೆಯ ಒಂದು ಭಾಗವೆಂದು ಭಾವಿಸುತ್ತದೆ, ಎರಡನೆಯದಾಗಿ ಈ ವ್ಯಕ್ತಿಗಳು ವಿದ್ಯಾರ್ಥಿಗಳಿಗೆ ತಮ್ಮ ಗ್ರಾಮದಲ್ಲೇ ನೆಲಸಿ ಅರ್ಥಪೂರ್ಣವಾದ ಜೀವನೋಪಾಯಗಳನ್ನು ಕಂಡುಕೊಳ್ಳಲು ಅಥವಾ ಸೃಷ್ಟಿಸಿಕೊಳ್ಳಲು ಆದರ್ಶ–ಪ್ರಾಯರಾಗಿ ವರ್ತಿಸುವಂತೆ ಆಗುತ್ತದೆ.

## ಮಹಾರಾಷ್ಟ್ರದ ಆಶ್ರಮ ಶಾಲೆಗಳಲ್ಲಿ ಶಿಕ್ಷಣ ಮಿತ್ರ ಕಾರ್ಯಕ್ರಮ

ಎಸ್ಎಂಪಿ (ಶಿಕ್ಷಣ ಮಿತ್ರ ಪ್ರೋಗ್ರಾಂ) ಮಹಾರಾಷ್ಟ್ರದ ಕೆಲವು ಆಶ್ರಮ ಶಾಲೆಗಳಲ್ಲಿ ಬಿಎಐಎಫ್ (ಭಾರತ್ ಆಗ್ರೋ ಇಂಡಸ್ಟ್ರೀಸ್ ಫೌಂಡೇಶನ್)ರವರ ಒಂದು ಪ್ರಯತ್ನ. ಆಶ್ರಮ ಶಾಲೆಗಳು ಎಂದರೆ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳಿಗಾಗಿ ಇರುವ ವಸತಿ ಶಾಲೆಗಳು ಮತ್ತು ಇವುಗಳನ್ನು ಇನ್ನಿತರ ಸಾಮಾನ್ಯ ಶಾಲೆಗಳಿಗಿಂತ ವಿಭಿನ್ನವಾಗಿ ವಿನ್ಯಾಸಗೊಳಿಸಲಾಗಿದೆ. ಆಶ್ರಮ ಶಾಲೆಯ ಪರಿಕಲ್ಪನೆಯು ಗಾಂಧಿ ತತ್ವದ ಮೂಲ ಶಿಕ್ಷಣದಿಂದ ಬಂದುದಾಗಿದ್ದು ಇದರಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಟ್ಟಿಗೆ ಜೀವನ ನಡೆಸುತ್ತಾರೆ ಮತ್ತು ವಿದ್ಯಾರ್ಥಿಗಳಿಗೆ ತಮ್ಮ

ವ್ಯಕ್ತಿತ್ವವನ್ನು ಹಾಗೂ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ರೂಪಿಸಿಕೊಳ್ಳಲು ಇಲ್ಲಿ ನೆರವನ್ನು ಒದಗಿಸಲಾಗುವುದು. ಅನೇಕ ಕಾರ್ಯನೀತಿ ಮಾರ್ಗದರ್ಶಕಗಳು ಎತ್ತಿ ಹೇಳುವುದೇನೆಂದರೆ:

ಈ ಶಾಲೆಗಳನ್ನು ಅತ್ಯಂತ ಹಿಂದುಳಿದಿರುವ ಬುಡಕಟ್ಟು ಪ್ರದೇಶಗಳಲ್ಲಿ ಪ್ರಾರಂಭಿಸಬೇಕು.

ಇವು ಅಂತರ-ಗ್ರಾಮ ಶಾಲೆಗಳಾಗಿರಬೇಕು

ಸಾಮಾನ್ಯ ಶಾಲೆಗಳನ್ನು ತೆರೆಯಲು ಸಾಧ್ಯವಿಲ್ಲದಿರುವ ಪ್ರದೇಶಗಳಲ್ಲಿ ಇವುಗಳನ್ನು ಪ್ರಾರಂಭಿಸಬೇಕು.

ಮಹಾರಾಷ್ಟ್ರ ಒಂದರಲ್ಲಿಯೇ ಸುಮಾರು 4 ಲಕ್ಷ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳು 1103 ಆಶ್ರಮ ಶಾಲೆಗಳಲ್ಲಿ ದಾಖಲಾಗಿದ್ದಾರೆ. (556 - ಖಾಸಗೀ ಅನುದಾನಿತ ಮತ್ತು 576 ಸರ್ಕಾರಿ).

ಅನೇಕ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳು ಶಾಲಾ ಶಿಕ್ಷಣವನ್ನು ಪೂರೈಸಿದ ಅನಂತರ ಅಥವಾ ಅರ್ಧದಲ್ಲೇ ಬಿಟ್ಟ ಅನಂತರ ತಮ್ಮ ಸಾಂಪ್ರದಾಯಿಕ ವ್ಯವಸಾಯಾಧಾರಿತ ಜೀವನಕ್ರಮಕ್ಕೆ ಮರಳುವುದನ್ನು ಗ್ರಾಮೀಣ - ಬುಡಕಟ್ಟು ಪ್ರದೇಶಕ್ಕೆ ಒಳಪಡುವ ನಂದೂರ್‌ಬಾರ್ ವಲಯದಲ್ಲಿ ಹಲವು ವರ್ಷಗಳು ಕೆಲಸ ಮಾಡಿದ ಅನಂತರ ಬಿಎಐಎಫ್ ಅವಲೋಕಿಸಿತು. ಶಾಲೆಗಳಲ್ಲಿ ದೀರ್ಘಾವಧಿಯನ್ನು ಕಳೆದ ತರುವಾಯ ಇವರಿಗೆ ತಮ್ಮ ಭವಿಷ್ಯಕ್ಕೆ ಅಗತ್ಯವಿರುವ ಜೀವನ ಕೌಶಲ್ಯಗಳನ್ನು ಶಾಲೆಯು ಒದಗಿಸಿ ಸಜ್ಜುಗೊಳಸುತ್ತದೋ ಅಥವಾ ವಾಸ್ತವಿಕ ಜೀವನ ಪ್ರಕ್ರಿಯೆಯಿಂದ ಅವರನ್ನು ಹೊರಗೆ ಉಳಯುವಂತೆ ಮಾಡುತ್ತದೋ ಎನ್ನುವುದೇ ಈಗಿರುವ ಕಾಳಜಿಯಾಗಿದೆ. ಸಮುದಾಯಕ್ಕೆ ಸೂಕ್ತವಾಗಿರುವ ಮೌಲ್ಯಗಳನ್ನು ಮತ್ತು ಪ್ರಾಯೋಗಿಕ ಜ್ಞಾನವನ್ನು ಹಾಗೂ ಜೀವನ ಕೌಶಲ್ಯಗಳನ್ನು ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ಕಲಿಸುವಂತೆ ಶಿಕ್ಷಣ ಮಿತ್ರ ಕಾರ್ಯಕ್ರಮವನ್ನು ವಿನ್ಯಾಸಗೊಳಸಲಾಗಿದೆ. ಸಮುದಾಯದೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದುವುದು ಶೈಕ್ಷಣಿಕ ವ್ಯವಸ್ಥೆಯಲ್ಲಿನ ಸಂಯೋಜಿತ ಭಾಗವಾಗಿರಬೇಕು ಎಂದು ತೀವ್ರವಾಗಿ ಭಾವಿಸಲಾಗಿತ್ತು. ಜ್ಞಾನದ ಕೇಂದ್ರವಾಗಿರುವ ಶಾಲೆಗಳು ವಿದ್ಯಾರ್ಥಿಗಳ ನೆರವಿನಿಂದ ಮತ್ತು ತನ್ನ ನೇರ ಒಡನಾಟದಿಂದ ಸಮುದಾಯವನ್ನು ಸುಶಿಕ್ಷಿತಗೊಳಸಬೇಕು. ಇದಕ್ಕೆ ಪ್ರತಿಯಾಗಿ ಸಮುದಾಯವು ದೈಹಿಕ ಶ್ರಮ, ಪರಿಕರಗಳು ಮತ್ತು ನೈಜ ಸನ್ನಿವೇಶದಲ್ಲಿ ತಾವು ಬಳಸುವ ತಮ್ಮಲ್ಲಿರುವ ಜ್ಞಾನ, ಕೌಶಲ್ಯಗಳನ್ನು ಶಾಲೆಗಳಿಗೆ ನೀಡುವ ಮೂಲಕ ಶಾಲೆಯ ಅಭಿವೃದ್ಧಿಗೆ ನೆರವಾಗಬೇಕು.

ಶಾಲೆಗಳು ಸಮುದಾಯದ ಅಭಿವೃದ್ಧಿಯ ತಾಣಗಳು ಎಂಬ ಆಲೋಚನೆಯೊಂದಿಗೆ ಬಿಎಐಎಫ್ ಉಪಕ್ರಮ ಪ್ರಾರಂಭವಾಗಿರುವುದು ಅತ್ಯಂತ ಆಸಕ್ತಿದಾಯಕ ವಿಷಯವಾಗಿದೆ. ಬುಡಕಟ್ಟು ಜನಾಂಗದವರಿಗೆ ಜೀವನೋಪಾಯಗಳನ್ನು ಸೃಷ್ಟಿಸುವ/ಹೆಚ್ಚಿಸುವ ಅನೇಕ ಚಟುವಟಿಕೆಗಳಲ್ಲಿ ಬಿಎಐಎಫ್ ಈಗಾಗಲೇ ತೊಡಗಿಸಿಕೊಂಡಿದೆ. ಇದರಲ್ಲಿ ಅನೇಕ ಯೋಜನೆಗಳು ಸಂಯೋಜಿತ ಬೇಸಾಯ, ಭತ್ತ ಬಲಸಂವರ್ಧನೆ ವ್ಯವಸ್ಥೆ, ಹಾಲು ಸಹಕಾರ ಸಂಸ್ಥೆಗಳು, ಸಾವಯವ ಮತ್ತು ಸಾಂಪ್ರದಾಯಿಕ ಕೃಷಿ, ತೋಟಗಾರಿಕೆ ಮತ್ತು ಹೂವಿನ ಕೃಷಿ, ಗೋಡಂಬಿ ಕೃಷಿ ಮುಂತಾದವುಗಳು. ವಿವಿಧ ಗ್ರಾಮಗಳಿಗೆ ಸೇರಿದ ಸುಮಾರು 400 ಮಕ್ಕಳು ಆಶ್ರಮ ಶಾಲೆಗಳಲ್ಲಿರುವುದರಿಂದ ಮತ್ತು ರಜೆಯಲ್ಲಿ ಅವರು ತಮ್ಮ ಮನೆಗಳಿಗೆ ಮರಳುವುದರಿಂದ ಆಶ್ರಮ ಶಾಲೆಗಳನ್ನು ತಮ್ಮ ಚಟುವಟಿಕೆಯ ಪ್ರಾತ್ಯಕ್ಷಿಕೆ ಕೇಂದ್ರಗಳನ್ನಾಗಿ ಉಪಯೋಗಿಸಿಕೊಳ್ಳಲು 2003ರಲ್ಲಿ, ಇವರು ನಿರ್ಧರಿಸಿದರು. ಈ ವಿದ್ಯಾರ್ಥಿಗಳು ಸಣ್ಣ ಪ್ರಮಾಣದ ಗ್ರಾಮೀಣ ತಂತ್ರಜ್ಞಾನಗಳ ಬಗ್ಗೆ ತಮ್ಮ ವಲಯಗಳಲ್ಲಿ ಹೆಚ್ಚಿನ ಅರಿವನ್ನು ಮೂಡಿಸುವರೆಂದು ಬಿಎಐಎಫ್ ಆಲೋಚಿಸಿತು. ನಂದೂರ್‌ಬಾರ್‌ನಲ್ಲಿರುವ ಎಂಟು ಶಾಲೆಗಳನ್ನು ಇದಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು; ಬಿಎಐಎಫ್‌ನಲ್ಲಿರುವ ಜನರು ಹಾಗೂ ಸಮುದಾಯದಲ್ಲಿನ ಪರಿಣಿತ ರೈತರು ಇಲ್ಲಿ ಪ್ರಾತ್ಯಕ್ಷಿಕೆ ತೋರುವವರಾಗಿ ಭಾಗವಹಿಸಿದರು. ಇಡೀ ಕಾರ್ಯಕ್ರಮವನ್ನು ನಂದೂರ್‌ಬಾರ್ ಪ್ರದೇಶದಲ್ಲಿನ 48 ಆಶ್ರಮ ಶಾಲೆಗಳಲ್ಲಿ 2009ರಲ್ಲಿ ಔಪಚಾರಿಕ ವಿಧಾನದಲ್ಲಿ ಪ್ರಾರಂಭಿಸಲಾಯಿತು.

ಎಸ್‌ಎಂಪಿಯ ನಿರ್ದಿಷ್ಟ ಗುರಿ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳಿಗೆ ಜೀವನ ಕೌಶಲ್ಯಗಳು ಮತ್ತು ಮಾಹಿತಿಯನ್ನು ನೀಡಿ ಸಬಲರನ್ನಾಗಿಸುವುದಾಗಿತ್ತು. ಈ ಕೌಶಲ್ಯಗಳು ಮತ್ತು ಮಾಹಿತಿಗಳು ಬಹು ಆಯಾಮಗಳನ್ನು ಹೊಂದಿವೆ:

- ವ್ಯವಸಾಯ ಮತ್ತು ವ್ಯವಸಾಯ ತಂತ್ರಜ್ಞಾನ, ಆರೋಗ್ಯ ಶಿಕ್ಷಣವನ್ನು ನೀಡುವುದು ಮತ್ತು ವಿದ್ಯಾರ್ಥಿಗಳು ತಮಗೆ ಅಗತ್ಯವಿರುವ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆ ನೆರವಾಗುವ ಕೌಶಲ್ಯಗಳು ಮತ್ತು ಮಾಹಿತಿಗಳು
- ಪ್ರಮುಖವಾದ ಸ್ಥಳೀಯ ನಾಗರಿಕ ಸಂಸ್ಥೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಮತ್ತು ಇದರೊಂದಿಗೆ ತಮ್ಮ ಸಾಮಾಜಿಕ ಅರಿವನ್ನು

ವೃದ್ಧಿಸಿಕೊಳ್ಳಲು ಅವಶ್ಯವಿರುವ ಸರ್ಕಾರಿ ದಾಖಲೆಗಳು ಮತ್ತು ನೀತಿಗಳನ್ನು ಪರಿಚಯಿಸುವುದು.

- ಅವರ ಪರಿಸರದ ಜೀವವೈವಿಧ್ಯದ ಬಗ್ಗೆ ಅರಿವನ್ನು ಮೂಡಿಸುವುದು
- ಪ್ರಮುಖ ಜೀವನ ಕೌಶಲ್ಯಗಳಾದ ಸಂವಹನ ಕೌಶಲ್ಯ, ನಿರ್ಧಾರವನ್ನು ತೆಗೆದುಕೊಳ್ಳುವ ಕೌಶಲ್ಯ, ಸಮಸ್ಯಾ ಪರಿಹಾರ ಕೌಶಲ್ಯ, ತಂಡದಲ್ಲಿ ಕಾರ್ಯನಿರ್ವಹಣೆ, ಯೋಜನಾ ನಿರ್ವಹಣೆ ಮುಂತಾದವನ್ನು ಬೆಳಸಿಕೊಳ್ಳಲು ಅವಕಾಶಗಳನ್ನು ಸೃಷ್ಟಿಸುವುದು.
- ಬುಡಕಟ್ಟು ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸಲು ಮತ್ತು ಅವರು ಹೆಮ್ಮೆಯ ಸ್ವಯಂ ಪ್ರಜ್ಞೆ ಬೆಳಸಿಕೊಳ್ಳಲು ಅನುಕೂಲವಾಗುವ ಪರಿಸರವನ್ನು ಸೃಷ್ಟಿಸುವುದು.

ಆಶ್ರಮ ಶಾಲೆಗಳು ಮತ್ತು ಸಮುದಾಯದ ನಡುವಿನ ಪೂರಕವಾಗಿರುವ ಅಂಶಗಳನ್ನು ಬೆಳಸಲು ಈ ರೀತಿಯಾಗಿ ಪ್ರಯತ್ನಿಸಲಾಯಿತು:

- ವ್ಯವಸಾಯ, ಆರೋಗ್ಯ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ಹೊಸ ಮತ್ತು ಮುಂದುವರಿದ ಮಾಹಿತಿಗಳನ್ನು ಬುಡಕಟ್ಟು ವಿದ್ಯಾರ್ಥಿಗಳ ಮೂಲಕ ಸುತ್ತಲಿನ ಬುಡಕಟ್ಟು ವಸತಿ ಸ್ಥಳಗಳಿಗೆ ಪ್ರಸಾರ ಮಾಡುವುದು.
- ಕುಶಲರಾದ ಮತ್ತು ವಿಷಯಗಳನ್ನು ಚೆನ್ನಾಗಿ ತಿಳಿದ ಗ್ರಾಮಸ್ಥರನ್ನು ಶಾಲೆಗಳಿಗೆ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಿ ಅವರೊಂದಿಗೆ ಸಂಪರ್ಕವನ್ನು ಏರ್ಪಡಿಸಿಕೊಳ್ಳುವುದು. ಇದಲ್ಲದೇ, ವಸ್ತುಗಳನ್ನು ದಾನ ಪಡೆಯುವ ಮೂಲಕ ಅಥವಾ ಸೇವೆಯನ್ನು ಪಡೆಯುವ ಮೂಲಕ, ತಂದೆತಾಯಿಗಳು ಮತ್ತು ಗ್ರಾಮಸ್ಥರನ್ನು ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು (ಉದಾಹರಣೆಗೆ ಬೇಲಿಕಟ್ಟಲು ಮರಗಳನ್ನು ಒದಗಿಸುವುದು)
- ಪರಸ್ಪರರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು: ಗ್ರಾಮ ಸಮುದಾಯವು ಶಾಲೆಯ ಕಾರ್ಯಕ್ರಮಗಳಲ್ಲಿ ಮತ್ತು ಶಾಲೆಯು ಗ್ರಾಮ ಮತ್ತು ಸಮುದಾಯದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

ಶಿಕ್ಷಣ ಮಿತ್ರ ಕಾರ್ಯಕ್ರಮದ ಸಂಪೂರ್ಣ ಶಾಲೆ – ಸಮುದಾಯ ಸಂಪರ್ಕ ಆಲೋಚನೆಯ ಪ್ರಮುಖ ಘಟಕ "ರಜೆಯಲ್ಲಿನ ಯೋಜನೆಗಳು". ಇದನ್ನು, ಸಮುದಾಯಕ್ಕೆ ವಿದ್ಯಾರ್ಥಿಗಳಿಂದ ಜ್ಞಾನ ಪ್ರಸರಣದ ಸಾಧನವನ್ನಾಗಿ ಬಳಸಲು ರೂಪಿಸಲಾಗಿತ್ತು. ವಿದ್ಯಾರ್ಥಿಗಳು ದೀಪಾವಳಿ ಮತ್ತು ಬೇಸಿಗೆ ರಜೆಯಲ್ಲಿ, ರಜೆಯಲ್ಲಿನ ಯೋಜನೆಗಳನ್ನು ಮನೆಯಲ್ಲಿ ಮಾಡುವಂತಹದ್ದಾಗಿತ್ತು. ಇದರಲ್ಲಿ ನಾಲ್ಕು ಪ್ರಮುಖವಾದ ಯೋಜನೆಗಳಿದ್ದವು:

- ಸಂಗ್ರಹಿಸುವ ಯೋಜನೆಗಳು: ಬೀಜ ಸಂಗ್ರಹಿಸುವುದು ಅಥವಾ ಸಾಂಪ್ರದಾಯಿಕ ಜಾನಪದ ಹಾಡುಗಳನ್ನು ಸಂಗ್ರಹಿಸುವುದು;
- ನಿದರ್ಶನದ ಯೋಜನೆಗಳು: ಆರೋಗ್ಯ (ಉದಾಹರಣೆಗೆ ಓಆರ್‌ಎಸ್ ತಯಾರಿಕೆ ಅಥವಾ ಜಲ ಶುದ್ಧೀಕರಣ,) ಅಥವಾ ವ್ಯವಸಾಯಕ್ಕೆ ಸಂಬಂಧಿಸಿದ ನಿದರ್ಶನಗಳು (ಎರೆಹುಳು ಗೊಬ್ಬರ ತಯಾರಿಕೆ);
- ಸಮೀಕ್ಷೆ ಯೋಜನೆಗಳು: ಗ್ರಾಮದ ಮಟ್ಟದಲ್ಲಿ ಸಾಮಾಜಿಕವಾಗಿ ಪ್ರಮುಖವಾದ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡುವಂತೆ ಅಪೇಕ್ಷಿಸಲಾಯಿತು. ಅವರು ಸಮಸ್ಯೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವಂತೆ, ಒಂದು ತೀರ್ಮಾನಕ್ಕೆ ಬಂದು ಅದನ್ನು ಸಮುದಾಯ–ದವರೊಂದಿಗೆ ಹಂಚಿಕೊಳ್ಳುವಂತೆ ಅಪೇಕ್ಷಿಸಲಾಗಿತ್ತು. ಇದಕ್ಕೆ ಕೆಲವು ಉದಾಹರಣೆಗಳೆಂದರೆ ಗ್ರಾಮದಲ್ಲಿರುವ ಜಲ ಸಂಪನ್ಮೂಲಗಳ ಸಮೀಕ್ಷೆ, ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಟ್ಟಿರುವ ಗ್ರಾಮದಲ್ಲಿನ ವಿದ್ಯಾರ್ಥಿಗಳ ಸಮೀಕ್ಷೆ, ಜನನ, ಜಾತಿ ಪ್ರಮಾಣಪತ್ರಗಳ ಮತ್ತು ಪಡಿತರ ಚೀಟಿಗಳ ದೊರೆಯುವಿಕೆ ಮುಂತಾದ ಸಮೀಕ್ಷೆಗಳನ್ನು ಮಾಡುವಂತೆ ಅಪೇಕ್ಷಿಸಲಾಗಿತ್ತು.
- ಕ್ಷೇತ್ರ ಭೇಟಿ: ಇವುಗಳು ಬಹಳಷ್ಟು ಸಮಯ ವ್ಯವಸಾಯದಲ್ಲಿನ ನವೀನ ಪ್ರಯೋಗಗಳು, ಪರಿಷ್ಕರಣಾ ಘಟಕಗಳು, ನೀರು ಮತ್ತು ಮಣ್ಣು ಸಂರಕ್ಷಣೆ ಕ್ಷೇತ್ರಗಳು, ಸಹಕಾರ ಸಂಘಗಳು ಮುಂತಾಗಿ ಬಿಎಐಎಫ್‌ನ ಸಮುದಾಯ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವ ಭೇಟಿಗಳಾಗಿರುತ್ತಿದ್ದವು.

ಎಸ್‌ಎಂಪಿ ಕಾರ್ಯಕ್ರಮಗಳನ್ನು ಜೂನ್ 2009 ರಿಂದ ಮಾರ್ಚ್ 2013ರವರೆಗೆ ನಾಲ್ಕು ವರ್ಷಗಳು ಕ್ರಿಯಾತ್ಮಕವಾಗಿ ಜಾರಿಗೊಳಿಸಲಾಯಿತು. "ಮಹಾರಾಷ್ಟ್ರದ ಪುಣೆಯಲ್ಲಿ ವ್ಯವಸಾಯದ ಪುನರ್ನವೀಕರಣಕ್ಕೆ ಕಾರ್ಯಾಚರಣೆ"ಯು ಈ ಯೋಜನೆಯ ಪರಿಣಾಮದ ಮೌಲ್ಯಮಾಪನವನ್ನು ನಡೆಸಿ ಏಪ್ರಿಲ್, 2013ರಲ್ಲಿ ವರದಿಯನ್ನು ನೀಡಿತು. ಈ ವರದಿಯಲ್ಲಿ, ಯೋಜನೆಯ ಎಲ್ಲಾ ಭಾಗಿದಾರರು ಅಂದರೆ, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಮುದಾಯಗಳು ಸುಧಾರಿತ ವ್ಯವಸಾಯ, ಜೀವನ ಕೌಶಲ್ಯಗಳು, ಬೇಸಾಯದಲ್ಲಿ ಇದರ ಅನ್ವಯ,

ಸಾವಯುವ ಗೊಬ್ಬರವನ್ನು ಉಪಯೋಗಿಸಿ ಬೆಳೆ ತೆಗೆಯುವುದು ಮುಂತಾಗಿ ಮಾಹಿತಿಗಳನ್ನು ಸ್ವೀಕರಿಸುವ ಮೂಲಕ ನೇರವಾಗಿ ಲಾಭವನ್ನು ಪಡೆಯುತ್ತಿದ್ದಾರೆ ಎಂದು ತಿಳಿಸಿದೆ.

ಅಲ್ಲದೇ ಈ ಯೋಜನೆಯಿಂದಾಗಿ ವಿದ್ಯಾರ್ಥಿಗಳಲ್ಲಿ ವ್ಯವಸಾಯದ ಬಗ್ಗೆ ಹೊಸದಾಗಿ ಆಸಕ್ತಿ ಮೂಡುತ್ತಿದೆ ಮತ್ತು ಜೀವನೋಪಾಯಕ್ಕೆ ವ್ಯವಸಾಯವು ಒಂದು ಸುಸ್ಥಿರವಾದ ಆಧಾರ ಎಂದು ಅವರಿಗೆ ಒಂದು ಮಾರ್ಗವನ್ನು ಸೂಚಿಸಿ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತಿದೆ. ಹೂವಿನ ಕೃಷಿ, ಕೈತೋಟ, ಎರೆಹುಳು ಮಿಶ್ರ ಗೊಬ್ಬರ ತಯಾರಿಕೆ, ತೋಟಗಾರಿಕೆ, ಸಸಿ ನೆಡುವುದು, ಮತ್ತು ಸಸಿತೋಟ ಬೆಳೆಸುವ ತಂತ್ರಜ್ಞಾನದ ಬಗ್ಗೆ ವಿದ್ಯಾರ್ಥಿಗಳು ತಾವು ಗಳಿಸಿದ ಕೌಶಲ್ಯಗಳನ್ನು ತಮ್ಮ ಪೋಷಕರು ಮತ್ತು ಕುಟುಂಬದವರೆಲ್ಲರಿಗೂ ವರ್ಗಾಯಿಸುತ್ತಿದ್ದಾರೆ. ಯಾವುದೇ ಸಮುದಾಯದಲ್ಲಿ ವಿದ್ಯಾವಂತ ಯುವ ಜನತೆ ಅಲ್ಲಿಯೇ ಉಳಿದು ತಮ್ಮ ಜ್ಞಾನ ಕೌಶಲ್ಯಗಳನ್ನು ಬಳಸಿ ಹೆಚ್ಚು ಉತ್ಪಾದಕತೆಯನ್ನು ಹೊಂದಿರುವ ಮತ್ತು ಸುಧಾರಿತ ಕ್ರಮಗಳನ್ನು ಪರಿಚಯಿಸಿ ಜೀವನೋಪಾಯವನ್ನು ಸಂವರ್ಧಿಸುವುದು ಆ ಸಮುದಾಯಕ್ಕೆ ಅತ್ಯಂತ ಲಾಭ ತರುವಂತಹದ್ದು ತನ್ಮೂಲಕ ಏಳಿಗೆಯನ್ನು ಹೊಂದುವಂತಹದ್ದು ಅತ್ಯಂತ ಮಹತ್ವದ ವಿಷಯವಾಗಿದೆ.

ಈ ಪರಿಣಾಮದ ಮೌಲ್ಯಮಾಪನವು ಮತ್ತೊಂದು ಪ್ರಮುಖ ವಲಯವನ್ನು ಸೂಚಿಸುತ್ತದೆ: ಶಾಲೆಯಲ್ಲಿ ಬಾಲಕಿಯರ ತೊಡಗಿಸಿಕೊಳ್ಳುವಿಕೆ. ಸಮುದಾಯದಲ್ಲಿನ ಬಾಲಕಿಯರು ಬಾಲಕರೊಂದಿಗೆ ಸಂಕೋಚವಿಲ್ಲದೆ ಒಡನಾಡುವುದಕ್ಕೆ ಪ್ರಾರಂಭಿಸಿ ಜೀವನ ಕೌಶಲ್ಯದ ಎಲ್ಲಾ ಚಟುವಟಿಕೆ–ಗಳಲ್ಲಿಯೂ ಸಮನಾಗಿ ಭಾಗವಹಿಸುವುದಕ್ಕೆ ಪ್ರಾರಂಭಿಸಿರುವರೆಂದು ವರದಿಯು ಹೇಳುತ್ತದೆ. ಅವರು ತಮ್ಮ ಕಿರಿಯ ವಯಸ್ಸಿನಲ್ಲಿಯೇ ವಿವಾಹವಾಗದೇ ಕೆಲಸ ಮಾಡಲು ಇಚ್ಛಿಸುತ್ತಾರೆಂದು ಅವರು ತಿಳಿಸಿದ್ದಾರೆ. ತಮ್ಮ ಆರೋಗ್ಯಕ್ಕೆ ಮತ್ತು ಸ್ವಚ್ಛತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಪರಿಚಿತರೊಂದಿಗೆ ಚರ್ಚಿಸಲು ಅವರು ಈಗ ಆತ್ಮವಿಶ್ವಾಸ ಹೊಂದಿದ್ದಾರೆ. ಸುಶಿಕ್ಷಿತ ಮತ್ತು ಸಶಕ್ತ ಬಾಲಕಿಯರು ಸಂಪೂರ್ಣ ಸಮುದಾಯದ ಬದಲಾವಣೆಯನ್ನು ಮಾಡಬಲ್ಲರು ಎಂದು ತಿಳಿದಿರುವುದರಿಂದ ಈ ಶಾಲೆಗಳು ಸಮುದಾಯದ ಸಂವರ್ಧನೆಗೆ ಪರಿಣಾಮಕಾರಿ ಕೊಡುಗೆಯನ್ನು ನೀಡುತ್ತಿವೆ. ಇಂತಹಾ ಕೊಡುಗೆಗಳು ಕೆಲವೊಮ್ಮೆ ನೇರ ಮತ್ತು ಕಣ್ಣಿಗೆ ಕಾಣುವಂತಹ–ವಲ್ಲದಿದ್ದರೂ, ಪರೋಕ್ಷವಾಗಿ ಸಮುದಾಯದ ಏಳಿಗೆಗೆ ನೆರವಾಗುತ್ತಿವೆ.

## ಪಶ್ಚಿಮ ಬಂಗಾಳದಲ್ಲಿ ಸ್ವನಿರ್ಭರ್ ಪ್ರಯೋಗ

ಪಶ್ಚಿಮ ಬಂಗಾಳದ ಉತ್ತರದಲ್ಲಿರುವ 24 ಪರಗಣ ಜಿಲ್ಲೆಯಲ್ಲಿ ಕಾರ್ಯವೆಸಗುತ್ತಿರುವ ಸ್ವನಿರ್ಭರ್ ಎಂಬ ಸರ್ಕಾರೇತರ ಸಂಸ್ಥೆಯು 1990ರಲ್ಲಿ ತನ್ನಲ್ಲೇ ಕೇಳಿಕೊಂಡ ಪ್ರಶ್ನೆ ಎಂದರೆ – ಬಡ ಅನಕ್ಷರಸ್ಥ ಸಮುದಾಯಗಳೂ "ಜ್ಞಾನ ಸೃಷ್ಟಿ ಮತ್ತು ಪ್ರಸರಣದಲ್ಲಿ ಭಾಗವಹಿಸಬಹುದೇ?" ಅಥವಾ ಶಾಲಾ ವಿದ್ಯಾಭ್ಯಾಸವೆಂದರೆ ಶಿಕ್ಷಕರು 'ಜ್ಞಾನವನ್ನು' ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳ ಗಂಟಲೊಳಗೆ ಬಲವಂತವಾಗಿ ತುರುಕುವುದು ಮಾತ್ರವೇ? ಅಲ್ಲದೇ, ಶಾಲಾ ಶಿಕ್ಷಣದಲ್ಲಿ ಸಮುದಾಯವು ಭಾಗವಹಿಸು–ವುದೆಂದರೆ ಸೇವೆಗಳನ್ನು, ಪರಿಕರಗಳನ್ನು ಮತ್ತು ಸಾಧ್ಯವಾದರೆ ಹಣವನ್ನು ಒದಗಿಸುವುದು ಮತ್ತು ಆರೋಗ್ಯ ಹಾಗೂ ಶುಚಿತ್ವದ ಬಗ್ಗೆ ಶಿಕ್ಷಕರಿಂದ ಆದರ್ಶವಾದಿ ಭಾಷಣಗಳನ್ನು ಕೇಳುವುದು ಮಾತ್ರವೇ? ಅಂದಿನ ದಿನಗಳಲ್ಲಿ ಇತಿಹಾಸ ಭೂಗೋಳ ಮತ್ತು ವಿಜ್ಞಾನಕ್ಕೆ ಮೂರನೆಯ ತರಗತಿಯಿಂದಲೂ ಪ್ರತ್ಯೇಕ ಪಠ್ಯಪುಸ್ತಕಗಳಿದ್ದವು. ಇದು ಪರಿಸರ ವಿಜ್ಞಾನವೆಂಬ ವಿಷಯವನ್ನು ಪರಿಚಯಿಸುವುದಕ್ಕೆ ಮುಂಚಿನ ಕಥೆ. 3ರಿಂದ 5ನೇ ತರಗತಿಯವರೆಗೆ ಇತಿಹಾಸದಲ್ಲಿ 17 ಪಾಠಗಳು ಸಂಪೂರ್ಣ ಮಾನವ ಇತಿಹಾಸವನ್ನು 'ವಿವರಿಸಿದ್ದವು.' ಭೂಗೋಳವು ಮಾಹಿತಿಗಳ ಗುಡ್ಡೆಯಾಗಿದ್ದು ಇದರಲ್ಲಿ ಪಶ್ಚಿಮ ಬಂಗಾಳದ ಪ್ರತಿ ಜಿಲ್ಲೆಯ ಬಗ್ಗೆಯೂ ಮತ್ತು ಭಾರತದ ಪ್ರತಿ ರಾಜ್ಯದ ಬಗ್ಗೆಯೂ ಮಾಹಿತಿಯನ್ನು ನೀಡಲಾಗಿತ್ತಲ್ಲದೇ ಭೂಪಟಗಳನ್ನು ಸ್ಮರಣೆ–ಯಲ್ಲಿಟ್ಟುಕೊಳ್ಳಲು ನೀಡಲಾಗಿತ್ತು. ಬಡ ಅನಕ್ಷರಸ್ಥ ಪೋಷಕರು ಆಶ್ಚರ್ಯ ಚಕಿತರಾಗುವುದನ್ನು ಬಿಟ್ಟರೆ ಮತ್ತೇನನ್ನು ತಾನೇ ಮಾಡಬಲ್ಲವರಾಗಿದ್ದರು?

ಈ ಪ್ರಾಬಲ್ಯವನ್ನು ಬದಲಾಯಿಸಿ ಸಮುದಾಯವನ್ನು ನಿಜವಾದ ಭಾಗೀದಾರರನ್ನಾಗಿಸಲು ಸ್ವನಿರ್ಭರ್ ತೀರ್ಮಾನಿಸಿತು. ಮೂರು ಮತ್ತು ನಾಲ್ಕನೆಯ ತರಗತಿಯಲ್ಲಿನ ಮಕ್ಕಳಿಗೆ ಮೊದಲು ತಮ್ಮ ವೈಯಕ್ತಿಕ ಚರಿತ್ರೆಯನ್ನು ಅಥವಾ ಕಾಲಾನುಕ್ರಮಣಿಕೆಯನ್ನು ತಯಾರಿಸುವಂತೆ ಹೇಳಲಾಯಿತು. ಕೆಲವನ್ನು ಸ್ಮರಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಇನ್ನುಳಿದುವನ್ನು ಅವರು ಹುಡುಕಿ ಕಂಡುಕೊಳ್ಳಬೇಕಾಗಿತ್ತು. ಆದರೆ ಯಾರಿಂದ? ಅವರ ಬಾಲ್ಯದ ಬಗ್ಗೆ ಯಾರಿಗೆ ತಿಳಿದಿತ್ತು? ಪಠ್ಯ ಪುಸ್ತಕದಲ್ಲಿ ಇವರ ಚರಿತ್ರೆಯನ್ನು ನೀಡಿತ್ತೇ? ಶಿಕ್ಷಕರಿಗೆ ತಿಳಿದಿತ್ತೇ? ಅವರ ಬಾಲ್ಯದ ಬಗ್ಗೆ ಅವರ ಅನಕ್ಷರಸ್ಥ ಪೋಷಕರೇ ತಿಳಿಸಬೇಕಾಗಿತ್ತು. ಮುಂದಿನದು, ಮೂರರಿಂದ ನಾಲ್ಕು ತಲೆಮಾರಿನಿಂದ ಪ್ರಾರಂಭಿಸಿ ಅವರ ಕೌಟುಂಬಿಕ ಇತಿಹಾಸವನ್ನು


ಬರೆಯುವುದಾಗಿತ್ತು. ಹೆಸರುಗಳು, ಉದ್ಯೋಗಗಳು, ವರ್ಷಾಂತರಗಳಂದ ಆದ ಬದಲಾವಣೆಗಳು, ವಲಸೆ ಬಂದಿದ್ದಲ್ಲಿ ಅದರ ಮಾಹಿತಿ ಮುಂತಾದುವುಗಳನ್ನು ತಿಳಿದು ಬರೆಯಬೇಕಾಗಿತ್ತು. ಅನಂತರ ಮನೆಯಲ್ಲಿರುವ ಅತ್ಯಂತ ಪುರಾತನ ವಸ್ತುವಿನ ಇತಿಹಾಸವನ್ನು ತಿಳಿಯುವುದಾಗಿತ್ತು. ಇದರಿಂದಾಗಿ ಬಡ ಅನಕ್ಷರಸ್ಥ ಪೋಷಕರು 'ಜ್ಞಾನದ' ಹೊಳೆಯನ್ನೇ ಹರಿಸುವಂತಾಗಿ ಮಕ್ಕಳು ಅವರು ಹೇಳಿದುದನ್ನು ಬರೆದರು. ಸಮುದಾಯದ ಈ 'ಜ್ಞಾನ' ತರಗತಿಕೋಣೆಗೆ ಬರುವಂತಾಗಿ ಇದರಲ್ಲಿ ಏನಾದರೂ ನಮೂನೆಗಳಿವೆಯೇ ಎಂದು ಚರ್ಚಿಸುವ, ವಿಚಾರ ಮಾಡುವ ವಿಷಯಗಳಾದವು. ತಮ್ಮ ಹಳ್ಳಿಗೆ ಈ ನಿರ್ದಿಷ್ಟ ಹೆಸರು ಬರಲು ಕಾರಣವೇನೆಂದು ತಿಳಿದುಕೊಳ್ಳಲು ಮಕ್ಕಳಿಗೆ ಹೇಳಿದಾಗ ಸಂಪೂರ್ಣ ಸಮುದಾಯವೇ ಇದರಲ್ಲಿ ತೊಡಗಿಕೊಂಡಿತು. ಇದರಲ್ಲಿ ಅನೇಕ ರೂಪಾಂತರಗಳು ಕಂಡುಬಂದು, ಸಮುದಾಯವು ಉತ್ಸಾಹದಿಂದ ಚರ್ಚೆ ಮತ್ತು ವಾದಗಳಲ್ಲಿ ತೊಡಗಿಕೊಂಡಿತು. ಮಕ್ಕಳು ಈ ಎಲ್ಲಾ ರೂಪಾಂತರ-ಗಳನ್ನು ಬರೆದುಕೊಂಡರು. ಇದನ್ನು ಕಂಡು ಹಿಡಿಯುವುದಾದರೂ ಹೇಗೆ? ಇದಕ್ಕೆ ಪುರಾವೆ ಏನು?

ಗ್ರಾಮದಲ್ಲಿರುವ ಮಣ್ಣಿನ ವಿಧಗಳು ಯಾವುವು? ಎಲ್ಲಿ ಯಾವ ಬೆಳೆಯನ್ನು ಬೆಳೆಯಲಾಗುವುದು ಮತ್ತು ಏಕೆ? ಪ್ರತಿಯೊಂದು ಬೆಳೆಗೂ ಇರುವ ಅಗತ್ಯತೆಗಳೇನು? ಗ್ರಾಮದ ಕರಕುಶಲ ಕಲೆ ಯಾವುದು ಮತ್ತು ಉದ್ಯೋಗಗಳು ಯಾವುವು? ಯಾರು ಇದನ್ನೆಲ್ಲಾ ಹೇಳಬಲ್ಲರು? ಗ್ರಾಮದ ರೈತನೋ, ಕರಕುಶಲ-ಕರ್ಮಿಯೋ? ಇವರನ್ನು ತರಗತಿಗೆ ಕರೆಯಬಹುದೇ ಅಥವಾ ಮಕ್ಕಳನ್ನೇ ಇವರಿರುವಲ್ಲಿಗೆ ಕರೆದುಕೊಂಡು ಹೋಗಬಹುದೇ? ಮೊದಲಿಗೆ ಮಕ್ಕಳು ತಮ್ಮಲ್ಲಿಯೇ ಚರ್ಚಿಸಿ ಪ್ರಶ್ನಾವಳಿಯನ್ನು ತಯಾರಿಸಿಕೊಳ್ಳಬಹುದೇ? ಎಲ್ಲರೂ ಕೂಡಿ ಗ್ರಾಮದ ನಕ್ಷೆಯನ್ನು ತಯಾರಿಸಬಹುದೇ? ಈಗ ಭೂಗೋಳವು ಸಂಪೂರ್ಣ ಸಮುದಾಯವನ್ನೇ ತೊಡಗಿಸಿಕೊಂಡಿತ್ತಲ್ಲದೇ ಸ್ಮರಣೆಯಲ್ಲಿರಿಸಿಕೊಳ್ಳಲು ಹೆಣಗಬೇಕಾದ ನೀರಸ ವಿಷಯವಾಗಿ ಉಳಿದಿರಲಿಲ್ಲ.

ಇದರಿಂದ ಸ್ವನಿರ್ಭರ್‌ಗೆ ಅನಿಸಿದ್ದೇನೆಂದರೆ ಶಾಲೆ-ಸಮುದಾಯದ ಸಂಪರ್ಕ ಕೊಂಡಿಗೆ ಮತ್ತೊಂದು ಆಯಾಮವನ್ನು ಒದಗಿಸಿ ಶಾಲಾ ಮಟ್ಟದ ಬೋಧನೆ ಮತ್ತು ಕಲಿಕೆಯನ್ನು ಸಮುದಾಯದಲ್ಲಿ ಎಲ್ಲೆಡೆಗೆ ಕೊಂಡೊಯ್ದು ಅಲ್ಲಿರುವ ಎಲ್ಲರನ್ನೂ ತೊಡಗಿಸಿಕೊಳ್ಳುವಂತೆ ಮಾಡುವುದು ಸೂಕ್ತ ಎಂದು. ಶಿಕ್ಷಣವನ್ನು ಒದಗಿಸುವ ವ್ಯವಹಾರದಲ್ಲಿ ನ್ಯಾಯಸಮ್ಮತವಾದ ಮಾರ್ಗ, ಅದೆಂದರೆ ಜ್ಞಾನವನ್ನು, ಕೌಶಲ್ಯಗಳನ್ನು, ಮೌಲ್ಯಗಳನ್ನು ತೊಡಗಿಸಿಕೊಂಡಿರುವ ಪ್ರತಿಯೊಬ್ಬರಿಗೂ ನೀಡುವುದು ಎಂದು ಎನ್‌ಸಿಎಫ್ 2005, ಸರಿಯಾಗಿ ಎತ್ತಿ ಹೇಳಿದೆ.

## ಕೊನೆಯ ಮಾತು

ಮಾಡಬೇಕಾದ ಕಾರ್ಯಗಳು ಇನ್ನೂ ಇವೆ. ಮೇಲೆ ವಿವರಿಸಲಾಗಿರುವ ಮೂರು ಪ್ರಯತ್ನಗಳು ಸಮುದ್ರದಲ್ಲಿನ ಒಂದು ಬಿಂದು ಇದ್ದಂತೆ. ಭಾರತದ 99 ಪ್ರತಿಶತಕ್ಕೂ ಹೆಚ್ಚು ಶಾಲೆಗಳಲ್ಲಿ – ಶಾಲಾ ಶಿಕ್ಷಣವೆಂದರೆ, ಶಿಕ್ಷಕರು ಪಠ್ಯಪುಸ್ತಕ ಎಂಬ ಶಸ್ತ್ರದ ಮೂಲಕ ವಿದ್ಯಾರ್ಥಿಗಳು ಮತ್ತು ಸಮುದಾಯದ ಮೇಲೆ ಅಧಿಪತ್ಯವನ್ನು ಸಾಧಿಸುವುದಾಗಿದೆ. ಹೆಚ್ಚಿನಂಶ ಶಿಕ್ಷಕರಲ್ಲಿ ಮೂಲಭೂತವಾದ ಮನೋ-ಧೋರಣೆಯ ಬದಲಾವಣೆಯಾಗಲು ಯಾವ ರೀತಿಯ ಸಾಮರ್ಥ್ಯವನ್ನು ಬೆಳೆಸಬೇಕು ಮತ್ತು ಯಾವ ವಿಧದ ಪರಿಸರವನ್ನು ನಿರ್ಮಾಣ ಮಾಡಬೇಕೆನ್ನುವುದರ ಬಗ್ಗೆ ಲೇಖಕಕರಿಗೆ ಖಚಿತತೆ ಇಲ್ಲ. ಪ್ರಸ್ತುತ ವಾತಾವರಣದಲ್ಲಿ ಎನ್‌ಸಿಎಫ್ 2005ನ್ನು ಶಿಕ್ಷಕರಿಗೆ ನೀಡಿದಲ್ಲಿ, ಅದನ್ನು ಅಭ್ಯಸಿಸಿ ಆಚರಣೆಗೆ ತರುವ ಬದಲಾಗಿ ಅದನ್ನೂ ಒಂದು ಪಠ್ಯದಂತೆ ಕಂಠಪಾಠ ಮಾಡಲು ಬಳಸಬಹುದು. ನೀನು ನಡೆಸುತ್ತಿರುವ ಸಮೀಕ್ಷೆಗಳಿಗೆಲ್ಲಾ ಸ್ವನಿರ್ಭರದವರು ಹಣ ನೀಡುವರೇ ಎಂದು ಒಂಭತ್ತನೇ ತರಗತಿಯ ವಿದ್ಯಾರ್ಥಿನಿಯನ್ನು ಒಬ್ಬ ಪಂಚಾಯಿತಿ ಸದಸ್ಯ ಕೆಣಕಿದಾಗ, ಆ ವಿದ್ಯಾರ್ಥಿನಿಯು ನಿಮಗೆ ಈ ಗ್ರಾಮದ ಸಮಸ್ಯೆಗಳ ಬಗ್ಗೆ ಇರುವ ಅರಿವನ್ನು ನನಗಿರುವ ಅರಿವಿನೊಂದಿಗೆ ಪರೀಕ್ಷಿಸಿ ನೋಡಿ ಯಾರಿಗೆ ನಿಖರವಾದ ಅರಿವಿದೆ ಎಂದು ತಿಳಿಯುವುದು ಎಂದು ಸವಾಲು ಹಾಕಿದ್ದಲ್ಲದೇ ಭವಿಷ್ಯದಲ್ಲಿ ತಾನು ಅವರಿಗಿಂತ ಅತ್ಯುತ್ತಮವಾದ ಪಂಚಾಯಿತಿ ಸದಸ್ಯಳಾಗುವ ಅರ್ಹತೆಯನ್ನು ಹೊಂದುವಳೆಂದು ಸ್ಪಷ್ಟವಾಗಿ ಹೇಳಲು ಹಿಂಜರಿಯಲಿಲ್ಲ. ಇಂತಹಾ ಧೈರ್ಯ, ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ಬಹುತೇಕ ವಿದ್ಯಾರ್ಥಿಗಳಿಗೆ ನೀಡುವಂತಹ ಶಾಲಾ ಸಮುದಾಯದ ಸಾವಯವ ವ್ಯವಸ್ಥೆಯನ್ನು ನಾವು ಕಾಣುವುದೆಂದು?



**ಸುಜಿತ್**ರವರು ಪ್ರಸ್ತುತ ಅಜೀಂ ಪ್ರೇಂಜಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಪಶ್ಚಿಮ ಬಂಗಾಳದಲ್ಲಿರುವ ಸ್ವನಿರ್ಭರ್ ಎಂಬ ಸರ್ಕಾರೇತರ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ 20 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಸ್ವನಿರ್ಭರ್ ಸಂಸ್ಥೆಯು ಶಿಕ್ಷಣ, ಆರೋಗ್ಯ, ಸುಸ್ಥಿರ ಕೃಷಿ, ಸ್ವ-ಸಹಾಯ ಗುಂಪುಗಳು ಮತ್ತು ಮಾದರಿ ಪಂಚಾಯತಿಗಳ ನಿರ್ಮಾಣ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದೆ. ಸುಜಿತ್‌ರವರು ಮೂಲತಃ ಗಾಂಧೀಜಿಯವರ ಮತ್ತು ಟ್ಯಾಗೂರರ ಶೈಕ್ಷಣಿಕ ಆಲೋಚನೆಗಳನ್ನು ಇಂದಿನ ಮತ್ತು ಭವಿಷ್ಯದಲ್ಲಿನ ಪರಿಸರಕ್ಕೆ ಸೂಕ್ತವೆನಿಸುವಂತೆ ಅವನ್ನು ಮರು ವ್ಯಾಖ್ಯಾನಿಸುವ ಆಸಕ್ತಿಯನ್ನು ಹೊಂದಿದ್ದಾರೆ. ಇವರನ್ನು sujit.sinha@apu.edu.in ಇಲ್ಲಿ ಸಂಪರ್ಕಿಸಬಹುದು.



**ನಜುರುಲ್**ರವರು ಅನೇಕ ಕಡೆಗಳಲ್ಲಿ ಹಲವಾರು ವರ್ಷಗಳು ಕೆಲಸ ಮಾಡಿದ ಅನಂತರ ಇತ್ತೀಚೆಗೆ ಅಭಿವೃದ್ಧಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ ಹಾಗೂ ಪ್ರಸ್ತುತ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಉಪಕ್ರಮವಾದ "ಕೆಲಸ ಮತ್ತು ಶಿಕ್ಷಣ"ದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಅಭಿವೃದ್ಧಿಯ ಬಗ್ಗೆ ಪರ್ಯಾಯ ಆಲೋಚನೆಗಳನ್ನು ಮಾಡುವಲ್ಲಿ ಮತ್ತು ಶಾಲೆಗಳು ಇದಕ್ಕೆ ಹೇಗೆ ಔಪಚಾರಿಕವಾದ ಕೊಡುಗೆಯನ್ನು ನೀಡಬಲ್ಲವು ಎಂಬ ಚಿಂತನೆಯಲ್ಲಿ ತೊಡಗಿಸಿಕೊಳ್ಳುವತ್ತ ಆಸಕ್ತಿಯನ್ನು ಹೊಂದಿದ್ದಾರೆ. ಇವರನ್ನು nazrul.haque@azimpremjifoundation.org ಇಲ್ಲಿ ಸಂಪರ್ಕಿಸಬಹುದು.



# ಚಪಾತಿ ಹಾಗೂ ಶೈಕ್ಷಣಿಕ ಬದಲಾವಣೆ ಸವಾಲುಗಳು

**ಶಶಿ ನಾಯರ್**

ಶೈಕ್ಷಣಿಕ ಬದಲಾವಣೆಯನ್ನು ಗಮನಿಸುವಾಗ ನಾವು ಪ್ರಮುಖವಾದ ಒಂದಕ್ಕೊಂದು ಸಂಬಂಧಿಸಿದ ಮೂರು ಅಂಶಗಳನ್ನು ನೋಡಬೇಕಾಗುತ್ತದೆ: 'ಏನು', 'ಹೇಗೆ' ಹಾಗೂ 'ಯಾರು'. ಯಾವುದನ್ನು ಬದಲಾವಣೆ ಮಾಡಬೇಕು ಎಂಬುದರ ಬಗ್ಗೆ ನಾವು ಸ್ಪಷ್ಟತೆಯನ್ನು ಹೊಂದಿರಬೇಕಾಗುತ್ತದೆ. ಉದಾಹರಣೆಗೆ, ಎಲ್ಲ ಶಿಕ್ಷಕರು ತರಗತಿಗಳಲ್ಲಿ ಇದ್ದು, ಕಲಿಸುತ್ತಿರಬೇಕು. ಆದರೆ ವಾಸ್ತವವಾಗಿ ಅದಕ್ಕಿಂತಲೂ ಹೆಚ್ಚನ್ನು ನಾವು ಮಾಡಬೇಕಾಗಿರುತ್ತದೆ. 'ಏನು' ಎಂಬುದು ವ್ಯಕ್ತಿಗಳ, ಸಂಸ್ಥೆಗಳ ಹಾಗೂ ವ್ಯವಸ್ಥೆಯ ವಾಡಿಕೆಯ ಅಭ್ಯಾಸಗಳಲ್ಲಿ ಬದಲಾವಣೆಯನ್ನು ತರುವುದನ್ನು ಒಳಗೊಂಡಿರುತ್ತದೆ. ಎಲ್ಲಿಯವರೆಗೆ ಅವರು ಈಗ ಏನು ಮಾಡುತ್ತಿದ್ದಾರೋ ಅದನ್ನೆ ಮಾಡುತ್ತಾ ಹೋದರೆ, ಅಲ್ಲಿಯವರೆಗೆ ಭವಿಷ್ಯದಲ್ಲಿ ಬದಲಾವಣೆ ಸಾಧ್ಯವಿಲ್ಲ.

'ಏನು' ಎಂಬುದರ ಬಗ್ಗೆ ಮಾತಾಡುವುದು ಬಲು ಸುಲಭ. ಆದರೆ ಅದನ್ನು ಕಾರ್ಯಗತ ಮಾಡುವುದು ಕಷ್ಟ. ಉದಾಹರಣೆಗೆ, ಎಲ್ಲ ಶಿಕ್ಷಕರು ಶಾಲೆಗೆ ಹಾಜರಾಗಬೇಕು ಮತ್ತು ಪಾಠ ಕಲಿಸುತ್ತಿರಬೇಕು ಎಂಬುದಾಗಲು ಏನು ಮಾಡಬೇಕು? ಅವರ ಕಾರ್ಯವೈಖರಿಗಳಲ್ಲಿ ಬದಲಾವಣೆಯನ್ನು ಹೇಗೆ ತರಬೇಕು?

ನಾವು ಒಂದು ಸರ್ಕಾರಿ ಆದೇಶವನ್ನು ಕಳಿಸಬಹುದು. ಆದರೆ ನಮ್ಮ ಅನುಭವಗಳ ಪ್ರಕಾರ, ಅದರಿಂದ ಏನೂ ಉಪಯೋಗವಿಲ್ಲ. ಶಿಕ್ಷಕರ ಮೇಲೆ ನಿಗಾ ಇಡಬಹುದು. ಆದರೆ ಅಷ್ಟೊಂದು ಜನರು ನಮ್ಮ ಬಳಿ ಇಲ್ಲ. ಒಂದು ವೇಳೆ ಹಾಗೆ ನಿಗಾ ಇಟ್ಟರೂ ಅವರು ಬದ್ಧತೆಯಿಂದ ಹಾಗೂ ಸ್ವಪ್ರೇರಣೆಯಿಂದ ಪಾಠ ಮಾಡುತ್ತಾರೆ ಎಂಬುದಕ್ಕೆ ಯಾವುದೇ ಖಾತರಿ ನಮಗೆ ಇರುವುದಿಲ್ಲ. ವಾಸ್ತವವಾಗಿ, ಹೊರಗಿನಿಂದ ಬಲವಂತದ ಪ್ರಯತ್ನ ಮಾಡಿದರೆ ಅಂಥ ಪ್ರಯತ್ನಗಳು ಸಫಲವಾಗುವುದಿಲ್ಲ ಎಂಬುದನ್ನು ಜಗತ್ತಿನಾದ್ಯಂತ ನಡೆದ ಸಂಶೋಧನೆಗಳು ಸ್ಪಷ್ಟಪಡಿಸಿವೆ! ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹಾಗೂ ತರಲೇ ಬೇಕಾದ ಹಲವು ವಿಧಗಳ ಬದಲಾವಣೆಗಳನ್ನು ಜಾರಿಗೆ ತರಲು ನಾವು ಮೂರು ತೆರನಾದ ಸಾಮರ್ಥ್ಯಗಳನ್ನು ಗುರುತಿಸಿದ್ದೇವೆ:

1. ವಾಸ್ತವವಾಗಿ ಅಂತರ್ಗತ ಸಮಸ್ಯೆಗಳು ಏನೇನು ಎಂಬುದನ್ನು ಅರಿತುಕೊಳ್ಳುವ ನೈದಾನಿಕ ಸಾಮರ್ಥ್ಯ ನಮಗೆ ಬೇಕಾಗುತ್ತದೆ. ಇದರಿಂದ ನಾವು ಅವು ಏನು ಅಂದುಕೊಂಡಿರುತ್ತೇವೆಯೋ ಅದು ಅವು ಅಲ್ಲ ಎಂದು ತಿಳಿದಾಗ ಅಚ್ಚರಿಯಾಗಬಹುದು.
2. ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವ ಸಾಮರ್ಥ್ಯ ಬೇಕಾಗುತ್ತದೆ. ಇಲ್ಲಿ ಶೈಕ್ಷಣಿಕ ಬದಲಾವಣೆಯ ಅಗಾಧ ಜ್ಞಾನ ತಿಳಿದುಕೊಳ್ಳುವುದು ನೆರವಾಗುತ್ತದೆ. ಇದರಿಂದ ಯಾವುದು ಫಲದಾಯಕ ಹಾಗೂ ಯಾವುದು ಅಲ್ಲ ಎಂಬುದೂ ಗೊತ್ತಾಗುತ್ತದೆ.
3. ಈ ಪರಿಹಾರಗಳನ್ನು ಕಾರ್ಯಗತಗೊಳಿಸಲು ಬದಲಾವಣೆಗೆ ಅನುಕೂಲ ಕಲ್ಪಿಸುವ ಸಾಮರ್ಥ್ಯ ಬೇಕಾಗುತ್ತದೆ ಹಾಗೂ ಆ ಸಾಮರ್ಥ್ಯಕ್ಕೆ ಅಗತ್ಯವಾದ ಪರಿಣಿತಿ ಬೇಕಾಗುತ್ತದೆ.

ಹೀಗಾಗಿ, ಏನು ಎಂಬುದಕ್ಕಿಂತ ಹೇಗೆ ಎಂಬುದಕ್ಕೆ ಉತ್ತರ ಕೊಡುವುದು ಇನ್ನಷ್ಟು ಕಠಿಣವಾಗಿರುತ್ತದೆ.

'ಹೇಗೆ' ಎಂಬುದನ್ನು ಗಮನಿಸಿದಾಗ ಇದು ನಮ್ಮನ್ನು 'ಯಾರು' ಎಂಬ ಮೂರಕ್ಕೂ ಅನ್ವಯಿಸುವ ಅಂಶದ ಕಡೆಗೆ ಕರೆದೊಯ್ಯುತ್ತದೆ. ಅಂದರೆ ಪರಿಣಾಮಕಾರಿ ಬದಲಾವಣೆಯ ಸುಗಮಕಾರರರಾಗುವ ಪರಿಣತಿ ಯಾರಿಗೆ ಒದಗಿಸಬೇಕು? ಎಂಬುದು. ಪ್ರತಿಯೊಂದು ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಕೆಲವೇ ಕೆಲವು ಮಂದಿಗೆ ಈ ಪರಿಣತಿ ಇದ್ದರೆ ಸಾಕೇ? ಈ ಕೆಲವೇ ಕೆಲವು ಮಂದಿ ಅಸಂಖ್ಯಾತ ಸಮಸ್ಯೆಗಳನ್ನು ಗುರುತಿಸಿ, ದೊಡ್ಡ ಪ್ರಮಾಣದಲ್ಲಿ ವೈಯಕ್ತಿಕ, ಸಾಂಸ್ಥಿಕ ಹಾಗೂ

ವ್ಯವಸ್ಥೆಯ ಕೆಲಸಕಾರ್ಯಗಳಲ್ಲಿ ಬದಲಾವಣೆ ತರಲು ಸಾಧ್ಯವಿದೆಯೇ? ಒಳಗೊಂಡ ಈ ಕೆಲಸದ ಅಗಾಧತೆಯನ್ನು ಗಮನಿಸಿದಾಗ, ದೊಡ್ಡ ಪ್ರಮಾಣದ ಬದಲಾವಣೆಯ ಪ್ರೇರಕರನ್ನು ಸಜ್ಜುಗೊಳಸಬೇಕು.

ಬದಲಾವಣೆ ತರಲು ನಾವು ಮಾಡುತ್ತಿರುವುದರಲ್ಲಿ, ವೈಯಕ್ತಿಕ, ಸಾಂಸ್ಥಿಕ ಹಾಗೂ ವ್ಯವಸ್ಥೆಯ ಬದಲಾವಣೆಗೆ ಗಮನ ಕೊಡುತ್ತಿರುವ ಅಂಶ ಬಹಳ ಕಡಿಮೆ. ಶೈಕ್ಷಣಿಕ ಬದಲಾವಣೆ ಕುರಿತ ಅಗಾಧ ಜ್ಞಾನದ ಪ್ರಯೋಜನಗಳನ್ನು ಪಡೆದುಕೊಳ್ಳಲು ನಾವು ಏನೇನೂ ಮಾಡುತ್ತಿಲ್ಲ ಮತ್ತು ಬದಲಾವಣೆಯ ಸುಗಮಕಾರರ ಒಂದು ಪರ್ಯಾಪ್ತ ಸಂಖ್ಯೆಯ ತಂಡವನ್ನು ಅವರಿಗಿರಬೇಕಾದ ಪರಿಣತಿಯೊಂದಿಗೆ ತಯಾರು ಮಾಡಲು ನಾವು ಏನೇನೂ ಮಾಡುತ್ತಿಲ್ಲ ಎಂಬುದು ಈಗಾಗಲೇ ವೇದ್ಯವಾಗಿರುತ್ತದೆ

'ಏನು', 'ಹೇಗೆ' ಹಾಗೂ 'ಯಾರು' ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದ ಬಳಿಕ ಈಗ ನಾವು ನಾಲ್ಕನೇ ಅಂಶದತ್ತ ಗಮನ ಹರಿಸೋಣ: ತಜ್ಞ ಬದಲಾವಣೆಯ ಸುಗಮಕಾರರನ್ನು ಸಜ್ಜುಗೊಳಸುವುದು ಹೇಗೆ?

ಈಗ ಸಾಮಾನ್ಯವಾಗಿ ನಡೆಯುತ್ತಿರುವ ತರಗತಿ ಕೊಠಡಿಗಳಲ್ಲಿ ತರಬೇತಿಯಂತಹ ಸಾಂಪ್ರದಾಯಿಕ ವಿಧಾನಗಳಿಂದ ಈ ಸುಗಮಕಾರರನ್ನು ಸಜ್ಜುಗೊಳಸುವುದು ಅಸಾಧ್ಯ. ಇದನ್ನು ಅರ್ಥಮಾಡಿಕೊಳ್ಳಲು ಮೃದು ಹಾಗೂ ಉಬ್ಬಿದ ಚಪಾತಿಗಳನ್ನು ಮಾಡುವ ವಿಧಾನವನ್ನು ನೋಡೋಣ ಇದರ ಹಿಂದಿರುವ ವಿಜ್ಞಾನ ಸರಳ: ಮೊದಲು ಚಪಾತಿ ಹಿಟ್ಟನ್ನು ಕಲಸಿ, ನಾದಿ. ಬಳಿಕ ಇದಕ್ಕೆ ಕರಾರುವಕ್ಕಾದ ತೇವಾಂಶ ಹಾಗೂ ಬನಿ ಬರುವವರೆಗೆ ಪಕ್ಕಕ್ಕೆ ಇಡಿ. ಹಿಟ್ಟಿನ ಉಂಡೆಗಳನ್ನು ಲಟ್ಟಣಿಗೆಯಿಂದ ಒತ್ತಿ ತೆಳುವಾಗಿ ಮಾಡಿ. ಆ ಬಳಿಕ ಅದನ್ನು ಹದವಾದ ಉರಿಯಿರುವ ಸ್ಟೋವ್‌ನ ಮೇಲೆ ಬೇಯಿಸಿ. ಎರಡೂ ಬದಿಗಳನ್ನು ಬೇಯಿಸುವುದು ಅಗತ್ಯ. ಇದರಿಂದ ಎರಡು ಪದರಗಳ ಮಧ್ಯೆ ಸಿಲುಕಿರುವ ಆವಿಯು ಪದರಗಳನ್ನು ತಳ್ಳುತ್ತ ಚಪಾತಿಯು ಉಬ್ಬುವಂತೆ ಮಾಡುತ್ತದೆ. ಅದು ಒಡೆಯದು ಎಂಬುದನ್ನೂ ಗಮನಿಸಿ! ಈಗ ರುಚಿಯಾದ, ಮೃದು ಚಪಾತಿ ಸೇವನೆಗೆ ಸಿದ್ಧ. ಈ ಚಪಾತಿ ತಯಾರಿಕೆ ಒಂದು ಕಲೆ ಎಂದು ಕೆಲವರು ಹೇಳುತ್ತಾರೆ. ಇನ್ನಷ್ಟು ಮಂದಿ ಇದೊಂದು ವಿಜ್ಞಾನ ಎನ್ನುತ್ತಾರೆ. ಏನನ್ನಾದರೂ ಚೆನ್ನಾಗಿ ಮನವರಿಕೆ ಮಾಡಿಕೊಂಡು ಅನ್ವಯಿಸಿದರೆ ಅದೇ ಕಲೆ.

ತರಗತಿಗಳಲ್ಲಿ ಕಲಿಸುವುದನ್ನು ಚಪಾತಿ ತಯಾರಿಕೆಗೆ ಹೋಲಿಸಬಹುದು. ವಿಜ್ಞಾನ ಗೊತ್ತಿಲ್ಲದೇ ಇರುವವರಿಗೆ ಮೊದಲ ಬಾರಿಗೆ ಚಪಾತಿ ಮಾಡಲಿಕ್ಕೆ ಆಗುವುದಿಲ್ಲ ಎಂಬುದು ಸರಿಯಲ್ಲ. ಇದು ಯಾಕೆ ಹೀಗೆ? ವಿಜ್ಞಾನದಲ್ಲಿ ನಮಗೆ ಗೊತ್ತಿಲ್ಲದೇ ಇರುವ ಎಷ್ಟೋ ಸಂಗತಿಗಳಿವೆ. ಅವೆಂದರೆ, ಹಿಟ್ಟು ಹಸಿಯಾಗಿರಲು ಎಷ್ಟು ತೇವಾಂಶ ಇರಬೇಕು? ಜಿಗುಟುತನ ಎಷ್ಟು ಪ್ರಮಾಣದಲ್ಲಿ ಇರಬೇಕು? ಉರಿ ಎಷ್ಟು ಇರಬೇಕು? ಎಷ್ಟು ಪ್ರಮಾಣದ ಶಾಖ ದಾಟಿದರೆ ಚಪಾತಿಯ ಒಂದು ಪದರು ಒಡೆದುಹೋಗುತ್ತದೆ? ಈ ಎಲ್ಲ ಪ್ರಶ್ನೆಗೆ ಉತ್ತರಗಳು ಜ್ಞಾನದಲ್ಲಿ ಅಡಗಿವೆ. ಚಪಾತಿ ಮಾಡುವವನ ಬೆರಳುಗಳಲ್ಲಿ ಈ ಜ್ಞಾನ ಅಡಗಿರುತ್ತದೆ. ಎಷ್ಟು ಶಾಖ ಇರಬೇಕು ಎಂಬ ಜ್ಞಾನ ಮಿದುಳಿನಲ್ಲಿ ಶೇಖರವಾಗಿರುತ್ತದೆ; ಅದನ್ನು ಶಬ್ದಗಳಲ್ಲಿ ಪರಿಣಾಮಕಾರಿಯಾಗಿ ಹೇಳಲು ಅಸಾಧ್ಯ. ಅನುಭವಿಸಿಯೇ ಅದನ್ನು ಅರಿತುಕೊಳ್ಳಬೇಕು–ಇದೇ ಪಾರಿಣತ್ಯದ ಗಳಿಕೆಯ ಕೀಲಿ ಕೈ!

ಈ ಉದಾಹರಣೆಯನ್ನು ಬಳಸಿಕೊಂಡು, ತಜ್ಞತೆ ಪಡೆಯುವುದು ಹೇಗೆ ಎಂಬುದನ್ನು ಗಮನಿಸೋಣ. ವಿಜ್ಞಾನದ ಬಗ್ಗೆ ತಿಳಿದ ಯಾರಿಗೇ ಆದರೂ ಟ್ರಯಲ್ ಅಂಡ್ ಎರರ್ (ಪ್ರಯೋಗ ಮಾಡು, ತಪ್ಪು ಮಾಡಿ ಅರಿತುಕೋ) ವಿಧಾನದ ಮೂಲಕ ಪರಿಣಿತಿ ಸಾಧಿಸಲು ಸಾಧ್ಯವಿದೆ ಎಂಬುದು ಗೊತ್ತಿದೆ. ತಜ್ಞರ ಸಹಾಯದೊಂದಿಗೆ ಹೊಸಬರು ಇದನ್ನು ಹೇಗೆ ಸಾಧಿಸಲು ಸಾಧ್ಯವಿದೆ ಎಂಬುದನ್ನು ನೋಡೋಣ. ಒಂದು ಸ್ಪಷ್ಟ ವಿಷಯವೇನಂದರೆ ಜ್ಞಾನಕ್ಕೂ ಕೊಟ್ಟ ವಿಜ್ಞಾನವನ್ನು ಅರಿತುಕೊಳ್ಳುವುದಕ್ಕೂ ಸಂಬಂಧವಿದೆ. ಎರಡನೆಯದಾಗಿ, ಹೊಸಬರು ತಮ್ಮ ಚಪಾತಿಗಳನ್ನು ಅಂದರೆ ಪ್ರಯತ್ನಗಳನ್ನು ಮಾಡಲು ಅವಕಾಶಗಳನ್ನು ಸೃಷ್ಟಿಸುವುದು. ಮೂರನೆಯದಾಗಿ ಕೋಚಿಂಗ್–ಅಂದರೆ ತರಬೇತಿ. ಇಲ್ಲಿ ಪ್ರಯತ್ನ ಮಾಡುವವರು ತಾವು ಕಂಡುಕೊಂಡ ಸಫಲತೆ ಹಾಗೂ ವಿಫಲತೆಗಳ ಬಗ್ಗೆ ಚಿಂತನೆ ಮಾಡಬೇಕು. ಇದರಿಂದ ತಮ್ಮ ವಿಧಾನಗಳನ್ನು ವಿಜ್ಞಾನದೊಂದಿಗೆ ಜೋಡಿಸಿ, ವಿಜ್ಞಾನವನ್ನು ಜೀವಂತ ಜಾದೂ ಎಂಬಂತೆ ಮಾಡಿಕೊಳ್ಳುವುದು. ಹಲವು ಪ್ರಯತ್ನಗಳ ತರುವಾಯ, ಹೊಸಬರು ಪರಿಣಿತರಾಗುತ್ತಾರೆ. ಈ ಬಗೆಯ ಪ್ರಯತ್ನಗಳಿಂದ, ಲಕ್ಷಾಂತರ ಜನರು ಈಗ ಬಾಯಲ್ಲಿ ನೀರೂರಿಸುವ ಚಪಾತಿ ತಯಾರಕರಾಗಿ ರೂಪುಗೊಂಡಿದ್ದಾರೆ!

ಚಪಾತಿ ಮಾಡುವುದಕ್ಕಿಂತಲೂ ಶೈಕ್ಷಣಿಕ ಬದಲಾವಣೆ ಪ್ರಕ್ರಿಯೆ ಉತ್ತೇಜಿಸುವುದು ಹೆಚ್ಚು ಸಂಕೀರ್ಣವಾದುದು ಎಂಬುದನ್ನು ಒಪ್ಪಲೇಬೇಕು. ಆದರೆ ತಜ್ಞ ಬದಲಾವಣೆಯ ಸುಗಮಕಾರರನ್ನು ಬೆಳಸುವ ತತ್ವ ಮಾತ್ರ ಬೇರೆಯೇನಲ್ಲ.

ನೈಪುಣ್ಯ ಅಥವಾ ಪರಿಣಿತಿ ಬೆಳಸುವ ಕಲ್ಪನೆಯನ್ನು ಗಂಭಿರವಾಗಿ ತೆಗೆದುಕೊಂಡಿರುವ ಹಲವು ಕ್ಷೇತ್ರಗಳಿವೆ. ಉದಾಹರಣೆಗೆ, ವೈದ್ಯಕೀಯ ರಂಗವನ್ನು ತೆಗೆದುಕೊಳ್ಳಿ. ಇದಕ್ಕಾಗಿ ಅಗಾಧ ಪ್ರಮಾಣದ ಜ್ಞಾನವನ್ನು ಪಡೆಯಬೇಕು, ಆದರೆ ಅದು ಅಲ್ಲಿಗೇ ನಿಲ್ಲುವುದಿಲ್ಲ. ಜ್ಞಾನವನ್ನು ಅನವಯಿಸಿ

ವೃತ್ತಿಪರರಾಗಲು (ಕಡೆಪಕ್ಷ ವಿಶ್ವಾದ್ಯಂತ ಇದನ್ನು ವೃತ್ತಿಪರವಾಗಿ ಮಾಡುವ ಕಡೆಗಳಲ್ಲಿ) ಅಲ್ಲಿ ಸಾಕಷ್ಟು ಅವಕಾಶಗಳಿವೆ; ತರಬೇತಿ ಪಡೆಯುವವರು, ವೈದ್ಯಕೀಯ ವಿಶೇಷಜ್ಞರು ಪರಿಣಿತ ವೈದ್ಯರ ಕೈಕೆಳಗೆ ಕೆಲಸ ಮಾಡುತ್ತಾರೆ. ವೈದ್ಯರು ಆಯಾ ವಿಧಾನಗಳನ್ನು ಅವರಿಗೆ ಕಲಿಸಿ ಕೊಡುತ್ತಾರೆ.

ಇನ್ನು ನಮ್ಮ ಶಿಕ್ಷಣ ರಂಗಕ್ಕೆ ಬಂದಾಗ ಫಿನ್ಲೆಂಡಿನಲ್ಲಿ ಪ್ರಾಥಮಿಕ ಶಾಲೆ ಶಿಕ್ಷಕರಾಗಬೇಕೆಂದರೆ, ಸಂಶೋಧನೆ ಆಧಾರಿತ ಮಾಸ್ಟರ್ ಡಿಗ್ರಿಯನ್ನು ಅವರು ಪಡೆದಿರಲೇಬೇಕು.

ಶೈಕ್ಷಣಿಕ ಬದಲಾವಣೆ ತರುವುದು ಒಂದು ಗಂಭೀರ ವಿಷಯ ಎಂಬುದನ್ನು ನಾವು ಮನಗಾಣಬೇಕು. ಈಗಿರುವ ರೀತಿಯನ್ನು ಬಿಟ್ಟು ವಿಭಿನ್ನವಾಗಿ ಮಾಡಿದರೆ ಮಾತ್ರ ಅದನ್ನು ಸಾಧಿಸಲು ಸಾಧ್ಯವಿದೆ.

1. ಒಳಗೊಂಡ ವಿಜ್ಞಾನವನ್ನು ಅರಿಯುವುದು.
2. ಬದಲಾವಣೆಯ ಸುಗಮಕಾರರನ್ನು ತಜ್ಞರನ್ನಾಗಿ ರೂಪಿಸಲು ಪ್ರಯತ್ನಿಸುವುದು.
3. ಬದಲಾವಣೆತರಲು ಬೇಕಾದಷ್ಟು ಸಂಖ್ಯೆಯಲ್ಲಿ ನಿರ್ಣಾಯಕ ಸಮುದಾಯವನ್ನು ರೂಪಿಸುವುದು.

### ಇವುಗಳನ್ನೆಲ್ಲ ಮಾಡದೇ ಬದಲಾವಣೆಯನ್ನು ನಾವು ನಿರೀಕ್ಷಿಸಿದರೆ ಹೇಗೆ?

ನಮ್ಮ ದೇಶದಲ್ಲಿ ಈಗಿರುವ ಒಂದು ಸಾಮಾನ್ಯ ಅಭಿಪ್ರಾಯವೆಂದರೆ ಅತ್ಯುತ್ತಮ ಶಿಕ್ಷಣ ನೀತಿಗಳು ಇವೆ, ಅವುಗಳ ಅನುಷ್ಠಾನದಲ್ಲಿ ಸಮಸ್ಯೆ ಎದುರಾಗುತ್ತಿವೆ ಎಂಬುದು. ಆದರೆ ವಸ್ತುಸ್ಥಿತಿ ಇದಲ್ಲ ಎಂದು ನಾನು ಹೇಳುತ್ತೇನೆ. ಅನುಷ್ಠಾನ ಮಾಡಲು ಆಗದಂತಹ ನೀತಿಗಳು 'ಒಳ್ಳೆಯ' ನೀತಿಗಳಾಗಿರಲು ಸಾಧ್ಯವಿಲ್ಲ. ಅವು ಏನಿದ್ದರೂ ನಮ್ಮ ಬಯಕೆಯ ಪಟ್ಟಿಗಳಾಗುತ್ತವೆ. ನೀತಿಯೊಂದನ್ನು ಅನುಷ್ಠಾನ ಮಾಡಬೇಕೆಂದರೆ, ಅದರ ಜತೆಗೆ ನೀತಿ ಅನುಷ್ಠಾನಕ್ಕೆ ಅನುಕೂಲ ಕಲ್ಪಿಸುವ ಪರಿಸ್ಥಿತಿಗಳ ನಿರ್ಧಾರಗಳೂ ಬೆರೆತಿರಬೇಕು (ಅಂದರೆ ನೆರವಾಗುವ ನೀತಿಗಳು). ಇದರಿಂದ ಆ ನೀತಿ ಸುಲಭವಾಗಿ ಅನುಷ್ಠಾನವಾಗುತ್ತದೆ. ಪ್ರಸ್ತುತ 'ಏನು ಬದಲಾವಣೆ ಆಗಬೇಕು' ಎಂಬುದನ್ನು ನೀತಿ ನಿರೂಪಕರಿಗೆ ಬಿಡಲಾಗಿದ್ದರೆ, 'ಹೇಗೆ' ಬದಲಾವಣೆ ಮಾಡಬೇಕು ಎಂಬುದನ್ನು ತಳಮಟ್ಟದಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ವಹಿಸಲಾಗಿದೆ. ಪೂರಕ ವಾತಾವರಣ ಇಲ್ಲದೇ ಉದ್ಯೋಗಿಗಳು ಈ ನೀತಿಗಳನ್ನು ಅನುಷ್ಠಾನ ಮಾಡಲು ಹೆಣಗಾಡುತ್ತಿದ್ದಾರೆ ಹಾಗೂ ವಿಫಲವಾದರೆ ಅನುಷ್ಠಾನದಲ್ಲಿ ವೈಫಲ್ಯ ಎಂಬ ದೂರಿಗೆ ಒಳಗಾಗಿ ಅದರ ಹೊಣೆಯನ್ನೂ ಹೊರುತ್ತಾರೆ. ಶೈಕ್ಷಣಿಕ ಬದಲಾವಣೆ ಕುರಿತ ದಶಕಗಳ ಸಂಶೋಧನೆಯು 'ಹೇಗೆ' ಎಂಬುದಕ್ಕಿಂತ 'ಏನು' ಎಂಬುದೇ ಹೆಚ್ಚು ಸುಲಭ ಎಂಬುದನ್ನು ನಮಗೆ ಹೇಳಿಕೊಟ್ಟಿದೆ. ಕುತೂಹಲದ ವಿಷಯವೆಂದರೆ, 'ಹೇಗೆ' ಎಂಬುದನ್ನು ನಾವು ಅರಿತುಕೊಂಡಾಗ, 'ಏನು' ಎಂಬುದು ತನ್ನಿಂತಾನೇ ಬದಲಾವಣೆಯಾಗುತ್ತದೆ (ಅದು ಇನ್ನೊಂದು ಕತೆ!). ಇಂಥ ಶೈಕ್ಷಣಿಕ ಬದಲಾವಣೆಯ ಸಂಶೋಧನೆಗಳನ್ನು ಅರ್ಥಮಾಡಿಕೊಳ್ಳದೇ ರೂಪುಗೊಳ್ಳುವ ನೀತಿಗಳು ನೋಡಲು ಒಳ್ಳೆಯವು; ಆದರೆ ಜಗತ್ತಿನಾದ್ಯಂತ ನಡೆದ ಸಂಶೋಧನೆಯ ಆಧಾರದಲ್ಲಿ ಹೇಳಬೇಕಾದರೆ, ಅವು ಅನುಷ್ಠಾನ ಮಾಡಲು ಸಾಧ್ಯವಿಲ್ಲದಂಥವು. ಶೈಕ್ಷಣಿಕ ಬದಲಾವಣೆ ಅರಿಯದೇ ಮಾಡುವ ಅತ್ಯುತ್ತಮ ಉದ್ದೇಶದ ನೀತಿಗಳು, ನೀತಿ ನಿರೂಪಕರಿಂದ ಹೊಣೆಯನ್ನು ಉದ್ಯೋಗಿಗಳ ಮೇಲೆ ಹಾಕಿ ಸಹಜವಾಗಿಯೇ 'ಅನುಷ್ಠಾನ ವೈಫಲ್ಯ' ಉಂಟುಮಾಡುತ್ತಿವೆ.

ಈಗ ಈ ಹೊರೆಯನ್ನು ನೀತಿ ನಿರೂಪಕರ ಮೇಲೆ ಹಾಕುವ ಸಮಯ ಬಂದಿದೆ. ಈ ಹೊರೆ ಎಂಬುದು ಏನು? ಅನುಷ್ಠಾನ ಮಾಡಲಾಗುವಂಥ ನೀತಿಗಳು, ಸಾಮರ್ಥ್ಯವರ್ಧಕ ಅನುಕೂಲಗಳನ್ನು ಕಲ್ಪಿಸುವ ಯಾವುದು ಫಲದಾಯಕ ಮತ್ತು ಹೇಗೆ ಎಂಬುದನ್ನು ತಿಳಿಸುವ ನೀತಿಗಳು ಬರಬೇಕು. ಶೈಕ್ಷಣಿಕ ಬದಲಾವಣೆ ಕುರಿತ ಸಂಶೋಧನೆಯನ್ನು ನೀತಿ ನಿರೂಪಕರು ಅರಿಯಬೇಕು, ಶೈಕ್ಷಣಿಕ ಬದಲಾವಣೆಯ 'ಏನು', 'ಹೇಗೆ' ಹಾಗೂ 'ಯಾರು' ಎಂಬುದಕ್ಕೆ ಉತ್ತರ ಕೊಡಬೇಕು; ಮತ್ತು ಶೈಕ್ಷಣಿಕ ಬದಲಾವಣೆ ತರುವ ಸುಗಮಕಾರರ ಸಮುದಾಯವೊಂದನ್ನು ಸೃಷ್ಟಿಸಬೇಕು.

**ಶಶಿ ನಾಯರ್** ಐಐಟಿ ಮದ್ರಾಸ್‌ನಿಂದ ಸಿವಿಲ್ ಎಂಜಿನಿಯರ್ ಹಾಗೂ ಐಐಎಂ ಬೆಂಗಳೂರಿನಿಂದ ಎಂಬಿಎ ಪದವಿ ಪಡೆದಿದ್ದಾರೆ. ಮಾಹಿತಿ ತಂತ್ರಜ್ಞಾನ ತರಬೇತಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ 17 ವರ್ಷ ಕೆಲಸ ಮಾಡಿದ್ದಾರೆ. ಈ ಪೈಕಿ 14 ವರ್ಷಗಳ ಕಾಲ ಸಿಇಒ ಆಗಿದ್ದರು. 2006ರಿಂದಲೂ ಅವರು ಅಜೀಂ ಪ್ರೇಂಜಿ ಪ್ರತಿಷ್ಠಾನದ ಜತೆ ಕೆಲಸ ಮಾಡುತ್ತಿದ್ದಾರೆ. ಸರ್ಕಾರಿ ಶಾಲೆ ಶಿಕ್ಷಣ ವ್ಯವಸ್ಥೆ ಜತೆ ಕೆಲಸ ಮಾಡಿದ ಅನುಭವವಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆ ತಂದಿರುವ ಹಲವು ಕಾರ್ಯಕ್ರಮಗಳಲ್ಲಿ ಅವರು ಭಾಗಿಯಾಗಿದ್ದಾರೆ. ಪ್ರಸ್ತುತ ಅವರು ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶೈಕ್ಷಣಿಕ ಬದಲಾವಣೆ, ಗುರುತಿಸುವಿಕೆ, ಶಿಕ್ಷಣ ವ್ಯವಸ್ಥೆ ಬಲಗೊಳಿಸುವುದು, ಶಾಲಾ ನಾಯಕತ್ವ ಹಾಗೂ ನಿರ್ವಹಣೆ–ಇವು ಅವರ ಆಸಕ್ತಿಯ ಕ್ಷೇತ್ರಗಳಾಗಿವೆ. ಅವರ ಇ–ಮೇಲ್: shashi@azimpremjifoundation.org



# ಸಮಾವೇಶಿ ಶಿಕ್ಷಣ: ಮುಂದಿರುವ ದಾರಿ

ಪ್ರಮೀಳಾ ಬಾಲಸುಂದರಮ್

"ಸಮಾವೇಶಿ ಶಿಕ್ಷಣ" (Inclusive Education) ಎಂಬ ಪದಕ್ಕೆ ಹೆಚ್ಚು ಕಡಿಮೆ ಜಾಗತಿಕ ಮಟ್ಟದಲ್ಲಿ ಸರ್ವಸಮ್ಮತಿ ಸಿಕ್ಕಿದ್ದರೂ 'ಸಮಾವೇಶನ' ಪ್ರಕ್ರಿಯೆಯನ್ನು ವ್ಯಾಖ್ಯಾನಿಸುವುದು ಹಾಗೂ ರೂಢಿಗೆ ತಂದಿರುವ ಬಗ್ಗೆ ಒಂದಷ್ಟು ಭಿನ್ನತೆ ಇರುವುದು ನಿಜ. ಮಕ್ಕಳನ್ನು ಬೇರೆ ಬೇರೆ ಇರಿಸುವ ನೀತಿಗಳು ಹಾಗೂ ರೂಢಿಗತ ವಿಧಾನಗಳನ್ನು ವಿರೋಧಿಸಿ ಸವಾಲಾಗಿ ಸ್ವೀಕರಿಸುವ ನಿಟ್ಟಿನಲ್ಲಿ ಸಮಾವೇಶಿ ಶಿಕ್ಷಣ ಪರಿಕಲ್ಪನೆಯು ರೂಪುಗೊಂಡಿದೆ ಹಾಗು ಮುಖ್ಯವಾಹಿನಿಯ ಶಾಲೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳನ್ನು ಈಡೇರಿಸಬಹುದಾದ ಪರಿಣಾಮಕಾರಿ ವಿಧಾನವಾಗಿದೆ. ಇನ್ನೂ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಶಿಕ್ಷಣ, ಉದ್ಯೋಗ, ಗ್ರಾಹಕ, ಮನೋರಂಜನೆ, ಸಮುದಾಯ ಹಾಗೂ ಇನ್ನಾವುದೇ ನಿತ್ಯದ ಸಾಮಾಜಿಕ ರಂಗದ ಚಟುವಟಿಕೆಗಳಲ್ಲಿ ಅಸಮರ್ಥ ವ್ಯಕ್ತಿಗಳು ಪಾಲ್ಗೊಳ್ಳುವ ಅವಕಾಶ ಕಲ್ಪಿಸುವುದೇ 'ಸಮಾವೇಶನ'. ಇದರಲ್ಲಿ ಬೌದ್ಧಿಕ ಅಸಾಮರ್ಥ್ಯವುಳ್ಳ ವ್ಯಕ್ತಿಗಳೂ ಸೇರುತ್ತಾರೆ.

ಅಸಮರ್ಥ ವ್ಯಕ್ತಿಗಳು ಅದರಲ್ಲೂ ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ವ್ಯಕ್ತಿಗಳಿಗೆ ಹೊಂದಿಕೆಯಾಗುವ ಜೀವನ ಶೈಲಿಗಳನ್ನು ರೂಪಿಸಲು ಮಾಡಿದ ಹುಡುಕಾಟದಲ್ಲಿ ಅನೇಕ ಮೈಲಿಗಲ್ಲುಗಳನ್ನು ಕ್ರಮಿಸಲಾಗಿದೆ. ಹಾಗೂ ಯುಎನ್‌ಸಿಆರ್‌ಪಿಡಿ (ಯುನೈಟೆಡ್ ನೇಷನ್ಸ್ ಕನ್ವೆನ್ಷನ್ ಆನ್ ದಿ ರೈಟ್ಸ್ ಆಫ್ ಪರ್ಸನ್ಸ್ ವಿತ್ ಡಿಸ್‌ಅಬಿಲಿಟೀಸ್) ಇದರಲ್ಲಿ ಒಂದು.

ಕಳೆದ ಒಂದು ದಶಕದಲ್ಲಿ ಬೌದ್ಧಿಕ ಅಸಾಮರ್ಥ್ಯವುಳ್ಳ ಮಕ್ಕಳ ಅಗತ್ಯಗಳನ್ನು ಈಡೇರಿಸಲು ನಡೆಯುತ್ತಿರುವ ಒಟ್ಟಾರೆ ಕಾರ್ಯತಂತ್ರಗಳು ತೀವ್ರ ಗತಿಯಲ್ಲಿ ಬದಲಾವಣೆ ಕಾಣುತ್ತಿವೆ ಮತ್ತು ಭಾರತವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿರುವ ಬೆಳವಣಿಗೆಗಳ ಜೊತೆಜೊತೆಯಲ್ಲೇ ಹೆಜ್ಜೆ ಹಾಕಲು ಪ್ರಯತ್ನಿಸುತ್ತಿದೆ. ಹಾಗಿದ್ದರೂ, ಪಶ್ಚಿಮ ದೇಶಗಳಲ್ಲಿ ಸಾಫಲ್ಯ ಕಂಡ ಅಂಶಗಳನ್ನೇ ಮುಂದೆ ನಾವು ಸಂಪೂರ್ಣವಾಗಿ ಸ್ವೀಕರಿಸಿ, ಅಳವಡಿಸಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕು. ಇಲ್ಲಿಯವರೆಗೆ ಅನುಸರಿಸಿಕೊಂಡು ಬಂದಿರುವ ಅಭ್ಯಾಸವೆಂದರೆ ಒಂದು ಪ್ರತ್ಯೇಕ ಶಿಕ್ಷಣ ವ್ಯವಸ್ಥೆ ವಿಧಾನವನ್ನು ಬಳಸುವುದು. ಆದರೆ ಇದರಿಂದ ಆ ಮಕ್ಕಳು ಸಾಮಾಜಿಕವಾಗಿ ಪ್ರತ್ಯೇಕವಾಗುತ್ತಾರೆ ಹಾಗೂ ಇತರರಿಂದ ದೂರ ಉಳಿಯುತ್ತಾರೆ. ಒಂದು ಮಗುವು ಶಾಲೆಯನ್ನು ಪ್ರವೇಶಿಸುವ ಮೊದಲ ವರ್ಷವೇ ಆ ಮಗುವಿನ ಮೊತ್ತಮೊದಲ ಸಾಮಾಜಿಕ ಸಂಪರ್ಕ ಮತ್ತು ಮಗುವು ಅದರ ಪರಿಣಾಮಕ್ಕೆ ಒಳಗಾಗುವ ಕಾಲ. ಹೀಗಿರುವಾಗ ಶಿಕ್ಷಣದ ಆರಂಭದಲ್ಲಿಯೇ ಈ ಮಕ್ಕಳಿಗೆ ಪ್ರತ್ಯೇಕ ಜಗತ್ತನ್ನು ಸೃಷ್ಟಿ ಮಾಡಲಾಗುತ್ತಿದೆ. ಇದಕ್ಕೆ ಪ್ರತಿಯಾಗಿ "ಸಮಾವೇಶಿ ಶಿಕ್ಷಣವು" ಹೆಚ್ಚು ಸಮ್ಮಿಲಿತ ಸಮುದಾಯದ ನಿರ್ಮಾಣಕ್ಕೆ ಬುನಾದಿ ಹಾಕುತ್ತದೆ. ಇಲ್ಲ 'ಭಿನ್ನವಾಗಿರುವುದನ್ನು' ಯಥಾವತ್ ಸ್ವೀಕರಿಸಿ, ಮನುಕುಲದ ನೂರಾರು ಬಗೆಯಲ್ಲಿ ಇದೂ ಒಂದು ಎಂದು ಮಾನ್ಯತೆ ನೀಡಲಾಗುತ್ತದೆ. ಹೀಗಾಗಿ ಸಮಾವೇಶಿ ಶಿಕ್ಷಣವು ಬೇಕು ಎಂಬ ವಾದಕ್ಕೆ ಕೇವಲ ಶೈಕ್ಷಣಿಕ ಕಾರಣ ಮಾತ್ರ ಇರುವುದಿಲ್ಲ, ಅದಕ್ಕೆ ಪ್ರಬಲ ಸಾಮಾಜಿಕ ಹಾಗೂ ನೈತಿಕ ವಾದಗಳೂ ಇವೆ. ಈ ಮಕ್ಕಳನ್ನು ದೂರ ಇರಿಸುವುದರಿಂದಾಗುವ ಅಪಾಯಗಳು ಹಾಗೂ ಅದರ ದೂರಗಾಮಿ ಪರಿಣಾಮಗಳ ಬಗ್ಗೆ ಕೂಡ ನಾವು ಅರಿತಿರಬೇಕು.

ಹಾಗಾದರೆ, ನಮ್ಮ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಮಾವೇಶನದ ಅಂಶವನ್ನು ಹೇಗೆ ಅನುಷ್ಠಾನ ಮಾಡಬಹುದು? ಈ ಪ್ರಕ್ರಿಯೆಯಲ್ಲಿ ಹಲವು ಬಗೆಯ ಪರಿಸ್ಥಿತಿಗಳು ನಮ್ಮ ಮುಂದಿವೆ, ಅವುಗಳತ್ತ ಗಮನ ಹರಿಸಬೇಕು ಮತ್ತು ಪರಿಹರಿಸಬೇಕು. ಮೊಟ್ಟ ಮೊದಲಿಗೆ ನಾವು ಅರಿತುಕೊಳ್ಳಬೇಕಾದುದು ಏನೆಂದರೆ, ಸಮಾವೇಶಿ



ಶಿಕ್ಷಣವು ಶಾಲೆಯ ಗೇಟಿನೊಳಗೆ ಮಾತ್ರ ಸೀಮಿತ–ವಾಗುವುದಿಲ್ಲ. ಶಾಲೆಯ ಗೇಟನ್ನೂ ದಾಟಿ ತರಬೇತಿ, ಉದ್ಯೋಗ ಹಾಗೂ ಸೂಕ್ತವಾದ ಜೀವನ ಶೈಲಿ ಆರಿಸಿಕೊಳ್ಳಲು ಬೇಕಾದ ಅಗತ್ಯ ಅವಕಾಶಗಳೆಡೆಗೆ ಮುಂದೆ ಸಾಗುತ್ತದೆ.ಅಂದರೆ ಬೌದ್ಧಿಕ ಅಸಾಮರ್ಥ್ಯ ಇದ್ದವರು ಕೂಡ ತಮ್ಮ ಬದುಕನ್ನು ಪ್ರಭಾವಿಸುವ ಸಂಗತಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಶಕ್ತರಾಗುವಂತೆ ಇದು ಮಾಡಬೇಕು. ಇದರರ್ಥ ಜಾಗೃತ ಸಮಾಜ ನಿರ್ಮಾಣವಾಗಿ, ಮಗುವಿನ ಸ್ವಂತ ಕುಟುಂಬದಿಂದ ಹಿಡಿದು ಇಡಿ ಸಮುದಾಯದಿಂದ ಅದಕ್ಕೆ ಬೆಂಬಲ ಸಿಗಬೇಕು. ಎರಡನೆಯದಾಗಿ, ಬೌದ್ಧಿಕ ಸಾಮರ್ಥ್ಯವುಳ್ಳ ಮಕ್ಕಳ ತಂದೆತಾಯಿಯರಿಂದ ಕೆಲವೊಂದು ಪ್ರತಿಕ್ರಿಯೆಯನ್ನು ನಿರೀಕ್ಷಿಸ ಬೇಕಾಗುತ್ತದೆ. ಈ ಶಿಕ್ಷಣದ ಬಗ್ಗೆ ಅವರಲ್ಲಿ ಸಾಕಷ್ಟು ಆತಂಕ ಹಾಗೂ ತಪ್ಪು ತಿಳುವಳಿಕೆಗಳು ಇವೆ. ಕೊನೆಯದಾಗಿ, ಭಾರತದಲ್ಲಿ ಪಾಶ್ಚಿಮಾತ್ಯ ಶೈಕ್ಷಣಿಕ ಪದ್ಧತಿಯನ್ನು ಆಧರಿಸಿದ ಸುಸಜ್ಜಿತ ಶಾಲಾ ವ್ಯವಸ್ಥೆ ಇರುವುದರಿಂದ ಬೇರೆಯದೇ ಸ್ವರೂಪದ ಆರಂಭಿಕ ಹಂತವನ್ನು ನಾವು ಹೊಂದಿದ್ದೇವೆ.

ಕೆಲವೊಂದು ಪ್ರಮುಖ ಬದಲಾವಣೆಗಳನ್ನು ಮಾಡಲೇಬೇಕಾಗಿದೆ. ಆದರೆ ನಮ್ಮ ಮುಂದಿರುವ ಬಲು ದೊಡ್ಡ ಪ್ರಶ್ನೆಯೆಂದರೆ, ಈಗ ಚಾಲ್ತಿಯಲ್ಲಿ ಇರುವ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ತೊಡೆದು ಹಾಕಿ, ಹೊಸದಾದ ಕೆಲಸ ಕಾರ್ಯ ಮತ್ತು ಜವಾಬ್ದಾರಿಗಳನ್ನು ಮೊದಲಿನಿಂದ ಸ್ಥಾಪಿಸಬೇಕೇ? ಎಂಬುದು. ಇದನ್ನಂತೂ ಖಂಡಿತವಾಗಿಯೂ ನಾವು ಮಾಡಲು ಸಾಧ್ಯವಿಲ್ಲ. ಅಸಾಮರ್ಥ್ಯ ಹೊಂದಿರುವ ಮಕ್ಕಳಿಗೆ ವಿಶೇಷ ಶಿಕ್ಷಕರು, ವಿಶೇಷ ಸಂಪನ್ಮೂಲ ಹಾಗೂ ವಿಶೇಷ ಕಾರ್ಯವಿಧಾನದೊಂದಿಗೆ ಕೆಲವೊಮ್ಮೆ ವಿಶೇಷ ವಾತಾವರಣದ ಅಗತ್ಯವಿದೆ. ಈ 'ವಿಶೇಷ ವಿಧಾನಗಳು' ಎನ್ನುವ ವಿಧಾನಗಳು ಮಕ್ಕಳನ್ನು ಕೇಂದ್ರೀಕರಿಸಿದ ಉತ್ತಮವಾದ ಕಲಿಕಾ ಪದ್ಧತಿಗಳೇ ಆಗಿದ್ದು, ಅಸಾಮರ್ಥ್ಯ ಹೊಂದಿದ ಮಕ್ಕಳು ಮಾತ್ರವಲ್ಲ ಅನ್ಯಥಾ ಎಲ್ಲಾ ಮಕ್ಕಳು ಕೂಡ ಇದರಿಂದ ಹೆಚ್ಚು ಪ್ರಯೋಜನ ಪಡೆಯಬಲ್ಲರು. ಇಲ್ಲಿ ನಾವು ಗಮನ ಇರಿಸಬೇಕಾದ ಅಂಶವೆಂದರೆ ಭಿನ್ನ ಸ್ವರೂಪದ ಮಕ್ಕಳನ್ನು ಒಳಗೊಂಡು ಎಲ್ಲಾ ಮಕ್ಕಳೂ ಕಲಿಯುವಂಥ ಜತೆಗೆ ಅಸಾಮರ್ಥ್ಯ ಹೊಂದಿದ ಮಕ್ಕಳೂ ಕಲಿಯುವಂತಹ ಸೃಜನಶೀಲ ವಾತಾವರಣ ಏರ್ಪಡಿಸಬೇಕು. ಇಲ್ಲಿರುವ ಸವಾಲು ಕೇವಲ ವಿಶೇಷ ಶಿಕ್ಷಣತಜ್ಞರ ಕೌಶಲ್ಯವನ್ನು ಬಳಸಿಕೊಳ್ಳುವುದಷ್ಟೇ ಅಲ್ಲ, ವಾಡಿಕೆಯ ಶಾಲೆಗಳ ಶಿಕ್ಷಕರು ವಿಶೇಷ ಶಿಕ್ಷಣತಜ್ಞರ ಜೊತೆ ಸಂವಾದದ ಮೂಲಕ ಶಾಲಾ ಕೊಠಡಿಯಲ್ಲಿನ ಬೇರೆ ಬೇರೆ ಬಗೆಯ ಮಕ್ಕಳ ಅಗತ್ಯತೆಗೆ ಹೇಗೆ ಸ್ಪಂದಿಸುವುದು ಎಂಬುದನ್ನು ಕಲಿಯುವ ಬಗ್ಗೆ ನೆರವು ನೀಡುವುದೂ ಸೇರಿದೆ.

ಮಗುವನ್ನೇ ಕೇಂದ್ರವಾಗಿಟ್ಟು ಕೊಂಡ ಬೋಧನಾ ವಿಧಾನ ಮತ್ತು ಸ್ಫೂರ್ತಿದಾಯಕ ವಾತಾವರಣವನ್ನು ಕಲ್ಪಿಸುವುದೇ ಉತ್ತಮ ಬೋಧನೆಗೆ ಅಗತ್ಯವಾಗಿ ಬೇಕಾದ ಅಂಶ ಎಂಬುದನ್ನು ಹಲವು ಸಂಶೋಧನೆಗಳ ಮೂಲಕ ಕಂಡುಕೊಳ್ಳಲಾಗಿದೆ. ವಿಶೇಷ ಶಿಕ್ಷಕರು ಮಾತ್ರವೇ ವಿಶೇಷ ಕೌಶಲ್ಯಗಳನ್ನು ನಿರ್ವಹಿಸಬಲ್ಲರು ಎಂಬುದು ತಪ್ಪು. ಆದ್ದರಿಂದ, ಸಮಾವೇಶಿ ಶಿಕ್ಷಣ ಎಂಬುದು ವಿಶೇಷ ಶಿಕ್ಷಣವನ್ನು ಇನ್ನಷ್ಟು ಸಮಾವೇಶಿಯಾಗಿ ಮಾಡುವುದಲ್ಲ, ಬದಲಾಗಿ ಸಾಮಾನ್ಯ ಶಿಕ್ಷಣವನ್ನು ಇನ್ನಷ್ಟು ಸಮಾವೇಶಿಯಾಗಿ ಮಾಡುವುದು. ಇದರ ಬಗ್ಗೆ ಹಲವು ನುರಿತ ಶಿಕ್ಷಕರಿಗೆ ಚೆನ್ನಾಗಿ ಗೊತ್ತಿದೆ. ಇದರ ಆಧಾರದ ಮೇಲೆಯೇ ಹೊಸತನ್ನು ನಿರ್ಮಿಸಲು ಅವರು ತಮ್ಮ ಅನುಭವವನ್ನು ಬಳಸಿಕೊಳ್ಳುತ್ತಾರೆ. ಮಿಶ್ರ ಸ್ವರೂಪದ ವಿದ್ಯಾರ್ಥಿ ಗುಂಪಿನಲ್ಲಿ ಇದು ಯಶಸ್ವಿಯಾಗುತ್ತದೆ, ಇದೇ ಒಳ್ಳೆಯದು ಯಾಕೆಂದರೆ ಜೀವನದಲ್ಲೂ ನಮ್ಮ ಒಡನಾಟ ಬಗೆ ಬಗೆಯ ಜನರೊಂದಿಗೆ ಆಗುತ್ತದೆ, ಸಮಾವೇಶಿ ಶಿಕ್ಷಣ ವಿಧಾನವನ್ನು ಅನುಸರಿಸುತ್ತಿರುವ ಜಗತ್ತಿನ ಹಲವು ದೇಶಗಳ ಶಾಲೆಗಳಿಂದ ದೊರೆತ ಸಾಕ್ಷ್ಯಗಳ ಪ್ರಕಾರ ಕಂಡುಬಂದ ಅಂಶವೆಂದರೆ, ಅಸಾಮರ್ಥ್ಯ ಹೊಂದಿದ ಮಕ್ಕಳನ್ನು ಸಾಮರ್ಥ್ಯ ಹೊಂದಿದ ಮಕ್ಕಳು ಸಹಪಾಠಿಯಾಗಿ ಯಾವುದೇ ಅಳುಕು ಇಲ್ಲದೇ ಸ್ವೀಕರಿಸುತ್ತಾರೆ. ಹಾಗೆಂದಾಕ್ಷಣ ವಿಶೇಷ ಶಿಕ್ಷಕರನ್ನು ಅಲ್ಲಿಂದ ಹೊರ ಕಳುಹಿಸ ಬೇಕಾಗಿಲ್ಲ. ಅವರು ಮುಖ್ಯವಾಹಿನಿಯ ಶಾಲೆಗಳಲ್ಲಿ ಅಸಾಮರ್ಥ್ಯ ಹೊಂದಿದ ಮಕ್ಕಳ ಜೊತೆ ಕೆಲಸ ಮಾಡುವ ಬಗ್ಗೆ ನೆರವು ನೀಡಲು ಹೊಸ ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕಾಗುತ್ತದೆ. ಮುಖ್ಯವಾಹಿನಿ ಶಿಕ್ಷಕರ ಹೊಣೆಗಾರಿಕೆ ಬೇರೆ ಸ್ವರೂಪ ಪಡೆದುಕೊಳ್ಳುತ್ತದೆ ಹಾಗೂ ಅದಕ್ಕೆಲ್ಲ ಶಿಕ್ಷಣ ತಜ್ಞರ ಮಾರ್ಗದರ್ಶನ ಇರುತ್ತದೆ. ಅಸಮರ್ಥತೆಯನ್ನು ನಿಭಾಯಿಸಲು, ಪ್ರತಿಕ್ರಿಯಿಸಲು ಅದರ ಬಗ್ಗೆಯೇ ಹೆಚ್ಚಿನ ಜ್ಞಾನವನ್ನು ಪಡೆಯಲು ವಿಧಿ ವಿಧಾನಗಳನ್ನು



ಕಂಡುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಪಠ್ಯದ ಪರಿಷ್ಕರಣೆ, ಪಾಠಗಳು ಹಾಗೂ ಕಲಿಕಾ ವಿಧಾನಗಳ ಪುನರ್‌ಪರಿಶೀಲನೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ತರಗತಿಯಲ್ಲಿರುವ ಬಗೆ ಬಗೆಯ ಮಕ್ಕಳಿಗೆ ಪ್ರತಿಕ್ರಿಯಿಸಲು ಸೃಜನಶೀಲ ದಾರಿಗಳನ್ನು ಗುರುತಿಸುವುದು ಅಗತ್ಯ. ತರಗತಿಯಲ್ಲಿ ಕಲಿಕಾ ಅವಕಾಶಗಳು ಹೆಚ್ಚಾಗುತ್ತವೆ. ಅಷ್ಟೇ ಅಲ್ಲ ಮಕ್ಕಳು ತಮ್ಮ ಸಹಪಾಠಿಗಳನ್ನು ಸ್ವೀಕರಿಸಿ ಒಡನಾಡುವುದಲ್ಲದೆ ಅವರಿಗೆ ಬೆಂಬಲ ಒದಗಿಸುವ ಮೂಲಕ ಹೆಚ್ಚಿನದನ್ನು ಕಲಿಯುತ್ತಾರೆ. ಇಲ್ಲಿಂದಲೇ ಸಮಾವೇಶಿ ಶಿಕ್ಷಣದ ನಾಂದಿಯಾಗುತ್ತದೆ.

ಭಾರತದಲ್ಲಿ, ಸಿರಿವಂತ ಶೈಕ್ಷಣಿಕ ಸಂಸ್ಥೆಗಳು ಹಾಗೂ ಬಡವರ್ಗದ ಶಾಲೆಗಳ ನಡುವಿನ ವ್ಯತ್ಯಾಸ ಹೇಳ ತೀರದಷ್ಟು ಎದ್ದು ಕಾಣುತ್ತದೆ. ಈ ಶಾಲೆಗಳಲ್ಲಿ ಪ್ರಸ್ತುತ ಸ್ಥಿತಿಗತಿಯನ್ನು ಸಹ ಪರಿಶೀಲಿಸಬೇಕು. ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಅನುಪಾತ 1:40 ಅಥವಾ ಅದಕ್ಕಿಂತಲೂ ಹೆಚ್ಚಿರುವ ಕಡೆಗಳಲ್ಲಿ ಖಂಡಿತವಾಗಿಯೂ ನಾವು ಸಮಾವೇಶಿ ಶಿಕ್ಷಣವನ್ನು ಅನುಷ್ಠಾನ ಮಾಡುವುದಕ್ಕಿಂತ ಮೊದಲಿಗೆ ಕೂಲಂಕಷ ಅಧ್ಯಯನ ನಡೆಸಬೇಕು. ಇದರ ಮುಖ್ಯ ಭಾಗವು ಶಿಕ್ಷಕ ತರಬೇತಿ ಕಾರ್ಯಕ್ರಮದ ಒಂದು ಅಂಗಭಾಗವಾಗಬೇಕು. ಅದಕ್ಕೂ ಮಿಗಿಲಾಗಿ ಸೇವಾನಿರತ ಶಿಕ್ಷಕರ ತರಬೇತಿಗೆ ಒತ್ತು ಕೊಡಬೇಕು. ಶಾಲಾಧಾರಿತ ಶಿಕ್ಷಕರ ತರಬೇತಿಯನ್ನು ಸತತವಾಗಿ ಕೊಡುವುದು ಹಾಗೂ ಇಡೀ ಶಾಲೆಯನ್ನೇ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಒಂದು ಸಲ ಕೊಡುವ ಅಲ್ಪಾವಧಿ ತರಬೇತಿಗಿಂತಲು ಹೆಚ್ಚು ಪರಿಣಾಮ ಬೀರುತ್ತದೆ ಎಂಬುದು ಹಲವು ದೇಶಗಳಲ್ಲಿ ಕಂಡುಕೊಂಡ ಅನುಭವವಾಗಿದೆ. ಬಹುಹಂತದ ಬೋಧನೆ ಹಾಗೂ ಭಾಗಶಃ ಪಾಲ್ಗೊಳ್ಳುವಿಕೆಯಂಥ ತಂತ್ರಗಳು ಮತ್ತು ಶೈಕ್ಷಣಿಕ ಯೋಜನಾ ವಿಧಾನಗಳು ಹೋವಾರ್ಡ್ ಗಾರ್ಡಿನರ್ಸ್ ಸಿದ್ಧಾಂತದಲ್ಲಿ ಈಗಲೂ ಇವೆ. ಇವನ್ನು ಸಮಾವೇಶಿ ಶಿಕ್ಷಣದ ಯೋಜನೆ ತಯಾರಿಸುವಾಗ ಅಳವಡಿಸಿಕೊಳ್ಳಬೇಕು.

ಸಮಾವೇಶಿ ಶಿಕ್ಷಣದ ಬಗ್ಗೆ **ಸಮಾಧಾನ ಸಂಸ್ಥೆಯ** ವ್ಯಾಖ್ಯಾನವು ತನ್ನ ಪೂರ್ವಾನುಭವದಿಂದ ಉಂಟಾದದ್ದು ಬಳಿಕ ಸರ್ಕಾರಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು ಸಮಾವೇಶಿ ಶಿಕ್ಷಣದ ಬಗ್ಗೆ ಗಮನ ಕೇಂದ್ರೀಕರಿಸಿದಾಗ ಹೆಚ್ಚು ವೇಗ ಪಡೆದುಕೊಂಡಿತು. ವಿಕಲತೆ ಇಲ್ಲದ ಆರೋಗ್ಯವಂತ ಮಗುವನ್ನು ನಮ್ಮ ವಿಶೇಷ ಶಿಕ್ಷಣ ಘಟಕಕ್ಕೆ ಸೇರಿಸಿಕೊಳ್ಳುವುದಕ್ಕೆ ಏನೂ ತೊಂದರೆ ಇರುತ್ತಿರಲಿಲ್ಲ ಆದರೆ ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ಮಗುವನ್ನು ಸ್ಥಳೀಯ ಮುಖ್ಯವಾಹಿನಿ ಶಾಲೆಗೆ ಸೇರಿಸುವುದು ಕಠಿಣವಾಗಿತ್ತು. ಹೀಗಾಗಿ ನಾವು ಸಾಮರ್ಥ್ಯ ಹೊಂದಿದ ಹಾಗೂ ಅಸಾಮರ್ಥ್ಯಬಾಧಿತ ಮಕ್ಕಳನ್ನು ನಮ್ಮ ವಿಶೇಷ ಶಿಕ್ಷಣ ಘಟಕಕ್ಕೆ ಸೇರಿಸಿಕೊಳ್ಳಲು ಆರಂಭಿಸಿದರೂ ಅಸಾಮರ್ಥ್ಯ ಹೊಂದಿದ ಮಗು ಒಂದು ನಿರ್ದಿಷ್ಟ ಶೈಕ್ಷಣಿಕ ಮಟ್ಟ ತಲುಪಿ, ಮುಖ್ಯವಾಹಿನಿ ಶಾಲೆಗೆ ಸೇರಲು ಯೋಗ್ಯ ಆಗುವಂತೆ ಮಾಡಲು ಪ್ರಯತ್ನಿಸಿದೆವು. ಬೌದ್ಧಿಕವಾಗಿ ಸಾಮರ್ಥ್ಯ ಇಲ್ಲದ ಮಗುವು ಮುಖ್ಯವಾಹಿನಿಯ ಶಾಲೆಗೆ ಪ್ರವೇಶ ಪಡೆಯಲು ನಾವು ಹಾಕಿಕೊಂಡ ಕಾರ್ಯತಂತ್ರವು ಮೂರು ಮುಖ್ಯ ಅಂಶಗಳನ್ನು ಒಳಗೊಂಡಿತ್ತು: ಸಮಾವೇಶಿ ಶಿಕ್ಷಣದ ಕುರಿತಾಗಿ ಸಮುದಾಯದಲ್ಲಿರುವ ನಕಾರಾತ್ಮಕ ಅಭಿಮತ ಕಡಿಮೆ ಮಾಡುವುದು ಹಾಗೂ ತೊಡೆದು ಹಾಕುವುದು; ಮುಖ್ಯವಾಹಿನಿಯ ಶಾಲೆಗಳ ಮುಖ್ಯಸ್ಥರು ಹಾಗೂ ಶಿಕ್ಷಕರಲ್ಲಿ ಜ್ಞಾನದ ಕೊರತೆ ಹಾಗೂ ಮುಖ್ಯವಾಗಿ ಸಾಮರ್ಥ್ಯ ಹೊಂದಿದ ಮಕ್ಕಳ ತಂದೆತಾಯಿಗಳ ಮನೋಭಾವ. ಅವರೆಂತೂ ತಮ್ಮ ಮಕ್ಕಳು ಅಸಾಮರ್ಥ್ಯವಿರುವ ಮಕ್ಕಳ ಪಕ್ಕದಲ್ಲಿ ಕೂರಬಾರದು ಎಂಬ ಮನೋಭಾವ ಹೊಂದಿದ್ದರು. ಇದಲ್ಲದೇ ಅಸಮರ್ಥ ಮಕ್ಕಳಿಗೆ ಅನುಕೂಲಕರವಾದ ಕಟ್ಟಡಗಳ, ಆಟದ ಮೈದಾನ, ಶೌಚಾಲಯಗಳ ಕೊರತೆ (ವಿಶೇಷವಾಗಿ ಬಾಲಕಿಯರಿಗೆ) ಹಾಗೂ ಒಟ್ಟಾರೆಯಾಗಿ ಬೌದ್ಧಿಕ ಅಸಮರ್ಥ ಅಥವಾ ಇನ್ಯಾವುದೇ ಅಸಮರ್ಥತೆಯುಳ್ಳ ಮಕ್ಕಳಿಗೆ ಮೂಲಸೌಲಭ್ಯಗಳ ನೆರವು ಇಲ್ಲದಿರುವುದು ಹೆಚ್ಚು ಸಮಸ್ಯೆ ಮೂಡಿಸಿತ್ತು.

ಸ್ಥಳೀಯ ಶಾಲೆಗಳಲ್ಲಿ ಸಮಾವೇಶಿ ವಿಧಾನಗಳ ಜ್ಞಾನ ಹಾಗೂ ಜಾಗೃತಿ ಎಷ್ಟಿದೆ ಎಂದು ಅಳೆಯಲು ನಾವು ಕೆಳ ಸಾಮಾಜಿಕ–ಆರ್ಥಿಕ ಕಾಲೋನಿಗಳಲ್ಲಿ ನಡೆಸಿದ ಸಮೀಕ್ಷೆಯಿಂದಾಗಿ, ಕೆಲವು ಯೋಜನಾಬದ್ಧ ಕಾರ್ಯತಂತ್ರ ರೂಪಿಸಲು ನೆರವಾಯಿತು. ಸ್ಥಳೀಯ ಮುಖ್ಯವಾಹಿನಿ ಶಾಲೆಯ ಶಿಕ್ಷಕರಿಗೆ ಕಾರ್ಯಾಗಾರ ನಡೆಸಿ, ಸಮಾವೇಶಿ ಶಿಕ್ಷಣದ ಬಗ್ಗೆ ಅವರ ಅಭಿಪ್ರಾಯ, ಅದನ್ನು ತಮ್ಮ ಶಾಲೆಗಳಲ್ಲಿ ಅಳವಡಿಸಿಕೊಳ್ಳಲು ಒಪ್ಪಿಗೆ,ಸರ್ಕಾರವು ಮಾಡಿರುವ ಕಾರ್ಯನೀತಿಗಳು ಮತ್ತು ಕಾನೂನುಗಳ ಬಗ್ಗೆ ತಿಳುವಳಿಕೆ, ಧೋರಣೆ ಹಾಗೂ ಸಮಾವೇಶಿ ಶಿಕ್ಷಣ ಏನು ಆಗಿರಬೇಕು ಎಂಬ ಕುರಿತು ಅವರ ಅಭಿಪ್ರಾಯಗಳನ್ನು ದಾಖಲಿಸಲಾಯಿತು. ಇದರಿಂದಾಗಿ

ದೊರೆತ ಫಲಿತಾಂಶ ಅನೇಕ ವಿಷಯಗಳನ್ನು ತಿಳಿಸಿಕೊಟ್ಟಿತು. ಸಮಾವೇಶಿ ಶಿಕ್ಷಣದ ಪರಿಕಲ್ಪನೆಯ ಬಗ್ಗೆ ಸ್ಥಳೀಯ ಮುಖ್ಯವಾಹಿನಿ ಶಾಲೆಗಳಲ್ಲಿ ಅಗತ್ಯಾಧಾರಿತ ಕ್ರಮಬದ್ಧ ಕಾರ್ಯಾಗಾರಗಳನ್ನು ನಡೆಸಲು ನೆರವಾಯಿತು.

ಇದರಿಂದ ದೊರೆತ ಸಕಾರಾತ್ಮಕ ಫಲಿತಾಂಶವೇನೆಂದರೆ ನಾವು ಭೇಟಿಮಾಡಿ ಚರ್ಚೆ ನಡೆಸಿದ ಶಿಕ್ಷಕರು ಹಾಗೂ ತಂದೆತಾಯಿಗಳನ್ನುಳ್ಳ ಸುಗಮಕಾರರ ನೆರವಿನ ತಂಡವನ್ನು ರಚಿಸಲಾಯಿತು. ಆರಂಭಿಕ ತರಬೇತಿ ಹಾಗೂ ಕಾರ್ಯಾಗಾರಗಳಲ್ಲಿ ಕಡ್ಡಾಯವಾಗಿ ಹಾಜರಾದವರು ಸಮುದಾಯಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಅದರ ಪರ ಮಾತನಾಡಲು ಶುರು ಮಾಡಿದರು. ಇದರ ಜೊತೆಯಲ್ಲಿ ಸಮಾವೇಶಿ ಶಿಕ್ಷಣದ ಆಗುವ ಪ್ರಯೋಜನಗಳನ್ನು ಹಂಚಿಕೊಳ್ಳಲು ಮುಕ್ತ ಸಂವಾದವನ್ನು ಏರ್ಪಡಿಸಲಾಯಿತು. ಸಮಾವೇಶಿ ಶಿಕ್ಷಣದ ಬಗ್ಗೆ ಸೂತ್ರ ಗೊಂಬೆಯಾಟ, ಬೀದಿ ನಾಟಕ, ಅನೌಪಚಾರಿಕ ಮಾತುಕತೆ ಹಾಗೂ ಆರೋಗ್ಯ ಶಿಬಿರಗಳ ಮೂಲಕ ಸಮುದಾಯವನ್ನು ಅದರ ಪರ ಸಂವೇದನೆಗೊಳಿಸುವ ಅವಕಾಶಗಳನ್ನೂ ಕಂಡುಕೊಳ್ಳಲಾಯಿತು.

91 ಶಾಲೆಗಳಲ್ಲಿ ಸಮೀಕ್ಷೆಯನ್ನು ನಡೆಸಲಾಯಿತು ಮತ್ತು ನಮ್ಮ ವಿಶೇಷ ಶಿಕ್ಷಣ ಘಟಕದಿಂದ ಉತ್ತೀರ್ಣರಾಗಿ ಹೊರಬರುವ ಬೌದ್ಧಿಕ ಸಾಮರ್ಥ್ಯ ಹೊಂದಿರದ ಮಕ್ಕಳನ್ನು ಸೇರಿಸಿಕೊಳ್ಳುವಂತೆ ಮುಖ್ಯವಾಹಿನಿ ಶಾಲೆಗಳ ಜೊತೆಯಲ್ಲಿ ಉತ್ತಮ ಸಂಬಂಧ ಬೆಸೆಯಲಾಯಿತು. ಐದು ವರ್ಷಗಳಿಂದ ಹತ್ತು ವರ್ಷಗಳ ವಯಸ್ಸಿನ 16 ಮಕ್ಕಳನ್ನು ಮುನ್ಸಿಪಲ್ ಕಾರ್ಪೊರೇಶನ್ ಆಫ್ ದೆಹಲಿ ಶಾಲೆಗಳಲ್ಲಿ ಸೇರಿಸಿದ್ದೇವೆ.

ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ಮಗುವನ್ನು ಶಾಲೆಗೆ ಸೇರಿಸಿಕೊಳ್ಳುವುದಷ್ಟೇ ಸಮಾವೇಶನವಲ್ಲ .ಇದು ಅಂತಿಮ ಗುರಿಯೂ ಅಲ್ಲ ಇದೊಂದು ನಿರಂತರ ಪ್ರಕ್ರಿಯೆ. ಪರ್ಯಾಯ ಶಿಕ್ಷಣ ಪದ್ಧತಿಯನ್ನು ಸ್ಥಾಪಿಸುವುದು ಅಥವಾ ವೈಯಕ್ತಿಕ ಮಟ್ಟದ ಹಕ್ಕು ಒದಗಿಸುವುದೂ ಇದಲ್ಲ. ಸಮಾವೇಶಿ ಶಿಕ್ಷಣವೆಂದರೆ ಈಗಿರುವ ಪದ್ದತಿಯೊಳಗೆ ಇದನ್ನು ಜೋಡಿಸಿಬಿಡುವುದೂ ಅಲ್ಲ ಸಮಾವೇಶಿ ಶಿಕ್ಷಣವು ಅಗತ್ಯಕ್ಕೆ ತಕ್ಕಂತೆ ಹೊಂದಿಕೊಳ್ಳುವುದು,ಕಲಿಕೆಗೆ ಇದು ಒತ್ತು ಕೊಡುತ್ತದೆಯೇ ಹೊರತು ಕಲಿಸುವುದಕ್ಕೆ ಅಲ್ಲ. ನಮ್ಮ **ಸಮಾಧಾನ** ಸಂಸ್ಥೆಯ ಉಪಕ್ರಮಗಳು, ಸಮಾವೇಶಿ ಶಿಕ್ಷಣವನ್ನು ಜಾರಿಗೆ ತರಬಹುದು ಎಂಬುದನ್ನು ಸಾಧಿಸಿ ತೋರಿಸಿವೆ. ಎಲ್ಲಕ್ಕಿಂತ ಮಿಗಿಲಾಗಿ, ಇದು ಎಲ್ಲ ಮಕ್ಕಳಿಗೂ ಶೈಕ್ಷಣಿಕ ಅವಕಾಶಗಳನ್ನು ಸಮಾನವಾಗಿ ಕೊಡುವ ಒಂದು ಅವಕಾಶ ಎನ್ನಬಹುದು.

**References**


- *Lindqvist, B. (1994) Special Needs Education: Conceptual Framework, Planning and Policy Factors. Paper presented at the World Conference on Special Needs Education, Salamanca, Spain (From: NU News on Health Care in Developing Countries 2/95, vol.9)*
- *Ture Johnsson, (2003) Inclusive education CD developed for CBR Network's distance education programme*
- *Inclusion. What is in a name? Diane Richler. Past President, Inclusion International.*
- *“Inclusive Education is good common sense” by Pramila Balasundaram in Mentor magazine, 2011 Bangalore.*







**ಪ್ರಮೀಳಾ** ಇವರು 1981 ರಲ್ಲಿ ಸ್ಥಾಪಿತವಾದ *ಸಮಾಧಾನ* ಎಂಬ ಸರ್ಕಾರೇತರ ಸಂಸ್ಥೆಯ ಸ್ಥಾಪಕರು ಮತ್ತು ಈಗ ಅದರ ಮಾರ್ಗದರ್ಶಿಗಳಾಗಿದ್ದಾರೆ. ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ಮತ್ತು ಬಡತನದಿಂದ ಬಳಲುತ್ತಿರುವ ಮಕ್ಕಳ ಏಳಿಗೆಗೆ ಶ್ರಮಿಸುತ್ತಿದ್ದಾರೆ. ನವದೆಹಲಿಯಲ್ಲಿ ಇರುವ ಎರಡು ಕೇಂದ್ರಗಳು ಸಮನ್ವಯ ಶಿಕ್ಷಣ, ಅಸಾಮರ್ಥ್ಯದ ತ್ವರಿತ ಗುರುತಿಸುವಿಕೆ ಹಾಗೂ ಅ ಬಗ್ಗೆ ಕ್ರಮ ಕೈಗೊಳ್ಳುವುದು ಆದಾಯ ಸೃಷ್ಟಿ ಕೌಶಲ್ಯಗಳನ್ನು ಕುರಿತು ಕೆಲಸ ಮಾಡುತ್ತಿವೆ. ಅಸಾಮರ್ಥ್ಯ, ಬಡತನ ಹಾಗೂ ಮಹಿಳೆಯರ ಸಬಲೀಕರಣದ ಕುರಿತು ಮಾಡಿದ ಕೆಲಸಕ್ಕೆ ವಿಶ್ವಬ್ಯಾಂಕಿನಿಂದ ಹಾಗೂ ಸ್ಥಳೀಯ ಸಂಪನ್ಮೂಲ ಬಳಕೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಕುರಿತಂತೆ ಇನ್‌ಕ್ಲೂಶನ್ ಇಂಟರ್‌ನ್ಯಾಷನಲ್‌ನಿಂದ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಅವರ ಇ–ಮೇಲ್: lila.bala@gmail.com

# ಶಾಲಾ ಆವರಣವನ್ನು ಶೋಷಣೆ ಮುಕ್ತವಾಗಿಸಿ ಸುರಕ್ಷಿತತೆಗೆ ಅನುವುಗೊಳಿಸುವುದು

ಸೌಮ್ಯ ಭಾಸ್ಕರನ್
ಶೇಖರ್ ಶೇಷಾದ್ರಿ

ಪ್ರತಿದಿನ ವಿಶ್ವದಾದ್ಯಂತ ಸಾವಿರಾರು ಮಕ್ಕಳು ಶೋಷಣೆ ಮತ್ತು ನಿರ್ಲಕ್ಷ್ಯದ ಪ್ರಕರಣಗಳನ್ನು ಎದುರಿಸುತ್ತಾರೆ. ಇದನ್ನು ತಪ್ಪಿಸುವುದು ಕೇವಲ ಯಾವುದೋ ಒಂದು ಸಂಘ ಅಥವಾ ಸಂಸ್ಥೆಯಿಂದ ಆಗುವ ಕೆಲಸವಲ್ಲ. ಇದು ಎಲ್ಲ ಸಮುದಾಯಗಳ ಜವಾಬ್ದಾರಿಯಾಗಿದೆ. ಭಾರತವು ವಿಶ್ವದ 19ಶೇ ಮಕ್ಕಳನ್ನು ಹೊಂದಿದೆ. ದೇಶದ 13 ರಾಜ್ಯಗಳಲ್ಲಿನ 12447 ಮಕ್ಕಳ ಅಧ್ಯಯನದಿಂದ ಭಾರತದಲ್ಲಿಯ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಕಿರುಕುಳ ಮತ್ತು ಶೋಷಣೆಗೆ ಒಳಗಾಗುವ ಅಪಾಯದಲ್ಲಿರುವುದು ಕಂಡುಬಂದಿದೆ. ಮೂರರಲ್ಲಿ ಎರಡು ಭಾಗ ಮಕ್ಕಳು ದೈಹಿಕ ಕಿರುಕುಳಕ್ಕೆ ಒಳಗಾಗಿದ್ದರೆ ಸುಮಾರು ಶೇ50 ಕ್ಕಿಂತಲೂ ಹೆಚ್ಚು ಪ್ರಮಾಣದ ಮಕ್ಕಳು ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರಕಾರದ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದು ಕಂಡುಬಂದಿದೆ. ಅಲ್ಲದೆ ಪ್ರತಿ ಇಬ್ಬರಲ್ಲಿ ಒಂದು ಮಗು ಭಾವನಾತ್ಮಕ ಕಿರುಕುಳವನ್ನು ಎದುರಿಸುತ್ತಿರುವುದು ಕಂಡುಬಂದಿದೆ.

ಮಕ್ಕಳು ಹೆಚ್ಚಿನ ಸಮಯವನ್ನು ಶಾಲೆಯಲ್ಲಿ ಕಳೆಯುತ್ತಾರೆ ಮತ್ತು ಶಾಲೆಗಳು ಮಕ್ಕಳ ಬೆಳವಣಿಗೆಯನ್ನು ಪೋಷಿಸುವ ವಾತಾವರಣವನ್ನು ಹೊಂದಿದ್ದು ಇವುಗಳ ಜವಾಬ್ಧಾರಿ ಕೇವಲ ಶೈಕ್ಷಣಿಕ ಕಲಿಕೆಯಲ್ಲಿ ಮಕ್ಕಳನ್ನು ಅಭಿವೃದ್ಧಿ ಪಡಿಸುವುದು ಮಾತ್ರವಾಗಿರದೆ ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಅಭಿವೃಧ್ಧಿಗೆ ಕೂಡಾ ಸಹಾಯಕವಾಗಿರುವಂತೆ ಇರಬೇಕು. ಕುಟುಂಬವನ್ನು ಹೊರತುಪಡಿಸಿ ಹೊರಗಿನ ಸ್ನೇಹ ಸಂಬಂಧಗಳನ್ನು ಬೆಸೆಯುವ ಸ್ಥಾನ ಕೂಡಾ ಶಾಲೆಯಾಗಿರುತ್ತದೆ ಮತ್ತು ಈ ಆಂತರಿಕ ಸಂಬಂಧಗಳು ಯುವ ಜನತೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದ್ದರಿಂದ ಶಾಲೆಯ ಪ್ರತಿಕೂಲ ವಾತಾವರಣವು ಅವರ ಮೂಲ ಬೆಳವಣಿಗೆಯ ಮೇಲೆಯೇ ಪರಿಣಾಮ ಬೀರುವಂತಾಗುತ್ತದೆ. ಆದಕಾರಣ ಶಾಲೆಗಳು ಮಕ್ಕಳಲ್ಲಿ ಸದ್ಗುಣದ ಬೆಳವಣಿಗೆಯನ್ನು ಉಂಟುಮಾಡುವಂತಹ ಮತ್ತು ಇತರೆ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯಕವಾಗುವಂತಹ ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ. ಮಕ್ಕಳು ಮತ್ತು ಯುವ ಜನತೆಯು ಶೋಷಣೆಯಿಂದ ಮುಕ್ತರಾಗಿರಲು ಅವಶ್ಯಕವಾದ ರಕ್ಷಣೆ ಮತ್ತು ಸ್ವಾತಂತ್ರ್ಯವನ್ನು ಪೂರೈಸುವ ಸಂದರ್ಭದಲ್ಲಿ ಇವರ ಈ ಪಾತ್ರವು ತುಂಬಾ ಮುಖ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯೆಂದರೆ ಶಾಲೆಗೆ ಹೋಗುವ ಮಕ್ಕಳಿಗೆ ಉಂಟಾಗಬಹುದಾದ ಶೋಷಣೆಯ ವಿವಿಧ ರೂಪಗಳ ಕುರಿತಾಗಿ ಜ್ಞಾನವನ್ನು ಶಿಕ್ಷಕರಲ್ಲಿ ಬೆಳೆಸುವುದು ಮತ್ತು ಶೋಷಣೆಯ ಕುರಿತಾದಂತೆ ಶಾಲಾ ಶಿಕ್ಷಕರಿಗೆ ಇರುವ ಅಭಿಪ್ರಾಯವನ್ನು ಅತ್ಯಂತ ವಿವರವಾಗಿ ಕಂಡುಕೊಳ್ಳುವುದು. ದೈಹಿಕ, ಭಾವನಾತ್ಮಕ, ಲೈಂಗಿಕ ಕಿರುಕುಳ, ನಿರ್ಲಕ್ಷಗಳ ಬಗ್ಗೆ ಮತ್ತು ಅಲ್ಪಾವಧಿ, ದೀರ್ಘಾವಧಿಯ ಕಾಲದಲ್ಲಿ ಈ ರೀತಿಯ ಶೋಷಣೆಯ ಪರಿಣಾಮವನ್ನು ಶಿಕ್ಷಕರುಗಳಿಗೆ ತಿಳಿಸುವುದು ಮತ್ತು ಈ ಕುರಿತು ಅವರ ಜ್ಞಾನವನ್ನು ಹೆಚ್ಚಿಸುವ ಕೆಲಸ ಮಾಡುವುದು ತುಂಬಾ ಮುಖ್ಯವಾಗುತ್ತದೆ.

ಶಿಕ್ಷಕರು ಮಕ್ಕಳ ಜೊತೆಗೆ ದಿನನಿತ್ಯ ಸಂಪರ್ಕದಲ್ಲಿರುತ್ತಾರೆ ಮತ್ತು ಮಕ್ಕಳಲ್ಲಿ ಕಿರುಕುಳಕ್ಕೆ ಒಳಗಾಗಿರುವಂತಹ ದೈಹಿಕ ಮತ್ತು ನಡತೆಯಲ್ಲಿಯ ಸೂಚನೆಗಳನ್ನು ಗುರುತಿಸಲು ಅವರುಗಳು ಅತ್ಯಂತ ಸಮರ್ಥವಾದ ಸ್ಥಾನದಲ್ಲಿರುತ್ತಾರೆ. ಈ ರೀತಿಯ ಸೂಚನೆಗಳಲ್ಲಿ ಮುಖ್ಯವಾದವುಗಳೆಂದರೆ ಶೈಕ್ಷಣಿಕ ಸಾಧನೆಯಲ್ಲಿ ಗುರುತರವಾದ ಏರಿಳಿತ, ತೀವ್ರ ದ್ವೇಷ ಮತ್ತು ಸಿಟ್ಟು, ಚಟುವಟಿಕೆ ಇಲ್ಲದೆ ಇರುವುದು, ಏನನ್ನೋ ಕಳೆದುಕೊಂಡವರಂತಿರುವುದು, ಯಾರೊಂದಿಗೂ ಮಾತನಾಡದಿರುವುದು ಮುಂತಾದವುಗಳಾಗಿರುತ್ತವೆ. ಶಿಕ್ಷಕರು ಮಗುವಿನ ಕುಟುಂಬದಿಂದ ಕೂಡಾ ಕೆಲವು ಸೂಚನೆಗಳನ್ನು

ಪಡೆದುಕೊಳ್ಳಬಹುದಾಗಿದೆ. ಅಂದರೆ ಪೋಷಕರು ಮಗುವನ್ನು ಯಾವಾಗಲೂ ಹೀಗಳೆಯುತ್ತಿರುವುದು, ಮಗುವನ್ನು ಯಾವಾಗಲೂ ಅದರ ಕುಟುಂಬದ ಇತರರೊಡನೆ ಹೋಲಿಸಿ ಕೆಳ ದೃಷ್ಟಿಯಿಂದ ನೋಡುತ್ತಿರುವುದು ಮತ್ತು ಮಗುವಿನ ಕುರಿತು ಯಾವುದೇ ಜವಾಬ್ದಾರಿ ಇಲ್ಲದಂತೆ ಇರುವುದು ಹಾಗೂ ಮಗುವನ್ನು ಕುರಿತ ಯಾವುದೇ ವಿಚಾರವನ್ನು ಚರ್ಚಿಸಲು ತಯಾರಿಲ್ಲದಿರುವುದನ್ನು ಗಮನಿಸಿದರೆ ಮಗು ಶೋಷಣೆಗೊಳಗಾಗುತ್ತಿರುವುದನ್ನು ಗುರುತಿಸಬಹುದಾಗಿದೆ.

ವಿವಿಧ ಕಾರ್ಯಾಗಾರಗಳ ಮೂಲಕ ಶಿಕ್ಷಕರಿಗೆ ಅವರು ಮಕ್ಕಳಿಗೆ ಕಿರುಕುಳವಾಗುತ್ತಿರುವುದನ್ನು ಮಕ್ಕಳು ತಿಳಿಸಿದಾಗ ಅಥವಾ ತಾವೇ ಕಂಡುಕೊಂಡಾಗ ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ತಿಳಿಸಿಕೊಡಬೇಕು. ಮಕ್ಕಳಿಗೆ ಆದಷ್ಟೂ ಮುಜುಗರವಿಲ್ಲದಂತೆ ನೋಡಿಕೊಳ್ಳುವುದು ಬಹಳ ಮುಖ್ಯ ಹಾಗೆಯೇ ತಮಗೆ ಆಗಿರುವ ಕಿರುಕುಳದ ಕುರಿತಾಗಿ ಮಗು ಹೇಳಿಕೊಂಡಾಗ ಆ ಬಗ್ಗೆ ತೀವ್ರ ಪ್ರತಿಕ್ರಿಯೆ ನೀಡದೇ ಸಂಯಮ ತೋರುವುದನ್ನು ಕಲಿಸಬೇಕು. ಅಲ್ಲದೆ ತನಗೆ ಆಗಿರುವ ಕಿರುಕುಳವನ್ನು ಕಂಡುಕೊಂಡಿದ್ದಕ್ಕೆ ಮಕ್ಕಳಿಗೆ ಪ್ರೋತ್ಸಾಹಕ ನುಡಿಗಳನ್ನು ಧೈರ್ಯದ ಮಾತುಗಳನ್ನು ಹೇಳಬೇಕು. ಆಗಿರುವ ತಪ್ಪಿನಲ್ಲಿ ಅವನ/ಅವಳ ಪಾತ್ರ ಏನೂ ಇಲ್ಲ ಎಂಬುದನ್ನು ಮಕ್ಕಳಿಗೆ ಮನದಟ್ಟಾಗುವಂತೆ ಮಾಡಬೇಕು. ಮಗುವು ತನ್ನನ್ನು ಇದರಿಂದಾಗಿ ಮನೆಯಿಂದ ಹೊರಹಾಕಬಹುದು ಅಥವಾ ತನ್ನ ತಂದೆ ತಾಯಿಗಳನ್ನು ಪೋಲೀಸರು ಬಂಧಿಸಬಹುದು ಎಂಬ ಭಯವನ್ನು ಹೊಂದಿರುತ್ತದೆ. ಇದು ನಡೆಯುವುದಿಲ್ಲ ಎಂಬುದನ್ನು ಕುರಿತು ಮಗುವಿಗೆ ಧೈರ್ಯ ತುಂಬುವ ಕೆಲಸವಾಗಬೇಕು. ಒಂದು ವೇಳೆ ಈ ರೀತಿಯ ಭಯವನ್ನು ವ್ಯಕ್ತಪಡಿಸಿದರೆ ಶಿಕ್ಷಕನು ಈ ಕುರಿತ ಅಂಶಗಳನ್ನು ತಿಳಿದುಕೊಳ್ಳದಿದ್ದರೆ ಏನಾಗುತ್ತದೆ ಎಂಬುದನ್ನು ವಿವರಿಸಿ ಹೇಳಬೇಕು. ಇದಕ್ಕೆ ಸಂಬಂಧಿಸಿದಂತೆ ತಿಳಿದಿರಬೇಕಾದ ವಿಷಯವೆಂದರೆ 'ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣೆ ಕಾಯ್ದೆ, 2012' ಪ್ರಕಾರ ಈ ರೀತಿಯ ಅಪರಾಧಗಳು ನಡೆದಿರುವುದು ತಿಳಿದರೆ ಅದನ್ನು ತಪ್ಪದೇ ಪೋಲೀಸರಿಗೆ ತಿಳಿಸಬೇಕು. ತಿಳಿಸದೇ ಹೋದರೆ ಕಾನೂನಿನ ಪ್ರಕಾರ 6 ತಿಂಗಳ ಜೈಲು ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ.

ಪ್ರತಿಯೊಂದು ಶಾಲೆ ಕೂಡಾ ವರದಿ ಮಾಡುವ ಪ್ರಕ್ರಿಯೆಯನ್ನು ಅಲ್ಲದೆ ಮಕ್ಕಳಿಗೆ ಉಂಟಾಗುವ ಕಿರುಕುಳ ಹಾಗೂ ದೈಹಿಕ ಕಿರುಕುಳವನ್ನು ನಿಭಾಯಿಸಲು ಸ್ಪಷ್ಟವಾದ ಕ್ರಮಬದ್ಧ ಕಾರ್ಯಸರಣಿ (ಪ್ರೊಟೊಕಾಲ್) ಹೊಂದಿರಬೇಕು. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು (ಆರ್‌ಟಿಇ) ಕಾಯ್ದೆ, 2009, 'ದೈಹಿಕ ಶಿಕ್ಷೆ' ಮತ್ತು 'ಮಾನಸಿಕ ಕಿರುಕುಳ'ವನ್ನು ನಿಷೇಧಿಸುತ್ತದೆ ಮತ್ತು ಇದನ್ನು ಶಿಕ್ಷಾರ್ಹ ಅಪರಾಧವಾಗಿ ಪರಿಗಣಿಸುತ್ತದೆ. ಶಾಲೆಗಳು ಯಾರಿಗೆ ಈ ಬಗ್ಗೆ ತಿಳಿಸಬೇಕೋ ಅವರಿಗೆ ತಪ್ಪದೇ ತಿಳಿಸುವುದಕ್ಕೆ ಹಾಗೂ ಈ ಕುರಿತು ಸಮಾಲೋಚನೆಯನ್ನು ನಡೆಸುವುದಕ್ಕೆ ಹಾಗೂ ವಿದ್ಯಾರ್ಥಿಗಳ ಸ್ಥಿತಿಗತಿಯನ್ನು ತಿಳಿದುಕೊಳ್ಳ ಬಯಸುವವರಿಗೆ ವಿವರವಾಗಿ ಇದರ ಬಗ್ಗೆ ತಿಳಿಸುವುದಕ್ಕೆ ಸರಿಯಾದ ಪ್ರಕ್ರಿಯೆಗಳನ್ನು ಹೊಂದಿರಬೇಕು.

ಮಕ್ಕಳು ಶಾಲೆಯ ವ್ಯಕ್ತಿಯೊಬ್ಬರು ತನಗೆ ಕಿರುಕುಳ ನೀಡುತ್ತಿದ್ದಾರೆ ಎಂಬುದನ್ನು ತಿಳಿಸಿದಾಗ ಅದು ನಿಜಕ್ಕೂ ತುಂಬಾ ನೋವನ್ನುಂಟು ಮಾಡುವಂತಹ ವಿಷಯ. ಈ ರೀತಿಯ ಸ್ಥಿತಿಯಲ್ಲಿ ಮಕ್ಕಳಿಗೆ ವಿಶೇಷವಾದ ರಕ್ಷಣೆ ನೀಡಬೇಕಾಗುತ್ತದೆ ಮತ್ತು ಮಕ್ಕಳಿಗೆ ಇದನ್ನು ಕುರಿತು ದೂರು ನೀಡಲು ಹೆಚ್ಚು ಧೈರ್ಯ ಬೇಕು ಎಂಬುದು ಗಮನದಲ್ಲಿರಬೇಕು. ಶಾಲೆಯ ಯಾವುದೇ ಸಿಬ್ಬಂದಿಯ ಬಗ್ಗೆ ದೂರು ಬಂದಾಗ ಶಿಕ್ಷಕರು ಶಾಲಾ ಕಾರ್ಯನೀತಿ ಮತ್ತು ಪ್ರಕ್ರಿಯೆಯನ್ನು ಅನುಸರಿಸಬೇಕು.

ಮಕ್ಕಳ ಮೇಲಿನ ಕಿರುಕುಳವನ್ನು ಗುರುತಿಸುವುದು ಮತ್ತು ಅದನ್ನು ವರದಿ ಮಾಡುವುದು ಮಕ್ಕಳ ಮೇಲಿನ ಕಿರುಕುಳ ಹಾಗು ನಿರ್ಲಕ್ಷ್ಯ ಮರುಕಳಿಸದಂತೆ ನೋಡಿಕೊಳ್ಳಲು ಬಹುಮುಖ್ಯವಾಗಿರುತ್ತದೆ. ಅಲ್ಲದೆ ಇದು ಬೇಕಾದುದು ಕೂಡಾ ತುಂಬಾ ಮುಖ್ಯ. ಶಾಲೆಗಳಲ್ಲಿ ಮಕ್ಕಳ ಸಬಲೀಕರಣಕ್ಕಾಗಿ ಸೂಕ್ತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಕಿರುಕುಳದ ಸಮಸ್ಯೆಗಳು ಮರುಕಳಿಸದಂತೆ ಹಾಗೂ ಅಂತಹ ಸಮಸ್ಯೆಯನ್ನು ಎದುರಿಸಲು ಸಮರ್ಥವಾಗುವಂತೆ ಮಕ್ಕಳಲ್ಲಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಶಾಲೆಗಳು ಹೊಂದಿರಬೇಕು.

ಚೆನ್ನೈನಲ್ಲಿರುವ ಒಂದು ಸರ್ಕಾರೇತರ ಸಂಸ್ಥೆ ತುಳಿರ್ (TULIR) ನಡೆಸಿರುವ ಸಮೀಕ್ಷೆಯಲ್ಲಿ ಭಾಗವಹಿಸಿದ 2211 ಮಕ್ಕಳಲ್ಲಿ, ಶೇ42 ರಷ್ಟು ಮಕ್ಕಳು ಒಂದಲ್ಲಾ ಒಂದು ರೀತಿಯ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದು ಕಂಡುಬಂದಿದೆ. ಆದ್ದರಿಂದ ಶಾಲೆಗಳಲ್ಲಿ ವೈಯಕ್ತಿಕ ಸುರಕ್ಷತೆಯ ಕಾರ್ಯಾಗಾರಗಳನ್ನು ನಿಯತವಾಗಿ ನಡೆಸಬೇಕಾಗಿರುವುದು ಕಡ್ಡಾಯವಾಗಿದೆ. ಇದರಿಂದ ಮಕ್ಕಳು ತಮ್ಮನ್ನು ತಾವು ಕಾಪಾಡಿಕೊಳ್ಳುವ ಅದರಲ್ಲೂ ಲೈಂಗಿಕ ಕಿರುಕುಳದ ವಿರುದ್ಧ ಜಾಗೃತರಾಗಿರುವುದನ್ನು ಕಲಿಸಿಕೊಡುತ್ತದೆ. ವೈಯಕ್ತಿಕ ರಕ್ಷಣೆಯ ಪಠ್ಯವು ಲೈಂಗಿಕ ಕಿರುಕುಳದ ಕುರಿತಾದ ಸರಿಯಾದ ಕಲಿಕೆ, ದೇಹದ ರಕ್ಷಣೆ, ಸುರಕ್ಷತೆ, ಅಸುರಕ್ಷಿತ

ಸ್ಪರ್ಶ, ಗೊಂದಲಕ್ಕೊಳಪಡಿಸುವ ಸ್ಪರ್ಶ ಮುಂತಾದ–ವುಗಳನ್ನು ತಿಳಿಸಿಕೊಡುತ್ತದೆ. ಅಸುರಕ್ಷಿತ ಸ್ಪರ್ಶಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಹಾಗೂ ಮಕ್ಕಳಿಗೆ ಕಿರುಕುಳ ನೀಡಬಹುದಾದಂತವರನ್ನು ಗುರುತಿಸುವುದು, ದುಷ್ಟರನ್ನು ಎದುರಿಸುವ ರೀತಿಯನ್ನು ಇದು ತಿಳಿಸಿಕೊಡುತ್ತದೆ.

ಈ ರೀತಿಯ ವೈಯಕ್ತಿಕ ರಕ್ಷಣೆಯ ಶಿಕ್ಷಣದಿಂದಾಗಿ ಮಕ್ಕಳಿಗೆ ತಮ್ಮ ರಕ್ಷಣೆಗೆ ತಾವೇ ಹೊಣೆ ಎಂಬ ಭಾವನೆ ಮೂಡುತ್ತದೆ ಹಾಗೂ ಒಂದು ವೇಳೆ ಅವರು ಕಿರುಕುಳಕ್ಕೆ ಒಳಗಾದಲ್ಲಿ ಅಪರಾಧಿ ಮನೋಭಾವ ಮೂಡುವಂತೆ ಮಾಡುತ್ತದೆ, ಅಪರಿಚಿತರ ಬಗ್ಗೆ ಭಯ, ಒತ್ತಡ ಹಾಗೂ ಈ ಕುರಿತಂತೆ ವಿಪರೀತ ಕಲ್ಪನೆ ಮಾಡಿಕೊಳ್ಳುವ ಸಂಭವ ಇರುತ್ತದೆ ಎಂದೆಲ್ಲಾ ಟೀಕೆಗಳಿದ್ದರೂ ಹೆಚ್ಚಿನ ಅಧ್ಯಯನಗಳು ಕಂಡುಕೊಂಡಿರುವ ಪ್ರಕಾರ ಈ ರೀತಿಯ ಕಾರ್ಯಕ್ರಮದಲ್ಲಿ ತರಬೇತಿ ಪಡೆದ ಮಕ್ಕಳು ಕಿರುಕುಳದ ಸಮಯದಲ್ಲಿ ತರಬೇತಿಯಲ್ಲಿ ಪಡೆದ ರಕ್ಷಣಾತ್ಮಕ ಅಂಶಗಳನ್ನು ಉಪಯೋಗಿಸಿರುವುದು ಹಾಗೂ ಹಾಗೆ ಮಾಡುವ ಮೂಲಕ ಹೆಚ್ಚು ಆತ್ಮವಿಶ್ವಾಸವನ್ನು ಹೊಂದಿರುವುದು ಕಂಡುಬಂದಿದೆ.

ಯೌವನಕ್ಕೆ ಪದಾರ್ಪಣೆ ಮಾಡುತ್ತಿರುವ ಮಕ್ಕಳು ಮತ್ತು ಹದಿಹರೆಯದ ಮಕ್ಕಳಿಗೆ ಕೆಲವೊಂದು ಪ್ರಮುಖ ವಿಷಯಗಳ ಬಗ್ಗೆ ಹೇಳಿಕೊಡಬೇಕಾದುದು ಅವರು ಜೀವನದ ಪಯಣದಲ್ಲಿ ಯಶಸ್ವಿಯಾಗಿ ಸಾಗಲು ಅತ್ಯಗತ್ಯವಾಗಿದೆ. ಜೀವನ ಕೌಶಲ್ಯದ ತರಬೇತಿಯು ಒಂದು ಪರಸ್ಪರ ಪ್ರತಿಕ್ರಿಯೆ ಇರುವಂತಹ ಕಲಿಕೆಯಾಗಿದ್ದು ಇದು ಜ್ಞಾನ ಸಂಪಾದನೆ, ವರ್ತನೆ ಮತ್ತು ನಮ್ಮ ಜೀವನವನ್ನು ಕುರಿತ ಜವಾಬ್ದಾರಿಯನ್ನು ತಾವೇ ಪಡೆದುಕೊಳ್ಳಲು ಅಗತ್ಯವಾಗಿರುವ ವರ್ತನೆಯನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ರೂಪಿಸುತ್ತದೆ. ಆರೋಗ್ಯಕರ ಜೀವನದ ಆಯ್ಕೆ, ಕೆಟ್ಟ ಒತ್ತಡಗಳಿಗೆ ಪ್ರತಿರೋಧ ಒಡ್ಡುವುದು ಹಾಗೂ ಅಪಾಯಕಾರಿಯಾದ ಗುಣಗಳನ್ನು ಕಡಿಮೆ ಮಾಡಿಕೊಳ್ಳುವ ತರಬೇತಿಯನ್ನು ನೀಡುತ್ತದೆ. ಇದು ಕೆಲವು ಪ್ರಮುಖ ಕೌಶಲ್ಯಗಳನ್ನು ಒಳಗೊಂಡಿರುತ್ತದೆ. ಅಂದರೆ ಇದು ಸಮಸ್ಯೆ ಪರಿಹಾರ, ವಿಮರ್ಶಾತ್ಮಕ ಚಿಂತನೆ, ನಿರ್ಧಾರ ತೆಗೆದುಕೊಳ್ಳುವುದು, ಭಾವನೆಗಳ ಜೊತೆ ಹೊಂದಾಣಿಕೆ, ಅಂತರವ್ಯಕ್ತಿ ಕೌಶಲ್ಯ, ಸಂವಹನ, ಸಹಾನುಭೂತಿ ಮತ್ತು ಒತ್ತಡದ ಜೊತೆ ಹೊಂದಿಕೊಳ್ಳುವುದು ಮತ್ತು ಸ್ವಪ್ರಜ್ಞೆ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಜೀವನ ಶಿಕ್ಷಣ ಕೌಶಲ್ಯವು ಚೈತನ್ಯಶೀಲ ಪ್ರಕ್ರಿಯೆಯಾಗಿದ್ದು ಇದನ್ನು ಕೇವಲ ಮಾಹಿತಿ ಅಥವಾ ಚರ್ಚೆಯ ಮೂಲಕ ಕಲಿಯುವುದು ಸಾಧ್ಯವಿಲ್ಲ. ಇದನ್ನು ಪ್ರಾಯೋಗಿಕ ರೀತಿಯ ಕಲಿಕೆಯಿಂದ ಅಂದರೆ ನಾಟಕ, ಆಟಗಳು ಮತ್ತು ಕಥೆ ಹೇಳುವ ವಿಧಾನಗಳ ಮೂಲಕ ಯಶಸ್ವಿಯಾಗಿ ಕಲಿಯಬಹುದು.ಈ ರೀತಿಯ ಚಟುವಟಿಕೆಯಲ್ಲಿ ಪ್ರಕ್ರಿಯೆಗಳು ಮತ್ತು ಸಂಬಂಧಿಸಿದ ಅಂಶಕ್ಕೆ ತಕ್ಕಂತಹ ವಿಷಯವು ಸೇರಿಕೊಂಡಿರುತ್ತದೆ. ಕಲಿಕೆಯ ಮೂಲಕ ಹೊರ ಜಗತ್ತಿನ ಜೊತೆಗೆ ಸಂಪರ್ಕ ಬೆಳೆಸಿಕೊಳ್ಳುವುದು ಹಾಗೂ ಸ್ವವ್ಯಕ್ತಿತ್ವವನ್ನು ಕಂಡುಕೊಳ್ಳುವುದನ್ನು ಇಲ್ಲಿ ಮಾಡಲಾಗುತ್ತದೆ. ನಿಮ್ಹಾನ್ಸ್‌ನ ಜೀವನ ಕೌಶಲ್ಯ ಶಿಕ್ಷಣದ ಕಾರ್ಯಕ್ರಮದ ಮಾದರಿಯನ್ನು ಅನುಸರಿಸಿದ ಶಾಲಾ ಮಕ್ಕಳು ಶಾಲೆ ಮತ್ತು ಶಿಕ್ಷಕರ ಜೊತೆ ಉತ್ತಮವಾದ ಹೊಂದಾಣಿಕೆಯನ್ನು ಹೊಂದಿರುವುದು ಕಂಡುಬಂದಿದೆ. ಇವರನ್ನು ಆಧಾರ ಗುಂಪಿನಲ್ಲಿಯ ಮಕ್ಕಳಿಗೆ ಹೋಲಿಸಿದರೆ ಇವರಲ್ಲಿ ಜೀವನ ನಿಭಾಯಿಸುವ ಸಾಮರ್ಥ್ಯವು ಉನ್ನತವಾಗಿರುವುದು ಕಂಡುಬಂದಿದೆ.

ಮಕ್ಕಳನ್ನು ಶೋಷಣೆಯಿಂದ ತಪ್ಪಿಸಲು ಉಪಯುಕ್ತವಾದ ವೈವಿಧ್ಯಮಯ ಕೌಶಲ್ಯಗಳನ್ನು ಕಲಿಸ ಬೇಕಾದುದು ಅತ್ಯಗತ್ಯ ಅಂಶ. ಆದರೆ ಮಕ್ಕಳು ಹೊಂದಿಕೊಳ್ಳುವ ಹಾಗೂ ಸುರಕ್ಷಿತವಾಗಿರುವಂತಹ ವಾತಾವರಣವನ್ನು ಶಾಲೆಗಳು ಹೊಂದಿರಬೇಕಾದುದು ಕೂಡಾ ಅಷ್ಟೇ ಮುಖ್ಯವಾಗಿದ್ದು ಇದರಿಂದ ಮಕ್ಕಳು ಅವರು ತಮ್ಮ ಪೂರ್ಣ ಸಾಮರ್ಥ್ಯಕ್ಕೆ ಬೆಳೆಯಲು ಹಾಗೂ ಎಲ್ಲ ಆಘಾತ ತಡೆಯಬಲ್ಲ ಯೌವನದ ಹಂತಕ್ಕೆ ತಲುಪುವ ಅವಕಾಶವನ್ನು ನೀಡಬೇಕಾಗುತ್ತದೆ. ಫ್ಲೋರಿಡಾದಲ್ಲಿ ನಡೆದ ಒಂದು ಘಟನೆಯಲ್ಲಿ ಒಂದು ಮಗುವು ಅಂತರ್ಜಾಲದ ಬೆದರಿಕೆಯ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಇತ್ತೀಚೆಗೆ ನಾವೆಲ್ಲ ಓದಿದ್ದೇವೆ. ಈ ಘಟನೆಯಲ್ಲಿ ಅಪರಾಧಿಗಳನ್ನಾಗಿ 12 ಮತ್ತು 14 ವರ್ಷದ ಇಬ್ಬರು ಹೆಣ್ಣು ಮಕ್ಕಳನ್ನು ಬಂಧಿಸಲಾಗಿತ್ತು. ಈ ಘಟನೆಯು ಶಾಲೆಗಳಲ್ಲಿ ಬೆದರಿಕೆಯನ್ನೊಡ್ಡುವ ಹಾಗೂ ಒತ್ತಡವನ್ನುಂಟು ಮಾಡುವಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿರುವ ಅವಶ್ಯಕತೆಯನ್ನು ಸೂಚ್ಯವಾಗಿ ನಮಗೆ ತಿಳಿಸುತ್ತದೆ. ದಾದಾಗಿರಿ ವಿರೋಧಿ ಉಪಕ್ರಮಗಳು ಬಹುಮುಖ ವಿಧಾನಗಳನ್ನು ಒಳಗೊಂಡಿರಬೇಕು. ಇವು ತಡೆಯ ಮೌಲ್ಯಮಾಪನ ಮತ್ತು ಬೆದರಿಕೆಯ ಪ್ರಮಾಣ, ಮಧ್ಯ ಪ್ರವೇಶ ಮತ್ತು ತಡೆಯುವಿಕೆಯ ಪ್ರಯತ್ನಗಳ ವಿವಿಧ ಆಯಾಮಗಳನ್ನು ಒಳಗೊಂಡಿರಬೇಕು. ಸಮುದಾಯ–ದಲ್ಲಿರುವ ಪ್ರತಿಯೊಬ್ಬರೂ ಕೂಡ ದಾದಾಗಿರಿಯ ವಿರುದ್ಧ ಸಮನಾದ ಸಂದೇಶಗಳನ್ನು ಪಸರಿಸುವ ಪ್ರಯತ್ನ ಮಾಡಬೇಕು. ನೀತಿ ಸಂಹಿತೆ, ಶಾಲೆಯಲ್ಲಿಯ ನಿಯಮಗಳು, ಬೆದರಿಕೆ ವರದಿ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ಮಿಸುವ ಮೂಲಕ ದಾದಾಗಿರಿಯ ಪ್ರಕರಣಗಳಿಗೆ ಇಲ್ಲಿ ಜಾಗವಿಲ್ಲ ಎಂಬಂಥ ಸಮರ್ಪಕ ವಾತಾವರಣ ನಿರ್ಮಾಣವಾಗುವಂತೆ

ನೋಡಿಕೊಳ್ಳಬೇಕು. ಇವೆಲ್ಲ ಅಂಶಗಳು ವಿವಿಧ ಜಾಗೃತಿ ಕಾರ್ಯಾಗಾರಗಳ ಮೂಲಕ ಎಲ್ಲರಿಗೂ ತಲುಪುವಂತೆ ಮಾಡಬೇಕು. ಜೊತೆಜೊತೆಗೆ ಶಾಲಾ ವಾತಾವರಣದಲ್ಲಿರಬೇಕಾದ ಸಹನೆ, ಸ್ವೀಕಾರ ಮತ್ತು ಗೌರವದ ಭಾವನೆಗಳನ್ನು ಬಿತ್ತುವಂತಹ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಿರಬೇಕು.

ಮಕ್ಕಳಿಗೆ ಕಿರುಕುಳ ತಪ್ಪಿಸುವಲ್ಲಿ ಶಾಲೆಯ ಪಾತ್ರವನ್ನು ಗಮನಿಸಿದ ನಂತರ, ಮಕ್ಕಳ ರಕ್ಷಣೆಯ ವಿಷಯದಲ್ಲಿ ಶಾಲೆಯ ಪಾತ್ರ, ಜವಾಬ್ದಾರಿ ಮತ್ತು ರೂಢಿಯನ್ನು ಒಳಗೊಂಡಿರುವ ಮಕ್ಕಳ ರಕ್ಷಣಾ ಕಾರ್ಯನೀತಿಯನ್ನು ಜಾರಿಗೆ ತರಬೇಕಾಗುತ್ತದೆ. ಮಕ್ಕಳ ಹಿತಾಸಕ್ತಿಯ ದೃಷ್ಟಿಯಿಂದ ಇವುಗಳನ್ನು ನಾವುಗಳು ರೂಪಿಸುತ್ತಿರುವ ಸಂದರ್ಭದಲ್ಲಿ, ಈ ವಿಷಯದಲ್ಲಿ ಮಕ್ಕಳನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ಮತ್ತು ಅವರ ಅಗತ್ಯಗಳು ಹಾಗು ಅನುಭವಕ್ಕೆ ಸೂಕ್ತ ಗಮನ ಹಾಗು ಆದ್ಯತೆ ನೀಡಬೇಕು.

ಹಾಗೂ ಈ ವಿಷಯದ ಕುರಿತಂತೆ ಕುಟುಂಬ ಹಾಗೂ ಸಹಕಾರಿ ಸಮೂಹಗಳ ಬೆಂಬಲ ಪಡೆದುಕೊಳ್ಳ-ಬೇಕಾಗುತ್ತದೆ. ಹಾಗೂ ಇವೆಲ್ಲವುಗಳ ಕಾರಣದಿಂದಾಗಿ ಅಗತ್ಯ ವಿಷಯದ ಕಲಿಕೆಯನ್ನು ಮಕ್ಕಳಿಗೆ ಇದು ಸುಲಭವಾಗಿಸುತ್ತದೆ. ಮಕ್ಕಳ ಶೋಷಣೆ ಮತ್ತು ನಿರ್ಲಕ್ಷ್ಯ ಮುಂತಾದ ಅಂಶಗಳನ್ನು ತಡೆಯಲು ಉಪಯುಕ್ತವಾಗುವಂತಹ ಕಾರ್ಯಾಗಾರ-ಗಳನ್ನು ಪೋಷಕರಿಗಾಗಿ ಶಾಲೆಗಳು ಆಯೋಜಿಸಬೇಕು ಹಾಗೂ ಈ ಮೂಲಕ ಪೋಷಕರಿಗೆ ಪರಿಣಾಮಕಾರಿ ಶಿಸ್ತು, ಮಕ್ಕಳು-ಪೋಷಕರ ನಡುವಿನ ಸಂವಹನ ಮತ್ತು ಅಂತರ್ಜಾಲ ಸುರಕ್ಷತೆಯನ್ನು ಕುರಿತಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳುವಂತೆ ಮಾಡಬೇಕು. ಶಾಲೆಗಳು ಮತ್ತು ಸಮೂಹಗಳು ಪರಸ್ಪರ ಸಹಕಾರದಿಂದ ಮಕ್ಕಳ ಶೋಷಣೆ ಮತ್ತು ನಿರ್ಲಕ್ಷ್ಯ ಕುರಿತು ಸಾರ್ವಜನಿಕ ಜಾಗೃತಿ ಮೂಡಿಸುವಂತೆ ನೋಡಿಕೊಳ್ಳಬೇಕು. ಈ ಜನಜಾಗೃತಿಯ ಕಾರ್ಯಾಗಾರಗಳು ಮಕ್ಕಳ ಕಿರುಕುಳ ಪ್ರಕರಣಗಳು ಎಲ್ಲರ ಸಮಸ್ಯೆಯಾಗಿದ್ದು ಇದರ ನಿರ್ಮೂಲನೆ ಹಾಗೂ ಮುಂಜಾಗ್ರತೆಯು ಎಲ್ಲರ ಸಹಕಾರದಿಂದ ಮಾತ್ರ ಸಾಧ್ಯ ಹಾಗೂ ಇದು ಎಲ್ಲರ ಜವಾಬ್ಧಾರಿ ಎಂಬುದನ್ನು ಸಮೂಹಕ್ಕೆ ಮನದಟ್ಟು ಮಾಡಬೇಕು.

ನೆಲ್ಸನ್ ಮಂಡೇಲಾ ಅವರ ಹೇಳಿಕೆಯಂತೆ 'ಸುರಕ್ಷತೆ ಮತ್ತು ರಕ್ಷಣೆಯು ತಂತಾನೆ ಆಗುವುದಿಲ್ಲ ; ಇವು ಸಾಮೂಹಿಕ ಒಮ್ಮತದ ಮತ್ತು ಸಾರ್ವಜನಿಕರ ಒಟ್ಟಾಗುವಿಕೆಯಿಂದ ಮಾತ್ರ ಸಾಧ್ಯ. ನಮ್ಮ ಸಮಾಜದ ಅತ್ಯಂತ ದುರ್ಬಲ ನಾಗರಿಕರಾದ ಮಕ್ಕಳಿಗೆ ನಾವು ಹಿಂಸೆ ಮುಕ್ತ ಮತ್ತು ಭಯಮುಕ್ತವಾದ ಸಮಾಜವನ್ನು ನೀಡುವಲ್ಲಿ ಬದ್ಧರಾಗಿರಬೇಕು '

**References**


- *Ministry of Women Development, Government of India 2007. Study on Child Abuse India 2007. Available from http://wcd.nic.in/childabuse.pdf*
- *TULIR,Doesn't every child count ? Prevalence and dynamics of child sexual abuse disclosed among schoolgoing children in Chennai, February 2006. Available at http://www.tulir.org/images/pdf/Research%20report1.pdf*
- *Finkelhor, D. (1986). A sourcebook on child sexual abuse.Newbury Park, CA: Sage; Daro, D. (1988). Confronting childabuse: Research for effective program design. New York, NY: FreePress.*
- *Finkelhor, David, and Jennifer Dziuba-Leatherman. "Victimization prevention programs: A national survey of children's exposure and reactions." Child Abuse & Neglect 19.2 (1995): 129-139.*
- *Finkelhor, D., Asdigian, N. and Dzuiba-Leatherman, J. (1995). The effectiveness of victimisation prevention instruction: an evaluation of children's responses to actual threats and assaults. Child Abuse and Neglect, 19 (2), 142-153.*
- *Srikala, Bharath, and Kumar KV Kishore. "Empowering adolescents with life skills education in schools–School mental health program: Does it work?." Indian Journal of Psychiatry 52.4 (2010): 344.n and Child Development, Government of India 2007. Study on Child Abuse India 2007. Available from http://wcd.nic.in/childabuse.pdf*




**ಸೌಮ್ಯ ಭಾಸ್ಕರನ್** ಇವರು ಮನೋವೈದ್ಯರಾಗಿದ್ದು ಸದ್ಯ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಮಕ್ಕಳು ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ವೈದ್ಯಶಾಸ್ತ್ರದ ಡಾಕ್ಟರೇಟ್‌ಗಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು bsowmya1984@hotmail.com ನಲ್ಲಿ ಸಂಪರ್ಕಿಸಬಹುದು.

**ಡಾ.ಶೇಖರ್ ಶೇಷಾದ್ರಿ** ಪ್ರಸ್ತುತ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ವಿಭಾಗದಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು shekar@nimhans.kar.nic.in ನಲ್ಲಿ ಸಂಪರ್ಕಿಸಬಹುದು.



# ವಿದ್ಯಾ ಲಭ್ಯತೆಯ ಬಗ್ಗೆ ಒಂದು ವಿಭಿನ್ನ ಆಲೋಚನೆ

ಸುಮನ್ ಭಟ್ಟಾಚಾರ್ಜಿಯ



ನಾನೂ ಓದಬಲ್ಲೆ ಎಂದು ನನಗೆ ಮನವರಿಕೆಯಾದ ಆ ಕ್ಷಣ ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಆಗ ನನಗೆ ಸುಮಾರು ಐದು ವರ್ಷ ವಯಸ್ಸಿದ್ದಿರಬಹುದು. ನಾನು ಮನೆಯಲ್ಲಿ ನೆಲದ ಮೇಲೆ ಕುಳಿತು ಒಂದೊಂದೇ ಪದಗಳನ್ನು ಉಚ್ಚರಿಸುತ್ತಾ ತಡವರಿಸಿಕೊಂಡು ಕಥೆ ಪುಸ್ತಕವನ್ನು ಓದುತ್ತಿದ್ದೆ. ಸ್ವಲ್ಪ ಸಮಯದ ಅನಂತರ ತನ್ನಂತೆ ತಾನೇ ವಾಕ್ಯಗಳನ್ನು ಮೊದಲಿಂದ ಕೊನೆಯವರೆಗೂ ಸರಾಗವಾಗಿ ಓದಲು ನನಗೆ ಸಾಧ್ಯವಾಯಿತು (ನನಗೆ ನೆನಪಿರುವಂತೆ – ನನಗಂತೂ ಹೀಗೇ ನೆನಪಿರುವುದು).

ಅನೇಕ ವರ್ಷಗಳವರೆಗೂ ನಾನು ಈ ಅದ್ಭುತ ಕ್ಷಣವನ್ನು ಮತ್ತು ಅದರ ಮಹತ್ವವನ್ನು ನೆನಪಿಸಿಕೊಂಡಿರಲಿಲ್ಲ. ಖಂಡಿತವಾಗಿಯೂ, ಅನೇಕ ವರ್ಷಗಳ ಹಿಂದಿನಿಂದ ಪ್ರಾರಂಭವಾದ ಒಂದು ಪ್ರಕ್ರಿಯೆಯ ಫಲಿತಾಂಶವೇ ಇದು. ನಾವು ಚಿಕ್ಕವರಿದ್ದಾಗ ಮಲಗುವ ಸಮಯದಲ್ಲಿ ನಮ್ಮಮ್ಮ ಪ್ರತಿ ದಿವಸ ಕಥೆ ಓದಿ ಹೇಳುತ್ತಿದ್ದರು. ನನ್ನ ಸುತ್ತಲೂ ಸದಾ ಕಥೆ ಪುಸ್ತಕಗಳು ಇರುತ್ತಿದ್ದವು. ನಮ್ಮ ತಂದೆ ಒಬ್ಬ ಪತ್ರಕರ್ತರಾಗಿದ್ದರು. ಹೀಗಾಗಿ ನಮ್ಮ ಮನೆಯಲ್ಲಿ ಎಲ್ಲ ತರಹದ ಮುದ್ರಿತ ಸಂಪನ್ಮೂಲಗಳು ಹೇರಳವಾಗಿತ್ತು. ನಮ್ಮ

ಮನೆಯ ಲಭ್ಯ ಸರ್ವೇ ಸಾಧಾರಣ ಮೂಲಭೂತ ವಸ್ತುವೆಂದರೆ ಮುದ್ರಿತ ಅಕ್ಷರಗಳ ಪುಸ್ತಕ, ಇತ್ಯಾದಿ ಆಗಿದ್ದವು.

ಆದರೆ ಭಾರತದಲ್ಲಿ, ತೀರ ಕೆಲವು ಮಕ್ಕಳ ಮನೆಯಲ್ಲಿ ಮಾತ್ರ ಇದು ಸಾಧ್ಯವಾಗಿದೆ. 2012ರಲ್ಲಿ, ಶೈಕ್ಷಣಿಕ ಸ್ಥಿತಿಯ ವಾರ್ಷಿಕ ವರದಿಗೆ (ಅನ್ಯುಯಲ್ ಸ್ಟೇಟಸ್ ಆಫ್ ಎಜುಕೇಶನ್ ರೆಪೋರ್ಟ್ – ಎಎಸ್ಇಆರ್) ಕಾರ್ಯವೆಸಗುತ್ತಿರುವ ಕೆಲವು ಸ್ವಯಂಸೇವಕರು ಭಾರತದ 585 ಗ್ರಾಮೀಣ ಜಿಲ್ಲೆಗಳಲ್ಲಿನ 567 ಜಿಲ್ಲೆಗಳಲ್ಲಿರುವ 3.3 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿದರು. ಇದರಲ್ಲಿ ಎಲ್ಲ ಬಗೆಯ ಕುಟುಂಬಗಳಿದ್ದವು – ಸಿರಿವಂತರು, ಕೆಲವು ಮಧ್ಯಮ ವರ್ಗದವರು, ಕೆಲವು ಮಕ್ಕಳಿರುವ ಮನೆಗಳು, ಮಕ್ಕಳಿಲ್ಲದ ಕುಟುಂಬಗಳು ಕೆಲವು; ಕೆಲವು ಕುಟುಂಬಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳು, ಖಾಸಗಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿರುವ ಇನ್ನಿತರ ಮನೆಗಳು ಇದ್ದವು. ದೇಶದಾದ್ಯಂತ, ಪ್ರತಿ ಹತ್ತರಲ್ಲಿ ಎರಡು ಕುಟುಂಬಗಳು ಮಾತ್ರ ಪಠ್ಯ ಪುಸ್ತಕಗಳಲ್ಲದೇ ಇನ್ನಿತರ ಮುದ್ರಿತ ಪುಸ್ತಕಗಳನ್ನು ಹೊಂದಿದ್ದರು ಎಂದು ಅಸರ್–2012 ಕಂಡುಕೊಂಡಿತು. 2009–11 ರವರೆಗೆ ಅಸರ್ ಕೇಂದ್ರವು ನಡೆಸಿದ ಐದು ರಾಜ್ಯದಲ್ಲಿನ 30,000 ವಿದ್ಯಾರ್ಥಿಗಳನ್ನು ಒಳಗೊಂಡ "ಪ್ರಾಥಮಿಕ ಶಾಲೆಗಳ ಒಳಗೆ" ಎಂಬ ಅಧ್ಯಯನವು ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳು ಹೆಚ್ಚಾಗಿ ಸಾಕ್ಷರತೆಗೆ ಸಂಬಂಧಿಸಿದ ವಸ್ತುಗಳ ಲಭ್ಯತೆಯಿಲ್ಲದ ಅತ್ಯಂತ ಬಡ ಕುಟುಂಬದಿಂದ ಬಂದಿರುವ ಮಕ್ಕಳಾಗಿದ್ದಾರೆ ಎಂದು ಹೇಳಿದೆ.

ನಾನೂ ಓದಬಲ್ಲೆ ಎಂದು ನಾನು ಕಂಡುಕೊಂಡ ಆ ಕ್ಷಣದ ಕಥೆಗೆ ಹಿಂದಿರುಗೋಣ. ನಾನು ಹೀಗೆ ಓದಲು ಕಲಿತೆ ಎಂದು ಸಂಭ್ರಮಪಟ್ಟ ನಿಕಟ ಅನಂತರ ಏನಾಯಿತು ಎನ್ನುವುದೂ ಇಲ್ಲಿ ಮುಖ್ಯ. ನನಗೆ ಜ್ಞಾಪಕವಿದೆ ನಾನು ನನ್ನಮ್ಮನ ಬಳಿ ಓಡಿ ಹೋದೆ, ಖುಷಿಯಿಂದ ಅಮ್ಮ ಅಮ್ಮ ನನಗೆ ಓದಕ್ಕೆ ಬರತ್ತೆ! ಎಂದು ಹೇಳಿದಾಗ ನನ್ನಮ್ಮನೂ ಖುಷಿಯಾದಳು ಮತ್ತು ಅವಳ ಪ್ರತಿಕ್ರಿಯೆ ನಾನು ಬಹಳ ಮುಖ್ಯವಾಗಿರುವುದನ್ನು ಸಾಧಿಸಿರುವೆ ಎನ್ನುವ ನನ್ನ ಭಾವನೆಯನ್ನು ದೃಢಪಡಿಸಿತು. ಅದರಂತೆಯೇ ನನ್ನ ಸಹೋದರನ ಪ್ರತಿಕ್ರಿಯೆಯೂ ನನ್ನ ಭಾವನೆಯನ್ನು ದೃಢಪಡಿಸಿತು ಏಕೆಂದರೆ ಅವನ ಪ್ರತಿಕ್ರಿಯೆಯು ಸಂಪೂರ್ಣ ಭಿನ್ನವಾಗಿತ್ತು. ನನಗಿಂತ ಮೂರು ವರ್ಷ ಹಿರಿಯನಾದ ಅವನು ಇದರಿಂದ ಏನೂ ಖುಷಿಯಾಗ'ಅಲ್ಲ. ನನಗೂ ಓದಕ್ಕೆ ಬರತ್ತೆ, ಅದೇನು ಮಹಾ? ಎಂದ. ಎಂಟು ವರ್ಷದ ಅವನ ದೃಷ್ಟಿಯಲ್ಲಿ ಓದುವುದನ್ನು ಕಲಿಯುವುದು ಸರ್ವೇಸಾಮಾನ್ಯವಾದದ್ದು, ದಿನ ನಿತ್ಯದ ಒಂದು ಭಾಗ. ಆದರೆ, ಅವನ ಈ ರೀತಿಯ ಪ್ರತಿಕ್ರಿಯೆಯಿಂದ, ಓದಲು ಬಾರದ ಪುಟ್ಟ ಮಕ್ಕಳ ಗುಂಪನ್ನು ಬಿಟ್ಟು ನಾನು ಈಗ ದೊಡ್ಡ ಮಕ್ಕಳ ವರ್ಗಕ್ಕೆ ಸೇರಿದೆ ಎಂಬ ಭಾವನೆಯನ್ನು ನನಗೆ ಎತ್ತಿ ತೋರಿಸಿತು.

ಹೀಗಿರುವಾಗ, ಐದು ವರ್ಷದ ಬಾಲಕಿಯಾದ ನನ್ನ ಕೌಟುಂಬಿಕ ಜೀವನವು ಶಾಲಾ ವಿದ್ಯಾಭ್ಯಾಸದ ಲಭ್ಯತೆಯೊಂದಿಗೆ ಯಾವ ಸಂಬಂಧವನ್ನು ಹೊಂದಿದೆ?

ಭಾರತದಲ್ಲಿ (ಹಾಗೂ ವಿಶ್ವದ ಇನ್ನಿತರ ಕಡೆಗಳಲ್ಲೂ) ವಿದ್ಯಾಲಭ್ಯತೆಯ ಬಗ್ಗೆ ಇಂದು ನಾವು ಬಹಳ ಆಲೋಚಿಸುತ್ತಿದ್ದೇವೆ. ಶಾಲೆ ನಮ್ಮ ಮನೆಯಿಂದ ಎಷ್ಟು ದೂರವಿದೆ? ದೂರವಿದ್ದರೆ ಮನೆಯಿಂದ ಶಾಲೆಗೆ ವಾಹನ ಸೌಕರ್ಯವಿದೆಯೆ? ಸಣ್ಣ ಮಕ್ಕಳಿಗೆ ಮತ್ತು ಹೆಣ್ಣು ಮಕ್ಕಳಿಗೆ ಈ ಪ್ರಯಾಣ ಸುರಕ್ಷಿತವೆ? ಶಾಲೆಯು ರ್‍ಯಾಂಪ್ ಹೊಂದಿದೆಯೇ? ಹೀಗೆ ನಾವು ಸಾಮಾನ್ಯವಾಗಿ "ವಿದ್ಯಾಲಭ್ಯತೆಯ" ಬಗ್ಗೆ ಯೋಚಿಸುತ್ತೇವೆ. ಅಂದರೆ ಶಾಲೆ ಮತ್ತು ಮನೆಯ ನಡುವಿರುವ ಭೌತಿಕ ಅಂತರವನ್ನು ನೀಗಿಸಿ ಮಕ್ಕಳನ್ನು ಸುರಕ್ಷಿತವಾಗಿಸುವುದರ ಬಗ್ಗೆ ಆಲೋಚಿಸುತ್ತೇವೆ.

ಆದರೆ ಕಲಿಕೆಯನ್ನು ಲಭ್ಯವಾಗಿಸಿಕೊಳ್ಳುವುದು ಬಹಳಷ್ಟು ಸಲ ಇನ್ನೂ ದುಸ್ತರವಾದದ್ದು. ನಿಜ, ಮಕ್ಕಳು ಶಾಲೆಯ ಒಳಗೆ ಮತ್ತು ಹೊರಗೆ ಎರಡೂ ಕಡೆ ಕಲಿಯುತ್ತಾರೆ. ಆದರೆ ಹೆಚ್ಚಿನ ಮಕ್ಕಳಿಗೆ ಶಾಲಾ ಆವರಣದ ಹೊರಗೆ ಸಿಗುವ ಅನುಭವವು ಶಾಲಾ ಪಠ್ಯಕ್ರಮದ ಔಪಚಾರಿಕ, ಶೈಕ್ಷಣಿಕ ವಿಷಯಗಳಿಗಿಂತ ತುಂಬಾ ಭಿನ್ನವಾಗಿರುತ್ತದೆ. ಭಾರತದ ಗ್ರಾಮೀಣ ಪ್ರದೇಶದೆಲ್ಲೆಡೆಯಲ್ಲಿರುವ ಶಾಲೆಯಲ್ಲಿ ಕಲಿಯುತ್ತಿರುವ 60 ಪ್ರತಿಶತ ಮಕ್ಕಳ ತಾಯಿಯರು ಶಾಲೆಯಲ್ಲಿ ಕಲಿತವರಲ್ಲ. ಅವರ ಮನೆಗಳಲ್ಲಿ ಮುದ್ರಿತ ವಸ್ತುಗಳು ಲಭ್ಯವಿದ್ದರೂ ಅದು ಒಂದೆರಡಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಈ ತಾಯಂದಿರು ತಮ್ಮ ಮಕ್ಕಳಿಗೆ ಮಲಗುವ ಸಮಯದಲ್ಲಿ ಕಥೆಯನ್ನು ಓದಿ ಹೇಳಲು ಸಾಧ್ಯವಿಲ್ಲದವರು, ತಮ್ಮ ಜೀವನದಲ್ಲಿ ಎಂದೂ ಒಬ್ಬ ಶಿಕ್ಷಕರೊಂದಿಗೆ ಸಂವಾದವನ್ನು ಮಾಡಿಲ್ಲದವರು, ಮಕ್ಕಳಿಗೆ ಕಥೆಯನ್ನು ಹೇಳುವುದು ಅವರ ಭಾಷಾ ಕೌಶಲ್ಯವನ್ನು ಹೆಚ್ಚಿಸುವ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಬಹುಶಃ ತಿಳಿದಿಲ್ಲದ ತಾಯಂದಿರು.


ವಿದ್ಯಾ ಲಭ್ಯತೆಯ ಬಗ್ಗೆ ವಿಭಿನ್ನವಾಗಿ ಆಲೋಚಿಸ ಬೇಕಾದಂತಹ ಸಮಯವಿದು ಮತ್ತು ಅನೇಕ ಮಕ್ಕಳ ವಿಷಯದಲ್ಲಿ ಮನೆ ಮತ್ತು ಶಾಲೆಯ ನಡುವಿನ ಅಂತರವನ್ನು ತಗ್ಗಿಸುವುದಕ್ಕೆ ದೈಹಿಕ ಪ್ರಯಾಣವನ್ನು ಕಡಿಮೆ ಮಾಡುವುದಷ್ಟೇ ಸಾಲದು ಇನ್ನೂ ಹೆಚ್ಚಿನದನ್ನು ಮಾಡುವ ಅವಶ್ಯಕತೆ ಇದೆ ಎಂದು ಮನಗಾಣ ಬೇಕಾಗಿದೆ. ಪ್ರಾಥಮಿಕ ಹಂತದ ವಿದ್ಯಾಭ್ಯಾಸದ ಆರಂಭಿಕ ವರ್ಷಗಳಲ್ಲಾದರೂ

ಕಲಿಕೆಯನ್ನು ಸಾಧ್ಯವಾಗಿಸುವ ವಾತಾವರಣವಿರುವ ಶಾಲೆಗಳು ಮಕ್ಕಳಿಗೆ ಈ ಅಂತರವನ್ನು ಕಟ್ಟಿಕೊಡುವ ಪ್ರಯತ್ನ ಮಾಡುವಲ್ಲಿ ನೆರವಾಗುತ್ತವೆ. ಈ ರೀತಿಯ ಅಂತರವನ್ನು ಕಡಿಮೆ ಮಾಡುವ ಪ್ರಯತ್ನಗಳು ರಸ್ತೆಯನ್ನು, ಕಟ್ಟಡವನ್ನು ಕಟ್ಟಿಕೊಡುವುದಕ್ಕಿಂತ ಸಂಕೀರ್ಣವಾಗಿರುತ್ತದೆ ಏಕೆಂದರೆ ಅದಕ್ಕೆ, ಮಕ್ಕಳು ಇಂದು ಹೇಗಿದ್ದಾರೆ, ಮುಂದೆ ಅವರನ್ನು ಅಮೂರ್ತ ಮತ್ತು ಅಳತೆಗೆ ನಿಲುಕದ ವಿಧಿ ವಿಧಾನಗಳ ಮೂಲಕ ಬೆಳೆಸುವುದು ಹೇಗೆ ಎನ್ನುವುದನ್ನು ಅರ್ಥಮಾಡಿಕೊಂಡಿರಬೇಕಾಗುತ್ತದೆ.

ಇಂತಹ ಅಂತರಗಳನ್ನು ಕಡಿಮೆಮಾಡಲು ಸುಗಮ ಪ್ರವೇಶ ಒದಗಿಸಲು ನಮ್ಮ ಶಾಲೆಗಳು ಎಷ್ಟರಮಟ್ಟಿಗೆ ಉತ್ತಮವಾಗಿವೆ? ಲಭ್ಯವಿರುವ ಮಾಹಿತಿಗಳು ನಾವು ಸಾಗಬೇಕಾಗಿರುವ ಮಾರ್ಗ ಬಹಳ ದೀರ್ಘವಾಗಿದೆ ಎಂದು ಸೂಚಿಸುತ್ತಿವೆ. ಇದಕ್ಕೆ ಇಲ್ಲಿ ಮೂರು ಉದಾಹರಣೆಗಳನ್ನು ನೀಡುತ್ತೇನೆ.

ಮೊದಲ ಉದಾಹರಣೆ: ಬೋಧನೆಗೆ ಬಳಸುತ್ತಿರುವ ಭಾಷೆ. ಅನೇಕ ಮಕ್ಕಳು, ಹೆಚ್ಚಾಗಿ ಸಾಮಾಜಿಕವಾಗಿ ಹಿಂದುಳಿದಿರುವ ಸಮುದಾಯಗಳಿಂದ ಬಂದವರು, ಭಿನ್ನವಾದ ಭಾಷೆಯ ಹಿನ್ನಲೆಯನ್ನು ಹೊಂದಿರುತ್ತಾರೆ (ಆಡುಭಾಷೆಗಳು/ ಉಪಭಾಷೆಗಳು, ಶಬ್ದಕೋಶ, ವಾಕ್ಯರಚನೆಗಳು ಈ ಅರ್ಥದಲ್ಲಿ). ಇಂತಹ ಮಕ್ಕಳು ವಿದ್ಯೆಗಳಿಸಲು ಅನೇಕ ಸೇತುವೆಗಳನ್ನು ದಾಟಬೇಕು. ಅವರು ಶಾಲೆಗೆ ಬರುವುದೇ ಅವರು ಮತ್ತು ಅವರ ಕುಟುಂಬದವರಿಗೆ ಹೊಸ ವಿಷಯ. ಅದನ್ನು ಅವರು ಮಾಡಬೇಕು. ಅಲ್ಲದೆ ತಾವು ಬಂದು ಸೇರಿರುವ ಹೊಸ ಲೋಕದಲ್ಲಿ ಹೊಂದಿಕೊಳ್ಳಲು ಎಲ್ಲರೊಡನೆ ಒಂದಾಗಲು, ಅದನ್ನು ತಮ್ಮದಾಗಿಸಿಕೊಳ್ಳಲು ಹೆಚ್ಚಿನ ಸಮಯ ಅವರು ಹೊಸ ಭಾಷೆಯನ್ನೇ ಕಲಿಯಬೇಕಾಗುತ್ತದೆ. ಒಂದು ಸಣ್ಣ ಮಗುವಿಗೆ, ಶಾಲೆಯು ಒಂದು ಔಪಚಾರಿಕ ತಾಣ. ಸಮಯ ಪಾಲನೆಗೆ ಮತ್ತು ಮತ್ತೊಬ್ಬರೊಂದಿಗೆ ಮಾತುಕತೆ ಒಡನಾಟ ಮಾಡುವ ವಿಷಯದಲ್ಲಿ ಅನೇಕ ರೀತಿ ನೀತಿಗಳು ಮತ್ತು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇಂತಹ ನಿಯಮಗಳು ಮತ್ತು ವರ್ತನೆಗಳು ಅವರ ಮನೆ ಮತ್ತು ಸಮುದಾಯದ ರೀತಿನೀತಿ ನಿಯಮಗಳಿಗಿಂತ ಭಿನ್ನ–ವಾಗಿರುತ್ತದೆ. ಹಾಗೆಯೇ, ಶಾಲೆಗೇ ಒಂದು ಔಪಚಾರಿಕ ಭಾಷೆ ಇರುತ್ತದೆ ಮತ್ತು ಮಾತನಾಡುವ ಶೈಲಿ ಇರುತ್ತದೆ. ಒಂದು ಮಗು ಶಾಲೆಯ ಹೊರಗಿನ ಒಡನಾಟದಲ್ಲಿ ಬಳಸುವುದಕ್ಕಿಂತ ಶಾಲೆಯಲ್ಲಿ ಬಳಸುವ ಭಾಷೆ ಭಿನ್ನವಾಗಿರುತ್ತದೆ. ಶಾಲೆಯಲ್ಲಿ ಮತ್ತು ಮನೆಯಲ್ಲಿ ಬಳಸುವ ಭಾಷೆಯು ಒಂದೇ ರೀತಿಯಾಗಿದ್ದಾಗ ಮಕ್ಕಳು ಶಾಲೆಗೆ ತಪ್ಪದೇ ಹಾಜರಾಗುತ್ತಾರೆ ಮತ್ತು ಸರಳ ಮೌಲ್ಯಮಾಪನಗಳಲ್ಲಿ ಭಾಷೆ ಮತ್ತು ಗಣಿತದ ವಿಷಯಗಳಲ್ಲಿ ಉತ್ತಮವಾದ ಪ್ರಗತಿಯನ್ನು ತೋರುತ್ತಾರೆ ಎಂದು ದಿ ಇನ್‌ಸೈಡ್ ಪ್ರೈಮರಿ ಸ್ಕೂಲ್ ಸ್ಟಡಿ ಕಂಡುಕೊಂಡಿದೆ. ಇಂತಹ ಮಕ್ಕಳಿಗೆ ಶಾಲಾ ಪರಿಸರದಲ್ಲಿ ಪರಕೀಯ ಎನ್ನುವ ಭಾವನೆ ಇಲ್ಲದೇ ಕೆಲಸಕಾರ್ಯಗಳಲ್ಲಿ ಹೆಚ್ಚು ಸಮರ್ಥರಾಗಿರುತ್ತಾರೆ.

ಎರಡನೆಯ ಉದಾಹರಣೆ ಎಂದರೆ ಬೋಧಿಸಲ್ಪಡುತ್ತಿರು–ವಂತಹ ವಿಷಯ.ಶಾಲೆಯಲ್ಲಿ ಮೊಟ್ಟ ಮೊದಲಿಗೆ ಮಕ್ಕಳಿಗೆ ನೀಡುವ ಕಾರ್ಯವೆಂದರೆ ಭಾಷೆಯ ಮೂಲಭೂತ ಇಟ್ಟಿಗೆಗಳಾದ ಅಕ್ಷರ ಇತ್ಯಾದಿಗಳಲ್ಲಿ ಪರಿಣಿತಿಯನ್ನು ಸಾಧಿಸುವುದು. ಶಾಲೆಯಲ್ಲಿನ ಅವರ ಮೊದಲ ವರ್ಷ – ಒಂದನೇ ತರಗತಿ – ಇಲ್ಲಿ ಮಕ್ಕಳು ಅಕ್ಷರಗಳನ್ನು, ಸರಳ ಪದಗಳನ್ನು ಮತ್ತು ಚಿಕ್ಕ ವಾಕ್ಯಗಳನ್ನು ಓದುವುದಕ್ಕೆ ಮತ್ತು ಬರೆಯುವುದಕ್ಕೆ ಕಲಿಯಬೇಕೆಂದು ಅಪೇಕ್ಷಿಸಲಾಗುವುದು. ಮಕ್ಕಳು ಪ್ರಸ್ತುತ ಏನೇನು ಬಲ್ಲರು ಮತ್ತು ಈ ವರ್ಷದ ಕೊನೆಯಲ್ಲಿ ಅವರು ಏನೇನು ಹೆಚ್ಚಿಗೆ ಕಲಿತಿರಬೇಕು ಎಂದು ಅರ್ಥಮಾಡಿಕೊಂಡು ವಿಧಾನಗಳು ಮತ್ತು ವಸ್ತುಗಳನ್ನು ಗಮನಯುಕ್ತವಾಗಿ ವಿನ್ಯಾಸಗೊಳಿಸಿದಲ್ಲಿ ಇದು ಅಸಾಧ್ಯವಾದ ಕೆಲಸವೇನೂ ಅಲ್ಲ. ಆದರೆ ಭಾರತದ ಪ್ರತಿಯೊಂದು ರಾಜ್ಯದಲ್ಲೂ, ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು ಮಕ್ಕಳ ಸಾಧ್ಯತೆಯನ್ನೂ ಮೀರಿ ಹೆಚ್ಚು ಕಠಿಣವಾಗಿರುತ್ತದೆ. ಉದಾಹರಣೆಗೆ, ಅಸರ್ 2012, ಇಡೀ ರಾಷ್ಟ್ರದಲ್ಲಿನ ಗ್ರಾಮೀಣ ಭಾರತದ ಒಂದನೇ ತರಗತಿಯ ಪ್ರತಿ ಹತ್ತರಲ್ಲಿ ನಾಲ್ಕು ಮಕ್ಕಳಿಗೆ ಪದಗಳು ಮತ್ತು ವಾಕ್ಯಗಳಿರಲಿ, ಅಕ್ಷರಗಳನ್ನೇ ಸರಿಯಾಗಿ ಗುರುತಿಸಲು ಅಸಮರ್ಥತೆ ಇದೆ ಎಂದು ತೋರಿಸಿದೆ (ಚಿತ್ರ 1). ಈ ವಿಷಯದಲ್ಲಿ ಪರಿಣಿತಿಯನ್ನು ಪಡೆಯಲು ಮಕ್ಕಳು ಅಸಮರ್ಥರಾಗಿದ್ದರೂ, ಎರಡನೆ ತರಗತಿಯ ಪಠ್ಯಪುಸ್ತಕ ಮತ್ತಷ್ಟು ಕಠಿಣವಾಗಿದೆ ಹಾಗೂ ಮುಂದಿನ ತರಗತಿಗಳಿಗೆ ಹೋಗುತ್ತಿರುವಂತೆ ಇದು ಹೀಗೆಯೇ ಮುಂದುವರಿಯುತ್ತದೆ. ಕಲಿಕೆಯನ್ನು ಸಾಧ್ಯವಾಗಿಸುವಂತೆ ಸೇತುವೊಂದನ್ನು ನಿರ್ಮಿಸುವ ಬದಲಾಗಿ ನಮ್ಮ ಶಾಲಾ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳು




ಚಿತ್ರ 1
ಮಕ್ಕಳ ಓದುವಿಕೆ: ಅಪೇಕ್ಷೆಗಳು ಮತ್ತು ವಾಸ್ತವ

ನಮ್ಮ ಮಕ್ಕಳನ್ನು ವ್ಯವಸ್ಥಿತವಾಗಿ ಇನ್ನೂ ಹಿಂದೆ ಹಿಂದೆ ಉಳಿಯುವಂತೆ ಮಾಡುತ್ತಿವೆ.


ಮೂರನೆ ಉದಾಹರಣೆಯೆಂದರೆ ಮಕ್ಕಳಿಗೆ ಅನುಕೂಲಕರ, ಸುರಕ್ಷಿತ ಮತ್ತು ಶಾಲೆಯಲ್ಲಿ ನಾನೂ ಮೌಲ್ಯವುಳ್ಳವನು ಎನ್ನುವ ಭಾವನೆಯನ್ನು ಒದಗಿಸುವಂತಹ "ಬಾಲ ಸ್ನೇಹಿ" ಕಲಿಕಾ ಪರಿಸರವನ್ನು ಒದಗಿಸುವುದು. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಕಾಯ್ದೆ (2009) ಈ ಎರಡೂ, ಮಗುವು ಶಾಲೆಗೆ ತಪ್ಪದೇ ಬರುವಂತೆ ಮಾಡುವ ಮತ್ತು ಕಲಿಯುವ ಬಾಲ ಸ್ನೇಹಿ ಕಲಿಕಾ ಪರಿಸರವನ್ನು ನಿರ್ಮಿಸುವಂತೆ ಪ್ರೋತ್ಸಾಹಿಸಿ ಅದಕ್ಕೆ ಮಹತ್ವವನ್ನು ನೀಡುತ್ತಿವೆ. ಆದರೆ ಭಾರತದಲ್ಲಿ ವಾಸ್ತವವಾಗಿ ನಮ್ಮ ತರಗತಿಗಳು, ಶಾಲೆಗಳು ಎಷ್ಟರಮಟ್ಟಿಗೆ ಬಾಲಸ್ನೇಹಿಯಾಗಿವೆ ಎಂದು ಪುರಾವೆ ಒದಗಿಸುವಂತಹ ಮಾಪನಗಳು ಲಭ್ಯವಿಲ್ಲ.

ದಿ ಇನ್‌ಸೈಡ್ ಪ್ರೈಮರಿ ಸ್ಕೂಲ್ಸ್ ಅಧ್ಯಯನವು "ಬಾಲ ಸ್ನೇಹಿ" ತರಗತಿಗಳಿಗೆ ಆರು ಅತ್ಯಂತ ಸರಳ ಸೂಚಕಗಳನ್ನು ತರಗತಿಯಲ್ಲಿ ಬಳಸಿದೆ ಮತ್ತು ಐದು ದೊಡ್ಡ ರಾಜ್ಯಗಳ 900 ಶಾಲೆಗಳಲ್ಲಿನ 1,700ಕ್ಕೂ ಹೆಚ್ಚು ಶಾಲಾ ತರಗತಿಗಳಲ್ಲಿ ಇವು ಇದೆಯೇ ಎಂದು ಪರಿಶೀಲಿಸಿದೆ. ಈ ಸೂಚಕಗಳು ಪ್ರತಿಯೊಂದು ತರಗತಿಯಲ್ಲೂ ಅನೇಕ ಅಂಶಗಳಲ್ಲಿ "ಬಾಲ ಸ್ನೇಹಿ" ಪರಿಸರವಿದೆಯೇ ಎನ್ನುವುದರ ಒಂದು ಪ್ರಾಥಮಿಕ ಚಿತ್ರಣವನ್ನು ಒದಗಿಸುವ ಪ್ರಯತ್ನವನ್ನು ಮಾಡಿದೆ. ಈ ಆರು ಸೂಚಕಗಳೆಂದರೆ:

- ಶಿಕ್ಷಕರು ಕೆಲವೊಂದು ವಿದ್ಯಾರ್ಥಿಗಳೊಂದಿಗಾದರೂ ಹಸನ್ಮುಖರಾಗಿ, ನಗುತ್ತಾ ವಿನೋದದಿಂದ ಇರುವುದನ್ನು ಗಮನಿಸಲಾಗಿದೆಯೆ?
- ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಯಾದರೂ ಪಠ್ಯ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಕೇಳಿದನೇ/ಳೇ?
- ಮಕ್ಕಳ ಅಭ್ಯಾಸದ ಕಾರ್ಯವನ್ನು ತರಗತಿಯಲ್ಲಿ ಪ್ರದರ್ಶಿಸಲಾಗಿದೆಯೇ?
- ಪಠ್ಯ ವಿಷಯಗಳನ್ನು ಮನವರಿಕೆ ಮಾಡಿಸಲು ಸ್ಥಳೀಯ ಮಾಹಿತಿಯನ್ನು ಶಿಕ್ಷಕರು ಬಳಸಿಕೊಳ್ಳುತ್ತಿದ್ದಾರೆಯೇ?
- ಪಠ್ಯ ಪುಸ್ತಕವನ್ನು ಹೊರತುಪಡಿಸಿ ಶಿಕ್ಷಕರು ಯಾವುದಾದರೂ ಇತರ ಬೋಧನೆ ಕಲಿಕೆಯ ಉಪಕರಣಗಳನ್ನು ಬಳಸುತ್ತಿದ್ದಾರೆಯೇ?
- ಶಿಕ್ಷಕರು ಮಕ್ಕಳಿಗೆ ಜೋಡಿಯಲ್ಲಿ ಅಥವಾ ಗುಂಪಿನಲ್ಲಿ ಕಾರ್ಯ ಮಾಡುವಂತೆ ಹೇಳುವರೇ?

ನೀತಿ ದಾಖಲೆಗಳಲ್ಲಿ ನಿರೂಪಿಸಿರುವ ವಿಷಯಕ್ಕೂ ಮತ್ತು ವಾಸ್ತವವಾಗಿ ತರಗತಿಗಳಲ್ಲಿ ನಡೆಯುತ್ತಿರುವುದಕ್ಕೂ ಬೃಹತ್ ಅಂತರವಿದೆ ಎಂದು 1700 ತರಗತಿಗಳಲ್ಲಿ ವೀಕ್ಷಿಸಿ ಸಂಗ್ರಹಿಸಿದ ದತ್ತಾಂಶವು ತೋರಿಸುತ್ತದೆ. ಪ್ರತಿ 10 ತರಗತಿಗಳಲ್ಲಿ 4 ತರಗತಿಯಲ್ಲಿ ಈ ಆರು ಸೂಚಕಗಳಲ್ಲಿ ಯಾವೊಂದೂ ಗಮನಕ್ಕೆ ಬರಲಿಲ್ಲ. ಇದಕ್ಕೆ ಪ್ರತಿಯಾಗಿ, ಹತ್ತರಲ್ಲಿ ಒಂದು ತರಗತಿಯಲ್ಲಿ ನಾಲ್ಕು ಅಥವಾ ಸೂಚಕಗಳು ಕಂಡು ಬಂದವು. ಹಾಗೂ ವೀಕ್ಷಿಸಲಾದ ಒಟ್ಟು ತರಗತಿಗಳಲ್ಲಿ 30 ಪ್ರತಿಶತಕ್ಕೂ ಹೆಚ್ಚು ತರಗತಿಗಳಲ್ಲಿ ಯಾವ ಸೂಚಕಗಳೂ ಗಮನಕ್ಕೆ ಬರಲಿಲ್ಲ. (ಚಿತ್ರ 2).

ಪರಿಣಾಮಕಾರಿ ಬೋಧನೆಗೆ ಮತ್ತು ಸುಸ್ಥಿರ ಕಲಿಕೆಗೆ ಬೇಕಾಗಿರುವ ವೇದಿಕೆಯನ್ನು ಒದಗಿಸುವ ವಿಷಯಕ್ಕೆ ಬಂದಾಗ ನೀತಿಯಲ್ಲಿ ಹೇಳಲಾಗಿರುವುದಕ್ಕೂ ಜಾರಿಯಲ್ಲಿರುವ ಅಭ್ಯಾಸಗಳಲ್ಲಿ ಅಜ-ಗಜಾಂತರವಿದೆ. ಮಕ್ಕಳಿಗೆ ಹೇಗೆ ಬೋಧಿಸಬೇಕು ಮತ್ತು ಮಕ್ಕಳು ಹೇಗೆ ಕಲಿಯುತ್ತಾರೆ ಎಂದು ಭಾರತದಲ್ಲಿ ನಡೆಯುವ ಅನೇಕ ಉಪನ್ಯಾಸಗಳಲ್ಲಿ ಹೆಚ್ಚಿನವು ತಾತ್ವಿಕ, ಜ್ಞಾನಾತ್ಮಕ ಮತ್ತು ಬೋಧನಾಶಾಸ್ತ್ರಗಳ ಆಧಾರದ ಮೇಲೆ ಗಮನವನ್ನು ಕೇಂದ್ರೀಕರಿಸುವಂಹದ್ದಾಗಿವೆ. ವಿದ್ಯಾ ಲಭ್ಯತೆಗೆ ಭೌತಿಕ ಅವಕಾಶ ಸಿಗುವಂತೆ ಖಚಿತಪಡಿಸಿ-ಕೊಳ್ಳುವದಕ್ಕೆ ಮಗು ಎಲ್ಲಿ ವಾಸವಾಗಿದೆ ಎಂದು ತಿಳಿದುಕೊಳ್ಳುವುದು ಹೇಗೆ ಮುಖ್ಯವೋ ಹಾಗೆಯೇ ಮಗುವಿಗೆ ವಿದ್ಯಾಲಭ್ಯತೆ ಖಚಿತಪಡಿಸಿಕೊಳ್ಳಲು ಇಂದು ಮಗುವಿನ ಸ್ಥಿತಿ ಗತಿ ಏನು - ಅದಕ್ಕೆ ಏನು ತಿಳಿದಿದೆ, ಅದು ಹೇಗೆ ಆಲೋಚಿಸುತ್ತದೆ ಮತ್ತು ಅದು ಏನೇನು ಮಾಡಬಲ್ಲದು ಎಂದು ಅರಿತುಕೊಳ್ಳುವುದು ಪ್ರಮುಖವಾಗಿದೆ.




ಚಿತ್ರ 2
ಬಾಲ ಸ್ನೇಹಿ ತರಗತಿಗಳು

ನಾನು ಅನೇಕರನ್ನು ಅವರಿಗೆ ಓದಲು ಬರುತ್ತದೆ ಎಂದು ಯಾವಾಗ ಕಂಡುಕೊಂಡರು ಎಂದು ನೆನಪಿದೆಯೇ ಎಂದು ಕೇಳುತ್ತಿರುತ್ತೇನೆ. ನಮ್ಮಂತಹ ಕೆಲವರು ನೆನಪಿಟ್ಟುಕೊಂಡಿರುತ್ತೇವೆ. ಈ ಒಂದು ಕೌಶಲ್ಯವನ್ನು ನಾವೆಲ್ಲರೂ ಬಹಳ ಲಘುವಾಗಿ ಪರಿಗಣಿಸುತ್ತೇವೆ. ಈ ಲೇಖನವನ್ನು ಓದುತ್ತಿರುವ ಅನೇಕರಂತೆ, ನಾನು ಕೂಡ ಒಮ್ಮೆ ಓದುವುದನ್ನು ಪ್ರಾರಂಭಿಸಿದೆ. ಮುದ್ರಿತ ಅಕ್ಷರಗಳೊಂದಿಗಿನ ನನ್ನ ಒಡನಾಟ ಎಂದಿಗೂ ನಿಲ್ಲಲಿಲ್ಲ. "ಕಲಿಕೆಯನ್ನು ಸಾಧ್ಯವಾಗಿಸುವ" ಪರಿಸರವನ್ನು ಎಲ್ಲಾ ಮಕ್ಕಳಿಗೂ ಸಮಾನ ಅವಕಾಶವನ್ನು ಒದಗಿಸುವ ಮೂಲಕ ಉತ್ತಮವಾಗಿ

**References**


- *ASER Centre. Annual Status of Education Report (Rural) 2012. New Delhi: ASER Centre*
- *Bhattacharjea, S, W Wadhwa and R Banerji (2011). Inside Primary Schools: A study of teaching and learning in rural India. New Delhi: ASER Centre*
- *Ministry of Law and Justice, Government of India. The Right of Children to Free and Compulsory Education Act, 2009*
- *National Council for Educational Research and Training (2005). National Curriculum Framework. New Delhi: NCERT*






**ಸುಮನ್** ಅವರು ನವ ದೆಹಲಿಯಲ್ಲಿರುವ ಅಸರ್ ಕೇಂದ್ರದಲ್ಲಿ ಸಂಶೋಧನಾ ನಿರ್ದೇಶಕರಾಗಿದ್ದಾರೆ. ಇವರು ಒಬ್ಬ ಸಾಫ್ಟ್‌ವೇರ್ ಡೆವಲಪರ್ ಆಗಿ, ಪ್ರೌಢ ಶಾಲಾ ಶಿಕ್ಷಕರಾಗಿ, ಶೈಕ್ಷಣಿಕ ತಜ್ಞರಾಗಿ ಮತ್ತು ಒಬ್ಬ ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರಿಗೆ ಶಿಕ್ಷಣ, ಲಿಂಗ ತಾರತಮ್ಯ ಮತ್ತು ಮಹಿಳಾ ಹಕ್ಕುಗಳಲ್ಲಿ ಅಪಾರ ಅನುಭವವನ್ನು ಹೊಂದಿದ್ದಾರೆ ಮತ್ತು ಇವರು ಸರ್ಕಾರಿ, ಖಾಸಗಿ, ಸರ್ಕಾರೇತರ ಸಂಸ್ಥೆಗಳೊಂದಿಗೆ ಹಾಗೂ ಭಾರತವೂ ಸೇರಿದಂತೆ ಅಮೇರಿಕಾ ಸಂಯುಕ್ತ ಸಂಸ್ಥಾನ, ಪಾಕಿಸ್ಥಾನ ಮತ್ತು ಮೆಕ್ಸಿಕೋ ಹೀಗೆ ಅನೇಕ ದೇಶಗಳಲ್ಲಿರುವ ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಕಾರ್ಯ ನಿರ್ವಹಿಸಿದ್ದಾರೆ. ಇವರು ಸಂಶೋಧನಾ ವಿನ್ಯಾಸ, ಲಿಂಗ ತಾರತಮ್ಯ ಮತ್ತು ಶಿಕ್ಷಣದ ವಿಷಯಗಳಲ್ಲಿ ಅನೇಕ ಕೋರ್ಸ್‌ಗಳ ಬೋಧನೆಯನ್ನು ಮಾಡಿದ್ದಾರೆ ಅಲ್ಲದೇ ಈ ವಲಯದಲ್ಲಿ ಅನೇಕ ಪುಸ್ತಕಗಳ ಲೇಖಕರು ಮತ್ತು ಸಹ ಲೇಖಕರೂ ಆಗಿದ್ದಾರೆ. ಸುಮನ್‌ರವರು ಅರ್ಥಶಾಸ್ತ್ರದಲ್ಲಿ ದೆಹಲಿ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಮತ್ತು ಹಾರ್ವರ್ಡ್ ವಿಶ್ವವಿದ್ಯಾನಿಲಯದಿಂದ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇವರನ್ನು sbhattacharjea@gmail.com ಇಲ್ಲಿ ಸಂಪರ್ಕಿಸಬಹುದು.

### ವ್ಯವಸ್ಥೆ ಮತ್ತು ಮೋಡಿಯ ಮೂಲಕ

# ಉತ್ತಮ ಕಲಿಕಾ ವಾತಾವರಣವನ್ನು ರಚಿಸುವುದು

ಸೌಮಿಲ್ ಮಜುಂದಾರ್

ಕಳೆದ ನಾಲ್ಕು ವರ್ಷಗಳಲ್ಲಿ ಅನೇಕ ಶಿಕ್ಷಣ ತಜ್ಞರು, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ನೀತಿ ರೂಪಕರು ವಿವಿಧ ಶೈಕ್ಷಣಿಕ ಸಮ್ಮೇಳನಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಶಾಲಾ ಶಿಕ್ಷಣದಲ್ಲಿ ಆಗುತ್ತಿರುವ ಬೃಹತ್ ಬದಲಾವಣೆಗಳ ಬಗ್ಗೆ ಮಾತನಾಡಿರುವುದನ್ನು ಕೇಳಿದ್ದೇನೆ.

ಬರುತ್ತಾಬರುತ್ತಾ ಕೆಲವೊಂದು ವಿಷಯಗಳು ಭಾಷಣಗಳಲ್ಲಿ ಚರ್ವಿತ–ಚರ್ವಣ ಆಗುತ್ತಿರುವುವನ್ನು ಕಂಡಿದ್ದೇನೆ. ಅವುಗಳಲ್ಲಿ ಕೆಲವು:

1. ಬೋಧನೆಗಿಂತಲೂ ಕಲಿಕೆಯ ಮೇಲೆ ಗಮನವನ್ನು ಹೆಚ್ಚು ಕೇಂದ್ರೀಕರಿಸಬೇಕು.
2. ಖುಷಿ ಖುಷಿಯಿಂದ ಕಲಿಯುವ ವಾತಾವರಣ ಸೃಷ್ಟಿಸಿ – ಮಕ್ಕಳು ಕಲಿತಿದ್ದನ್ನು ಇಡೀ ಜೀವನ ಮರೆಯುವುದಿಲ್ಲ.

ಮಕ್ಕಳು ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿ–ಕೊಂಡಿರುವಂತಹ ಮತ್ತು ಕಲಿಕೆಯ ಬಗ್ಗೆ ಒಲವನ್ನು ಬೆಳಸಿಕೊಳ್ಳುವಂತಹ ಕಲಿಕಾ ವಾತಾವರಣವನ್ನು ಸೃಷ್ಟಿಸುವುದೇ ಅತಿ ದೊಡ್ಡ ಸವಾಲು. ಇರಬಹುದು, ಒಬ್ಬ ಇಂಜಿನಿಯರನಿಗೆ ಸಮಸ್ಯೆ ಕಂಡುಬಂದಲ್ಲಿ ಅವರು ವಸ್ತುವಿನ ವಿನ್ಯಾಸದ ಬಗ್ಗೆ ಅದು ಹೊಸದಾಗಿ ತಯಾರಿಸುವುದು ಆಗಿರಬಹುದು ಅಥವಾ ಇರುವ ವಸ್ತುವನ್ನೇ ದುರಸ್ತಿ ಮಾಡುವುದಿರಬಹುದು ಅದರ ಮೇಲೆ ಗಮನ ಹರಿಸುತ್ತಾರೆ. ಬದಲಾವಣೆಯನ್ನು ತರಲು ಏನಾದರೂ ಹೊಸದನ್ನು ಮಾಡಲು ಪ್ರಯತ್ನಿಸುತ್ತಾರೆ.

ಪದೇ ಪದೇ ಮಾಡಿದ್ದನ್ನೇ ಮಾಡುತ್ತಾ ಇದ್ದರೂ ಪ್ರತಿಸಲವೂ ಭಿನ್ನವಾದ ಫಲಿತಾಂಶವನ್ನು ನಿರೀಕ್ಷಿಸುವುದೇ ಹುಚ್ಚು ಎಂದು ಶ್ರೀಯುತ ಐನ್‌ಸ್ಟೈನ್‌ರವರು ವ್ಯಾಖ್ಯಾನಿಸುತ್ತಾರೆ. ಹಾಗಾದರೆ ನಮ್ಮಲ್ಲಿಯ ಶಾಲೆಗಳಲ್ಲಿನ ಅನೇಕ ಮುಖ್ಯಸ್ಥರು ತಾತ್ಕಾಲಿಕ ಮರುಳುತನಕ್ಕೆ ಒಳಗಾದವರೇ? ಮಾಡಿದ್ದನ್ನೇ ಮಾಡುತ್ತಾ ಭಿನ್ನವಾದ ಫಲಿತಾಂಶಗಳನ್ನು ನಿರೀಕ್ಷಿಸುತ್ತಿರುವವರೇ?

ಯಾವುದೇ ಪರಿಸರವನ್ನು ಪ್ರಭಾವಿಸಬೇಕಾದರೆ ಅದರಲ್ಲಿ ತೊಡಗಿಕೊಂಡಿರುವ ವ್ಯಕ್ತಿಗಳನ್ನು ಮತ್ತು ಅವರ ಕಾರ್ಯ ವಿನ್ಯಾಸದ ತತ್ವಗಳನ್ನು ಪರಿಗಣಿಸಬೇಕಾಗುತ್ತದೆ. ಅನಂತರ ಹೊಸ ವಿಧಾನವನ್ನು ಪ್ರಯತ್ನಿಸಬೇಕಾಗುತ್ತದೆ. ಎಲ್ಲ ರೀತಿಯ "ವೈಜ್ಞಾನಿಕ" ವಿಧಾನಗಳು ವಿಫಲವಾದಲ್ಲಿ ಮತ್ತು ಸಮಸ್ಯೆಯು ಬಹಳ ಪ್ರಮುಖವಾಗಿದ್ದಲ್ಲಿ ಮೋಡಿ ಮಾಡುವ ವಿಧಾನವನ್ನು ಬಳಸಲು ನೋಡಬೇಕು!

ಶಾಲೆಗಳಲ್ಲಿ ಕಲಿಕಾ ಪರಿಸರವನ್ನು ಸೃಷ್ಟಿಸುವುದು ಎಂಬ ನೋಡಲು ಅಪರಿಹಾರ್ಯವೆನಿಸುವ ಈ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ವ್ಯವಸ್ಥೆಗಳ ವಿನ್ಯಾಸ ಮತ್ತು ಮೋಡಿಯನ್ನು ಒಟ್ಟಾಗಿ ಸೇರಿಸಿ ಪ್ರಯೋಗಿಸಬೇಕಾದ ಸೂಕ್ತ ಸಮಯವಿದು ಎನಿಸುತ್ತದೆ.

ಇದರ ವಿವರಣೆ ಹೀಗಿದೆ:

ಶಾಲೆಗಳಲ್ಲಿ ಕಲಿಕಾ ಪರಿಸರವನ್ನು ನಿರ್ಮಿಸಬೇಕು ಎಂದು ಅತ್ಯಂತ ಕಾಳಜಿವಹಿಸುತ್ತಿರುವ ಪೋಷಕರು, ಶಿಕ್ಷಣ ತಜ್ಞರು, ಶಾಲಾ ಮುಖಂಡರು ಮತ್ತು ಇನ್ನಿತರ ಪರಿಣಿತರು ಒಂದು ಸರಳ ಅಂಶವನ್ನು ಗಮನಿಸಿಲ್ಲ: ಒಂದು ವ್ಯವಸ್ಥೆಯನ್ನು ಯಾವುದಕ್ಕಾಗಿ ವಿನ್ಯಾಸಗೊಳಿಸಲಾಗಿದೆಯೋ ಅದಕ್ಕಾಗಿಯೇ ಆ ವ್ಯವಸ್ಥೆಯನ್ನು ಬಳಸಿದಾಗ ಮಾತ್ರ ಆ ವ್ಯವಸ್ಥೆಯು ಸದುಪಯೋಗವಾಗುತ್ತದೆ. ಮಕ್ಕಳು ಆಟದ ಮೂಲಕ ಕಲಿಯಲು ವಿನ್ಯಾಸಗೊಂಡಿದ್ದಾರೆ. ಯಾವ ಪ್ರಾಣಿಯೇ ಆಗಲಿ ಅದರ ಮರಿಯು ಆಟದ ಮೂಲಕವೇ ಕಲಿಯುವುದು. ಅವು ತಮ್ಮ ಪರಿಸರ, ಜೊತೆಗಾರರು, ತಮಗಿಂತ ಹಿರಿಯರು, ಕಿರಿಯರ ಬಗ್ಗೆ, ಯಾವುದರಿಂದ ನೋವಾಗುತ್ತದೆ, ಯಾವುದರಿಂದ ಆಗೊಲ್ಲ ಎಂಬುದರ ಬಗ್ಗೆ, ಯಾವುದರಿಂದ



ಸಾಧ್ಯ ಯಾವುದರಿಂದ ಸಾಧ್ಯವಿಲ್ಲ ಇವೆಲ್ಲದರ ಬಗ್ಗೆಯೂ ಕಲಿಯುತ್ತವೆ. ಇದರಂತೆಯೇ ನಮ್ಮ ಸಣ್ಣ ಮಕ್ಕಳು. ಹುಟ್ಟಿದ ಕೆಲವು ತಿಂಗಳಲ್ಲಿಯೇ ತನ್ನ ಅಮ್ಮನ ಜೊತೆ, ಒಡಹುಟ್ಟಿದವರ ಜೊತೆ, ಆಟಿಕೆಯೊಂದಿಗೆ ಆಟವಾಡಲು ಪ್ರಯತ್ನಿಸುತ್ತಾರೆ. ಹೀಗೆ ಆಟವಾಡುತ್ತಾ ಅದು ಕಲಿಯುತ್ತದೆ. ನಕ್ಕಾಗ ಜನರು ಹೇಗೆ ಪ್ರೀತಿಯಿಂದ ಪ್ರತಿಕ್ರಿಯೆ ತೋರುತ್ತಾರೆ. ಹಾಗೆಯೇ ಅತ್ತು ಎಲ್ಲರ ಗಮನ ಸೆಳೆಯಬಹುದು, ವಿವಿಧ ಆಕಾರಗಳು ನಿರ್ದಿಷ್ಟ ಅಂಕಣದಲ್ಲಿ ಹೇಗೆ ಕೂರುತ್ತವೆ, ಒಂದು ಗುಂಡಿಯನ್ನು ಒತ್ತಿದರೆ ಸಂಗೀತ ಹೊಮ್ಮುವುದು, ತೋಳನ್ನು ತಿರುಗಿಸಿ ಕೈಯಲ್ಲಿರುವ ಚೆಂಡನ್ನು ಬೀಸಿದರೆ ಅದು ಪುಟ ಏಳುತ್ತದೆ. ಇಂತಹವುಗಳನ್ನು ಮಕ್ಕಳು ಕಲಿಯುತ್ತಾ ಹೋಗುತ್ತಾರೆ.

ಆಟಆಡುತ್ತಾ ಆಡುತ್ತಾ ಅವರು ಕಲಿಯುತ್ತಾರೆ. ಅನೇಕ ಬಾರಿ ನಾವು ಆಟವನ್ನು ಕ್ರೀಡೆಯೆಂದು ತಪ್ಪಾಗಿ ಭಾವಿಸುವುದಿದೆ. ಆಟವೆನ್ನುವುದು ಕುತೂಹಲವನ್ನು ಮೂಡಿಸುವಂತಹದ್ದು, ವಿವಿಧ ವಿಧಾನಗಳನ್ನು ಪ್ರಯತ್ನಿಸುವಂತಹದ್ದು, ಯಾವುದು ಮಾಡಿದರೆ ಸಾಧ್ಯವಾಗುತ್ತದೆ ಯಾವುದು ಮಾಡಿದರೆ ಸಾಧ್ಯವಾಗುವುದಿಲ್ಲ ಎಂಬುದನ್ನು ತೋರಿಸಿಕೊಡು-ವಂತಹದ್ದು ಹಾಗೂ ಪ್ರತಿ ಬಾರಿಯೂ ಏನಾದರೊಂದು ಹೊಸದನ್ನು ಕಲಿಯಲು ಪದೇ-ಪದೇ ಮಾಡಿದ್ದನ್ನೇ ಮಾಡುವ ತನ್ಮಯತೆಯನ್ನು ನೀಡುವಂತಹದ್ದು ಹಾಗೂ ಈ ಪ್ರಕ್ರಿಯೆಯಲ್ಲಿ ಆನಂದವನ್ನು ಕೊಡುವಂತಹದ್ದು.

ಕ್ರೀಡೆಯೆಂದರೆ, ಆಟದ ಒಂದು ಪರಿಷ್ಕೃತ ಮಾದರಿ. ಎಲ್ಲ ಮಕ್ಕಳಿಗೂ ಇದು ಬಹಳ ಪ್ರೀತಿಪಾತ್ರವಾದದ್ದು ಏಕೆಂದರೆ ಇದು ಆಟವಾಡುವುದನ್ನು ಒಳಗೊಂಡಿದೆ.

ನಮ್ಮ ಸಲಹೆಗಾರರಾದ ಡಾ. ಜಾರ್ಜ್ ಸೆಲೆಕ್ ಹೇಳುವಂತೆ: "ಆಟವೆನ್ನುವುದು ಮಕ್ಕಳು ಮಾಡುವ ವೈಜ್ಞಾನಿಕ ಪ್ರಯೋಗ."

ಮಕ್ಕಳಿಗೆ ಆಟವಾಡುವುದು ಬಹಳ ಇಷ್ಟವೆಂದು ಎಲ್ಲಾ ಪೋಷಕರಿಗೂ ಮತ್ತು ಶಾಲಾ ಮುಖ್ಯೋಪಾಧ್ಯಾಯರಿಗೂ ತಿಳಿದಿದೆ. ಮತ್ತು ಅವಕಾಶ ಕೊಟ್ಟಲ್ಲಿ, ಅವರು ಇಂಗ್ಲೀಷ್ ಮತ್ತು ಗಣಿತವನ್ನು ಕಲಿಯುವುದರ ಬದಲು ಆಟವಾಡುತ್ತಲೇ ಇರುವುದನ್ನು ಬಯಸುವರು. ಹೀಗಾಗಿ ಮಗುವಿನ ಮನೋವ್ಯವಸ್ಥೆ ಆಟವಾಡುವುದಕ್ಕೇ ವಿನ್ಯಾಸವಾಗಿದೆ.

ಶಿಕ್ಷಣದ "ವ್ಯವಸ್ಥೆ" ಸೃಷ್ಟಿಸಲು ಬಯಸುತ್ತಿರುವುದು-ಉತ್ತಮ ಕಲಿಕಾ ವಾತಾವರಣವನ್ನು. ಪ್ರಸ್ತುತ ಇರುವ ಶಿಕ್ಷಣ ವ್ಯವಸ್ಥೆಯ ವಿನ್ಯಾಸ ಏನನ್ನು ಮಾಡುವುದಕ್ಕಾಗಿದೆ? ಎಲ್ಲ ಮಕ್ಕಳಿಗೂ ಏಕರೂಪ ಶಿಕ್ಷಣಾನುಭವವನ್ನು ನೀಡಲು, ಫಲಿತಾಂಶವನ್ನು ಅಳೆಯಲು ಮತ್ತು ಪ್ರಗತಿಯನ್ನು ಸಾಧಿಸಲು. ಪ್ರಸ್ತುತವಿರುವ ಶೈಕ್ಷಣಿಕ ವ್ಯವಸ್ಥೆಯ ವಿನ್ಯಾಸವನ್ನು ಒಂದಷ್ಟು ಮೀಟಿ ಎಬ್ಬಿಸಿ,

ವಿನ್ಯಾಸದ ಪ್ರಮುಖ ಅಂಶವಾದ ಮಕ್ಕಳನ್ನು ಅರ್ಥೈಸಿ-ಕೊಳ್ಳುವುದು ಮತ್ತು ಆಟದ ಮೋಡಿಯನ್ನು ಪರಿಚಯಿಸುವುದು ನಮಗೆ ಉಪಯುಕ್ತ ಉತ್ತರವನ್ನು ನೀಡಬಹುದು.

ಮೋಡಿ? ಯಾವ ಮೋಡಿ?

ಮಕ್ಕಳು ಒಂದು ಚೆಂಡನ್ನು ಒದೆಯುತ್ತಾ ಒಬ್ಬರಿಂದ ಒಬ್ಬರಿಗೆ ಚೆಂಡನ್ನು ನೀಡುತ್ತಾ ಆಟದ ಮೈದಾನದಲ್ಲಿ ಓಡುತ್ತಾರೆ. ಅಲ್ಲಿ ಅವರು ಹೊಸ ಹೊಸದನ್ನು ಕಲಿಯಲು ಪ್ರಯತ್ನಿಸುತ್ತಾರೆ, ಹೊಸ ಸ್ನೇಹಿತರನ್ನು ಭೇಟಿ ಮಾಡುತ್ತಾರೆ. ಇದರಿಂದಾಗಿ ನೀವು ತಂಡದಲ್ಲಿ ಬೆರೆತು ಒಡನಾಡುವವರನ್ನು, ಉತ್ತಮ ಆಟಗಾರರನ್ನು, ಕಷ್ಟಪಟ್ಟು ದುಡಿಯುವುದರ ಮೌಲ್ಯವನ್ನು ಅರ್ಥಮಾಡಿಕೊಂಡಂತಹ ಮಕ್ಕಳನ್ನು, ಶಿಸ್ತಿನವರನ್ನು, ನಿರ್ಧರಿತ ಗುರಿ ಹೊಂದಿರುವವರನ್ನು, ನಿಯಮಗಳನ್ನು ಗೌರವಿಸುವವರನ್ನು, ಎಲ್ಲೆಗಳನ್ನು ಅರ್ಥಮಾಡಿಕೊಂಡವರನ್ನು, ಹಾಗೂ ದೈಹಿಕವಾಗಿ ಮತ್ತು ಸಾಮಾಜಿಕವಾಗಿ ಹೆಚ್ಚು ಆರೋಗ್ಯಪೂರ್ಣ ಮಕ್ಕಳನ್ನು ಕಾಣಬಹುದು.

ಇದೆಲ್ಲವನ್ನು ಕೇವಲ ಆಟದಿಂದ ಪಡೆಯಬಹುದು! ಯಾವುದೇ ಬೋಧನೆಯಿಲ್ಲದೇ! ಶಿಕ್ಷಕರಿಲ್ಲದೆ, ತರಗತಿ ಇಲ್ಲದೆ. ಇದು ಯಕ್ಷಿಣಿ ತಾನೆ!

ಸುಮಾರು ಕಳೆದ ಹತ್ತು ವರ್ಷಗಳಲ್ಲಿ, ಈ ಯಕ್ಷಿಣಿಯು ಮಕ್ಕಳ, ಪೋಷಕರ, ಶಾಲಾ ಮುಖ್ಯೋಪಾಧ್ಯಾಯರ ಮತ್ತು ಶಿಕ್ಷಣ ತಜ್ಞರ ಮೇಲೆ ಮೋಡಿ ಮಾಡುತ್ತಿರುವುದನ್ನು ನಾನು ಕಂಡಿದ್ದೇನೆ. ಹೀಗಾಗಿ ಉತ್ತಮ ಕಲಿಕಾ ವಾತಾವರಣಗಳೆಂದರೆ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯ ವಿನ್ಯಾಸದಲ್ಲಿ ಆಟದ ಮೋಡಿಯನ್ನು ಹೊಂದಿರುವಂತಹವು. ಆಟವೆಂದರೆ ಕ್ರೀಡೆಯಲ್ಲ. ಆದರೆ ಆಟದ ಮೈದಾನದಿಂದಲೂ ಕಲಿಯುವ ಬೆಲೆ ಕಟ್ಟಲಾಗದ ಪಾಠಗಳು ದೊರೆಯುತ್ತವೆ. ಮಕ್ಕಳು ವಿಜ್ಞಾನದೊಂದಿಗೆ ಆಡಬಹುದು, ಹೊಸ ಪ್ರಯೋಗಗಳನ್ನು ಮಾಡಲು ಪ್ರಯತ್ನಿಸಬಹುದು. ಹೊಸ ವಿಷಯಗಳನ್ನು ಕಲಿಯಲು, ಹೊಸತನ್ನು ಮಾಡಲು ಪ್ರಯತ್ನಿಸಬಹುದು. ವಸ್ತುಗಳು ಹೇಗೆ ಕೆಲಸ ಮಾಡುತ್ತವೆ, ಇನ್ನೊಂದು ವಸ್ತುವಿನೊಂದಿಗೆ ಇದನ್ನು ಬಳಸಿದಾಗ ಯಾವ ರೀತಿ ಪ್ರತಿಕ್ರಿಯೆ ಬರುತ್ತದೆ ಇವೆಲ್ಲವನ್ನು ಪ್ರಯೋಗ ಮಾಡಿ ನೋಡಬಹುದು. ಮಕ್ಕಳು ಭೂಗೋಳದಲ್ಲಿ, ಇತಿಹಾಸದಲ್ಲಿ ಮತ್ತು ಗಣಿತದ ವಿಷಯಗಳಲ್ಲೂ ಆಟವನ್ನು ಬಳಸಿಕೊಳ್ಳಬಹುದು.

ಆಟದ ಮೂಲಕ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಸುವುದನ್ನು ಅರ್ಥಮಾಡಿಕೊಳ್ಳಲು ಆಟದ ಹತ್ತು ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಈ ಹತ್ತು ವರ್ಷಗಳಲ್ಲಿ ಮಕ್ಕಳು ಆಟವಾಡುವುದನ್ನು ವೀಕ್ಷಿಸುತ್ತಾ ಮತ್ತು ೨೦೦,೦೦೦ ಹೆಚ್ಚು ಮಕ್ಕಳನ್ನು ಆಟವಾಡುವಂತೆ ಮಾಡುವಾಗ ನಾನು ಕಲಿತಿರುವುದರ ಆಧಾರದ ಮೇಲೆ ಈ ನಿಯಮಗಳ ಪ್ರತಿಪಾದನೆಯನ್ನು ಮಾಡಿದ್ದೇನೆ. ಅವು ಹೀಗಿವೆ:

### ಸಾರ್ವತ್ರಿಕವಾಗಿರುವ ಆಟದ ಮೂಲಾಧಾರ: ಮೋಜಿಗಾಗಿ ಆಟವಾಡುವುದು.

ಮೋಜು ಎಂದರೆ ಮಕ್ಕಳು ಯಾವಾಗಲೂ ಜೋರಾಗಿ ನಗುವುದು ಎಂದಲ್ಲ. ಮೋಜು ಎಂದರೆ, ಡಾ. ಸೆಲೆಕ್ ಬಹಳ ಸುಂದರವಾಗಿ ವರ್ಣಿಸಿರುವಂತೆ:

1. ಚಟುವಟಿಕೆಯಲ್ಲಿ ಮಕ್ಕಳು ಗಹನವಾಗಿ ತೊಡಗಿ-ಕೊಳ್ಳುವುದು.
2. ತಮ್ಮ ಸುತ್ತಲಿರುವ ಗುಂಪಿನೊಡನೆ ಮಕ್ಕಳು ಸಂಪರ್ಕ ಏರ್ಪಡಿಸಿಕೊಳ್ಳುವುದು.
3. ಮಕ್ಕಳನ್ನು ತಮ್ಮ ಮಿತಿಯನ್ನು ಸ್ವಲ್ಪ ದಾಟಿ ಹೋಗುವಂತೆ ಮಾಡುವುದು.

### ಆಟದ ಮೊದಲನೆ ನಿಯಮ: ನಿಮ್ಮಲ್ಲಿ ಏನಿದೆಯೋ ಅದರೊಂದಿಗೇ ಆಡುವುದು.

ಮಕ್ಕಳು ನಿರ್ಬಂಧಗಳಿದ್ದರೂ ಅದರ ಮಿತಿಯಲ್ಲೇ ಆಡಲು ಇಚ್ಛಿಸುತ್ತಾರೆ. ಅವರು ನಾವೀನ್ಯತೆಯನ್ನು ಕಂಡುಕೊಳ್ಳುತ್ತಾರೆ. ತರಗತಿ ಕೋಣೆಯು ಸಣ್ಣದಿದೆಯೇ? ಏನೂ ತೊಂದರೆ ಇಲ್ಲ. ಸಮಯದ ಮಿತಿ ಇದೆಯೇ? ಏನೂ ತೊಂದರೆ ಇಲ್ಲ. ಸಂಪನ್ಮೂಲಗಳನ್ನು ಹಂಚಿಕೊಳ್ಳಬೇಕೆ? ಏನೂ ತೊಂದರೆ ಇಲ್ಲ. ಆಟವಾಡುತ್ತಲೇ ಇರುವವರೆಗೂ ಮತ್ತು ಮೋಜು ಮಾಡುತ್ತಿರುವವರೆಗೂ ಇವ್ಯಾವುದೂ ಅವರನ್ನು ಬಾಧಿಸದು.

### ಆಟದ ಎರಡನೆಯ ನಿಯಮ: ನೀವೇ ಆಟವನ್ನು ಆಯ್ಕೆ ಮಾಡಿಕೊಳ್ಳಿ, ನೀವೇ ಅದಕ್ಕೆ ನಿಯಮಗಳನ್ನು ಹಾಕಿಕೊಳ್ಳಿ

ಪರಿಸರಕ್ಕೆ ತಕ್ಕಂತೆ ಪ್ರತಿಸ್ಪಂದನೆಯನ್ನು ತೋರುತ್ತಾ ಮಕ್ಕಳು ನಿಯಮಗಳನ್ನು ಹಾಕಿಕೊಳ್ಳುವರು. ಒಬ್ಬ ಸಿಟ್ಟಿಗೇಳುವ ನೆರೆ ಮನೆಯವನಿದ್ದರೆ ಅವರ ಮನೆಯ ಕಿಟಿಕಿಗೆ ನೀವು ಹೊಡೆಯುವ ಚೆಂಡು ತಗುಲಿದರೆ ನೀವು ಆಟದಿಂದ ಹೊರಬಿದ್ದಂತೆ.

ಅಗತ್ಯವಿದ್ದಲ್ಲಿ ನೀವು ಆಟವನ್ನು ಬದಲಿಸಬಹುದು. ಹೊಸ ಆಟಗಾರರನ್ನು ಒಳಗೊಳ್ಳಲು ನಿಯಮಗಳನ್ನು ಹೊಸ ನಿರ್ಬಂಧಗಳನ್ನು ಬದಲಿಸಬಹುದು, ಅದನ್ನು ಹೇಗೆ ಆಡಬೇಕು ಎಂಬುದರೊಂದಿಗೆ ಸಿಲುಕಿಕೊಳ್ಳಬೇಡಿ. ಬೋಧಿಸಲು ಹೊಸ ವಿಧಾನಗಳನ್ನು ಪ್ರಯತ್ನಿಸಿ. "ಸರಿಯಾಗಿ" ಮಾಡುವುದು ಇಲ್ಲಿ ಗುರಿಯಲ್ಲ. ಇಲ್ಲಿನ ಗುರಿ. ಆಟವಾಡುವುದು ಕಲಿಯುವುದು ಮತ್ತು ಮೋಜು ಮಾಡುವುದಾಗಿದೆ.

ಆಟದ ಮೂರನೆಯ ನಿಯಮ: ಹೆಚ್ಚು ಆಟವಾಡಿದಷ್ಟೂ ನಿಮಗೆ ಕಡಿಮೆ ಆಯಾಸವಾಗುತ್ತದೆ.

ನಿಜವಾದ ಆಟ ನಡೆಯುತ್ತಿದ್ದರೆ, ಮಕ್ಕಳು ದೀರ್ಘ ಸಮಯದವರೆಗೂ ತಮ್ಮ ಗಮನವನ್ನು ಅದರಲ್ಲಿ ಕೇಂದ್ರೀಕರಿಸಬಲ್ಲರು. ಅವರು ಆಯಾಸಗೊಳ್ಳುವುದಿಲ್ಲ. ಅವರಿಗೆ ಹಸಿವೆಯಾಗುವುದಿಲ್ಲ. ಅವರಿಗೆ ಶೌಚಾಲಯಕ್ಕೆ ಹೋಗಬೇಕೆನಿಸುವುದಿಲ್ಲ. ಅವರು ಆಟವಾಡುತ್ತಿರುತ್ತಾರೆ ಮತ್ತು ಅದರೊಂದಿಗೆ ಕಲಿಯುತ್ತಲೇ ಇರುತ್ತಾರೆ. ನಿಮ್ಮ ತರಗತಿಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಬೇಕೆ? ಹಾಗಾದರೆ ಅವರು ಕಲಿಯುವಾಗ ಅವರನ್ನು ಆಟದಲ್ಲಿ ತೊಡಗಿಸಿ.

ಆಟದ ನಾಲ್ಕನೇ ನಿಯಮ: ಆಟವು ಹೆಚ್ಚು ಹರಿವನ್ನು ಹೊಂದಿರುವಷ್ಟೂ, ಅದರ ನಾಯಕ ಯಾರೆಂಬುದು ಹೆಚ್ಚು ಪರಿಗಣನೆಗೆ ಬರುವುದಿಲ್ಲ.

ಹರಿವನ್ನುಳ್ಳ ಆಟಗಳಲ್ಲಿ (ಫುಟ್‌ಬಾಲ್ ಮತ್ತು ಬಾಸ್ಕೆಟ್ ಬಾಲ್‌ನಂತಹವು) ಆಟವನ್ನು ಆಡುತ್ತಿರುವಾಗ "ನಾಯಕ" ಅಥವಾ "ಮುಖಂಡ"ನ ಅಗತ್ಯವಿರುವುದಿಲ್ಲ. ಸನ್ನಿವೇಶವೇ ನಾಯಕನನ್ನು ಸೃಷ್ಟಿಸುತ್ತದೆ. ಹೆಚ್ಚು ಸಂರಚನೆಯನ್ನು ಹೊಂದಿರುವ ಆಟಗಳಲ್ಲಿ (ಕಿಕೆಟ್‌ನಂತಹದ್ದರಲ್ಲಿ) ಔಪಚಾರಿಕ ನಾಯಕನ ಅಗತ್ಯವಿರುತ್ತದೆ. ಶಿಕ್ಷಕರು ತರಗತಿಯನ್ನು ಮುನ್ನಡೆಸುವುದರ ಬದಲು, ತರಗತಿಯಲ್ಲಿ ಹುರಿದುಂಬಿಸುವ ನಾಯಕನಾಗಬಹುದು. ತಂಡವನ್ನು ಸರಿಯಾದ ದಿಕ್ಕಿನಲ್ಲಿ ನಡೆಯುವಂತೆ ಮಾಡುತ್ತಾ, ಶಾಲಾ ಸಂದರ್ಭಕ್ಕೆ ತಕ್ಕಂತೆ ಕಲಿಕೆಯನ್ನು ಮಾಡಿಸುತ್ತಾ ಮಕ್ಕಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬಹುದು.

ಆಟದ ಐದನೇ ನಿಯಮ: ಹೆಚ್ಚು ಗಾಯಗಳು = ಹೆಚ್ಚು ಮೋಜು = ಹೆಚ್ಚು ಕಲಿಕೆ

ಗಾಯಗಳು ನಿಜವಾಗಲೂ ಪ್ರಯತ್ನಪಟ್ಟಿದ್ದಾರೆ, ಜವಾಬ್ದಾರಿಯಿಂದ ತೆಗೆದುಕೊಂಡಿದ್ದಾರೆ, ತಮ್ಮ ಆರಾಮದ ಮಿತಿಯನ್ನು ಮೀರಿ ಪ್ರಯತ್ನಿಸಿದ್ದಾರೆ ಎನ್ನುವುದಕ್ಕೆ ಪುರಾವೆಗಳು. ತಪ್ಪುಗಳು ಕಲಿಕೆಯ ಪ್ರಕ್ರಿಯೆಯಲ್ಲಿನ ಒಂದು ಭಾಗ. ಮಕ್ಕಳು ಬೀಳಲಿ ಬಿಡಿ. ಹೀಗೆಯೇ ಅವರು ವಾಸ್ತವವಾಗಿ ಕಲಿಯಲು ಸಾಧ್ಯ.

ಆಟದ 6ನೇ ನಿಯಮ: ನೀವು ಹೆಚ್ಚು ಆಟವಾಡಿದಷ್ಟು, ನೀವೆ ಹೆಚ್ಚು ಗೆಲ್ಲುವಿರಿ.

ವಿಷಯ ವಸ್ತುವಿನೊಂದಿಗೆ ಒಂದು ಮಗುವು ಆಟವಾಡುವಾಗ ಆಹಾ! ಎನ್ನುವ ಭಾವನೆಯ ಕ್ಷಣಗಳು ಹೆಚ್ಚಾಗುವ ಸಾಧ್ಯತೆ ಇದೆ. ಈ ಗೆಲುವು ಆಂತರಿಕವಾದದ್ದು ಮತ್ತು ಧೀರ್ಘಕಾಲ ಉಳಿಯುವಂತಹದ್ದು.

ಆಟದ 7ನೇ ನಿಯಮ: ನಿಮಗೆ ಒಂದು ದೊಡ್ಡ ಗೆಲುವಿನ ಅಗತ್ಯವಿದೆ.

ಒಂದು ದೊಡ್ಡ ಆಹಾ! ಎನಿಸುವ ಕ್ಷಣವೆಂದರೆ ಯಾವುದಾದರೂ ಪರಿಕಲ್ಪನೆ ಜೀವನಪರ್ಯಂತ ನೆನಪಿಟ್ಟುಕೊಳ್ಳುವಂತೆ ಅರ್ಥವಾಗುವುದು.

ಆಟದ 8ನೇ ನಿಯಮ: ನಾಯಕರನ್ನು ಗೌರವಿಸಿ. ಅವರನ್ನು ಅನುಕರಿಸ ಬೇಡಿ.

ಮಕ್ಕಳು ತಮ್ಮ ಶಿಕ್ಷಕರಿಂದ, ಅವರ ಜೊತೆಗಾರರಿಂದ ಮತ್ತು ತಮ್ಮ "ನಾಯಕ"ರಿಂದ ಕಲಿಯುವರು. ಆದರೆ ಪ್ರತಿಯೊಂದು ಮಗುವಿಗೂ ತನ್ನದೇ ಆದ ವ್ಯಕ್ತಿತ್ವವಿದೆ ಮತ್ತು ಅದನ್ನು ಬೆಂಬಲಿಸುವ ಅಗತ್ಯವಿದೆ. "ನಾಯಕರು" ಏನನ್ನು ಮಾಡುತ್ತಾರೆ ಎನ್ನುವುದನ್ನು ಮಗುವಿಗೆ ತೋರಿಸಲು ನೆರವಾಗಿ ಮತ್ತು ಅವರ ಶೈಲಿಗೆ ಉತ್ತಮವಾದ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಸಹಾಯಮಾಡಿ.

ಆಟದ 9ನೇ ನಿಯಮ: ಪರಿಣಿತಿಯನ್ನು ಸಾಧಿಸಲು ಅಭ್ಯಾಸ ಬೇಕು ಮತ್ತು ಅಭ್ಯಾಸ ಸಾಕಷ್ಟು ಮಾಡಬೇಕು.

ಆಟದ ಮತ್ತು ಜೀವನದ ಈ ಮೂಲಭೂತ ನಿಯಮಕ್ಕೆ ಕ್ರೀಡೆಯು ಒಂದು ಅತ್ಯುತ್ತಮ ಶಿಕ್ಷಕನಾಗುವ ಸಾಧ್ಯತೆಯಿದೆ. ಅಭ್ಯಾಸ ಮಾಡದಿದ್ದರೆ ಅವರು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂದು ಎಲ್ಲ ಮಕ್ಕಳಿಗೆ ಅರ್ಥವಾಗುತ್ತದೆ. ಮತ್ತು ಅವರ ಸ್ನೇಹಿತರು ಪ್ರಗತಿಯನ್ನು ಹೊಂದುತ್ತಿದ್ದಾರೆ ಏಕೆಂದರೆ ಅವರು ನಿರಂತರವಾಗಿ ಮತ್ತು ಸಾಕಷ್ಟು ಸಮಯ ಅಭ್ಯಾಸ ಮಾಡುತ್ತಿದ್ದಾರೆ ಎನ್ನುವುದೂ ಅವರಿಗೆ ಅರ್ಥವಾಗುತ್ತದೆ. ಅವರನ್ನು ನಿಯಮಿತವಾಗಿ ಆಟವಾಡುವಂತೆಮಾಡಿ ಇದರಿಂದ ಅವರು ಶ್ರಮವಹಿಸಿ ಕೆಲಸ ಮಾಡುವುದರ ಮತ್ತು ಶಿಸ್ತುಪಾಲನೆಯಲ್ಲಿರುವ ಮೌಲ್ಯವನ್ನು ಮೆಚ್ಚಿಕೊಳ್ಳುವರು.

ಆಟದ 10ನೇ ನಿಯಮ: ಆಟ ನಿರಂತರವಾಗಿ ಸಾಗುತ್ತಿರುತ್ತದೆ.

ಮಗುವಿಗೆ ಆಟವಾಡುತ್ತಲೇ ಇರಬೇಕು ಎನಿಸುತ್ತದೆ. ಬಹಳ ತಡವಾಗಿದ್ದಲ್ಲಿ, ಆಟವನ್ನು ಮರುದಿನ ಮುಂದುವರೆಸಬಹುದು. ಮಳೆ ಬರುತಿದ್ದರೆ, ಮಳೆ ನಿಲ್ಲುವವರೆಗೂ ಕಾಯಬೇಕು – ಒಂದು ವೇಳೆ ಅವರಿಗೆ ಮಳೆಯಲ್ಲಿ ಆಟವಾಡಲು ಅನುಮತಿ ಇಲ್ಲದಿದ್ದರೆ! ಆಟ ಮುಗಿಯುವುದಿಲ್ಲ ಮತ್ತು ಮೋಜು, ಕಲಿಕೆ ಹಾಗೂ ಆಟದ ಆನಂದ ಎಂದಿಗೂ ಮುಗಿಯುವುದಿಲ್ಲ. ನಾವು ನಮ್ಮ ಮಕ್ಕಳಿಗೆ ಶಾಲೆಯಲ್ಲಿ ಆಟದಲ್ಲಿನ ಆನಂದದ ಅನುಭವವನ್ನು ನೀಡಲು ಸಮರ್ಥರಾದರೆ ಅವರು ಅದನ್ನು ಜೀವನದಲ್ಲೂ ಅಳವಡಿಸಿಕೊಳ್ಳುವರು. ಕಲಿಕೆಗಾಗಿ ಹೊಸದರ ಶೋಧನೆಯಲ್ಲಿ ತೊಡಗಿಕೊಳ್ಳಲು ಅವರು ತನ್ನಂತೆಯೇ ಆಟದಲ್ಲಿ ಅನುರಕ್ತಿ ಇರುವಂತಹ ಸ್ನೇಹಿತರನ್ನು ಹುಡಿಕಿಕೊಳ್ಳುವರು. ಅವರು

ಮೋಜಿಗಾಗಿ, ಕಲಿಕೆಗಾಗಿ ಮತ್ತು ಜೀವನಕ್ಕಾಗಿ ಕಲಿಯುತ್ತಲೇ ಇರಲು ಅವಕಾಶಗಳನ್ನು ಹುಡುಕಿಕೊಳ್ಳುತ್ತಲೇ ಹೋಗುವರು.

ಅನೇಕ ಬಾರಿ ಕೇಳಿರುವಂತಹ ಸೂಕ್ತಿ:

ಒಬ್ಬ ಮನುಷ್ಯನಿಗೆ ನೀವು ಒಂದು ಮೀನನ್ನು ಕೊಟ್ಟರೆ ನೀವು ಒಂದು ದಿನಕ್ಕೆ ಅವನ ಹಸಿವನ್ನು ನೀಗಿಸಬಹುದು. ಅದೇ ಮನುಷ್ಯನಿಗೆ ಮೀನು ಹಿಡಿಯಲು ನೀವು ಕಲಿಸಿದಲ್ಲಿ, ಜೀವಮಾನ ಪೂರ್ತಿ ಅವನ ಹಸಿವನ್ನು ನೀಗಿಸಿದಂತೆ. ಇದನ್ನು ವಾಸ್ತವವಾಗಿ ಹೀಗೆ ಹೇಳಬಹುದು (ಶಾಲೆಗಳಲ್ಲಿನ ಕಲಿಕಾ ವಾತಾವರಣಕ್ಕೆ ಸಂಬಂಧಿಸಿದಂತೆ):

ಒಂದು ಮಗುವಿಗೆ ನೀವು ಒಂದು ಪಾಠವನ್ನು ಕಲಿಸಿದಲ್ಲಿ ನೀವು ಒಂದು ದಿನ ಕಲಿಸಿದಂತಾಯಿತು. ಮಗುವಿಗೆ ಆಟವಾಡಲು ಕಲಿಸಿ ನೀವು ಜೀವನಕ್ಕೆ ಪಾಠವನ್ನು ಕಲಿಸಿದಂತಾಗುತ್ತದೆ. ಆಟದ ಮೈದಾನದಲ್ಲಿನ ಆಟ, ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳಿಂದಾಗುವ ಲಾಭ ಎಲ್ಲ ಶಿಕ್ಷಣ ತಜ್ಞರಿಗೂ ತಿಳಿದಿದೆ. ಆರೋಗ್ಯಕರ ಮಕ್ಕಳು. ದೈಹಿಕವಾಗಿ ಮತ್ತು ಸಾಮಾಜಿಕವಾಗಿ ಆರೋಗ್ಯವಂತರು. ಉತ್ತಮ ಶಿಸ್ತಿನವರು, ಉತ್ತಮವಾದ ಗುರಿಯೆಡೆ ಲಕ್ಷ್ಯವಿರುವವರು. ತಂಡದಲ್ಲಿ ಉತ್ತಮ ಕಾರ್ಯ ನಿರ್ವಹಣೆ ಮಾಡುವಂತಹವರು, ಹೀಗೆ ಅನೇಕ ಲಾಭಗಳನ್ನು ಆಟವಾಡಲು ಕಲಿಸುವ ಮೂಲಕ ಪಡೆಯಬಹುದು.

ಕಳೆದ ನಾಲ್ಕು ವರ್ಷಗಳಿಂದ, ರಚನಾತ್ಮಕ ಒಳಗೊಳ್ಳುವಿಕೆಯ ವಿಧಾನದಿಂದ, ಮೌಲ್ಯಮಾಪನದಿಂದ, ಶಿಕ್ಷಕರ ತರಬೇತಿಯಿಂದ, ಮತ್ತು ಕ್ರೀಡೆಗಳ ಅನುಭವಕ್ಕೆ ನಿಗಾವಹಿಸುವುರ ಮೂಲಕ "ತರಗತಿ ಕಲಿಕೆಯನ್ನು ಆಟದ ಮೈದಾನಕ್ಕೆ ವಿಸ್ತರಿಸಲು" ಪ್ರಯತ್ನಿಸುತ್ತಿದ್ದೇವೆ. ಹೀಗಾಗಿ ಆಟದ ಮೈದಾನವೂ ತರಗತಿಕೋಣೆಯಲ್ಲಿನ ಕಲಿಕೆಗೆ ಪೂರಕವಾಗಲು ಬಹಳಷ್ಟನ್ನು ಹೊಂದಿದೆ. ಆಟದ 10 ನಿಯಮಗಳನ್ನು ಕಲಿಕಾ ವಾತಾವರಣದ ವಿನ್ಯಾಸದಲ್ಲಿ ಸಂಯೋಜಿಸುವುದರಿಂದ ವಿನ್ಯಾಸದಲ್ಲಿನ ಪ್ರಮುಖ ಅಂಶವಾದ ಮಗುವಿಗೆ ಬೇಕಾದಂತಹ ವಾತಾವರಣವನ್ನು ನಿರ್ಮಿಸುವಲ್ಲಿ ನೆರವಾಗುವುದು. ಈ ವಿಧಾನ ಹೊಸದು ಮತ್ತು ಸ್ವಲ್ಪ ಕಷ್ಟಕರವಾದುದರಿಂದ ತರಗತಿ ಬೋಧನೆಯಲ್ಲಿ ಆಟವನ್ನು ಸಂಯೋಜಿಸಲು ಯಶಸ್ವಿಯಾಗುವ ಶಿಕ್ಷಕರು, ಎಲ್ಲಿ ಮಕ್ಕಳು ಇರಬಯಸುವರೋ, ಎಲ್ಲಾ ಮಕ್ಕಳು ಎಲ್ಲಿ ಕಲಿಯುವರೋ, ಎಲ್ಲಾ ಮಕ್ಕಳು ಜೀವಮಾನದಲ್ಲಿ ಉಳಿಯುವಂತಹ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಆನಂದವನ್ನು ಎಲ್ಲಿ ಬೆಳೆಸಿಕೊಳ್ಳುವರೋ ಅಂತಹ ಮಾಂತ್ರಿಕ ಕಲಿಕಾ ವಾತಾವರಣವನ್ನು ಸೃಷ್ಟಿಸಿರುತ್ತಾರೆ.

ಆಟದ ಮೋಜನ್ನು ಅನುಭವಿಸಿ!



**ಸೌಮಿಲ್**ರವರು ಐಐಟಿ ಮುಂಬೈ ಮತ್ತು ಐಐಎಂ ಬೆಂಗಳೂರಿನಲ್ಲಿ ವಿದ್ಯಾರ್ಥಿಯಾಗಿದ್ದವರು. ಇವರು ಮಹಾರಾಷ್ಟ್ರ ಬ್ಯಾಡ್ಮಿಂಟನ್ ತಂಡ ಮತ್ತು ಐಐಟಿ ಮುಂಬೈ ಫುಟ್ಬಾಲ್ ತಂಡದಲ್ಲಿ ಭಾಗವಹಿಸಿದ್ದವರು. ಸ್ಪೋರ್ಟ್ಸ್‌ವಿಲೇಜ್‌ನ ಸಂಸ್ಥಾಪಕ ನಿರ್ದೇಶಕರಾಗಿ ಮತ್ತು ಎಡುಸ್ಪೋರ್ಟ್ಸ್‌ನ ಸಹ-ಸಂಸ್ಥಾಪಕ ಮತ್ತು ಸಿಇಓ ಆಗಿ ಸೌಮಿಲ್‌ರವರು ಕಳೆದ ದಶಕದಲ್ಲಿ ಸುಮಾರು 100,000 ಮಕ್ಕಳು, 50000 ಪೋಷಕರನ್ನು ಶಾಲಾ ಕ್ರೀಡೆಯ ಹಿನ್ನೆಲೆಯಲ್ಲಿ ವೈಯಕ್ತಿಕವಾಗಿ ತೊಡಗಿಸಿಕೊಂಡಿದ್ದರು. ಭಾರತದಲ್ಲಿನ ಶಿಕ್ಷಣದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸುತ್ತಿರುವ 50 ನಾಯಕರಲ್ಲಿ ಒಬ್ಬರಾಗಿ ಎಡುಕೇಶನ್ ವರ್ಲ್ಡ್‌ನಿಂದ ಗುರುತಿಸಲ್ಪಟ್ಟಿರುವ ಸೌಮಿಲ್‌ರವರು ಶಾಲೆಗಳೊಂದಿಗೆ, ಒಕ್ಕೂಟಗಳೊಂದಿಗೆ, ನೀತಿ ರೂಪಕರೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದಾರೆ ಮತ್ತು ಮಕ್ಕಳಿಗೆ ಕ್ರೀಡೆ/ದೈಹಿಕ ಚಟುವಟಿಕೆಯಲ್ಲಿರುವ ಮೋಡಿಯನ್ನು ಅನುಭವಿಸುವಂತೆ ಮಾಡಲು ಗುಣಾತ್ಮಕ ಅವಕಾಶಗಳನ್ನು ಸೃಷ್ಟಿಸಲು ಪ್ರಾಯೋಜಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು saumil@edusports.in ಇಲ್ಲಿ ಸಂಪರ್ಕಿಸಬಹುದು.



# ತರಗತಿಯ ಹೊರಗೂ ಸಶಕ್ತಗೊಳಿಸುವ ಸ್ಥಳಗಳ ಅಗತ್ಯತೆ

ಶ್ರೀಪರ್ಣಾ ತಮ್ಹಾಣೆ

"ಮಗು ಒಂದು ಹೂ ತುಂಬಿಸಬಹುದಾದ ಹೂದಾನಿಯಲ್ಲ, ಅದು ಒಂದು ಹಚ್ಚಿ ಬೆಳಗಿಸಬಹುದಾದ ದೀಪ" ಎನ್ನುವುದು ಪುನರುಜ್ಜೀವನ ಕಾಲದ ಫ್ರೆಂಚ್ ವಿದ್ವಾಂಸರಾದ ಫ್ರಾಂಕಾಯ್ ರೆಬೆಲೈ ಅವರ ಅಭಿಪ್ರಾಯ. ಶಿಕ್ಷಣದ ನಿಜವಾದ ಉದ್ದೇಶ ಸಾಧ್ಯವಿರುವ ಎಲ್ಲಾ ವಿಧಗಳಲ್ಲೂ ಒಬ್ಬ ವ್ಯಕ್ತಿಯ ವಿಕಸನಕ್ಕೆ ಕಾರಣವಾಗುವುದು ಎಂದು ತದನಂತರದ ಶತ ಶತಮಾನಗಳಿಂದಲೂ ಅನೇಕ ಹೆಸರಾಂತ ಶಿಕ್ಷಣತಜ್ಞರು ಪ್ರತಿಪಾದಿಸುತ್ತಿದ್ದಾರೆ. ಹೀಗಿದ್ದಾಗ್ಯೂ ನಾವು ನಮ್ಮ ಶಾಲೆಗಳಲ್ಲಿ "ಹೂದಾನಿಯನ್ನು ತುಂಬಿಸುವುದರಲ್ಲೇ" ಮಗ್ನರಾಗಿದ್ದು "ದೀಪ ಬೆಳಗಿಸುವುದು" ಎನ್ನುವುದು ನಮ್ಮ ಒಟ್ಟಾರೆ ಕಾರ್ಯಸೂಚಿಯಲ್ಲಿ ಸ್ಥಳವನ್ನೇ ಕಾಣುತ್ತಿಲ್ಲ ಏಕೆ? ಶಿಕ್ಷಣವೆನ್ನುವುದು ಮಾಹಿತಿಯ ವರ್ಗಾವಣೆ ಮಾತ್ರ, ಇಲ್ಲಿ ಒಬ್ಬರ ಜೀವನದ ಕೇಂದ್ರಬಿಂದುವೆಂದರೆ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡುವುದು ಮಾತ್ರ ಎಂದು ಏಕೆ ಬದಲಾಯಿಸಿಬಿಟ್ಟಿದ್ದೇವೆ?

ಒಂದು ಗಿಡದ ಬೆಳವಣಿಗೆಗೆ ಹೇಗೆ ಸರಿಯಾದ ಮಣ್ಣಿನ ಅವಶ್ಯಕತೆ ಇದೆಯೋ ಹಾಗೆಯೇ ಒಂದು ಮಗುವಿನ ವಿಕಸನಕ್ಕೆ ಸರಿಯಾದ ವಾತಾವರಣದ ಅಗತ್ಯವಿದೆ. ಶಾಲೆಯಲ್ಲೇ ಆಗಲಿ, ಮನೆಯಲ್ಲೇ ಆಗಲಿ ಸರಿಯಾದ ವಾತಾವರಣವೆಂದರೆ ಮಗುವಿಗೆ ತನ್ನನ್ನು ತಾನು ಅರಿತುಕೊಳ್ಳಲು, ತನಗಿರುವ ಶಕ್ತಿಯನ್ನು ಗುರುತಿಸಿಕೊಳ್ಳಲು, ಆತ್ಮಬಲವನ್ನು ಗಳಿಸಿಕೊಳ್ಳಲು ಅವಕಾಶವನ್ನು ನೀಡುವಂತಹುದು.

ಹೀಗಿದ್ದರೂ, ನಮ್ಮಲ್ಲಿ ಕೊರತೆ, ಮತಿವಿಕಲ್ಪತೆ, ಭಯ, ಅಭದ್ರತೆಯನ್ನು ನಿವಾರಿಸಿ ಆತ್ಮವಿಶ್ವಾಸವನ್ನು ತುಂಬುವ, ನಮ್ಮಲ್ಲಿ ಸಹಾನುಭೂತಿಯನ್ನು, ಸ್ವತಂತ್ರವಾಗಿ ಆಲೋಚಿಸುವ ಮತ್ತು ಸೂಕ್ತ ಆಯ್ಕೆಗಳನ್ನು ಮಾಡುವ ಸಾಮರ್ಥ್ಯವನ್ನು ನೀಡಿ ನಮ್ಮನ್ನು ಪರಿಪೂರ್ಣ ವಯಸ್ಕವ್ಯಕ್ತಿಗಳನ್ನಾಗಿ ಮಾಡುವುದಕ್ಕೆ ಮತ್ತು ಜೀವನವನ್ನು ಎದುರಿಸಲು ಸಜ್ಜುಗೊಳಿಸುವುದಕ್ಕೆ ಕಾರಣವಾದಂಥ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ನಮ್ಮ ಶಾಲಾ ಪರಿಸರಕ್ಕೆ ನಮ್ಮಲ್ಲಿ ಎಷ್ಟು ಜನರು ಪ್ರಾಮಾಣಿಕವಾಗಿ ಕೊಡಬಲ್ಲೆವು?

ನಾವು ತರಗತಿಯೊಳಗಿನ ವಾತಾವರಣ ಮತ್ತು ತರಗತಿಯ ಹೊರಗೆ ನಡೆಯುವ ಸಂವಾದದ ಸ್ಥಳ ಇವೆರಡರ ಕಡೆಗೆ ಗಮನವನ್ನೇ ಹರಿಸಿಲ್ಲ ಮತ್ತು ಒಂದು ಮಗುವಿನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಇದರ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ.

ಒಂದು ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಆ ಮಗುವಿನ ಪೋಷಕರು ಮತ್ತು ಕಾಳಜಿವಹಿಸುವ ಇನ್ನಿತರರು ಆ ಮಗುವನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎನ್ನುವುದರ ಪರಿಣಾಮವೂ ಇರುತ್ತದೆ. ಪ್ರೀತಿ ಮತ್ತು ಬೆಂಬಲ ನೀಡುವ ವಾತಾವರಣವು ಯಾವುದೇ ಒಪ್ಪಿಕೊಳ್ಳುವಿಕೆಯ ಮತ್ತು ಪ್ರಶಂಸೆಯ ಚಿಂತೆ ಇಲ್ಲದೇ ಮಕ್ಕಳು ಸಹಜವಾಗಿ ಕಲಿಯುವಂತೆ ಮಾಡುತ್ತದೆ. ಹೀಗಾಗಿ ಮಗುವಿನ ಭಾವನಾತ್ಮಕ ಪರಿಸರವು ಭೌತಿಕ ಪರಿಸರದಂತೆಯೇ ಪ್ರಮುಖವಾದದ್ದು. ಭೌತಿಕ ಪರಿಸರಕ್ಕೇ ಪರದಾಡಬೇಕಾಗಿರುವಂತಹ ನಮ್ಮ ದೇಶದಲ್ಲಿ, ಭಾವನಾತ್ಮಕ ಪರಿಸರವು ಬಹು ದೂರದ ಮಾತು. ಹೀಗಿದ್ದ'ರೂ ಪೋಷಣೆ ನೀಡುವ ಪರಸರಕ್ಕೆ, ಅಕ್ಕರೆ, ಅರ್ಥಮಾಡಿಕೊಳ್ಳುವುದು, ಸಹೃದಯತೆ ಮತ್ತು ಸೂಕ್ಷ್ಮತೆಯಿಂದ ಮಕ್ಕಳೊಡನೆ ವ್ಯವಹರಿಸುವ ವಯಸ್ಕರನ್ನು ಹೊರತುಪಡಿಸಿ ಬೇರಿನ್ನಾವ ಸೌಕರ್ಯದ ಅವಶ್ಯಕತೆ ಇರುವುದಿಲ್ಲ.

ಮಗುವಿಗೆ ಪ್ರಜಾಸತ್ತಾತ್ಮಕ ವ್ಯಕ್ತಿಸ್ವಾತಂತ್ರ್ಯವನ್ನು ಪೋಷಿಸಲು ತರಗತಿಕೋಣೆಯೇ ಮೊದಲು ಸಂದರ್ಭವನ್ನು ಒದಗಿಸುತ್ತದೆ. ಇಲ್ಲಿ ಪ್ರತಿಯೊಬ್ಬರೂ ಗೌರವಿಸಲ್ಪಡುತ್ತಾರೆ ಮತ್ತು ಭಯರಹಿತ ಪರಿಸರದಲ್ಲಿ ತಮ್ಮದೇ ಆದ ವೇಗ ಅಥವಾ ಗತಿಯಲ್ಲಿ ಕಲಿಯುವ

ಆನಂದದಾಯಕ ವಾತಾವರಣವಿರುತ್ತದೆ. ಮಕ್ಕಳು ಸಂತೋಷವಾಗಿ ಮತ್ತು ಮುಕ್ತವಾಗಿ ಇದ್ದಾಗ ಅತ್ಯುತ್ತಮವಾಗಿ ಕಲಿಯುತ್ತಾರೆ. ಹಾಗೆಂದರೆ ಯಾವಾಗಲೂ ಅವರಿಗೆ ಅನಿಸಿದ್ದನ್ನೇ ಮಾಡುವ ಸ್ವಾತಂತ್ರ್ಯ ಎಂದಲ್ಲ, ಆದರೆ ಶೋಧಿಸಿನೋಡಲು, ಅರ್ಥ ಕಲ್ಪಿಸಿಕೊಳ್ಳಲು ಮತ್ತು ತಮಗನಿಸಿದ್ದನ್ನು ಹೇಳಲು ಮುಕ್ತತೆ ಇರುವಲ್ಲಿ ಅತ್ಯುತ್ತಮ ಕಲಿಕೆ ಸಾಧ್ಯವಾಗುತ್ತದೆ. ಸಾಕಷ್ಟು ಅವಕಾಶಗಳನ್ನು ಮಗುವಿಗೆ ಒದಗಿಸದಿದ್ದಲ್ಲಿ ಮಕ್ಕಳ ಬೆಳವಣಿಗೆ, ಅದರಲ್ಲೂ ವಿಷಯ ಗ್ರಹಿಕೆ ವಲಯದಲ್ಲಿ ಅವರ ಬೆಳವಣಿಗೆ ಆಗುತ್ತದೆ ಎಂದು ಬಯಸುವುದು ಸಾಧ್ಯವಿಲ್ಲ. ನಾಟಕ, ಸಂಗೀತ, ನೃತ್ಯ, ಕಲೆ, ಕುಶಲ ಕಲೆಗಳು, ಮುಕ್ತತೆಯನ್ನು ಹೊಂದಿರುವ ಆಟಗಳ ಮೂಲಕ ವಿವಿಧ ಅವಕಾಶಗಳನ್ನು ಮಗುವಿಗೆ ಒದಗಿಸಬಹುದು ಮತ್ತು ಒಂದು ಮಗುವಿನ ಬೆಳವಣಿಗೆಯಾಗಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸುವಲ್ಲಿ ಇವು ಪರಿಣಾಮಕಾರಿ ವಿಧಾನಗಳು. ಮಕ್ಕಳ ಭಾವನಾತ್ಮಕ ಪ್ರಪಂಚಕ್ಕೆ ತಕ್ಕಂತೆ ಅವನ್ನು ಅಣಿಗೊಳಿಸುವುದೂ ಬಹಳ ಮುಖ್ಯ. ಮಾತುಕತೆ, ನಡಿಗೆ, ಜೊತೆಯಲ್ಲಿ ಮಾಡುವ ಚಟುವಟಿಕೆ ಅಥವಾ ಆಡಬಹುದಾದ ಆಟಗಳ ಮೂಲಕ ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ಸಮಯವನ್ನು ಕಳೆಯಬಹುದು. ನಾನು ಜ್ಞಾಪಿಸಿಕೊಳ್ಳಬಹುದಾದ ಒಂದು ಸರಳ ಪ್ರಕ್ರಿಯೆ ಎಂದರೆ "ಸಿಟ್ಟು, ದುಃಖ ಮತ್ತು ಸಂತೋಷ" ಎಂದು ನಾವು ಹೆಸರಿಸಿದ ವೃತ್ತದಲ್ಲಿ ಕುಳಿತು ಪರಸ್ಪರ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುವ ಚಟುವಟಿಕೆ. ಇದು ನಮ್ಮ ತರಗತಿಯ ಒಳಗಿನ ಪರಸ್ಪರ ಒಡನಾಟಕ್ಕೆ ಅತ್ಯಂತ ಹೆಚ್ಚಿನ ಮೌಲ್ಯವನ್ನು ನೀಡಿತ್ತು. ಚಟುವಟಿಕೆಯ ಹೆಸರೇ ಸೂಚಿಸುವಂತೆ, ನಾವು ಪ್ರತಿಯೊಬ್ಬರೂ – ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಾವು ಕೋಪಗೊಂಡ, ದುಃಖಿತರಾದ ಮತ್ತು ಸಂತೋಷವನ್ನು ಅನುಭವಿಸಿದ ವಿಷಯಗಳನ್ನು ಹಂಚಿಕೊಳ್ಳುತಿದ್ದೆವು. ಪ್ರಾರಂಭದಲ್ಲಿ ಹಿಂಜರಿದರೂ, ಮಕ್ಕಳು ತಮ್ಮ ಸಂತೋಷ, ದುಃಖ ಮತ್ತು ಹತಾಶೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದಕ್ಕೆ ಪರಸ್ಪರರಲ್ಲಿ ನಂಬಿಕೆಯನ್ನು ಬೆಳಸಿಕೊಂಡರು. ಮುಕ್ತವಾಗಿ ಈ ರೀತಿ ಹೇಳಿಕೊಳ್ಳುವುದರಿಂದ ಪರಸ್ಪರರನ್ನು ಉತ್ತಮವಾಗಿ ಅರಿತುಕೊಳ್ಳಲು ಸಹಾಯಕವಾಯಿತು ಎನ್ನುವುದು ಇಲ್ಲಿ ತನ್ನಿಂದ ತಾನೇ ಸ್ಪಷ್ಟವಾಗುತ್ತದೆ. ಇದು ಯಾವಾಗಲೂ ನಮಗೆ ತಿದ್ದಿಕೊಳ್ಳಲು ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಅವಕಾಶವನ್ನು ಕೊಡುತಿತ್ತು. ಒಬ್ಬ ಶಿಕ್ಷಕನಾಗಿ, ಮಕ್ಕಳ ಒಳ ಪ್ರಪಂಚದ ಒಂದು ಸಣ್ಣ ನೋಟ ನನಗೆ ತಿಳಿಯುತಿತ್ತು ಮತ್ತು ಇದರಿಂದ ನಾನು ಅವರನ್ನು ಪರಿಣಾಮಕಾರಿಯಾಗಿ ತಲುಪಲು ನೆರವಾಗುತಿತ್ತು.

ನಾವು ತರಗತಿ ಪರಿಸರದ ಬಗ್ಗೆ ಪದೇ ಪದೇ ಮಾತನಾಡುತ್ತಿರುತ್ತೇವೆ. ಆದ್ದರಿಂದ, ನಾನು ಇಲ್ಲಿ ತರಗತಿಯ ಹೊರಗಿನ ವಾತಾವರಣದ ಬಗ್ಗೆ ವಿಶೇಷವಾಗಿ ಗಮನ ಸೆಳೆಯಲು ಬಯಸುತ್ತೇನೆ. ಈ ಸ್ಥಳಗಳೇ ಎಳೆಯ ಮನಸ್ಸನ್ನು ರೂಪಿಸುತ್ತವೆ ಆದ್ದರಿಂದ ಅವುಗಳನ್ನು ಇಲ್ಲಿ ಸೂಕ್ಷ್ಮಭಾವದಿಂದ ನಡೆಸಿಕೊಳ್ಳ ಬೇಕಾದ ಅತ್ಯಾವಶ್ಯಕತೆ ಇದೆ.

ನಾವು ಶಾಲಾ ಸಭೆಯ ಬಗ್ಗೆ ಮಾತನಾಡುವುದರಿಂದ ಪ್ರಾರಂಭಿಸೋಣ. ಶಾಲಾ ಸಭೆಯನ್ನು ನಡೆಸುವ ವಿಧಾನವು ಶಾಲಾ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಈ ಸಮಯದಲ್ಲಿಯೇ ಸಂಪೂರ್ಣ ಶಾಲೆಯು ಸೇರುವುದರಿಂದ ಇಲ್ಲಿ ಎಳೆಯ ಮನಸ್ಸುಗಳನ್ನು ಚಿಂತನೆ, ಚರ್ಚೆ, ವಿವಿಧ ಕಲೆಗಳನ್ನು ಉಪಯೋಗಿಸಿ ಅಭಿವ್ಯಕ್ತಗೊಳಿಸುವುದನ್ನು ಜ್ಞಾನವನ್ನು ಹೆಚ್ಚಿಸಲು, ಪ್ರೇರೇಪಿಸಲು ಮತ್ತು ಸಶಕ್ತಗೊಳಿಸಲು ಸದುಪಯೋಗ ಪಡೆದುಕೊಳ್ಳುವ ವಿಪುಲ ಅವಕಾಶಗಳಿವೆ. ಹೀಗಿದ್ದರೂ ಅನೇಕ ಬಾರಿ ನಾವು ಈ ಪವಿತ್ರ ಕ್ಷೇತ್ರವನ್ನು ಒಬ್ಬರೊಡನೊಬ್ಬರು ಹಂಚಿಕೊಂಡು ಬೆಳೆಯುವ ಜಾಗವಾಗಿರಿಸದೆ ಮಕ್ಕಳು ಸ್ಪರ್ಧೆ ನಡೆಸಿ ಉತ್ತಮ ಸಾಧನೆ ತೋರಿಸತಕ್ಕ ಕ್ಷೇತ್ರವನ್ನಾಗಿ ಮಾಡಿಬಿಡುತ್ತೇವೆ. ಇದೇನು ಮಕ್ಕಳು ಸಾಲಾಗಿ ಸರಿಯಾಗಿ ನಿಲ್ಲುವರೇ ಅಥವಾ ಅವರು ಯಾವಾಗಲೂ ಬಹಳ ನೀಟಾದ ಸರಿಯಾದ ಸಮವಸ್ತ್ರ ಧರಿಸಿಬರುತ್ತಾರೆಯೇ ಎಂಬುದನ್ನು ತಪಾಸಣೆ ಮಾಡುವ ಜಾಗವೇ ಅಥವಾ ಕೇವಲ ಬಲು ಜಾಣ ಮಕ್ಕಳು ಮಾತ್ರವೇ ತಮ್ಮ ಸಾಧನೆ ತೋರುವ ಜಾಗವೇ ಅಥವಾ ಪ್ರತಿಮಗುವಿನಲ್ಲೂ ಇರುವ ವಿಶೇಷತೆಯನ್ನು ಹೊರತರುವ ವೇದಿಕೆಯೇ? ನನ್ನ ಜೀವನದ ಬಲು ಹೃದಯಸ್ಪರ್ಶಿ ಘಟನೆಯೆಂದರೆ ಒಂದು ಅಂಗ ವಿಕಲ ಮಗುವನ್ನು ಆ ದಿನದ ಸುದ್ದಿ ಸಮಾಚಾರವನ್ನು ಓದಲು ವೇದಿಕೆಯ ಮೇಲೆ ಸಹಾಯ ಮಾಡಿ ಹತ್ತಿಸಿದ್ದು ಅವಳು ಮುಗ್ಗರಿಸಿಬಿದ್ದು ಮೈಕ್ ಮುಂದೆ ಹೇಗೇಗೋ ನಿಂತು ಓದಿದಳು ಅವಳ ಗೊಗ್ಗರು ಧ್ವನಿಯ ಕೇಳಿಸಲು ಆಗದೇ ಇದ್ದಂತಹ ಅತ್ಯುತ್ತಮ ಎಂದು ಹೇಳಲಾಗದ ಸುದ್ದಿ ನಿರೂಪಣೆಯು ಅವಳಲ್ಲಿ ಆತ್ಮ ವಿಶ್ವಾಸತುಂಬಿದ ಮತ್ತು ಪ್ರೇಕ್ಷಕ ವರ್ಗದಲ್ಲಿ ಸಹಾನುಭೂತಿ ತುಂಬಿದ ಜೀವನ ಪರ್ಯಂತದ ಪಾಠವಾಗಿತ್ತು.

ಶಾಲೆಯಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಇದನ್ನು ಅನ್ವಯಿಸಿಕೊಳ್ಳಬಹುದು. ಒಬ್ಬ ಶಿಕ್ಷಕರು ತನ್ನ ಮಾನಸಿಕ ಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿಕೊಂಡು ತನ್ನ ಸರಿಯಾದ ನಿರ್ವಹಣೆಯ ಬಗ್ಗೆ ಗಮನಹರಿಸುವಾಗ ಉಂಟಾಗುವ ಹೆಚ್ಚಿನ ಒತ್ತಡ ಮಕ್ಕಳಿಗೂ ವರ್ಗಾವಣೆಯಾಗುತ್ತದೆ, ಇದಕ್ಕಿಂತಾ ಹೆಚ್ಚಾಗಿ ಇದು ಅವಳ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ

ಎಂದು ಗ್ರಹಿಸಲಾಗುವುದರಿಂದ ಈ ಒತ್ತಡ ಇನ್ನೂ ಹೆಚ್ಚು. ನಿರಾಕರಣೆಯಿಂದ ಘಾಸಿಗೊಂಡ ಮಕ್ಕಳನ್ನು ಎಷ್ಟು ಬಾರಿ ನೋಡಿಲ್ಲ? ಯೋಜನಾ ಕಾರ್ಯದಿಂದ ಒತ್ತಡಕ್ಕೆ ಒಳಗಾದವರನ್ನು ಹಾಗೂ ಚಿಂತಿಸಲು ಮತ್ತು ವ್ಯಕ್ತಪಡಿಸಲು, ಆಯ್ಕೆಮಾಡಿಕೊಳ್ಳಲು ಅವರಿಗೆ ಸಾಕಷ್ಟು ಅವಕಾಶಗಳನ್ನು ನೀಡದಿದ್ದಾಗ ಉಂಟಾಗುವ ಒತ್ತಡ ಮತ್ತು ಅದನ್ನು ಪ್ರದರ್ಶಿಸಲು ಇರವ ನಿರ್ಬಂಧ ಅವರನ್ನು ಹೈರಾಣು ಮಾಡುವುದನ್ನು ನಾವೆಷ್ಟು ಬಾರಿ ಕಂಡಿಲ್ಲ?

ಶಾಲೆಯಲ್ಲಿರುವ ಇನ್ನಿತರ ಸ್ಥಳಗಳಂತೆಯೇ, ಇಲ್ಲಿಯೂ ನಿರ್ದೇಶನವನ್ನು ಮಾತ್ರ ಪಾಲಿಸುವಂತೆ ನಿರೀಕ್ಷಿಸ-ಲಾಗುತ್ತದೆಯಲ್ಲದೇ ಬೇರೆ ನಡೆಗಳನ್ನು ತೆಗೆದುಕೊಳ್ಳಲು ಅಲ್ಲ. ಏಕೆಂದರೆ ಮಕ್ಕಳು ಗೊಂದಲವನ್ನು ಮಾತ್ರ ಸೃಷ್ಟಿಸಬಲ್ಲರು ಎನ್ನುವ ಒಂದು ತಪ್ಪುಕಲ್ಪನೆ ಇದರ ಹಿಂದಿರುತ್ತದೆ. ವೇದಿಕೆಯ ಮೇಲೆ ಪ್ರದರ್ಶನ ನೀಡುವುದು ಸಮಯಾಂತರದಲ್ಲಿ ಮಕ್ಕಳಲ್ಲಿರುವ ನಾಚಿಕೆ, ಹಿಂಜರಿಕೆ ಮತ್ತು ಸಂಕೋಚವನ್ನು ನಿವಾರಿಸುತ್ತದೆ. ಹೀಗಿದ್ದಾಗ್ಯೂ ದುರದೃಷ್ಟಕರವಾಗಿ, ಅತ್ಯುತ್ತಮ ಎಂದು ಪರಿಗಣಿಸಿರುವವರಿಗೆ ಮಾತ್ರ ಅವಕಾಶ ಸಿಗುತ್ತದೆ ಉಳಿದವರನ್ನು ಪ್ರದರ್ಶನ ಹಾಳುಗೆಡುವವರು ಎಂದು ಗುಂಪುಮಾಡಿ ಅವರನ್ನು ಇದರಿಂದ ದೂರ ಇಡಲಾಗುತ್ತದೆ. ತುಲನಾತ್ಮಕವಾಗಿ ಕಡಿಮೆ ಸಾಮರ್ಥ್ಯವನ್ನು ಹೊಂದಿರುವವರಿಗೆ ಅವಕಾಶಗಳನ್ನು ಕೊಡುವುದರಿಂದ ಅವರ ಆತ್ಮವಿಶ್ವಾಸವು ಆಶ್ಚರ್ಯವೆನಿಸುವಂತೆ ಬಹಳ ವರ್ಧಿಸುತ್ತದೆ. ಸಶಕ್ತಗೊಳಿಸುವ ಪರಿಸರವನ್ನು ಒದಗಿಸುವ ದಿಶೆಯಲ್ಲಿ ಶಾಲೆಯು ತೆಗೆದುಕೊಳ್ಳ ಬಹುದಾದ ಒಂದು ಅತ್ಯುತ್ತಮ ಹೆಜ್ಜೆ ಎಂದರೆ ವಿದ್ಯಾರ್ಥಿಗಳು ಹೇಗೇ ಇರಲಿ ಅವರಿಗೆ ಪ್ರದರ್ಶನ ನೀಡಲು ಅವಕಾಶವನ್ನು ನೀಡುವುದಾಗಿದೆ. ಪಾಲ್ಗೊಳ್ಳುವುದರಲ್ಲಿ ಆಸ್ಥೆ ತೋರಬೇಕೆ ವಿನಾ ಉತ್ತಮ ಪ್ರದರ್ಶನವನ್ನು ನೀಡಲೇ ಬೇಕು ಎನ್ನುವುದರ ಮೇಲೆ ಅಲ್ಲ. ಇದರಿಂದ ಎಲ್ಲೋ ಕೆಲವರಿಗೆ ಮಾತ್ರವಲ್ಲದೇ ಪ್ರತಿಯೊಬ್ಬರಿಗೂ ಲಾಭವಾಗುತ್ತದೆ.

ಭರ್ಜರಿ ಕಲಿಕೆಯಾಗುವ ಇನ್ನೊಂದು ಸ್ಥಳವೆಂದರೆ ಆಟದ ಮೈದಾನ. ಇಲ್ಲಿ ತಲ್ಲೀನತೆ, ಅಭ್ಯಾಸ, ಪಟ್ಟುಬಿಡದ ತಾಲೀಮು ಹಾಗೂ ತಂಡದಲ್ಲಿ ಒಂದಾಗಿ ಆಡುವ ಮನೋಭಾವ ಹೊಂದುವುದನ್ನು ಮಾತ್ರವಲ್ಲದೇ ಆರೋಗ್ಯಕರ ಸ್ಪರ್ಧಾ ಮನೋಭಾವವನ್ನೂ ಕಲಿಯುವರು. ಆರೋಗ್ಯಕರ ಸ್ಪರ್ಧೆ ಎನ್ನುವ ಪದ ಇಲ್ಲಿ ವಿರೋಧಾಭಾಸವಾಗಿ ಕಂಡು ಬಂದರೂ ಇಲ್ಲಿ ಪರಿಗಣಿಸಬೇಕಾದ ಒಂದು ಅಂಶವಿದೆ. ಕ್ರೀಡಾ ವಲಯದಲ್ಲಿ ಭಾವಾವೇಶ ಹೆಚ್ಚಾಗಿರುವುದರಿಂದ ಮಕ್ಕಳನ್ನು ಸ್ಪರ್ಧೆಯಿಂದ ದೂರ ಇಡುವುದು ಸಾಧ್ಯವಿಲ್ಲ. ಗೆಲ್ಲಲು ತಮ್ಮ ಅತ್ಯುತ್ತಮ ಪ್ರಯತ್ನವನ್ನು ಮಾಡಬೇಕು ಆದರೆ ಸೋಲುವ ಸಂದರ್ಭ ಬಂದಲ್ಲಿ ಗೌರವಯುತವಾಗಿ ಸೋಲನ್ನು ಒಪ್ಪಿಕೊಳ್ಳುವ ಮನೋಭಾವವನ್ನು ಬೆಳಸಿಕೊಳ್ಳಬೇಕು ಎನ್ನುವುದನ್ನು ಮಕ್ಕಳಿಗೆ ಕಲಿಸಬಹುದು; ಅಂದರೆ ಸಮರ್ಥ ಎದುರಾಳಿಯನ್ನು ಮೆಚ್ಚಿಕೊಳ್ಳುವುದು, ಆಟವನ್ನು ಆಟವಾಡುವುದಕ್ಕಾಗಿಯೇ ಮೆಚ್ಚಿಕೊಳ್ಳುವುದು ಮತ್ತು ಸಮರ್ಥರನ್ನು ಯಾವುದೇ ಪೂರ್ವಾಗ್ರಹವಿಲ್ಲದೇ ಮೆಚ್ಚಿಕೊಳ್ಳುವುದು; ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವುದು, ತಮ್ಮ ಮತ್ತು ಇತರರ ಗೆಲುವನ್ನು ಆಚರಿಸುವುದು. ಕೊನೆಯದಾಗಿ ಕ್ರೀಡಾಪಟುತ್ವದ ಹುರುಪನ್ನು ಬೆಳಸಿಕೊಳ್ಳುವುದನ್ನು ಕಲಿಸಬೇಕು. ಏಕೆಂದರೆ ಆ ಮನೋಭಾವವಿಲ್ಲದ ಮನುಷ್ಯ ಜೀವನದಲ್ಲಿ ಅಪೂರ್ಣವಾಗುಳಿಯುತ್ತಾನೆ.

ನನ್ನ ಮನಸ್ಸಿನಲ್ಲಿ ಸದಾ ಹಚ್ಚ ಹಸಿರಾಗಿಯೇ ಉಳಿದಿರುವ ಒಂದು ಘಟನೆ ಬಗ್ಗೆ ನಾನು ಹೇಳಲೇ ಬೇಕು. ಅದೊಂದು ರಿಲೆ ಓಟದ ಪಂದ್ಯ, ಇಲ್ಲಿ ಪ್ರತಿಯೊಬ್ಬ ಪಟುವೂ ಇನ್ನೊಬ್ಬರನ್ನು ಹಿಂದೆಹಾಕಲು ಓಡುತಿದ್ದರು. ಪಂದ್ಯ ಅಂತಿಮ ಘಟ್ಟಕ್ಕೆ ಬಂದಿತ್ತು, ಇಲ್ಲಿ ಒಬ್ಬ ಹುಡುಗಿ ಇತರರಿಗಿಂತ ಬಹಳ ಮುಂದಿದ್ದಳು, ಖಂಡಿತವಾಗಿಯೂ ಅವಳೇ ಗೆಲ್ಲುವಂತಿತ್ತು. ಪ್ರಚಂಡ ಕರತಾಡನದ ನಡುವೆ ಗೆಲುವಿನ ಗೆರೆಯನ್ನು ಮುಟ್ಟುವ ಕೆಲವು ಹೆಜ್ಜೆಗಳಿಗೆ ಮುಂಚೆ ಅವಳು ತಡೆದು ನಿಂತಿದ್ದು ಎಲ್ಲರ ಕುತೂಹಲವನ್ನು ಕೆರಳಿಸಿತ್ತು. ಅವಳು ಉಳಿದ ಮೂರು ಜನರು ತಲುಪುವವರೆಗೂ ಕಾದಳು. ಅವರು ಬಂದು ಸೇರಿದ ಅನಂತರ ಅವರೆಲ್ಲರೂ ಕೈ ಕೈ ಹಿಡಿದು ಮುಕ್ತಾಯದ ಗೆರೆಯವರೆಗೂ ಓಡಿದರು ಇದು ಕ್ರೀಡಾಂಗಣದಲ್ಲಿ ಎಂದೂ ಕಂಡು ಕೇಳರಿಯದ ವಿಷಯವಾಗಿತ್ತು ಆದರೆ ಆ ದಿನ ಒಬ್ಬ ಚಿಕ್ಕ ಹುಡುಗಿ ಆಟದ ನಿಯಮವನ್ನು ಅಪೂರ್ವವಾಗಿ ಬದಲಾಯಿಸಿದಳು. ಇದು ಹಿಂದೆಂದೂ ಕಂಡಿಲ್ಲದ್ದು ಮತ್ತು ಕೇಳರದಂತಹದ್ದು!

ಶಿಕ್ಷಕ ಮತ್ತು ಪೋಷಕರ ಸಭೆಗೆ ಹಾಜರಾಗುವ ಆಲೋಚನೆಗೇ ಹಿಂಜರಿಯುವ ಮಗುವನ್ನಾಗಲೀ ಅಥವಾ ತಂದೆತಾಯಿಗಳನ್ನಾಗಲೀ ಎಂದಾದರೂ ಕಂಡಿರುವಿರಾ? ಬುದ್ಧಿವಂತ ಮಕ್ಕಳ ತಂದೆತಾಯಿಗಳಿಗೆ ಅದು ಸಂತೋಷಕ್ಕೆ ಹುರುಪು ತುಂಬಿದರೆ, ಶೈಕ್ಷಣಿಕವಾಗಿ ಅಂತಹಾ ಚುರುಕಿಲ್ಲದ, ಅಥವಾ ತಮ್ಮ ಹೋಂವರ್ಕನ್ನು ಮಾಡದ, ತಮ್ಮ ವಸ್ತುಗಳನ್ನು ಕಳೆದುಕೊಂಡುಬರುವ ಮಕ್ಕಳ ಪೋಷಕರಿಗೆ ಇದು ಯಮ ಯಾತನೆ. ಇಂತಹಾ ಸಭೆಯಲ್ಲಿ ಬಂಡಿಗಟ್ಟಳೆ ದೂರುಗಳನ್ನು ನಯ ನಾಜೂಕಿಲ್ಲದೆ ಎಲ್ಲರ ಎದುರಿಗೂ ಹೇಳಲಾಗುತ್ತದೆ. ಇಂತಹಾ ಒಂದು ಸಭೆಯಲ್ಲಿ ಪ್ರತಿಯೊಬ್ಬ ಶಿಕ್ಷಕರೂ ತನ್ನ ಬಗ್ಗೆ ದೂರು ಹೇಳಿದ್ದರಿಂದಾಗಿ ನಿಯಂತ್ರಣಕ್ಕೇ ಸಿಗದಂತೆ ಅಳುತಿದ್ದ ಮಗುವಿನ ಮುಖ ನನಗಿನ್ನೂ ನೆನಪಿದೆ. ಆ ಮಗುವಿನ

ಸ್ವ-ಪ್ರತಿಷ್ಠೆ ಮತ್ತು ಆತ್ಮವಿಶ್ವಾಸಕ್ಕೆ ಆ ದಿನ ಈ ಎಲ್ಲರಿಂದ ಸಾಕಷ್ಟು ಧಕ್ಕೆಯಾಗಿತ್ತು ಎಂದು ನನಗೆ ಅನಿಸುತ್ತದೆ. ಶಾಲೆಯಲ್ಲಿನ ಇಂತಹಾ ಸಭೆ ಸಂಧರ್ಭಗಳನ್ನು ಮಕ್ಕಳ ಆತ್ಮಗೌರವ, ಖಾಸಗೀತನ ಮತ್ತು ವಿಭಿನ್ನತೆಯನ್ನು ಗೌರವಿಸುವಂತೆ ರೂಪಿಸಬೇಕು. ಹಿಮ್ಮಾಹಿತಿಯನ್ನು ನೀಡುವಾಗ ಸೂಕ್ಷ್ಮತೆಯನ್ನು ಹೊಂದಿರಬೇಕಾದಂತಹ ಕಾಲವಿದು. ಶಿಕ್ಷಕ ಮತ್ತು ಪೋಷಕರ ಸಭೆ, ಎಂದೆಂದೂ ಸಶಕ್ತಗೊಳಿಸಬೇಕಾದ ಅಥವಾ ಶಕ್ತಿಹೀನ-ಗೊಳಿಸಬಹುದಾದ ಮತ್ತೊಂದು ಸ್ಥಳವಾಗಿದ್ದು ಅದನ್ನು ಯಾವ ರೀತಿ ಬಳಸಿಕೊಳ್ಳಲಾಗುವುದು ಎಂಬುದನ್ನು ಅವಲಂಬಿಸಿರುತ್ತದೆ. ಯಾವ ಅಂಶಗಳನ್ನು ಹೊರತರಬೇಕೋ ಅದನ್ನು ಕಡೆಗಣಿಸದೇ ಮಗುವಿನಲ್ಲಿರುವ ಅತ್ಯುತ್ತಮ ಅಂಶವನ್ನು ಹೊರತರಲು ಯಾರಾದರೂ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇ ಆದರೆ, ಜೀವಿಸಲು ಸಾಧುವೆನಿಸಿದ ಕರುಣಾಪೂರಿತ ಪ್ರಪಂಚ ನಮ್ಮದಾಗುತ್ತದೆ! ಮಗುವಿನಲ್ಲಿರುವ ಕೊರತೆಯನ್ನು ಎತ್ತಿ ತೋರಿಸದೇ ಆ ಮಗುವಿನಲ್ಲಿರುವ ಸಾಮರ್ಥ್ಯವನ್ನು ಎತ್ತಿ ತೋರಿಸಿದರೆ ಆ ಮಗುವಿನಲ್ಲಿ ಆತ್ಮವಿಶ್ವಾಸ ಹುಟ್ಟಿಕೊಳ್ಳುತ್ತದೆ.

ಎಂದೆಂದೂ ಸಶಕ್ತಗೊಳಿಸಬೇಕಾದ ಅಥವಾ ಶಕ್ತಿಹೀನ-ಗೊಳಿಸಬಹುದಾದ ಮತ್ತೊಂದು ಸ್ಥಳವಾಗಿದ್ದು ಅದನ್ನು ಯಾವ ರೀತಿ ಬಳಸಿಕೊಳ್ಳಲಾಗುವುದು ಎಂಬುದನ್ನು ಅವಲಂಬಿಸಿರುತ್ತದೆ. ಯಾವ ಅಂಶಗಳನ್ನು ಹೊರತರಬೇಕೋ ಅದನ್ನು ಕಡೆಗಣಿಸದೇ ಮಗುವಿನಲ್ಲಿರುವ ಅತ್ಯುತ್ತಮ ಅಂಶವನ್ನು ಹೊರತರಲು ಯಾರಾದರೂ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇ ಆದರೆ, ಜೀವಿಸಲು ಸಾಧುವೆನಿಸಿದ ಕರುಣಾಪೂರಿತ ಪ್ರಪಂಚ ನಮ್ಮದಾಗುತ್ತದೆ! ಮಗುವಿನಲ್ಲಿರುವ ಕೊರತೆಯನ್ನು ಎತ್ತಿ ತೋರಿಸದೇ ಆ ಮಗುವಿನಲ್ಲಿರುವ ಸಾಮರ್ಥ್ಯವನ್ನು ಎತ್ತಿ ತೋರಿಸಿದರೆ ಆ ಮಗುವಿನಲ್ಲಿ ಆತ್ಮವಿಶ್ವಾಸ ಹುಟ್ಟಿಕೊಳ್ಳುತ್ತದೆ.

ಶ್ರೀ ಅರೊಬಿಂದೋರವರು ಹೇಳಿರುವಂತೆ, "ಮನಸ್ಸಿನ ಶಿಕ್ಷಣದಂತೆ ಹೃದಯದ ಶಿಕ್ಷಣದಲ್ಲೂ, ಮಗುವನ್ನು ತನ್ನ ಪರಿಪೂರ್ಣತೆಯೆಡೆಗೆ ಸಾಗುವಂತೆ ಸರಿಯಾದ ದಾರಿಗೆ ಹಚ್ಚುವ ಮತ್ತು ಅವರನ್ನು ಅದನ್ನೇ ಪಾಲಿಸಿಕೊಂಡು ಹೋಗುವಂತೆ ಪ್ರೇರೇಪಿಸುವ ಅತ್ಯುತ್ತಮ ವಿಧಾನವೆಂದರೆ ಗಮನಿಸುವುದು, ಸಲಹೆ ನೀಡುವುದು, ಸಹಾಯ ಮಾಡುವುದು ಆದರೆ ಹೀಗೆ ಮಾಡುವಾಗ ತಮ್ಮ ಹಸ್ತಕ್ಷೇಪವಾಗದಂತೆ ನೋಡಿಕೊಳ್ಳುವುದು ಒಳಿತು". ನಿಜವಾಗಿ ಸಶಕ್ತಗೊಳಿಸುವ ಕಲಿಕಾ ಪರಿಸರವನ್ನು ರೂಪಿಸುವುದೆಂದರೆ ಶಾಲೆಯಲ್ಲಿರುವ ವಿವಿಧ ಸ್ಥಳಗಳು ಸಾಧ್ಯವಿರುವ ಎಲ್ಲಾ ವಿಧಗಳಲ್ಲಿಯೂ ಇಂತಹಾ ಪರಿಸರವನ್ನು ಒದಗಿಸಬೇಕು .



**ಶ್ರೀಪರ್ಣ**ರವರು ಪ್ರಸ್ತುತ, ಬೆಂಗಳೂರಿನಲ್ಲಿರುವ ಅಜೀಂ ಪ್ರೇಂಜಿ ಫೌಂಡೇಶನ್‌ನಲ್ಲಿರುವ ವಿಶ್ವವಿದ್ಯಾನಿಲಯದ ಸಂಪನ್ಮೂಲ ವಿಭಾಗದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶಿಕ್ಷಕರ ಸಂಪರ್ಕಜಾಲ ತಾಣವಾದ www.teachersofindia.org ಗಾಗಿ ಡಿಜಿಟಲ್ ಮತ್ತು ನಾನ್-ಡಿಜಿಟಲ್ ಸಂಪನ್ಮೂಲಗಳನ್ನು ರೂಪಿಸುತ್ತಿದ್ದಾರೆ. ಇವರು ಆಂಗ್ಲ ಮತ್ತು ಸಮಾಜ ಅಧ್ಯಯನ ವಿಷಯಗಳಲ್ಲಿ ಜೆ. ಕೃಷ್ಣಮೂರ್ತಿ ಫೌಂಡೇಶನ್‌ನಲ್ಲಿ 15 ವರ್ಷ ಶಿಕ್ಷಕರಾಗಿ ಸೇವೆಸಲ್ಲಿಸಿದ್ದಾರೆ. ಪಠ್ಯಕ್ರಮ ಅಭಿವೃದ್ಧಿ ಮತ್ತು ಶಿಕ್ಷಕರ ಅಭಿವೃದ್ಧಿ ಮಾಡ್ಯೂಲ್‌ಗಳ ತಯಾರಿಕೆಯಲ್ಲೂ ಇವರನ್ನು ತೊಡಗಿಸಿಕೊಳ್ಳಲಾಗಿತ್ತು. ಇವರು ಶಿಕ್ಷಕರ ಅಭಿವೃದ್ಧಿ ತರಬೇತಿ ಕಾರ್ಯಾಗಾರಗಳಿಗೆ ಸುಗಮಕಾರರಾಗಿ ಮತ್ತು ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರನ್ನು sriparna.tamhane@azimpremjifoundation.org ಇಲ್ಲಿ ಸಂಪರ್ಕಿಸಬಹುದು.



# ಏನಿದು ಬರಿ ಮಣ್ಣಿನ ಮುದ್ದೆಯೇ?

ಲಲಿತ ಮಂಜುನಾಥ್

ಕಲಿಕೆಯಲ್ಲಿ ಆಸಕ್ತಿ ಮೂಡಿಸುವಂಥ ಪರಿಸರವನ್ನು ಸೃಷ್ಟಿಸ ಬಯಸುವ ಯಾವುದೇ ಶಾಲೆ ತನ್ನ ಆವರಣದಲ್ಲಿ ಮಕ್ಕಳು ತಮ್ಮ ಕೈಯ್ಯಾರೆ ಮಾಡಿ ಕಲಿಯುವ ಕಾರ್ಯಕ್ಕೆ ಒಂದಷ್ಟು ಜಾಗವನ್ನು ಮುಡಿಪಾಗಿ ಇಡಬೇಕಾಗುತ್ತದೆ. ಒಂದು ಕರಕುಶಲ ಕಲೆಯ ಆವರಣ ಅಥವಾ ಕೇಂದ್ರವು ಅನೇಕ ವಸ್ತುಗಳನ್ನು ಸಾಧ್ಯತೆಗಾಗಿ ಹುಡುಕಿ ಪರೀಕ್ಷಿಸಿ ನೋಡಲು ಸಂಪದ್ಭರಿತ ಸಂಪನ್ಮೂಲವನ್ನು ಒದಗಿಸುತ್ತದೆ ಮತ್ತು ಎಳೆಯ ವಯಸ್ಸಿನಲ್ಲಿಯೇ ಮಕ್ಕಳಿಗೆ ಶಾಲೆಯಲ್ಲಿ ಇದನ್ನು ಮಾಡಿಸಬಹುದು.

ನೈಸರ್ಗಿಕ ವಸ್ತುಗಳಾದ ಜೇಡಿಮಣ್ಣು, ಬಿದಿರು, ಮರದ ತುಂಡುಗಳು, ತೆಂಗಿನ ಚಿಪ್ಪು, ಮರಗಳ ಒಣಗಿದ ಕಾಯಿಗಳು ಮತ್ತು ಇತರ ಮೋಹಕ ವಸ್ತುಗಳಾದ ಕಾಗದ, ದಾರ, ಬಟ್ಟೆ ಮತ್ತು ಮಣಿಗಳನ್ನು ಉಪಯೋಗಿಸಿ ಪ್ರಾಕೃತಿಕ ಮತ್ತು ಕೃತಕ ವಸ್ತುಗಳ ನಡುವಿನ ವ್ಯತ್ಯಾಸ ಮತ್ತು ಅವುಗಳ ಗುಣಮಟ್ಟದಲ್ಲಿನ ವ್ಯತ್ಯಾಸವನ್ನು ಅರ್ಥಮಾಡಿಸಿ ಕಲಿಕೆಯನ್ನು ಆನಂದದಾಯಕ ವಾಗಿಸಬಹುದು.

ಮಕ್ಕಳ ಆಲೋಚನೆಗಳು ಮತ್ತು ಕಲ್ಪನೆಗಳನ್ನು ಹೊರತರಲು ಜೇಡಿಮಣ್ಣನ್ನು ಒಂದು ಪ್ರಮುಖವಾದ ಮಾಧ್ಯಮವನ್ನಾಗಿ ಕಲಾ ಕೇಂದ್ರದಲ್ಲಿ ಸುಲಭವಾಗಿ ಉಪಯೋಗಿಸಬಹುದು. ಇದು ಬಹಳ ನಮ್ಯ ವಸ್ತುವಾಗಿದ್ದು ಏನನ್ನಾದರೂ ನಿರ್ಮಿಸಲು, ಕಟ್ಟಲು, ವಿನ್ಯಾಸಗೊಳಿಸಲು, ಅಚ್ಚು ಹಾಕಲು, ಉಂಡೆಮಾಡಲು, ಪುನಃ ಹೊಂದಿಸಲು, ಪುನರ್ಬಳಕೆ ಹಾಗೂ ಮಾಡಿದ್ದನ್ನು ಸಂಪೂರ್ಣ ಒಡೆದು ಯಾವುದೇ ತೊಂದರೆ ಇಲ್ಲದೇ ಪುನಃ ಮೊದಲಿನಿಂದ ಪ್ರಾರಂಭಿಸಲು ಯಾರೇ ಆದರೂ ಬಳಸಿಕೊಳ್ಳುವ ಅವಕಾಶವಿದೆ. ಹೀಗೆ ಮಕ್ಕಳು ಮಾಡಿ ಆಡುವ ಸ್ಥಳವು ಕಡಿಮೆ ವೆಚ್ಚದ್ದಾಗಿದ್ದು, ಅತ್ಯಂತ ಕಡಿಮೆ ಸಾಧನ–ಸಲಕರಣೆಗಳು ಬೇಕಾಗುತ್ತವೆ.

ಮೇಲಿನ ವಿಷಯವನ್ನು ಸ್ವಲ್ಪ ಬದಿಗಿಟ್ಟು ಲವಲವಿಕೆಯ,



ಹುರುಪು ಉತ್ಸಾಹದ ಮತ್ತು ಮುಕ್ತ ಕಲಿಕಾ ಪರಿಸರ ಹೇಗೆ ಉಂಟಾಗುತ್ತದೆ ಎಂದು ನೋಡೋಣ, ಇದು ಬಹಳ ಮುಖ್ಯ ಏಕೆಂದರೆ ಕಲಿಕೆಯನ್ನು ಸಾಮಾನ್ಯವಾಗಿ ಒಂದಿಷ್ಟು ಕೌಶಲ್ಯ ಮತ್ತು ಜ್ಞಾನವನ್ನು ಗಳಿಸುವ ಹಾಗೂ ಮನದಟ್ಟು ಮಾಡಿಕೊಳ್ಳುವ ಕಾರ್ಯ ಎಂದು ನೋಡಲಾಗುತ್ತದೆ. ನಾವು ಈ ಸೀಮಿತ ಬಳಕೆಯನ್ನು ಮೀರಿ ಕಲಿಕೆಯ ಇನ್ನಿತರ ಪ್ರಮುಖವಾದ ಗುಣಗಳಾದ ಯಾಕೆ ಹೀಗೆ? ಎಂದು ಸಂಶಯಪಟ್ಟು ಪ್ರಶ್ನೆಗಳನ್ನು ಕೇಳುವ ಅವಕಾಶವನ್ನು ನೀಡುವುದು, ನಮ್ಮ ಸಂಬಂಧಗಳನ್ನು ಅರಿತಿರುವುದು, ಕೆಲಸ ಮಾಡುವಾಗ ಮಗು ಹೆದರುತ್ತಾನೋ ಅಥವಾ ಕಟ್ಟುಪಾಡು ಲೆಕ್ಕಿಸದೆ ಕೆಲಸಮಾಡಲು ಅವಕಾಶವಿದೆಯೇ ಮತ್ತು ಬಲವಂತ ಮಾಡದೇ ಅನಗತ್ಯ ಶಿಸ್ತು ಮತ್ತು ಒಬ್ಬರನ್ನಿನ್ನೊಬ್ಬರಿಗೆ ಹೋಲಿಕೆ ಮಾಡದೆ ಕೆಲಸಮಾಡಲು ಅವಕಾಶವಿದೆಯೇ ಇಂತಹವುಗಳ ಬಗ್ಗೆ ಗಮನ ನೀಡಬೇಕಾಗುತ್ತದೆ.

ಹಸ್ತಕಲೆ ಮತ್ತು ಜೇಡಿಮಣ್ಣಿನ ಚಟುವಟಿಕೆಗೆ ಸ್ಟುಡಿಯೋದಲ್ಲಿ ಈ ಎಲ್ಲಾ ಅಂಶಗಳನ್ನು ಒಗ್ಗೂಡಿಸಿ ಒಂದು ಶ್ರೀಮಂತ ಅನುಭವವನ್ನು ನೀಡುವ ವಾತಾವರಣವನ್ನು ಹೇಗೆ ಮತ್ತು ಯಾವಾಗ ಸೃಷ್ಟಿಸಬಹುದು ಎಂದು ಚರ್ಚಿಸುವುದು ಒಂದು ಉಪಯುಕ್ತ ಅಧ್ಯಯನವಾಗುತ್ತದೆ. ಬನ್ನಿ ! ನಾವು ಅವಶ್ಯ ಅಂಶಗಳನ್ನು ತರಗತಿಯಲ್ಲಿ ಅಳವಡಿಸಿ ಅಲ್ಲಿ ಎದುರಾಗುವ ಸವಾಲುಗಳನ್ನು ಯಶಸ್ವಿಯಾಗಿ ಪರಿಹರಿಸಲು ಸಾಧ್ಯವಾಗುವಂತೆ ಶಿಕ್ಷಕರನ್ನು ಹೇಗೆ ಸಶಕ್ತಗೊಳಿಸ ಬಹುದು ಎಂದು ನೋಡೋಣ.

### ಜವಾಬ್ದಾರಿಯೊಂದಿಗೆ ಕೆಲಸಮಾಡಲು ಆಸಕ್ತಿಯಿಂದ ಮುಂಬರುವ ಪ್ರವೃತ್ತಿ

ಮಾಡಿ ಕಲಿಯುವ ಸ್ಥಳಗಳಲ್ಲಿ ತಮ್ಮ ಆಲೋಚನೆಗಳ ಅಭಿವ್ಯಕ್ತಿಯಲ್ಲಿ ಶಿಕ್ಷಕರ ಬೆಂಬಲವಿಲ್ಲದೇ ತೊಡಗಿಕೊಳ್ಳಲು ಮತ್ತು ಖುದ್ದಾಗಿ ಅಥವಾ ಗುಂಪಿನಲ್ಲಿ ಕೆಲಸಮಾಡಲು ಮಕ್ಕಳಲ್ಲಿ ಸಾಕಷ್ಟು ಸ್ವಪ್ರೇರಣೆ ಬೇಕಾಗುತ್ತದೆ. ಇಲ್ಲಿ ಶಿಕ್ಷಕರ ಪಾತ್ರವು ಏನಿದ್ದರೂ ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ಗಂಭೀರವಾಗಿ ಪರಿಗಣಿಸಿದ್ದಾರೆಯೇ, ನೀಡಿರುವ ಕಾರ್ಯಕ್ಕೆ ಸ್ಪಂದಿಸುತ್ತಿದ್ದಾರೆಯೇ ಮತ್ತು ಶಾಂತವಾಗಿ, ಆದರೆ ತಮ್ಮಲ್ಲಿರುವ ಶಕ್ತಿಯನ್ನು ಕ್ರಿಯಾತ್ಮಕವಾಗಿ ಬಳಸಿಕೊಳ್ಳುತ್ತಿದ್ದಾರೆಯೇ ಎನ್ನುವುದನ್ನು ನೋಡಿಕೊಳ್ಳುವುದಾಗಿರುತ್ತದೆ. ಹೀಗಿದ್ದರೂ ಅಲ್ಲಲ್ಲಿ ತಮ್ಮ ವಿಚಾರ ಮತ್ತು ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ಏಕೆಂದರೆ ಮಕ್ಕಳಲ್ಲಿ ಹೊಸ ಆಲೋಚನೆಗಳು ಹಾಗೂ ತಂತ್ರಗಳು ಹೊರಹೊಮ್ಮುವುದಕ್ಕೆ ಇದು ಅತ್ಯಂತ ಆವಶ್ಯಕ.

### ಸಮಸ್ಯೆಗಳನ್ನು ಹಂಚಿಕೊಂಡು ಪರಿಹಾರ ಕಂಡು-ಕೊಳ್ಳಲು ಚರ್ಚೆ ಮತ್ತು ಸಂವಾದದ ಬಳಕೆ

ನಡವಳಿಕೆ, ಸಂಬಂಧಗಳು ಮತ್ತು ಒಬ್ಬರೊಂದಿಗೆ ಇನ್ನೊಬ್ಬರು ತಮ್ಮ ಕಾರ್ಯಗಳು, ಆಲೋಚನೆಗಳನ್ನು ಹಂಚಿಕೊಳ್ಳಲು ಅನುವಾಗುವಂತೆ ತರಗತಿಯಲ್ಲಿ ಶಿಕ್ಷಕರು ಪ್ರಶ್ನೆಗಳನ್ನು ಸೇರಿಸುವುದಕ್ಕೆ ಅವಕಾಶಗಳಿರುತ್ತವೆ ಮತ್ತು ಇದನ್ನು ಮಾಡುವಾಗ ಯಾವುದಾದರು ಒಂದಕ್ಕೆ ಮಾತ್ರ ಪ್ರಾಮುಖ್ಯತೆಯನ್ನು ನೀಡದೇ ಅತ್ಯಂತ ಸೂಕ್ಷ್ಮವಾಗಿ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ.

ಗದರಿಸಿ ಬೆದರಿಸಿ ಪರಿಹರಿಸದೆ, ಸಮಸ್ಯೆಗಳನ್ನು ಮತ್ತು ವಿಷಯಗಳನ್ನು ಚರ್ಚಿಸಿ ಪರಿಹರಿಸಿಕೊಳ್ಳಲು ಮುಂದಾದಲ್ಲಿ ಒಬ್ಬರೊಡನೆ ಮತ್ತೊಬ್ಬರು ವಿಚಾರ ವಿನಿಮಯದಲ್ಲಿ ಸಂವಾದವು ಒಂದು ಮೌಲ್ಯಯುತ ಪಾತ್ರವನ್ನು ವಹಿಸುತ್ತದೆ. ಪರಿಣಾಮಕಾರಿ ಕಲಿಕೆಯ ಸುಲಭವಾದ ಹರಿವಿಗೆ ಅಡಚಣೆಯಾಗಿರುವ ಅಥವಾ ತಡೆಯೊಡ್ಡುತ್ತಿರುವ ಯಾವುದೇ ವಿಷಯವನ್ನು ತರಗತಿಯ ಪ್ರಾರಂಭದಲ್ಲಿ ಅಥವಾ ತರಗತಿ ನಡೆಯುತ್ತಿರುವಾಗ ಒಂದು ಸೂಕ್ತವಾದ ಸಮಯದಲ್ಲಿ ಚರ್ಚಿಸಲು ಅವಕಾಶವನ್ನು ಮಾಡಿಕೊಡಬಹುದು.

### ಆತ್ಮೀಯ ವಾತಾವರಣ

ಈ ಹಸ್ತಕಲಾ ಕೇಂದ್ರಗಳಲ್ಲಿ ಪ್ರತಿ ವಿದ್ಯಾರ್ಥಿಯೂ ಮತ್ತೊಬ್ಬರ ಸಾಮರ್ಥ್ಯ ಅಥವಾ ಪ್ರತಿಭೆಯ ಬಗ್ಗೆ ವಿಮರ್ಶೆ ಅಥವಾ ಮೆಚ್ಚುಗೆಯನ್ನು ನೀಡಲು ತೊಡಗುವುದರಿಂದ ಇಲ್ಲಿ ಅನೇಕ ಬಗೆಯ ಆಲೋಚನೆಗಳು ಮತ್ತು ಪ್ರತಿಕ್ರಿಯೆಗಳ ವಿನಿಮಯಕ್ಕೆ ಹೆಚ್ಚಿನ ಅವಕಾಶವಿರುತ್ತದೆ. ಪ್ರತಿಯೊಬ್ಬರೂ ಈ ಕಾರ್ಯವನ್ನು ಅಕ್ಕರೆಯಿಂದ, ಯಾರನ್ನೂ ಹೋಲಿಸದೆ ಮತ್ತು ಪಕ್ಷಪಾತ ಅಥವಾ ತಿರಸ್ಕಾರವಿಲ್ಲದೇ ಮಾಡುವಂತೆ ಇಲ್ಲಿ ಶಿಕ್ಷಕರು ಈ ಅವಕಾಶವನ್ನು ಬಳಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಮುಕ್ತ ಮತ್ತು ಪೂರ್ವಾಗ್ರಹವಿಲ್ಲದ ಪರಿಸರ ಇರಬೇಕು ಎಂಬ ಮುಖ್ಯ ಉದ್ದೇಶವೇ ಇಲ್ಲಿ ಸೋಲುತ್ತದೆ.

ಮಕ್ಕಳು ಭಾವೋದ್ವೇಗಕ್ಕೆ ಒಳಗಾಗಬಹುದಾದಂತಹ ಅನೇಕ ಸಂದರ್ಭಗಳ ಬಗ್ಗೆ ಮತ್ತು ಅದನ್ನು ಅವರು ಹೇಗೆ ವ್ಯಕ್ತಪಡಿಸುತ್ತಿದ್ದಾರೆ ಅಥವಾ ಹೊರಹಾಕುತ್ತಾರೆ ಎನ್ನುವುದರ ಬಗ್ಗೆ ಶಿಕ್ಷಕರು ಅತ್ಯಂತ ಎಚ್ಚರಿಕೆಯಿಂದ ಅರಿತಿರಬೇಕಾಗುತ್ತದೆ. ಶಿಕ್ಷಕರು ತಮ್ಮ ವಿಷಯ ವಸ್ತುವನ್ನು ಬೋಧಿಸಲು ತಾನು ಹೇಳಿದಂತೆಯೇ ಆಗಬೇಕು ಎಂದು ಹೊರಟರೆ ಈ ಎಚ್ಚರಿಕೆ ಇಲ್ಲವಾಗುತ್ತದೆ.

ವಿದ್ಯಾರ್ಥಿಗಳನ್ನು ಒಬ್ಬರೊಡನೆ ಮತ್ತೊಬ್ಬರು ಕಲೆತು ಕಾರ್ಯವೆಸಗುವ ಉತ್ಸಾಹದಿಂದ ತಮ್ಮಷ್ಟಕ್ಕೆ ತಾವೇ ಕೆಲಸ ಮಾಡಲು ಬಿಟ್ಟಾಗ ವಿದ್ಯಾರ್ಥಿಗಳ ಆಂತರಿಕ ಚೈತನ್ಯವನ್ನು ಗಮನಿಸಲು ಇದೊಂದು ಉತ್ತಮವಾದ ಸಂದರ್ಭವಾಗಿರುತ್ತದೆ. ನಿರಂತರವಾಗಿ ನಿಯಂತ್ರಣಕ್ಕೆ ಒಳಪಡಿಸುವ ಕಾರ್ಯತಂತ್ರವು ಕಾಳಜಿಯನ್ನು ವ್ಯಕ್ತಪಡಿಸುವುದಕ್ಕೆ ಅಡ್ಡಿಯಾಗುತ್ತದೆ. ವಿದ್ಯಾರ್ಥಿಗಳಿಗೆ ಶಿಕ್ಷಕರು ಪದೇ-ಪದೇ ನೆನಪಿಸುವುದು ಮತ್ತು ನಿಗಾವಹಿಸುವುದನ್ನು ಮಾಡದೆ ಅವರ ಕಾರ್ಯದಲ್ಲಿ ಶಾಂತಿ ಮತ್ತು ಬಿರುಸನ್ನು ಹೇಗೆ ತರುವುದು? ಶಿಕ್ಷಕರಿಗೆ ಇದೊಂದು ನಿರಂತರವಾದ ಸವಾಲಾಗಿರುತ್ತದೆ. ಈ ವಿನ್ಯಾಸವನ್ನು ಅರಿತುಕೊಳ್ಳಲು ಮಕ್ಕಳನ್ನು ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳುವುದು ಶಿಕ್ಷಕರಿಗೆ ಹೊಸತನವನ್ನು ನೀಡುತ್ತದೆ.

### ಮೌಲ್ಯಮಾಪನ ಮತ್ತು ಹಿಮ್ಮಾಹಿತಿ

ಯಾವದೇ ಕಲೆ ಮತ್ತು ಕುಶಲಕಲೆ ನೋಡಿದಾಕ್ಷಣ ಅದರ ಬಗ್ಗೆ ಚೆನ್ನಾಗಿದೆ, ಉತ್ತಮವಾಗಿದೆ, ಚೆನ್ನಾಗಿಲ್ಲ, ಸುಂದರವಾಗಿದೆ, ಅತ್ಯಂತ ಸುಂದರವಾಗಿದೆ, ಥೇಟ್ ಅದರಂತೆಯೇ ಕಾಣುತ್ತದೆ,

ಆಹಾ ಅದ್ಭುತವಾಗಿದೆ, ಎಂದು ಅಭಿಪ್ರಾಯ ನೀಡುತ್ತಾರೆ. ಇಂಥ ಅಭಿಪ್ರಾಯಗಳನ್ನು ವಾಸ್ತವವಾಗಿ ಅಥವಾ ವಸ್ತುನಿಷ್ಠವಾಗಿ ಯಾವುದೇ ಹೀಗಳಿಕೆ ಇಲ್ಲದೆ ಅಥವಾ ಅತಿಶಯೋಕ್ತಿಗಳಿಲ್ಲದೇ ವಿಮರ್ಶಾತ್ಮಕ ಮೆಚ್ಚುಗೆಯ ಪ್ರತಿಕ್ರಿಯೆಯಾಗಿ ಹೇಗೆ ಕೊಡಬಹುದು? ಇದೊಂದು ಕಷ್ಟವಾದ ಅಂಶ ಆದರೆ ಇದನ್ನು ನಿರ್ಲಕ್ಷಿಸುವಂತಿಲ್ಲ.ಇಂಥ ಮೌಲ್ಯಮಾಪನದಿಂದ ಮಕ್ಕಳ ಮನಮುದುಡಬಹುದು ಅವರ ಕ್ರಿಯಾಶೀಲತೆಯ ಮತ್ತು ಸಾಮರ್ಥ್ಯ ಕುಂಠಿತವಾಗಬಹುದು.

ಮಕ್ಕಳು ಮಾಡಿರುವ ಯಾವುದೇ ಕಾರ್ಯದ ಬಗ್ಗೆ ಶಿಕ್ಷಕರು ಹೇಗೆ ತೀರ್ಮಾನಕ್ಕೆ ಬರುತ್ತಾರೆ ಮತ್ತು ಅವರ ಯಾವುದೇ ಕಾರ್ಯಕ್ಕೆ ಹೇಗೆ ಮೌಲ್ಯವನ್ನು ನೀಡುವರು? ಇದೊಂದು ಬಹು ಚರ್ಚಿತ ಮತ್ತು ಗೊಂದಲಮಯ ವಿಷಯವಾಗಿದ್ದು ಇದಕ್ಕೆ ಯಾವುದೇ ಸಿದ್ಧ ಉತ್ತರ ಅಥವಾ ವಿಧಾನವಿಲ್ಲ. ಶಿಕ್ಷಕರು/ಹಿರಿಯರು ಮಕ್ಕಳ/ವಿದ್ಯಾರ್ಥಿಗಳ ಕಾರ್ಯವನ್ನು ನೋಡುವ ವಿಧಾನದಲ್ಲಿ ಎಲ್ಲಿಯೋ ತಪ್ಪಿದ್ದು, ಅವರು ತಮ್ಮ ನೈಪುಣ್ಯವನ್ನು ಗುರುತಿಸಿಕೊಳ್ಳಲು ಮೇಲ್ಮಟ್ಟಕ್ಕೆ ತಮಗೆ ಅನುಕೂಲವೆನಿಸಿದಂತೆ ತ್ವರಿತವಾಗಿ ಮಾಲ್ಯಮಾಪನವನ್ನು ಮಾಡುವತ್ತ ಒಲವು ಹೊಂದಿರುವುದು ಸುಸ್ಪಷ್ಟವಾಗಿ ಕಾಣುತ್ತದೆ.

ಪ್ರತಿಯೊಬ್ಬರ ಕೆಲಸ ಪ್ರತಿಯೊಬ್ಬರಿಗೂ ಕಾಣುವಂತೆ ಪ್ರದರ್ಶಿಸಲು ಸಾಕಷ್ಟು ಸ್ಥಳವನ್ನು ಒದಗಿಸುವುದು ಈ ಸಮಯದಲ್ಲಿ ಇದನ್ನು ಪರಿಹರಿಸಲು ಇರುವ ಒಂದು ಸರಳ ಮಾರ್ಗವಾಗಿದೆ. ಪ್ರತಿಯೊಂದು ಮಗುವೂ ಯಾವುದಾದರೊಂದು ಕಲೆ ಅಥವಾ ಕರಕುಶಲ ಕಲೆಯ ವಸ್ತುವನ್ನು ತಯಾರಿಸಿದ ಅನಂತರ ತನ್ನ ಆಲೋಚನೆಗಳು ಮತ್ತು ಉದ್ದೇಶವನ್ನು ಹಂಚಿಕೊಳ್ಳಬಹುದು. ಅವರು ತಯಾರಿಸಿರುವ ಕಲಾ ವಸ್ತುಗಳನ್ನು ಯಾವುದೇ ಶ್ರೇಷ್ಠ ಅಥವಾ ಕನಿಷ್ಠ ಎನ್ನುವ ಶ್ರೇಣಿ ನೀಡಿಕೆಗೆ ಒಳಪಡಿಸದೇ ಪ್ರದರ್ಶನ ಮತ್ತು ಅದರ ಬಗ್ಗೆ ಚಿಂತನೆಗಳ ವಿನಿಮಯಕ್ಕೆ ಅವಕಾಶ ನೀಡಿದಾಗ ಈ ಮೇಲೆ ಹೇಳಿರುವ ವಿಧಾನವು ಉತ್ತಮವಾಗಿ ಕಾರ್ಯ ಮಾಡುತ್ತದೆ.

## ಪ್ರಕ್ರಿಯೆಯು ಫಲಿತಾಂಶವನ್ನು ಮೀರಿ ನಡೆಯುವುದು

ಯಾವುದೇ ಒಂದು ಆರೋಗ್ಯಕರ ಕಲಿಕಾ ವಾತಾವರಣವು ಮೂಡಬೇಕಾದರೆ ಅದು ಅಂತಿಮ ಫಲಿತಾಂಶದ ಬಗ್ಗೆ ಚಿಂತಿಸುವುದನ್ನು ಬಿಟ್ಟು ನಿರಂತರವಾಗಿ ಕಾರ್ಯ ಮಾಡುತ್ತಾ ಹೋಗುವ ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ. ಪ್ರಯತ್ನಪಡಲು, ಪ್ರಯೋಗ ಮಾಡಲು, ತೊಂದರೆ ತೆಗೆದುಕೊಳ್ಳಲು ಮತ್ತು ಕೈಯಲ್ಲಿರುವ ಕೆಲಸದ ಬಗ್ಗೆ ಗಮನಹರಿಸಲು ಅಡ್ಡಿಯನ್ನು ತೋರದಿದ್ದಲ್ಲಿ, ಕಾರ್ಯ ಮಾಡುವ ಪ್ರಕ್ರಿಯೆಯಲ್ಲಿ ಯಾರಿಗಾದರೂ ಪರೀಕ್ಷೆಗೆ ಒಡ್ಡುವ ಸಾಧ್ಯತೆಗಳು ಕಡಿಮೆ.

ತಮ್ಮ ಕಾರ್ಯವನ್ನು ಪ್ರಾರಂಭಿಸಲು ಅವರಿಗಿರುವ ಅಡಚಣೆಗಳೇನು ಮತ್ತು ಎಲ್ಲಿ ಅಡ್ಡಿ ಆತಂಕಗಳಿವೆ ಎನ್ನುವುದನ್ನು ವಿದ್ಯಾರ್ಥಿಗಳ ಗಮನಕ್ಕೆ ತರಬೇಕು ಮತ್ತು ಅವುಗಳನ್ನು ಕಂಡುಹಿಡಿಯಲು ಶಿಕ್ಷಕರು ವೇಗವರ್ಧಕವಾಗಿ ಕೆಲಸ ಮಾಡಬೇಕು.

ತಾನು ಮಾಡಿದ ಜೇಡಿಮಣ್ಣಿನ ಒಂದು ವಸ್ತುವನ್ನು ಒಬ್ಬ ವಿದ್ಯಾರ್ಥಿಯು ಬಹಳ ಜಾಗರೂಕತೆಯಿಂದ ಮತ್ತು ಕಾಳಜಿಯಿಂದ ಕಾಣುತ್ತಾನೆ/ಳೆ. ಅಂತಿಮ ಘಟ್ಟದಲ್ಲಿ ಅದು ಮುರಿಯುವುದು, ಪೂರ್ಣವಾದ ಅನಂತರ ಹಾಳಾದರೂ, ಫಲಿತಾಂಶವು ಪ್ರದರ್ಶನಕ್ಕೆ ಲಭ್ಯವಿಲ್ಲದಿದ್ದರೂ ಕಲಿಕಾ ಪ್ರಕ್ರಿಯೆ ಮತ್ತು ಅದು ನೀಡಿದ ಅನುಭವ ಬಹಳ ಮೌಲ್ಯಯುತವಾದ ಅನುಭವವಾಗಿರುತ್ತದೆ.

ಒಬ್ಬ ಶಿಕ್ಷಕರು ಈ ಎಲ್ಲಾ ಅಂಶಗಳು ಮತ್ತು ವಿಧಾನಗಳನ್ನು ಗಮನದಲ್ಲಿ ಇರಿಸಿಕೊಂಡಿದ್ದಾಗ ಮತ್ತು ಶ್ರದ್ಧಾಪೂರ್ವಕವಾಗಿ ಅದರ ಉದ್ದೇಶದ ಈಡೇರಿಕೆಗೆ ಕಾಳಜಿ ವಹಿಸಿದಾಗ ತರಗತಿಗಳಲ್ಲಿನ ಕಲಿಕಾ ವಾತಾವರಣವು ಖಂಡಿತವಾಗಿಯೂ ಉತ್ತಮವಾಗಿ ವರ್ಧಿಸುತ್ತದೆ. ಇದಕ್ಕೇ ಅಂಟಿಕೊಂಡಿರಬೇಕು ಎನ್ನುವ ಯಾವುದೇ ಒಂದು ನಿರ್ದಿಷ್ಟ ವಿಧಾನಗಳಿಲ್ಲ. ಆದರೆ ಯಾರೇ ಆದರೂ ತಮ್ಮ ಶಕ್ತಿಯನ್ನು ನಿರಂತರವಾಗಿ ಬಸಿದು ಇದಕ್ಕಾಗಿ ಶ್ರಮಿಸುತ್ತೇನೆ ಎಂದು ಅವರಿಗೆ ಅವರೇ ಬದ್ಧತೆಯನ್ನು ಹೊಂದಿರಬೇಕು ಮತ್ತು ಪ್ರತಿಯೊಂದು ಸನ್ನಿವೇಶವನ್ನೂ ಕುತೂಹಲದಿಂದ ಮತ್ತು ಧೃಡತೆಯಿಂದ ಕಾಣುವತ್ತ ಒಲವನ್ನು ತೋರಬೇಕಾಗುತ್ತದೆ.

ವಿಧಾನಗಳನ್ನು ಗಮನದಲ್ಲಿ ಇರಿಸಿಕೊಂಡಿದ್ದಾಗ ಮತ್ತು ಶ್ರದ್ಧಾಪೂರ್ವಕವಾಗಿ ಅದರ ಉದ್ದೇಶದ ಈಡೇರಿಕೆಗೆ ಕಾಳಜಿ ವಹಿಸಿದಾಗ ತರಗತಿಗಳಲ್ಲಿನ ಕಲಿಕಾ ವಾತಾವರಣವು ಖಂಡಿತವಾಗಿಯೂ ಉತ್ತಮವಾಗಿ ವರ್ಧಿಸುತ್ತದೆ. ಇದಕ್ಕೇ ಅಂಟಿಕೊಂಡಿರಬೇಕು ಎನ್ನುವ ಯಾವುದೇ ಒಂದು ನಿರ್ದಿಷ್ಟ ವಿಧಾನಗಳಿಲ್ಲ. ಆದರೆ ಯಾರೇ ಆದರೂ ತಮ್ಮ ಶಕ್ತಿಯನ್ನು ನಿರಂತರವಾಗಿ ಬಸಿದು ಇದಕ್ಕಾಗಿ ಶ್ರಮಿಸುತ್ತೇನೆ ಎಂದು ಅವರಿಗೆ ಅವರೇ ಬದ್ಧತೆಯನ್ನು ಹೊಂದಿರಬೇಕು ಮತ್ತು ಪ್ರತಿಯೊಂದು ಸನ್ನಿವೇಶವನ್ನೂ ಕುತೂಹಲದಿಂದ ಮತ್ತು ಧೃಡತೆಯಿಂದ ಕಾಣುವತ್ತ ಒಲವನ್ನು ತೋರಬೇಕಾಗುತ್ತದೆ.

"ಸ್ಪರ್ಧಾತ್ಮಕ ಮನೋಭಾವನೆಯನ್ನು ತೊಡೆದಾಗ ನಿಜವಾದ ಕಲಿಕೆ ಉಂಟಾಗುತ್ತದೆ." – **ಜೆ. ಕೃಷ್ಣಮೂರ್ತಿ**


"ಬಹಳಷ್ಟು ಕಲಿಕೆಯು ಯಾರೋ ಹೇಳಿಕೊಟ್ಟು ಕಲಿತದ್ದರಿಂದ ಬಂದದಲ್ಲ.ಇದು ಒಂದು ಅರ್ಥಪೂರ್ಣ ಪರಿಸರದಲ್ಲಿ ಅಡೆತಡೆಯಿಲ್ಲದೆ ಕಾರ್ಯನಿರ್ವಹಿಸುವುದರಿಂದ ಬರುತ್ತದೆ. ಬಹಳಷ್ಟು ಮಂದಿ ತಾವು ಅದರೊಂದಿಗೆ ಇರುವುದರಿಂದ ಚೆನ್ನಾಗಿ ಕಲಿಯುತ್ತಾರೆ. ಹೀಗಿದ್ದರೂ ಶಾಲೆಯುವಿಸ್ತೃತ ಯೋಜನೆ ಮತ್ತು ಹಸ್ತಕ್ಷೇಪ ನಡೆಸಿ ತಮ್ಮ ವೈಯಕ್ತಿಕ ಗ್ರಹಣಶಕ್ತಿಯ ಬೆಳವಣಿಗೆ ಗುರುತಿಸುವಂತೆ ಮಾಡುತ್ತದೆ." – **ಇವಾನ್ ಇಲ್ಲಿಚ್** ತನ್ನ Deschooling Society. ಪುಸ್ತಕದಲ್ಲಿ ಹೇಳುತ್ತಾನೆ



**ಲಲಿತ**ರವರು ದಿ ವ್ಯಾಲಿ ಸ್ಕೂಲ್‌ನಲ್ಲಿ ಮತ್ತು ಸೆಂಟರ್ ಫಾರ್ ಲರ್ನಿಂಗ್‌ನಲ್ಲಿ ಕಿರಿಯರ ಶಾಲೆಯಲ್ಲಿ ಮಕ್ಕಳೊಂದಿಗೆ ಕಾರ್ಯ ನಿರ್ವಹಿಸಿದ್ದಾರೆ. ವಸ್ತುಗಳೊಂದಿಗೆ ಕೆಲಸ ಮಾಡುವುದರಲ್ಲಿ ಆಸಕ್ತಿ ಮೂಡಿಸಲು ಮಕ್ಕಳಿಗಾಗಿ ಅವರು ಕರಕುಶಲ ಮತ್ತು ಮಣ್ಣಿನ ವಸ್ತು ತಯಾರಿಕೆಯ ಕೇಂದ್ರವನ್ನು ಸ್ಥಾಪಿಸುವಲ್ಲಿ ಆಸಕ್ತರಾದರು. ಪ್ರಸ್ತುತ, ಇವರು ಸಿಎಫ್‌ಎಲ್‌ನ ಪೂರ್ಣಾವಧಿ ವೃತ್ತಿ ಬದ್ಧತೆಯಿಂದ ನಿವೃತ್ತಿ ಹೊಂದಿದ್ದಾರೆ ಹಾಗೂ ಶಿಕ್ಷಣ ಮತ್ತು ಕಲಿಕೆಯ ಬಗ್ಗೆ ಮರು ಚಿಂತನೆ ಮಾಡುವಲ್ಲಿ ಆಸಕ್ತಿಯುಳ್ಳ ಶಾಲೆಗಳು ಮತ್ತು ಗುಂಪುಗಳೊಂದಿಗೆ ತಮ್ಮ ಕಾರ್ಯವನ್ನು ಮುಂದುವರೆಸುತ್ತಿದ್ದಾರೆ. ಇವರನ್ನು lalita.manjunath@gmail.com ಇಲ್ಲಿ ಸಂಪರ್ಕಿಸಬಹುದು.



# ಅನುಭವಗಳು
# ಮತ್ತು
# ಒಳನೋಟಗಳು



# 12,000 ಅಡಿಗಳ ಎತ್ತರದಲ್ಲಿ ಸಮರ್ಥ ಕಲಿಕಾ ವಾತಾವರಣದ ನಿರ್ಮಾಣ

# ಎಸ್‌ಇಸಿಎಂಓಎಲ್ (SECMOL) ಪರ್ಯಾಯ ಸಂಸ್ಥೆ

ಅವಿನಾಶ್ ಕುಮಾರ್

"ಮಕ್ಕಳನ್ನೇನೂ ಶಾರೀರಿಕವಾಗಿ ಶಿಕ್ಷಿಸಲೇ ಬೇಕಾಗಿಲ್ಲ... ಶಿಕ್ಷಕರಿಂದ ಮತ್ತು ಸಮಾಜದಿಂದ ತಾವು ಸ್ವೀಕೃತರಾಗಬೇಕಾದರೆ ತಮ್ಮ ಆಡುಭಾಷೆ ಮತ್ತು ಸಂಸ್ಕೃತಿಯೆಡೆಗಿನ ನಿಷ್ಠೆಯನ್ನು ಬಿಟ್ಟು ಒಳಬರಬೇಕೆಂದು ಅವರಿಗೆ ಬಲವಾದ ಸಂದೇಶವನ್ನು ನೀಡಲಾಗುತ್ತದೆ. ಅದಕ್ಕಿಂತ ದೊಡ್ಡ ಶಿಕ್ಷೆ ಬೇಕೇ. ಪರೋಕ್ಷವಾಗಿ ಅಥವಾ ನೇರವಾಗಿ ಆ ಸಂದೇಶ "ನಿಮ್ಮ ಭಾಷೆ ಶಾಲೆಗಳಲ್ಲಿ ಮತ್ತು ಸಂಸ್ಕೃತಿಯನ್ನು ಶಾಲೆಯ ಬಾಗಿಲ ಬಳಿಯೇ ಬಿಟ್ಟುಬಿಡು" ಎಂಬಂತಿದ್ದಾಗ. ಮಕ್ಕಳು ತಮ್ಮತನದ ಬಹುಮುಖ್ಯ ಭಾಗವನ್ನು ಮತ್ತು ತಮ್ಮ ವ್ಯಕ್ತಿತ್ವವನ್ನೂ ಶಾಲಾಕಟ್ಟಡದ ಬಾಗಿಲಲ್ಲೇ ಬಿಡುವಂತಾಗುತ್ತದೆ." (Cummin, 2001)



ಚಿತ್ರಕೃಪೆ: ಕೃಷಿಕಾ ಶಾಹ

ಸಡಿಲವಾದ ಜಲ್ಲಿಕಲ್ಲು ಮತ್ತು ಮರಳಿನ ಮೇಲೆ ಉಪಾಯದಿಂದ ನಡೆಸುತ್ತಿರುವ ನನ್ನ ಬೈಕ್‌ನ ಗುಡು ಗುಡು ಶಬ್ದ ಮತ್ತು ಬರಡು ಪರ್ವತ ಹಾಗೂ ಬಂಡೆಗಳಿಂದ ಸುತ್ತುವರಿದ ಕಣಿವೆಯ ಸಮತಟ್ಟಾದ ಬಯಲು ಪ್ರದೇಶದಲ್ಲಿ ರಭಸದಿಂದ ಬೀಸುತ್ತಿರುವ ಗಾಳಿಯ ಸದ್ದಷ್ಟೇ ನನಗೆ ಕೇಳಿಸುತ್ತಿತ್ತು. ಗಾಳಿಯ ರಭಸಕ್ಕೆ ದಿಗಂತದಲ್ಲಿ ಒಂದೆಡೆ ಸೇರುತ್ತಿರುವ ಕಪ್ಪು ಮೋಡಗಳು ನನಗೆ ಕಾಣಿಸುತಿದ್ದವು. ಕೆಲವು ಕಿಲೋಮೀಟರ್‌ಗಳಷ್ಟು ಹಿಂದೆ ಕವಲುದಾರಿಯ ಸ್ಥಳದಲ್ಲಿ ನಾನು ತಪ್ಪಾದ ತಿರುವು ತೆಗೆದುಕೊಂಡೆನೇ ಎಂದು ಅನುಮಾನ ಪಟ್ಟೆ. ಅಲ್ಲಿ ಯಾವ ಮನುಷ್ಯರೂ ಕಾಣದಿದ್ದುದರಿಂದ ನಾನು ಹಾಗೆಯೇ ಮುಂದುವರಿಯಲು ನಿರ್ಧರಿಸಿದೆ. ಪರ್ವತದ ಏರುಮಾರ್ಗದಲ್ಲಿ ಹತ್ತುತ್ತಾ ಹಾವಿನಂತೆ ಅಂಕು-ಡೊಂಕಾದ ಡಾಮರು ಮಾರ್ಗವನ್ನು ನಾನು ಪುನಃ ತಲುಪಿದೆ. ಕೆಲ ತಿರುವುಗಳ ಅನಂತರ ಪರ್ವತದ ಮತ್ತೊಂದು ಪಾರ್ಶ್ವದಲ್ಲಿ ಬಂದಿಳಿದಾಗ, ಮುಂದಿನ ಕಣಿವೆಯತ್ತ ಮುಖ ಮಾಡಿ ನಿಂತಿರುವ ನಾನು ತಲುಪ ಬೇಕಾಗಿದ್ದ ಸ್ಥಳದ ಪ್ರಥಮ ದರ್ಶನ ನನಗಾಯಿತು.

ಆ ಪ್ರದೇಶವು ಸುತ್ತಮುತ್ತಲ ಪ್ರದೇಶಗಳಿಗಿಂತ ಭಿನ್ನವಾಗಿ, ಹಲವಾರು ಮೈಲುಗಳಷ್ಟು ವಿಸ್ತಾರದ ಬಂಜರು ಪ್ರದೇಶದ ಮಧ್ಯದಲ್ಲಿ ಹಚ್ಚ ಹಸಿರಾಗಿರುವ ಒಂದು ಸಣ್ಣ ಪ್ರದೇಶವಾಗಿತ್ತು. ನೂರಾರು ಅಡಿಗಳಷ್ಟು ಆಳದಲ್ಲಿ ಕಣಿವೆಯನ್ನು ಎರಡು ಭಾಗವನ್ನಾಗಿ ಸೀಳಿದಂತೆ ಹರಿಯುತ್ತಿರುವ ಸಿಂಧೂ ನದಿಯ ಹರಿವಿನ ಶಬ್ದವು ನನಗೆ ಅಲ್ಲಿ ಕೇಳಿಸುತ್ತಿತ್ತು. ಲಡಾಖ್ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಆಂದೋಲನ – SECMOL (Students' Educational and Cultural Movement of Ladakh) ಬಿಡಾರದ ಕಡೆಗೆ ಹೋಗುತ್ತಾ ಕೊನೆಯ ಮೈಲನ್ನು ಕ್ರಮಿಸುತ್ತಿರುವಾಗ ನನ್ನ ಮನಸ್ಸಿನಲ್ಲಿ ಮೂಡಿದ ಪ್ರಥಮ ಛಾಪನ್ನು ಒಂದು ಪದ ಅಥವಾ ನುಡಿಗಟ್ಟಿನಲ್ಲಿ ಸೆರೆಹಿಡಿಯಲು ಪ್ರಯತ್ನಿಸುತ್ತಾ ಸಾಗುತ್ತಿರುವಾಗ ನನ್ನ ಮನ ಸೂಚಿಸಿದ ಅನೇಕ ಪದಗಳಲ್ಲಿ ಎಲ್ಲಕ್ಕಿಂತ ಮೇಲೆ ತಟ್ಟನೆ ಮೂಡಿ ದೀರ್ಘಕಾಲ ಮನದಲ್ಲಿ ರಿಂಗಣಿಸಿದಂತಹ ಪದ – ಓಯಸಿಸ್.

## SECMOL ನ ಕಥೆ

ಲಡಾಖ್ ನಮ್ಮ ದೇಶದ ಅತ್ಯಂತ ವಿದೂರ ಪ್ರದೇಶ. ಲಡಾಕ್‌ನ ಎರಡು ಜಿಲ್ಲೆಗಳಲ್ಲಿ ಒಂದಾದ ಲೇಹ್ ಎಂಬಲ್ಲಿಯ ಜನರು ಜನಾಂಗೀಯ ಹಾಗೂ ಭಾಷಾ ಅಲ್ಪಸಂಖ್ಯಾತರಾಗಿ,



SECMOL ಪರ್ಯಾಯ ಸಂಸ್ಥೆಯ ಕ್ಯಾಂಪಸ್

ಸುಮಾರು 9000ದಿಂದ 12000 ಅಡಿಗಳ ಎತ್ತರದ ಪರ್ವತ ಪ್ರದೇಶದಲ್ಲಿ ಸಣ್ಣದಾದ 10ರಿಂದ 15 ಮನೆಗಳಿರುವ ಕೊಪ್ಪಲುಗಳಲ್ಲಿ ನೆಲಸಿದ್ದಾರೆ".

ಇಲ್ಲಿರುವ ಸರಕಾರಿ ಶಾಲೆಗಳು ಏನಕ್ಕೂ ಪ್ರಯೋಜನವಿಲ್ಲವೆಂಬ ಅಪಕೀರ್ತಿ ಪಡೆದಿದ್ದು, 10ನೇ ತರಗತಿಯ ಪರೀಕ್ಷೆಗಳಲ್ಲಿ ಸ್ಥಳೀಯ ವಿದ್ಯಾರ್ಥಿಗಳ ಶೇಕಡಾವಾರು ಫಲಿತಾಂಶ ಅತೀ ಕಡಿಮೆ ಇರುವುದೇ ಇದಕ್ಕೆ ಸಾಕ್ಷಿ. ಈ ಫಲಿತಾಂಶ ಬಹಳ ವರ್ಷಗಳ ಕಾಲ ಸುಮಾರು 5ಶೇ ಅಷ್ಟೇ ಇತ್ತು . (ಗಂಗೂಲಿ 2001)

SECMOLನ ಸಂಸ್ಥಾಪಕರಲ್ಲಿ ಒಬ್ಬರಾದ ಸೋನಮ್ ವಾಂಗಚುಕ್ ಎನ್ನುವವರು ತಮ್ಮ ಬಾಲ್ಯದಲ್ಲಿ ಹದಗೆಟ್ಟ ಶಿಕ್ಷಣ ವ್ಯವಸ್ಥೆಯನ್ನು ಅನುಭವಿಸಿದವರು. ಅದೃಷ್ಟವಶಾತ್ ಅವರಿಗೆ ದೆಹಲಿಯ ಒಂದು ಶಾಲೆಯಲ್ಲಿ ಅಧ್ಯಯನ ಮಾಡುವ ಅವಕಾಶ ದೊರೆಯಿತು. ಅಲ್ಲಿಯ ಅಧ್ಯಾಪಕರ ಪ್ರೋತ್ಸಾಹದಿಂದ ಅವರು ತಮ್ಮ ಚಿಪ್ಪಿನೊಳಗಿಂದ ಹೊರಬರಲು ಸಾಧ್ಯವಾಯಿತು ಮತ್ತು ಅನಂತರ ಶ್ರೀನಗರದ ಕಾಲೇಜೊಂದರಿಂದ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆಯಲು ಸಾಧ್ಯವಾಯಿತು. ತನ್ನ ಪದವಿ ಅಧ್ಯಯನದ ಕಾಲದಲ್ಲಿ ಅವರು ಲಡಾಖಿ ವಿದ್ಯಾರ್ಥಿಗಳಿಗೆ 10ನೇ ತರಗತಿಯ ಪರೀಕ್ಷೆಗಳ ಬಗ್ಗೆ ಶೈಕ್ಷಣಿಕ ಪಾಠಪ್ರವಚನಗಳ ನೆರವು ನೀಡಿದರು. ಆ ಅನುಭವವು, ಆ ಪ್ರದೇಶದ ಹದಗೆಟ್ಟ ಶಿಕ್ಷಣವ್ಯವಸ್ಥೆಯೊಂದಿಗೆ ಮತ್ತೊಮ್ಮೆ ಮುಖಾ–ಮುಖಿಯಾಗುವಂತೆ ಮಾಡಿ ಅವರ ಮೇಲೆ ಆಳವಾದ ಪ್ರಭಾವ ಬೀರಿತು. ಪದವಿ ಪಡೆದ ಒಂದು ವರ್ಷದ ಅನಂತರ ಲಡಾಖ್‌ನ ಒಂದು ಸಣ್ಣ ಯುವ ಸಮೂಹದೊಂದಿಗೆ 1988ರಲ್ಲಿ SECMOLನ್ನು ಅವರು ಸ್ಥಾಪಿಸಿದರು. (ಅಶೋಕ ಇಂಡಿಯ, 2002)

ಶತಮಾನಗಳ ಕಾಲ ಕಠೋರ ಹವಾಮಾನ ಹಾಗೂ ಭೌಗೋಳಿಕ ಪರಿಸ್ಥಿತಿಯಲ್ಲಿ ಅತ್ಯಂತ ಮಿತವಾದ ಸಂಪನ್ಮೂಲಗಳೊಂದಿಗಿನ ಜೀವನ ನಿರ್ವಹಣೆಯು ಸ್ವಾವಲಂಬಿ ಬದುಕು, ಪರಿಸರದ ಸುಸ್ಥಿರತೆಯನ್ನು ಆಳವಾಗಿ ಗೌರವಿಸುವ ಲಡಾಖಿ ಸಂಸ್ಕೃತಿಯ ವಿಕಸನಕ್ಕೆ ಎಡೆ ಮಾಡಿ ಕೊಟ್ಟಿದ್ದರೂ, ಅಲ್ಲಿನ ಪರಂಪರೆಯ ಅನುಸಾರ ಯಾವುದೇ ಲಡಾಖಿ ಮಗುವು ಪದ್ಧತಿ ವಿದ್ಯಾಭ್ಯಾಸಕ್ಕೆ ಹೋಗಬೇಕಾಗಿರಲಿಲ್ಲ. ಮಕ್ಕಳು ಪಾಲಕರೊಂದಿಗೆ, ಅಜ್ಜ–ಅಜ್ಜಿಯರೊಂದಿಗೆ ಮತ್ತು ನೆರೆ–ಹೊರೆಯವರೊಂದಿಗೆ ಹೊಲ ಮತ್ತು ಮನೆಗಳಲ್ಲಿ ಕೆಲಸ ಮಾಡುತ್ತಾ ಅವರನ್ನು ವೀಕ್ಷಿಸುತ್ತಾ ಕಲಿಯುತ್ತಿದ್ದರು. ಹೀಗೆ ಕೆಲಸ ಮಾಡುವಾಗ ಲಡಾಖ್‌ನ ಗತಕಾಲದ ಕಥೆಗಳು ಮತ್ತು ಹಾಡುಗಳು ಮೌಖಿಕವಾಗಿ ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾವಣೆಯಾಗುತ್ತಿತ್ತು. ಹೀಗಾಗಿ ಪ್ರತಿಯೊಂದು ಮಗುವೂ ಅವಳ ಅಥವಾ ಅವನದೇ ಆದ ಮನೆಯನ್ನು ನಿರ್ಮಿಸಿ ನಿರ್ವಹಣೆ ಮಾಡಲು ಹಾಗೂ ಹೊಲ–ಗದ್ದೆ ಅಥವಾ ಪಶು ಸಂಗೋಪನೆಯನ್ನು ನಿಭಾಯಿಸಲು ಯೋಗ್ಯರನ್ನಾಗಿಸುತ್ತಿತ್ತು ಮತ್ತು ಕುಟುಂಬದ ಅವಶ್ಯಕತೆ–ಗಳನ್ನು ಪೂರೈಸಲು ಸಮರ್ಥರನ್ನಾಗಿ ಮಾಡುತ್ತಿತ್ತು. ಇಲ್ಲಿನ ಶಿಕ್ಷಣದ ಗುರಿ ಯುವ ಸಮೂಹವನ್ನು ಜೀವನಕ್ಕಾಗಿ ಅರ್ಥಪೂರ್ಣ ಕೆಲಸದಲ್ಲಿ ತೊಡಗುವಂತೆ ತಯಾರು–ಮಾಡುವುದು ಮತ್ತು ಲಡಾಖಿನ ವಿಭಿನ್ನ ಸಂಸ್ಕೃತಿ ಹಾಗೂ ಮೌಲ್ಯಗಳನ್ನು ವರ್ಗಾಯಿಸುವುದೇ ಆಗಿತ್ತು. ಇದರಿಂದಾಗಿ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವಂತಹ ದೃಢವಾದ ಮತ್ತು ಸಮೃದ್ಧಿ ತುಂಬಿದ ಸಮುದಾಯಗಳ ನಿರ್ಮಿತಿ ಸಾಧ್ಯವಾಗಿತ್ತು. (Mingle, 2010)

10ನೇ ತರಗತಿಯಲ್ಲಿ ಅನುತ್ತೀರ್ಣರಾದ (ಅಥವಾ ಪರೀಕ್ಷೆ ಬರೆಯಲಿರುವ) ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವುದರಿಂದ SECMOLನ ಪ್ರಾರಂಭವಾಯಿತು. ಏಕೆಂದರೆ ಸೋನಮ್ ಹೇಳುವಂತೆ "ನಿಜಕ್ಕೂ ಈ ಮಕ್ಕಳದ್ದು ಕಷ್ಟದ ಪರಿಸ್ಥಿತಿ ಇವರು ತಮ್ಮ ಪಾಡಿಗೆ ತಾವು ಹೊಲಗಳಲ್ಲಿ ಬೆಳೆ ಬೆಳೆದು ಕೊಂಡು ತಮ್ಮ ಉದರಪೋಷಣೆಯನ್ನು ತಾವೇ ಮಾಡಿಕೊಳ್ಳುತ್ತಿದ್ದ ಮಕ್ಕಳು. ಇಂಥವರು 10 ನೇ ತರಗತಿ ಅನುತ್ತೀರ್ಣರಾದರೆ ಸಮಾಜದಿಂದ ವಿಫಲರು ಎಂದು ಪರಿಗಣಿಸಲ್ಪಟ್ಟಿರುತ್ತಾರೆ. ಆದರೆ ಈ ಮಕ್ಕಳನ್ನು ಇನ್ನೊಂದು ಬಗೆಯ ಶಿಕ್ಷಿತ ಸಮಾಜಕ್ಕೆ ಅರ್ಹರನ್ನಾಗಿ ಮಾಡುವ ನಿರೀಕ್ಷೆಯೊಂದಿಗೆ ಶಾಲೆಗಳಿಗೆ ಕಳುಹಿಸಲಾಗುತ್ತಿತ್ತು. ಆದ್ದರಿಂದ ಅವರು ಸಾಂಪ್ರದಾಯಿಕ ಕೌಶಲ್ಯಗಳನ್ನು ಕಳೆದುಕೊಂಡಿದ್ದರು ಹಾಗೂ ಅವರಿಗೆ ಹೊಸ ಕೌಶಲ್ಯಗಳನ್ನೂ ಗಳಿಸಲಾಗಿರಲಿಲ್ಲ. ಹಳೆಯ ಮತ್ತು ಹೊಸದರ ನಡುವೆ ಅವರು ಎಲ್ಲೋ ಕಳೆದು ಹೋಗಿದ್ದರು ಹೀಗಾಗಿ ಅವರು ಬಹಳ ಹತಾಶ ಪರಿಸ್ಥಿತಿಯಲ್ಲಿದ್ದರು." (ಅದೇ)

ಹೀಗಿದ್ದರೂ, "ಒಂದೊಮ್ಮೆ ಶೇಖಡಾ 95 ರಷ್ಟು ಉತ್ಪನ್ನಗಳು ವಿಫಲವಾದರೆ, ಅದು ಶಾಲಾ ವ್ಯವಸ್ಥೆಯಲ್ಲಷ್ಟೇ ಅಲ್ಲ, ಕಾರುಗಳ ಕಾರ್ಖಾನೆ ಅಥವಾ ಜಾಮ್

ಕಾರ್ಖಾನೆಯಂತಹಾ ಇನ್ಯಾವುದೇ ವ್ಯವಸ್ಥೆಯೇ ಆಗಿದ್ದರೂ ಅದು ಉತ್ಪನ್ನದಲ್ಲಿನ ದೋಷವಲ್ಲ ವ್ಯವಸ್ಥೆಯಲ್ಲಿಯೇ ದೋಷವಿರುತ್ತದೆ ಮತ್ತು ವ್ಯವಸ್ಥೆಯನ್ನೇ ಬದಲಾಯಿಸಬೇಕಾಗುತ್ತದೆ." (ಅದೇ) ಎಂದು ಕಾಲಕ್ರಮೇಣ ಅವರಿಗೆ ಅರಿವಾಯಿತು. ಸ್ಥಳೀಯ ವಿದ್ಯಾರ್ಥಿಗಳು ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲಸ ಮಾಡಿದ ಅನುಭವದ ಆಧಾರದಲ್ಲಿ SECMOL ನಾಲ್ಕು ಪ್ರಮುಖ ಸವಾಲುಗಳನ್ನು ಗುರುತಿಸಿತು. ಅವು ಬೋಧನಾ ಭಾಷೆ – (ಮಾಧ್ಯಮ), ಪಠ್ಯಪುಸ್ತಕ ಮತ್ತು ಪಠ್ಯಕ್ರಮದಲ್ಲಿರುವ ಬಳಕೆಯಲ್ಲಿಲ್ಲದ ಮತ್ತು ಅವರ ಸಂಸ್ಕೃತಿಗೆ ಅಪರಿಚಿತವಾದ ಮತ್ತು ಏನೇನೂ ಸಂಬಂಧವಿಲ್ಲದ ವಿಚಾರಗಳು, ತರಬೇತಿ ಹೊಂದಿರದ ಶಿಕ್ಷಕರು, ಸಮುದಾಯದವರು ಇದು ನಮ್ಮ ಶಾಲೆ ಎಂಬ ಆತ್ಮೀಯ ಭಾವನೆ ಹೊಂದಿರದಿರುವುದು.

ಕಳೆದ 25 ವರ್ಷಗಳಿಂದ ಸಂಸ್ಥೆಯು ಸಮಸ್ಯೆಯಿರುವ ಈ ಎಲ್ಲಾ ನಾಲ್ಕು ಕ್ಷೇತ್ರಗಳಲ್ಲೂ ಕೆಲಸ ಮಾಡಿ ವಿವಿಧ ಹಂತಗಳಲ್ಲಿ ಯಶಸ್ಸನ್ನು ಮತ್ತು ಸವಾಲುಗಳನ್ನು ಕಂಡುಕೊಂಡಿತು (Menon, 2010). ಹೀಗಿದ್ದರೂ ದಶಕಗಳಿಂದಲೂ ಸಂಸ್ಥೆಯು 10 ನೇ ತರಗತಿಯಲ್ಲಿ ಅನುತ್ತೀರ್ಣರಾದವರಿಗೆ ಸಹಾಯ ಮಾಡುವುದನ್ನು ಗುರಿಯಾಗಿರಿಸಿಕೊಂಡು ಮುಂದುವರಿಯಿತು. ಇದೆಲ್ಲವೂ ನಡೆದಿದ್ದು ನಾನು ಭೇಟಿ ಕೊಡುತ್ತಿರುವ, 1994 ರಲ್ಲಿ ಸೋನಮ್ ಅವರಿಂದ ಸ್ಥಾಪಿಸಲ್ಪಟ್ಟ ಪರ್ಯಾಯ ಸಂಸ್ಥೆಯ ಬಿಡಾರದಲ್ಲಿ. ಈ ಸಂಸ್ಥೆಯನ್ನು ಲೇಹ್ ಪಟ್ಟಣದ ಪಶ್ಚಿಮದಲ್ಲಿ ಸುಮಾರು 16 ಕಿ.ಮೀ ದೂರದ ಫೇಯ್ (Phey) ಎಂಬಲ್ಲಿಯ ಬಂಜರು ಭೂಮಿಯಲ್ಲಿನ ಒಂದು ಸಣ್ಣ ಭಾಗದಲ್ಲಿ ಕಟ್ಟಲಾಗಿತ್ತು.

## SECMOL ಪರ್ಯಾಯ ಸಂಸ್ಥೆಯ ಕ್ಯಾಂಪಸ್

ಹೊರಗೆ ಜೋರಾದ ಗಾಳಿ ಬೀಸುತ್ತಿದೆ ಮತ್ತು ಮಳೆಯೂ ಪ್ರಾರಂಭವಾಗಿದೆ. ಆದರೆ ನಾನು ಕೆಲವು ಗೆಳೆಯರು, ವಿದೇಶೀ ಸ್ವಯಂಸೇವಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಬಿಡಾರದ ಅಡಿಗೆ ಕೋಣೆಗೆ ತಾಗಿಕೊಂಡಿರುವ ಹಿತಕರವಾಗಿ ಬೆಚ್ಚಗಿರುವ ಕೊಠಡಿಯಲ್ಲಿ ಕುಳಿತಿದ್ದೇನೆ. ಅವರಲ್ಲಿ ಕೆಲವರು ಕೊಠಡಿಯ ಮೂಲೆಯಲ್ಲಿ ಹುಟ್ಟಿ ಕೆಲವೇ ದಿನಗಳಾಗಿರುವ ಅನಾಥ ಬೆಕ್ಕಿನ ಮರಿಯೊಂದಕ್ಕೆ ಆಹಾರ ತಿನ್ನಿಸುತ್ತಿದ್ದರು. ದೈನಂದಿನ ಚಟುವಟಿಕೆಗಳಲ್ಲಿ ಸಹಾಯ ಮಾಡುವ ಚೋಸಾಂಗ್ (Chozang) ಎಂಬ ಹಳೆಯ ವಿದ್ಯಾರ್ಥಿಯು ನಮಗೆ ಸಂಸ್ಥೆಯ ಬಗ್ಗೆ ಹೇಳತೊಡಗಿದ. "ನಾವು ಇತರ ಸಾಮಾನ್ಯ ಶಾಲೆಗಳಂತೆ (ಔಪಚಾರಿಕ) ಪಠ್ಯಕ್ರಮ ಮತ್ತು ಪಠ್ಯಗಳನ್ನಷ್ಟೇ ಅಭ್ಯಸಿಸುವುದಿಲ್ಲ. ನಾವು ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅವರಲ್ಲಿ ಆತ್ಮವಿಶ್ವಾಸವನ್ನು ಹುರಿದುಂಬಿಸಲು ಪ್ರಯತ್ನಿಸುತ್ತೇವೆ. ಏಕೆಂದರೆ ಒಮ್ಮೆ ಯಾರಾದರೂ ತರಗತಿಯಲ್ಲಿ ಅನುತ್ತೀರ್ಣರಾದರೆ ಪ್ರತಿಯೊಬ್ಬರೂ ಅವರನ್ನು 'ನೀನು ಫೇಲಾದೆ. ನಿನ್ನ ಕೈನಲ್ಲಿ ಏನೂ ಮಾಡಲು ಆಗುವುದಿಲ್ಲ" ಎಂಬಂತೆ ನೋಡುತ್ತಾರೆ. ನಾವು ಅವರ ಆತ್ಮವಿಶ್ವಾಸದ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುತ್ತೇವೆ. ನಾವದನ್ನು ತಳಹದಿ ತರಬೇತಿ (foundation year course) ಎಂದು ಕರೆಯುತ್ತೇವೆ. ಎಲ್ಲಾ ವಿದ್ಯಾರ್ಥಿಗಳು ಚಾಂಗ್‌ಟಾಂಗ್ (Changtang), ನುಬ್ರ (Nubra) ದಂತಹಾ ಲಡಾಖ್‌ನ ಬಲು ದೂರದ ಊರುಗಳಿಂದ ಸರ್ಕಾರಿ ಶಾಲೆಗಳಲ್ಲಿ ಕಲಿತು ಬಂದವರು.

ಅನಂತರದ ಕೆಲವು ಘಂಟೆಗಳ ಕಾಲವನ್ನು ನಾನು ಅಲ್ಲಿ ಫೌಂಡೇಶನ್ ಇಯರ್‌ನ ವಿದ್ಯಾರ್ಥಿಗಳೊಂದಿಗೆ ಅವರು ನಡೆಸುತ್ತಿದ್ದ ಬೌದ್ಧ ತತ್ವಗಳ ಮೇಲಿನ ಪ್ರಶ್ನೆಗಳ ಚರ್ಚೆ ಮತ್ತು ಪ್ರಾತ್ಯಕ್ಷಿಕೆ ಕೇಳುತ್ತಾ, ಲಡಾಖಿ ಹಾಡುಗಳನ್ನು ಹಾಡುತ್ತಾ ಅವರೊಂದಿಗೆ ಊಟ ಮಾಡುತ್ತಾ, ಅವರ ಬಿಡಾರಕ್ಕೆ ನಾನು ಏಕೆ ಭೇಟಿಕೊಟ್ಟೆದೆಂಬ ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಕಳೆದೆ. ತರುವಾಯ ನಾವು ದೊಡ್ಡ ಸಭಾಂಗಣದಲ್ಲಿ ಸೇರಿದೆವು. ಜೊತೆಗಾರರೊಬ್ಬರು ಒಂದು ಚಟುವಟಿಕೆಯನ್ನು ಆಯೋಜಿಸುತ್ತಿದ್ದರು. ಆಕೆ "ನಿಮ್ಮಲ್ಲಿ ಪ್ರತಿಯೊಬ್ಬರಲ್ಲೂ ಕೆಲವು ರೀತಿಯ ಪರಿವರ್ತನೆಯಾಗಿರುವ ಒಂದೊಂದು ಬದಲಾವಣೆಯ ಕಥೆಗಳಿವೆ" ಎಂದು ಹೇಳಿ ನಮ್ಮಲ್ಲೇ ಅಡಗಿರುವ 5 ಭಯಗಳು ಮತ್ತು ಅವುಗಳೊಂದಿಗೆ ವ್ಯವಹರಿಸಲು ಸಹಾಯ ಮಾಡುವ ನಮ್ಮೊಳಗಿನ 5 ಯೋಧರ ಬಗ್ಗೆ ಯೋಚಿಸಲು ಹೇಳಿದಳು. ನಂತರ ನಮ್ಮಲ್ಲೇ ಇಬ್ಬಿಬ್ಬರು ಜೊತೆಯಾಗಲು ಹೇಳಿ ನಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಸೂಚಿಸಿದಳು. ನನ್ನ ಜೊತೆಗಾರಳಾಗಿ ಸಿಕ್ಕಿದ್ದು ಇತ್ತೀಚೆಗಷ್ಟೇ ಸಂಸ್ಥೆಗೆ ಸೇರಿದ ಚಿಕ್ಕ ಹುಡುಗಿ. ಆಕೆ ಪರೀಕ್ಷೆಯನ್ನು ತನ್ನ ಮೊದಲ ಭಯವನ್ನಾಗಿ ಹೆಸರಿಸಿದ್ದಳು. "ನಮಗೆ ಈ ದಿನ ಪರೀಕ್ಷೆ ಇತ್ತಲ್ಲವೇ?" ಅನಂತರ ಆಕೆ ಇಳಿಧ್ವನಿಯಲ್ಲಿ ಹೀಗೆ ವಿವರಿಸಿದಳು "ನನಗೆ ಉತ್ತರಿಸಲಾಗಲಿಲ್ಲ ಪತ್ರಿಕೆಯಿದ್ದರೂ ನಾನು ಮರೆತುಬಿಟ್ಟೆ" ಎಂದು ಹೇಳಿ ನಿಲ್ಲಿಸಿ ಕೆಳಗೆ ನೋಡತೊಡಗಿದಳು. ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡುದನ್ನು ಕಂಡೆ. "ನಿನ್ನೆ ರಾತ್ರಿ ಮೂರು ಘಂಟೆಯವರೆಗೂ ಓದಿದೆ. ಬೆಳಗ್ಗೆ ಎದ್ದು ಮತ್ತೊಮ್ಮೆ ಓದಿದೆ. ಆದರೆ ನಾನು ಓದಿಕೊಂಡದ್ದನ್ನು ಅವರು ಕೇಳಿರಲೇ ಇಲ್ಲ". ಈಗ ಅವಳು ಬಿಕ್ಕಳಿಸಿ ಅಳುತ್ತಿದ್ದಳು. ಪರ್ಯಾಯ ಸಂಸ್ಥೆಯಲ್ಲಿಯ 12 ತಿಂಗಳ ವಾಸವು ನಿಜವಾಗಿಯೂ ಈ ವಿದ್ಯಾರ್ಥಿಗಳ ಜೀವನದಲ್ಲಿ ಗಣನೀಯ ಬದಲಾವಣೆಯನ್ನು ತರಲು ಸಮರ್ಥವಾಗುವುದೇ ಎಂದು ನಾನು ಆಲೋಚನೆಗೆ ತೊಡಗಿದೆ.

ಮರುದಿನ ಮುಂಜಾನೆ ಇತ್ತೀಚೆಗಷ್ಟೇ ಸಂಸ್ಥೆಯ ಸಿಬ್ಬಂದಿಯಾಗಿ ಸೇರಿದ ಸೆತನ್ (Tsetan) ಎಂಬ ಹಳೆಯ ವಿದ್ಯಾರ್ಥಿಯನ್ನು ನಾನೊಂದು ಪ್ರಶ್ನೆ ಕೇಳಿದೆ. ಅವನು ಹೇಳುವಂತೆ ಬಹುತೇಕ ವಿದ್ಯಾರ್ಥಿಗಳು ಇಲ್ಲಿ ಒಂದು ವರ್ಷ ಕಳೆಯುವಷ್ಟರಲ್ಲಿ ಪರೀಕ್ಷೆಗಳನ್ನು ಎದುರಿಸಲು ತಯಾರಾಗುವುದಷ್ಟೇ ಅಲ್ಲದೇ "ಅನೇಕರು ಅಧ್ಯಯನವನ್ನು ಮುಂದುವರೆಸುತ್ತಾರೆ. ಹಾಗೂ ಮಿಕ್ಕವರು ಆವಶ್ಯಕವಾದ ಜ್ಞಾನವನ್ನು ಮತ್ತು ಏನು ಮಾಡಬೇಕು ಏನು ಮಾಡಬಾರದೆಂಬ ಆಲೋಚನೆಗಳನ್ನು ಪಡೆಯುತ್ತಾರೆ. ಇಲ್ಲಿ ಉತ್ತೀರ್ಣರಾಗಿ ನಾವು ಪುನಃ ಶಾಲೆಗೆ ಹಿಂದಿರುಗಿದಾಗ "ಓಹ್.. ಇವನು ಸುಧಾರಿಸಿದ್ದಾನೆ" ಎಂದು ಅವರು ಬಹಳ ಚಕಿತರಾಗುತ್ತಾರೆ " ಎಂದು ನಗುತ್ತಾ ಹೇಳಿದನು.

ಹಾಗಾದರೆ ಕುಟುಂಬ ಹಾಗೂ ಗೆಳೆಯರಿಂದ ಯಾತಕ್ಕೂ ಬಾರದವರು ಎಂದು ಪರಿಗಣಿಸಲ್ಪಟ್ಟ ಹಾಗೂ ನಿರ್ದಿಷ್ಟ ಕಲಿಕಾ ವಿಧಾನವನ್ನು ರೂಢಿಮಾಡಿಕೊಂಡಂತಹಾ ವಿದ್ಯಾರ್ಥಿಗಳನ್ನು, ತಮ್ಮ ಜೀವನದ ಜವಾಬ್ದಾರಿಗಳನ್ನು ಹೊರಲು ಸಮರ್ಥ ಯುವಕ–ಯುವತಿಯರನ್ನಾಗಿ ಪರಿವರ್ತಿಸಲು ಸಂಸ್ಥೆಯು ಹೇಗೆ ಸಹಾಯ ಮಾಡುತ್ತದೆ?

SECMOL ಪರ್ಯಾಯ ಸಂಸ್ಥೆಯು ಅಳವಡಿಸಿ–ಕೊಂಡಿರುವ ವಿಭಿನ್ನ ಮಾರ್ಗಗಳಲ್ಲಿ, ಒಂದಕ್ಕೊಂದು ಅಂತರ್ ಸಂಬಂಧವನ್ನು ಹೊಂದಿರುವ ಪ್ರಮುಖವಾದ ಮೂರು ತಂತ್ರಗಳು, ಎದ್ದು ಕಾಣುತ್ತವೆ.

## ಸ್ಥಳೀಯ ಭಾಷೆ ಮತ್ತು ಪಠ್ಯವಸ್ತು

1947ರಲ್ಲಿ ಲಡಾಖನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಸೇರಿಸಿದಲ್ಲಿಂದ ಉರ್ದು ಆ ಪ್ರದೇಶದ ಆಧಿಕೃತ ಭಾಷೆಯಾಯಿತು. ಲೇಹ್‌ನ ಬಹುತೇಕ ಹಳ್ಳಿಗಳಲ್ಲಿ 6 ವರ್ಷದ ಮಗುವು ಶಾಲೆಗೆ ಸೇರಿದ ಮರುಕ್ಷಣದಿಂದಲೇ ಲಡಾಖಿ ಭಾಷೆಯಿಂದ ಸಂಪೂರ್ಣವಾಗಿ ಪರಕೀಯವಾದ ಭಾಷೆಗೆ ಬದಲಾಗಬೇಕಾಗುತ್ತದೆ. ಸೋನಮ್ ಸ್ಮರಿಸುವಂತೆ "ಶಾಲೆಗಳಲ್ಲಿ ಹೊಡೆಯುವ ಬೆತ್ತದೊಂದಿಗೆ ಸಿಗುವ ಸ್ವಾಗತ ಮತ್ತು ತಮಗೆ ಗೊತ್ತಿರುವುದನ್ನೇ ಮತ್ತೆ ಕಲಿಯಬೇಕಾದ ಪರಿಸ್ಥಿತಿಗಳು ಅವರಿಗೆ ನೋವಿನ ಅನುಭವವನ್ನುಂಟು ಮಾಡುತ್ತವೆ. ಉಮ್ಮಾ ಬದಲಾಗಿ ದೂದ್ – ನೀವು ಉಮ್ಮಾ ಎಂದರೆ ಏಟು ತಿನ್ನುತ್ತೀರಿ. ಲಡಾಖಿ ಭಾಷೆಯಲ್ಲಿ ತಮಗೆ ಚೆನ್ನಾಗಿ ಗೊತ್ತಿರುವ ವಿಷಯವನ್ನು ಹೇಳಿದಾಗ ಅದನ್ನು ಉರ್ದುವಿನಲ್ಲಿ ಹೇಳಲಾಗದಿರುವುದಕ್ಕೆ ಪ್ರತಿಸಲವೂ ಅವರನ್ನು ಅವಮಾನಿಸಲಾಗುತ್ತದೆ. (Mingle, 2010)". 9ನೇ ತರಗತಿಗೆ ಬಂದಾಗ ಉರ್ದುವನ್ನು ತ್ಯಜಿಸಿ ಎಲ್ಲಾ ವಿಷಯಗಳ ಬೋಧನಾ ಮಾಧ್ಯಮವನ್ನು ಆಂಗ್ಲ ಭಾಷೆಗೆ ಬದಲಾಯಿಸಲಾಗುತ್ತದೆ. ಹೊಸ ಭಾಷೆಯನ್ನು ಕಲಿತು ಅದರಲ್ಲೇ ಅವರ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು (ಎಲ್ಲಾ 6 ವಿಷಯಗಳು) ಬರೆಯಲು ಅವರಿಗೆ ಕೇವಲ ಎರಡೇ ವರ್ಷಗಳ ಕಾಲಾವಕಾಶವಿರುತ್ತದೆ. ಸೋನಮ್ ಅಭಿಪ್ರಾಯಿಸುವಂತೆ "ಈ ರೀತಿಯ ಮಾದರಿ ಹೇಗೆ ಬಂದಿರುವುದೋ ನನಗೆ ತಿಳಿಯದು. ಈ ರೀತಿಯ ಮಾದರಿಯ ಕಲ್ಪನೆ ನೀವು ನಿಮ್ಮ ಶತ್ರುಗಳಿಗಷ್ಟೇ ಮಾಡಬಹುದು, ನಿಮ್ಮ ದೇಶದ ಭಾವೀ ಪ್ರಜೆಗಳಿಗಲ್ಲ."(ಅದೇ)

ಕೇವಲ ಭಾಷೆಯಷ್ಟೇ ಅಲ್ಲದೇ ಪಠ್ಯಪುಸ್ತಕಗಳಲ್ಲಿಯ ವಿಷಯಗಳೂ ವಿದ್ಯಾರ್ಥಿಗಳಿಗೆ ಪರಕೀಯವಾದುದೆಂದು ಅವರಿಗೆ ಅರಿವಾಯಿತು. ಲಡಾಖಿ ಇತಿಹಾಸ, ಸಂಸ್ಕೃತಿ, ಸಸ್ಯ ಹಾಗೂ ಪ್ರಾಣಿ ಸಮೂಹಗಳಿಗೆ ಈ ಪುಸ್ತಕ ಹಾಗೂ ಪಠ್ಯಕ್ರಮದಲ್ಲಿ ಜಾಗವಿರಲಿಲ್ಲ. ದಹಲಿ ಅಥವಾ ಜಮ್ಮುವಿನಲ್ಲಿ ತಯಾರಿಸಲ್ಪಟ್ಟ ಈ ಪುಸ್ತಕಗಳು ಚಮರೀ ಮೃಗ (ಯಾಕ್) ಮತ್ತು ಏಪ್ರಿಕಾಟ್ (ಸಕ್ಕರೆ ಬಾದಾಮಿ) ಬಗ್ಗೆ ಮಾತಾಡದೇ ಆನೆ ಮತ್ತು ಮಳೆಕಾಡುಗಳ ಬಗ್ಗೆ ಹೇಳುತ್ತವೆ. (Ganguly, 2001). ಸ್ಥಳೀಯರಲ್ಲದ ಶಿಕ್ಷಕರು ಸ್ಥಳೀಯತೆಯನ್ನು 'ಅನಾಗರಿಕ' ಎಂದು ಪರಿಗಣಿಸುತ್ತಾರೆ ಏಕೆಂದರೆ ಪಠ್ಯ ಪುಸ್ತಕದಲ್ಲಿ ನಿಗದಿ ಪಡಿಸಿರುವುದು ಸರಿ ಎಂದೇ ಪರಿಗಣಿಸಿ ಈ ಪರಕೀಯ ಭಾವನೆಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತಾರೆ.




ಲಡಾಖಿ ಮಕ್ಕಳಿಗೆ ಚಿರಪರಿಚಿತವಿರುವ ಚಿತ್ರಗಳನ್ನು ಪಠ್ಯಪುಸ್ತಕದಲ್ಲಿ ಬಳಸಿರುವುದು

ಕ್ಯುಮಿನ್ಸ್ (Cummins (2001) ಹೇಳುವಂತೆ "ಯಾವಾಗ (ಮಕ್ಕಳು) ಹೀಗೆ ಅಸಡ್ಡೆಗೊಳಗಾಗುತ್ತಾರೋ ಆಗ, ಅವರು ತರಗತಿಯಲ್ಲಿ ಚುರುಕಾಗಿ ಮತ್ತು ಆತ್ಮವಿಶ್ವಾಸದಿಂದ ಭಾಗವಹಿಸುವುದಿಲ್ಲ." ಮತ್ತು "ಮಕ್ಕಳು ತಮ್ಮೊಂದಿಗೆ ತರಗತಿಗಳಿಗೆ ತಂದಿರುವ ಅನುಭವ ಮತ್ತು ತಿಳುವಳಿಕೆಯನ್ನು ಆಧಾರವಾಗಿಟ್ಟುಕೊಂಡು ಅದರ ಮೇಲೆ ಮುಂದಿನ ಜ್ಞಾನವನ್ನು ಶಾಲೆಗಳು ನಿರ್ಮಾಣ ಮಾಡಬೇಕು. ನಾವು ಉದ್ದೇಶಪೂರ್ವಕವಾಗಿ ಅಥವಾ ಪ್ರಮಾದವಶಾತ್ ಮಕ್ಕಳ ಭಾಷೆಯನ್ನು ನಾಶ ಮಾಡಿದಾಗ, ತಂದೆ-ತಾಯಿ, ಅಜ್ಜ-ಅಜ್ಜಿಯರೊಡನೆ ಅವರ ಸಂಬಂಧಕ್ಕೆ ಹಾನಿ ಮಾಡಿದಾಗ ನಾವು ಶಿಕ್ಷಣದ ಸಾರ ಸರ್ವಸ್ವವನ್ನೇ ವಿರೋಧಿಸಿದಂತಾಗುತ್ತದೆ." ಎಂದು SECMOL ಅರ್ಥ ಮಾಡಿಕೊಂಡಿದೆ.

ಕ್ಯುಮಿನ್ಸ್ (Cummins (2001) ಹೇಳುವಂತೆ "ಯಾವಾಗ (ಮಕ್ಕಳು) ಹೀಗೆ ಅಸಡ್ಡೆಗೊಳಗಾಗುತ್ತಾರೋ ಆಗ, ಅವರು ತರಗತಿಯಲ್ಲಿ ಚುರುಕಾಗಿ ಮತ್ತು ಆತ್ಮವಿಶ್ವಾಸದಿಂದ ಭಾಗವಹಿಸುವುದಿಲ್ಲ." ಮತ್ತು "ಮಕ್ಕಳು ತಮ್ಮೊಂದಿಗೆ ತರಗತಿಗಳಿಗೆ ತಂದಿರುವ ಅನುಭವ ಮತ್ತು ತಿಳುವಳಿಕೆಯನ್ನು ಆಧಾರವಾಗಿಟ್ಟುಕೊಂಡು ಅದರ ಮೇಲೆ ಮುಂದಿನ ಜ್ಞಾನವನ್ನು ಶಾಲೆಗಳು ನಿರ್ಮಾಣ ಮಾಡಬೇಕು. ನಾವು ಉದ್ದೇಶಪೂರ್ವಕವಾಗಿ ಅಥವಾ ಪ್ರಮಾದವಶಾತ್ ಮಕ್ಕಳ ಭಾಷೆಯನ್ನು ನಾಶ ಮಾಡಿದಾಗ, ತಂದೆ-ತಾಯಿ, ಅಜ್ಜ-ಅಜ್ಜಿಯರೊಡನೆ ಅವರ ಸಂಬಂಧಕ್ಕೆ ಹಾನಿ ಮಾಡಿದಾಗ ನಾವು ಶಿಕ್ಷಣದ ಸಾರ ಸರ್ವಸ್ವವನ್ನೇ ವಿರೋಧಿಸಿದಂತಾಗುತ್ತದೆ." ಎಂದು SECMOL ಅರ್ಥ ಮಾಡಿಕೊಂಡಿದೆ.

SECMOL ಪರ್ಯಾಯ ಸಂಸ್ಥೆಗೆ ಹೆಚ್ಚಾಗಿ ಬರುವ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶದವರು ಮತ್ತು ಅವರು ಲಡಾಖಿ ಭಾಷೆಯಲ್ಲಷ್ಟೇ ಸರಾಗವಾಗಿ ಮಾತನಾಡಬಲ್ಲರು. ಮೊದಲ ಕೆಲವು ತಿಂಗಳುಗಳ ಕಾಲ ಅವರನ್ನು ಅವರ ಮಾತೃಭಾಷೆಯಲ್ಲಿ ಸಂಭಾಷಿಸಲು ಮತ್ತು ಪ್ರಾತ್ಯಕ್ಷಿಕೆಗಳನ್ನು ಅವರ ಜೊತೆಗಾರರೊಂದಿಗೆ ಮಾಡಲು ಹಾಗೂ ತಮ್ಮ ಸಂಸ್ಕೃತಿಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಮತ್ತು ಹಂಚಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ. ಬೋಧಕ ವರ್ಗದವರು ಲಡಾಖಿ ಭಾಷೆಯನ್ನು ಚೆನ್ನಾಗಿ ತಿಳಿದವರು. ಈ ಕಾರ್ಯವಿಧಾನವು ತರಗತಿಯ ಒಳಗೆ ಮತ್ತು ಹೊರಗೆ ಅವರಿಗೆ ಸ್ವೀಕೃತ ಎಂಬ ಭಾವವನ್ನು ನೀಡುತ್ತದೆ. ಜೊತೆಗಾರರು, ವಿದೇಶಿ ಮತ್ತು ಸ್ಥಳೀಯ ಸ್ವಯಂ ಸೇವಕರಿಂದ ಇಂಗ್ಲಿಷ್ ಮತ್ತು ಹಿಂದಿ/ಉರ್ದುವನ್ನು ವಿದ್ಯಾರ್ಥಿಗಳು ಸ್ವಲ್ಪ ಸ್ವಲ್ಪವಾಗಿ ಕಲಿಯುತ್ತಾ ಆ ಭಾಷೆಗಳಲ್ಲಿ ಈಗಾಗಲೇ ಅವರು ಪರಿಣಿತರಲ್ಲ ಎಂದು ಅವಹೇಳನಕ್ಕೆ ಒಳಗಾಗದೇ ಕ್ರಮೇಣ ಸಹಜವಾಗಿ ಅನ್ಯ ಭಾಷೆಗಳಿಗೆ ಹೊಂದಿಕೊಳ್ಳುತ್ತಾರೆ.

ಪ್ರತಿ ಮಗುವಿನ ಭಾಷೆ ಮತ್ತು ಸಾಂಸ್ಕೃತಿಕತೆಗೆ ಸಂಬಂಧಿಸಿದ ಅನುಭವಗಳನ್ನು ಸ್ವೀಕರಿಸಲು ಮತ್ತು ಊರ್ಜಿತಗೊಳಿಸಲು ಬೇಕಾದ ಸಾಂಸ್ಥಿಕ ಪರಿಸರವನ್ನು ಸೃಷ್ಟಿಸಲು SECMOL ಕ್ರಿಯಾಶೀಲ ಪ್ರಕಟಣಾ ತಂಡವನ್ನು ಹೊಂದಿದೆ (Cummins, 2001). ನಿರ್ದಿಷ್ಟವಾಗಿ ಹೇಳುವುದಾದರೆ ಅವರ 2 ಪ್ರಮುಖ ಆದ್ಯತೆಗಳು (i) ಲಡಾಖಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕವಾಗಿ ಮತ್ತು ಸಾಂದರ್ಭಿಕವಾಗಿ ಪ್ರಸ್ತುತವಾದ ಪಠ್ಯಪುಸ್ತಕಗಳನ್ನು ರಚಿಸುವುದು (ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿಗೆ) (ii) ಲಡಾಖಿ ಭಾಷೆಯ ಆಡುನುಡಿಯ ಬರವಣಿಗೆಯಲ್ಲಿ ಜನಪ್ರಿಯ ಬಳಕೆಗಾಗಿ ಸಹಪಠ್ಯ ವಿಚಾರಗಳನ್ನು (ಮಕ್ಕಳ ಪುಸ್ತಕ, ಸ್ಥಳೀಯ ಪತ್ರಿಕೆ ಇತ್ಯಾದಿ) ತಯಾರಿಸುವುದು.ಇದು ಓದುಗರಿಗೆ ಪರಿಚಿತವಾದ ಮೂಲ ಆಶಯ ಮತ್ತು ಸನ್ನಿವೇಶಗಳನ್ನು ಒದಗಿಸಿ, ಅದನ್ನು ಅರ್ಥಮಾಡಿಕೊಂಡು ಶೈಕ್ಷಣಿಕ ಪಾಠ ಪ್ರವಚನಗಳಲ್ಲಿ ಭಾಗವಹಿಸುವುದನ್ನು ಪ್ರಾರಂಭಿಸಲು ಅನುಕೂಲವನ್ನು ಒದಗಿಸುತ್ತದೆ.

### ಅವರ ಆತ್ಮವಿಶ್ವಾಸವನ್ನು ಪುನರ್ನಿರ್ಮಿಸುವುದು

ಪರ್ಯಾಯ ಸಂಸ್ಥೆಯ ಹಲವಾರು ಹಿಂದಿನ ಮತ್ತು ಇಂದಿನ ವಿದ್ಯಾರ್ಥಿಗಳೊಂದಿಗೆ ಮಾತನಾಡಿದಾಗ ಉತ್ತಮವಾದ ಪ್ರಯತ್ನವನ್ನು ಮಾಡಿಯೂ ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ, ಗೆಳೆಯರು ಮತ್ತು ಕುಟುಂಬದವರು ಅವರ ಸಾಮರ್ಥ್ಯವನ್ನು ಸಂಶಯಿಸಿದಾಗ ಅದು ಅವರನ್ನು ಹೇಗೆ ನೋಯಿಸಿತೆಂಬ ಒಂದು ಸಾಮಾನ್ಯ ವಿಷಯವು ಹೊರಬಂತು. ಸೆತನ್ ತನ್ನ ಅನುಭವವನ್ನು ಸ್ಮರಿಸಿ ಹೇಳುವಂತೆ "ನಾನು ಉರ್ದು ಮತ್ತು ಗಣಿತದಲ್ಲಿ ಅನುತ್ತೀರ್ಣನಾಗಿದ್ದೆ. ನಾನು ತುಂಬಾ ಶ್ರಮ ಪಟ್ಟಿದ್ದೆ-ನನ್ನ ತಾಯಿಯ ಮೇಲೆ ಪ್ರಮಾಣ ಮಾಡುತ್ತೇನೆ. ಆದರೆ ಮನೆಯ ಜನರು ನೀನು ಓದಿಲ್ಲ, ಅಭ್ಯಾಸ ಮಾಡಿಲ್ಲ ಎಂದು ಹೇಳಿದರು. ಅದರಿಂದ ನಾನು ಬಹಳ ಒತ್ತಡ ಅನುಭವಿಸಿದೆ. ವ್ಯವಸ್ಥೆ ಹೀಗಿದೆ ಎಂದು ನನಗೆ ಅನಿಸುತ್ತದೆ "ಲಡಾಖ್‌ನ ಪರಂಪರೆಯು ಮಕ್ಕಳು ಸಾಮಾಜಿಕವಾಗಿ ಅಥವಾ ನಿಸ್ಸಂಕೋಚವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದನ್ನು ಅಥವಾ ಅಪರಿಚಿತರೊಂದಿಗೆ ಬೆರೆಯುವುದನ್ನು ಪ್ರೋತ್ಸಾಹಿಸದ ಕಾರಣ ಮಗುವು ಸಂಕೋಚದ, ಆತ್ಮವಿಶ್ವಾಸವಿಲ್ಲದ ವ್ಯಕ್ತಿಯಾಗುತ್ತಾನೆ. ಒಂದು ಗುಂಪು ಇಲ್ಲಿ ಕುಳಿತುಕೊಂಡಿದ್ದಾಗ ಒಬ್ಬರು ಹೇಳುತ್ತಾರೆ "ನಾವು ಉತ್ತರಿಸೋಣ" ಎಂದು. ಆಗ ಅವರವರಲ್ಲೇ "ನೀನು ಉತ್ತರಿಸು" ಎಂದು ಪ್ರಾರಂಭವಾಗುತ್ತದೆ. ಆದರೆ ಯಾರೂ ಉತ್ತರಿಸುವುದಿಲ್ಲ. ಏಕೆಂದರೆ ಅವರಿಗೆ ತಗ್ಗಿ ಬಗ್ಗಿ

ನಡೆಯುವುದೇ ರೂಢಿಯಾಗಿದೆ. ದೊಡ್ಡ ತಪ್ಪು ಎಲ್ಲಿದೆ ಎಂದರೆ... ತಾಯಿ, ತಂದೆ .... ಯಾವತ್ತಾದರೂ ಅತಿಥಿಗಳು ಬಂದಿದ್ದಲ್ಲಿ ಅಲ್ಲಿಗೆ ಹೋಗಬೇಡವೆನ್ನುತ್ತಾರೆ. ಅತಿಥಿಗಳು ಏನಾದರೂ ಹೇಳಬಹುದೆಂದು ಅವರು ಯೋಚಿಸುತ್ತಾರೆ. ಆದ್ದರಿಂದ ಅವರು ಮಗುವಿಗೆ "ನಿನಗೆ ನಾಚಿಕೆಯಾಗುವುದಿಲ್ಲವೇ. ಸುಮ್ಮನೇ ಕುಳಿತುಕೋ" ಎಂದು ಹೇಳುತ್ತಾರೆ. 4/5ನೇ ವರ್ಷಗಳಿಂದಲೂ ಅನೇಕ ಸಲ ಹೀಗೆ ನಡೆದಿರುತ್ತದೆ. ಹೀಗಾಗಿ, ನಾನು ಏನಾದರೂ ಹೇಳದಲ್ಲಿ ಬೇರೆಯವರು ಏನು ತಿಳಿಯುತ್ತಾರೋ ಎಂಬ ಅಳುಕನ್ನು ಅವರ ಮನಸ್ಸಲ್ಲಿ ತುಂಬಲಾಗಿರುತ್ತದೆ".

ಸವಾಲುಗಳ ಸಂಕೀರ್ಣತೆಯ ಮೂಲ ಮತ್ತು ಸ್ವಭಾವವನ್ನು ಗುರುತಿಸಿ ಸಂಸ್ಥೆಯು, ಮಕ್ಕಳು ತಮ್ಮನ್ನು ತಾವು ನಂಬುವಂತೆ ಮಾಡಲು ಸಹಾಯವಾಗುವಂತೆ ಕೆಲವು ಕ್ರಮಗಳನ್ನು ಅನುಸರಿಸುತ್ತದೆ. ಬಿಡಾರದ ಕೆಲಸ ಕಾರ್ಯಗಳನ್ನು ಸಂಪೂರ್ಣವಾಗಿ ವಿದ್ಯಾರ್ಥಿಗಳೇ ನಡೆಸುವಂತೆ ಮಾಡುವುದು ಅದರಲ್ಲಿರುವ ಪ್ರಾಥಮಿಕ ಅಂಶಗಳಲ್ಲೊಂದು. ಚೋಸಾಂಗ ವಿವರಿಸುವಂತೆ "ಸಂಪೂರ್ಣ ಬಿಡಾರವು ಒಂದು ಪುಟ್ಟ



ವಿದ್ಯಾರ್ಥಿಗಳು ಬಿಡಾರದಲ್ಲಿ ಸ್ವಯಂಸೇವಕರೊಂದಿಗೆ ಸಂಭಾಷಿಸುತ್ತಿರುವುದು

ಸರಕಾರದಂತೆ ಪ್ರಜಾಪ್ರಭುತ್ವದ ಮಾದರಿಯಲ್ಲಿ ನಡೆಯುತ್ತದೆ. ಪ್ರತಿ ತಿಂಗಳು ನಡೆಯುವ ಚುನಾವಣೆಯಲ್ಲಿ ಒಬ್ಬ ವಿದ್ಯಾರ್ಥಿಯನ್ನು ಸಂಯೋಜಕನನ್ನಾಗಿ (ಒಂದು ಕೆಲಸಕ್ಕೆ) ಆರಿಸಲಾಗುತ್ತದೆ. ಅವನು ವಿದ್ಯಾರ್ಥಿನಿಲಯವನ್ನು ನಡೆಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದೊಂದು ಜವಾಬ್ದಾರಿಯನ್ನು ಹೊಂದಿರುತ್ತಾನೆ. ಒಬ್ಬನು ಉದ್ಯಾನದ ಉಸ್ತುವಾರಿ ನೋಡಿಕೊಂಡರೆ, ಮತ್ತೊಬ್ಬರು ಸ್ವಚ್ಛತೆಯನ್ನು ಗಮನಿಸುತ್ತಾರೆ. ಅಥವಾ ನಾವು ವಿದ್ಯುತ್ ಪಡೆಯುವ ಸೌರ ಬ್ಯಾಟರಿಗಳ ಜವಾಬ್ದಾರಿ ಹೊರುತ್ತಾನೆ. ಮತ್ತೊಬ್ಬರದು ನಾವು ಪಡೆಯುವ ಹಾಲು ಮತ್ತೆಲ್ಲಾ ಹೈನು ಪದಾರ್ಥಗಳನ್ನು ನೀಡುವ ಹಸುಗಳ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದೊಂದು ಜವಾಬ್ದಾರಿಯಿದೆ. ಅವರು ಕೆಲಸ ಮಾಡುತ್ತಾ ಎಲ್ಲವನ್ನೂ ಕಲಿಯುತ್ತಾರೆ.

ಅವರು ಹೊಸ ಕೌಶಲ್ಯಗಳನ್ನು ಕಲಿಯುತ್ತಿರುವಾಗ ಮತ್ತು ತಮ್ಮ ಜವಾಬ್ದಾರಿಗಳನ್ನು ತಾವೇ ನಿಭಾಯಿಸಲು ಕಲಿಯುವುದು ಹಾಗೂ ತಮ್ಮ ಜೊತೆಗಾರರೊಂದಿಗೆ ಸ್ವ ಇಚ್ಛೆಯಿಂದ ಬದುಕುವುದು, ಅವರ ಹೊಸ ಗೆಳೆಯರು ಅವರಲ್ಲಿ ತೋರುವ ವಿಶ್ವಾಸ ಇವುಗಳೆಲ್ಲವೂ "ವಿಫಲ" ಎಂಬ ಹಣೆಪಟ್ಟಿಯಿಂದ ಅವರು ಅನುಭವಿಸಿದ ಮನೋವ್ಯಥೆಯನ್ನು ಮರೆಸಿ ಅವರಲ್ಲಿ ಆತ್ಮವಿಶ್ವಾಸವನ್ನು ಪುನರ್ನಿರ್ಮಿಸುತ್ತದೆ. ಚೊಸಾಂಗ್ ಹೀಗೆ ಹೇಳುತ್ತಾನೆ, ಒಬ್ಬ ವ್ಯಕ್ತಿಯು ಒಂದು ಅಂಗಡಿಯನ್ನು ಸೇರಿದಾಗ ಮತ್ತು ಲೆಕ್ಕಪತ್ರಗಳನ್ನು ಗಮನಿಸುವಾಗ ಅವರಿಗೆ ಅವರಲ್ಲೇ ನಂಬಿಕೆ ಮೂಡಿ ಆತ್ಮವಿಶ್ವಾಸ ಹೆಚ್ಚುತ್ತದೆ. ಜನರು ನನ್ನನ್ನು ನಂಬುತ್ತಾರೆ ಎಂಬ ಭಾವನೆ ಅವರಲ್ಲಿ ಮೂಡುತ್ತದೆ. ಇದರಿಂದ ಇನ್ನೂ ಹೆಚ್ಚಿನದನ್ನು ಗಳಿಸುತ್ತಾ ಹೋಗುತ್ತಾರೆ ಮತ್ತು ಇನ್ನೂ ಹೆಚ್ಚೆಚ್ಚು ಕಲಿಯುತ್ತಾ ಹೋಗುತ್ತಾರೆ. ಏಕೆಂದರೆ ಅವರು ಒಮ್ಮೆ ವಿಫಲರಾದಾಗ, ಒಮ್ಮೆ ಅವರಿಗೆ ಸಮಾಜ, ಅವರ ಕುಟುಂಬ ಮತ್ತು ಪ್ರತಿಯೊಬ್ಬರೂ "ಓ ನೀನು ವಿಫಲನಾದೆ, ನಿನಗೆ ಏನೂ ಬರುವುದಿಲ್ಲ, ನೀನು ಏನೂ ಮಾಡಲಾರೆ" ಎಂದು ಹೇಳಿರುತ್ತಾರೆ, ಆಗ ಅವರು ಸಂಪೂರ್ಣ ಹತಾಶರಾಗಿರುತ್ತಾರೆ. ಆದರೆ ಒಮ್ಮೆ ಅವರು ಇಲ್ಲಿ ಬಂದ ಮೇಲೆ, ಅವರು ಕೆಲಸ ಕಾರ್ಯಗಳನ್ನು ಮಾಡಲು ಪ್ರಾರಂಭಿಸುತ್ತಾರೆ ಮತ್ತು ಇತರರು ಅವರಲ್ಲಿ ನಂಬಿಕೆಯನ್ನು ತೋರುತ್ತಾರೆ, ಇದನ್ನೇ ನಾವು ಪ್ರಾಥಮಿಕ ಮಟ್ಟದ ತರಬೇತಿ ಅವಧಿಯಲ್ಲಿ (ಫೌಂಡೇಶನ್ ಇಯರ್‌ನಲ್ಲಿ) ಮಾಡುವುದು.

ತನ್ನನ್ನು ತಾನು ಅರಿಯಲು ಭಾಷೆಯು ಎಷ್ಟು ಪ್ರಮುಖ ಎನ್ನುವುದನ್ನು ತಿಳಿಸಿ, ಸಮುದಾಯದ ಎಲ್ಲ ಕಾರ್ಯಗಳಲ್ಲೂ ಭಾಗವಹಿಸಲು ಅದು ಹೇಗೆ ಪ್ರಾಥಮಿಕ ಅವಶ್ಯಕತೆಯಾಗಿದೆ ಅದರಿಂದ ಹೇಗೆ ಪ್ರತಿಯೊಬ್ಬರ ಸಬಲರಾಗುತ್ತಾರೆ ಎನ್ನುವುದನ್ನು ಮನಗಂಡು, ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವ ಮತ್ತು ಆಲಿಸುವ ಕೌಶಲ್ಯಗಳನ್ನು ಬೆಳಸಲು ಸಂಸ್ಥೆಯು ಗಣನೀಯವಾಗಿ ಪ್ರಾಮುಖ್ಯತೆಯನ್ನು ನೀಡಿದೆ. ಎರಡು ತಿಂಗಳಿಗೆ ಒಮ್ಮೆ ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಜವಾಬ್ದಾರಿಗಳ/ಹೊಣೆಗಾರಿಕೆಯ ಬಗ್ಗೆ ಪ್ರಾತ್ಯಕ್ಷಿಕೆಯನ್ನು ನೀಡುತ್ತಾನೆ/ಳೆ. "ತರಗತಿಯಲ್ಲಿ ಅವರು ಏನನ್ನು ಕಲಿತರು, ಸಾವಯವ ತೋಟಗಾರಿಕೆಯನ್ನು ಪಾಲಿಸುವಾಗ ಅಥವಾ ಸೌರಶಕ್ತಿಯ ಘಟಕ ಅಥವಾ ಒಬ್ಬ ಲೆಕ್ಕಿಗನಾಗಿ ಅಂಗಡಿಯನ್ನು ಗಮನಿಸಿಕೊಳ್ಳುವಾಗ ಹೀಗೆ ಅನೇಕ ಸಂದರ್ಭಗಳಲ್ಲಿ ಅವರು ಏನೇನು ಕಲಿತರು ಎಂದು ಅವರು ವಿವರಿಸುತ್ತಾರೆ." ಎಂದು ಚೋಸಾಂಗ ಹೇಳುತ್ತಾನೆ. ಪ್ರಾತ್ಯಕ್ಷಿಕೆಗಳನ್ನು ಲಡಾಖಿಯಲ್ಲಿ ಮಾಡಲಾಗುತ್ತದೆ ಮತ್ತು ವಿದ್ಯಾರ್ಥಿಗಳು ಇನ್ನಿತರ ಭಾಷೆಗಳಿಗೆ ಒಮ್ಮೆ ಚಿರಪರಿಚಿತರಾದಾಗ ಇತರ ಭಾಷೆಗಳಲ್ಲಿಯೂ ಪ್ರಾತ್ಯಕ್ಷಿಕೆಯನ್ನು ನೀಡುವಂತೆ ಅವರನ್ನು ಪ್ರೋತ್ಸಾಹಿಸಲಾಗುವುದು.

ಇದರೊಟ್ಟಿಗೆ, ಪರ್ಯಾಯ ಸಂಸ್ಥೆಯು ಕಳೆದ ಎರಡು ದಶಕಗಳಿಂದ ಮಾಡುತ್ತಿರುವ ಮತ್ತೊಂದು ಉತ್ತಮ ಕಾರ್ಯ ದೇಶಿ ಮತ್ತು ವಿದೇಶಿ ಸ್ವಯಂಸೇವಕರು ಮತ್ತು ಸಂದರ್ಶಕರನ್ನು ಆಕರ್ಷಿಸುತ್ತಿರುವುದು (ಆಕ್ಸೆಸಿಬಲ್ ಹೊರೈಸನ್ ಫಿಲ್ಮಂ, 2012). ಅವರಲ್ಲಿ ಅನೇಕರು ಪಠ್ಯೇತರ ಚಟುವಟಿಕೆಗಳನ್ನು ಬೋಧಿಸುತ್ತಾರೆ ಅವು ಪುಸ್ತಕಗಳ ತಯಾರಿಕೆ, ಸಂಗೀತ, ನೃತ್ಯ ಮುಂತಾದುವುಗಳನ್ನು ಒಳಗೊಂಡಿರುತ್ತದೆ. ಕೆಲವರು ಶೈಕ್ಷಣಿಕ ವಿಷಯಗಳಲ್ಲಿ ನೆರವು ನೀಡಿದರೆ ಕೆಲವರು ಪ್ರಪಂಚದ ವಿವಿಧೆಡೆಗಳಲ್ಲಿ ಅವರಿಗೆ ದೊರೆತ ಪ್ರವಾಸದ ಅಥವಾ ಅವರು ಮಾಡುತ್ತಿರುವ ವಿಶಿಷ್ಟವಾದ ಕೆಲಸ ಮತ್ತು ವೃತ್ತಿ ಜೀವನದ ಅನುಭವಗಳನ್ನು ಹಂಚಿಕೊಳ್ಳುವರು. ಈ ರೀತಿ ವಿಭಿನ್ನ ಪರಿಸರ, ಹಿನ್ನಲೆಯನ್ನು ಹೊಂದಿರುವ ವ್ಯಕ್ತಿಗಳೊಡನೆಯ ನಿರಂತರ ಒಡನಾಟವು ವಿದ್ಯಾರ್ಥಿಗಳಿಗೆ ಅಂತರ್ನೋಟವನ್ನು ಒದಗಿಸುವುದಲ್ಲದೇ ಅವರಿಗೆ ಸಾಧ್ಯವಾಗುವ ಅನೇಕ ಹೊಸ ಅವಕಾಶಗಳನ್ನು ತೆರೆದಿಡುತ್ತವೆ.

**ಪರಿಣಾಮಕಾರಿ ಬೋಧನಾ ವಿಧಾನ**

ಮೊದಲಿಗೆ ಕೆಲವು ತಿಂಗಳುಗಳು ಮಾಡಿ-ಕಲಿಯುವ ಚಟುವಟಿಕೆಗಳಿಂದ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳಲು ಸಹಾಯ ಮಾಡುವುದರ ಮೇಲೆ ಒತ್ತನ್ನು ನೀಡಿದರೂ, ವಿದ್ಯಾರ್ಥಿಗಳು ಹಿಂದೆ ಪರೀಕ್ಷೆಯಲ್ಲಿ ತೇರ್ಗಡೆಯಾಗದಿರುವ ವಿಷಯಗಳಲ್ಲಿ ಪುನಃ ಪರೀಕ್ಷೆಯನ್ನು ತೆಗೆದುಕೊಳ್ಳುವುದಕ್ಕೆ ತಯಾರು ಮಾಡುವುದನ್ನು ಕಡೆಗಣಿಸುವುದಿಲ್ಲ. ಇದು ಅನೇಕ ವಿದ್ಯಾರ್ಥಿಗಳಿಗೆ ಒಂದು ಅತ್ಯಂತ ದೊಡ್ಡ ಪ್ರೇರಣೆ ಮತ್ತು ಪುಷ್ಟಿಯನ್ನು ಒದಗಿಸುವ ಪ್ರಕ್ರಿಯೆಯಾಗಿರುತ್ತದೆ. ಹೀಗಾಗಿ ಅವರಿಗೆ ನಿರಂತರವಾಗಿ ಶೈಕ್ಷಣಿಕ ವಿಷಯಗಳಲ್ಲೂ ಬೆಂಬಲವನ್ನು ನೀಡಲಾಗುತ್ತದೆ. ಇದರಲ್ಲಿ ಪ್ರಮುಖವಾದ ಒಂದು ಭಾಗವೆಂದರೆ ಅವರ ಹಿಂದಿನ ಅಭ್ಯಾಸಗಳನ್ನು ಬಿಡುವುದಕ್ಕೆ ಮತ್ತು ಬೋಧನೆ ಹಾಗೂ ಕಲಿಕೆಯ ಹೊಸ ವಿಧಾನಗಳಿಗೆ ಚಿರಪರಿಚಿತರಾಗುವುಕ್ಕೆ ಅವರಿಗೆ ಸಹಾಯುವನ್ನು ಒದಗಿಸುವುದಾಗಿದೆ. ಇದನ್ನು "ಬಳಕೆಯ ಮೂಲಕ ಕಲಿಕೆ" ಮತ್ತು "ಕಲಿತಿದ್ದನ್ನು ಬಳಸುವುದು" ಎನ್ನುವುದನ್ನು ಕೇಂದ್ರೀಕರಿಸಿ ನಡೆಸಲಾಗುತ್ತದೆ. ದೇಶದ ಅನೇಕ ಭಾಗಗಳಲ್ಲಿರುವ ಶಾಲೆಗಳಲ್ಲಿನ ಇತರ ವಿದ್ಯಾರ್ಥಿಗಳಂತೆಯೇ ಇಲ್ಲಿನ ಸರ್ಕಾರಿ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೂ ಪಠ್ಯಪುಸ್ತಕದಲ್ಲಿರುವ ಅಥವಾ ತರಗತಿಯಲ್ಲಿ ನಡೆಯುವ ಚರ್ಚೆಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿಲ್ಲದೇ, ವಿಷಯುವನ್ನು ಯಾವಾಗಲೂ ಕಂಠಪಾಠ ಮಾಡಿ ಸ್ಮರಣೆಯಲ್ಲಿರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. "ಉರ್ದು ಭಾಷೆಯನ್ನು 10 ವರ್ಷಗಳ ಕಾಲ ನಿರಂತರವಾಗಿ ಶಾಲೆಯಲ್ಲಿ ಕಲಿಯುತ್ತಾ ಬಂದಿದ್ದರೂ ನೀನ್ಯಾಕೆ ಉರ್ದು ವಿಷಯದಲ್ಲಿ ತೇರ್ಗಡೆಯಾಗಲಿಲ್ಲ ಎಂದು ಅವರನ್ನು ಕೇಳಿದರೆ, ಸೆತನ್ ಹೇಳುತ್ತಾನೆ, "ನಿಮಗೆ ಗೊತ್ತಾ! ಅವರು ಈ ರೀತಿ ಬೋಧಿಸುವುದಿಲ್ಲ, ಅವರು ಬೋಧಿಸುವ ವಿಧಾನವು, ಅಂದರೆ...... ನಾನು ಹೇಳುತ್ತಿರುವುದು ..... ಏನೂ ಅರ್ಥವಾಗುವುದಿಲ್ಲ. ಶಿಕ್ಷಕರು ಏನು ಮಾಡುತ್ತಾರೆ? ಅವರು ತಮ್ಮಷ್ಟಕ್ಕೆ ತಾವೇ ಓದಿಕೊಳ್ಳುತ್ತಾರೆ ಮತ್ತು ಅವರು ನಮಗೆ ಅದರ ಸಾರಾಂಶವನ್ನು ಕಥೆಯಂತೆ ಹೇಳುತ್ತಾರೆ. ಅನಂತರ ಅವರು ಪ್ರಶ್ನೆಗಳಿಗೆ ತಕ್ಕಂತೆ ಸೂಕ್ತವಾದ ಪಂಕ್ತಿಗಳನ್ನು ಹೇಳುತ್ತಾರೆ.

ಇಲ್ಲಿ ವಿದ್ಯಾರ್ಥಿಗಳು ಸುಧಾರಿಸುತ್ತಿದ್ದಾರೆ – ಇಲ್ಲಿ ಇತರರು ಮಾತನಾಡುವುದನ್ನು ಗಮನಿಸಿ ನಾವು ಸುಧಾರಿಸುತ್ತಾ ಹೋಗುತ್ತೇವೆ. ಇಬ್ಬರು ಮಾತನಾಡುತ್ತಿರುವಾಗ ಅವರು ಹೇಗೆ ಮಾತನಾಡುತ್ತಿದ್ದಾರೆ, ಹೇಗೆ ಹೇಳುತ್ತಿದ್ದಾರೆ ಎಂದು ನಾವು ಅವರನ್ನು ಗಮನಿಸುತ್ತೇವೆ. ಅನಂತರ ನಾವು ಹಾಗೆಯೇ ಮಾಡುತ್ತೇವೆ. ಇಲ್ಲಿ, ವಿಜ್ಞಾನ, ಸೌರ ವಿಜ್ಞಾನ (ಬಿಡಾರವು ಸಂಪೂರ್ಣ ಸೌರಶಕ್ತಿಯನ್ನು ಅವಲಂಬಿಸಿದೆ ಮತ್ತು ವಿದ್ಯಾರ್ಥಿಗಳು ಸೌರಶಕ್ತಿಯ ಅಂತರ್ಜಾಲವನ್ನು ನಿರ್ವಹಿಸುತ್ತಾರೆ) ಅಥವಾ ಪರಿಸರದ ಬಗ್ಗೆ ನಾವು ಹೀಗೆ ಕಲಿಯುತ್ತೇವೆ. ಒಮ್ಮೆ ನೀವು ಸ್ಥಳೀಯ ವಿಷಯದ ಬಗ್ಗೆ ಏನಾದರೂ ಓದಿದರೆ ಮತ್ತು ಪ್ರಾಯೋಗಿಕವಾಗಿ ಮಾಡಿದರೆ, ಹೊರಗಿನ ವಿಷಯಗಳ ಮೇಲೂ ಸ್ವಾಭಾವಿಕವಾಗಿ ಯಾರಿಗೇ ಆದರೂ ಆಸಕ್ತಿ ಮೂಡುತ್ತದೆ.

ಶೈಕ್ಷಣಿಕ ಅವಧಿಯ ಕೊನೆಯಲ್ಲಿ ವಿದ್ಯಾರ್ಥಿಗಳು ಪುನಃ ಪರೀಕ್ಷೆಯನ್ನು ತೆಗೆದುಕೊಳ್ಳಲು ಸಿದ್ಧರಾಗುವಂತೆ ಸ್ವಯಂಸೇವಕರು ಮತ್ತು ಸಂದರ್ಶಕರು ಕಡಿಮೆಯಾಗುವ ಚಳಿಗಾಲದವರೆಗೂ ಶೈಕ್ಷಣಿಕ ನೆರವು ನಿರಂತರವಾಗಿ ಮುಂದುವರೆಯುತ್ತದೆ.



ಸ್ಥಳೀಯವಾಗಿ ತಯಾರಾದ ಮಣ್ಣಿನ ಇಟ್ಟಿಗೆಗಳಿಂದ ಪರಿಸರಕ್ಕೆ ಆಗುವ ಲಾಭಗಳನ್ನು ವಿದ್ಯಾರ್ಥಿಗಳು ಚರ್ಚಿಸುತ್ತಿರುವುದು

## ಮುಕ್ತಾಯ

ವಿದ್ಯಾರ್ಥಿಗಳಿಗೆ ಅಂದರೆ ಸೋನಮ್ ಹೇಳುವಂತೆ "ಹತ್ತು ವರ್ಷಗಳ ಕಾಲ ತಮ್ಮ ಜೀವನವನ್ನು ಶಾಲೆಯಲ್ಲಿ ಕಳೆದಿರುವ ತಿರಸ್ಕೃತ ಎಂದು ಹಣೆಪಟ್ಟಿ ಹಚ್ಚಿ ಮನೆಗೆ ಕಳಸಲಾಗಿರುವ ವಿದ್ಯಾರ್ಥಿಗಳಿಗೆ" (1) ವಿದ್ಯಾರ್ಥಿಗಳು ತೇರ್ಗಡೆಯಾಗದಿರಲು ಕಾರಣವಾಗುವ ವ್ಯವಸ್ಥಿತ ಕಾರಣಗಳ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಅರ್ಥಮಾಡಿಕೊಂಡು, ಮತ್ತು ಇದರೊಂದಿಗೆ ವಿದ್ಯಾರ್ಥಿಗಳು ಎದುರಿಸು ವೈಯಕ್ತಿಕ ಸವಾಲುಗಳ ಸ್ವಭಾವ ಮತ್ತು ಗಂಭಿರತೆಯನ್ನು ಅರ್ಥಮಾಡಿಕೊಳ್ಳುವ ವ್ಯವಸ್ಥೆಯನ್ನು ಅಭಿವೃದ್ಧಿಗೊಳಸುವುದು (2) ಕೇವಲ ಕೆಲವೇ ತಂತ್ರಗಳ ಮೇಲೆ ಗಮನಹರಿಸುವುದು ಮತ್ತು ಅವುಗಳನ್ನು ಉತ್ತಮವಾಗಿ ಜಾರಿಗೆ ತರುವುದು. ಈ ಎರಡು ವಿಷಯಗಳ ಮೂಲಕ ಸಶಕ್ತ ಕಲಿಕಾ ವಾತಾವರಣವನ್ನು ಸೃಷ್ಟಿಸುವುದರಲ್ಲಿ SECMOL ಪರ್ಯಾಯ ಸಂಸ್ಥೆಯು ಯಶಸ್ವಿಯಾಗಿದೆ.

ಇರುವ ಸಂಪನ್ಮೂಲಗಳ ಮಿತಿಯೊಳಗೆ ಅವರು ಕೆಲಸ ಮಾಡುವರು, ಉದಾಹರಣೆಗೆ, ಬಿಡಾರದಲ್ಲಿ ಪೂರ್ಣಾವಧಿಯ ಮನಃಶ್ಶಾಸ್ತ್ರಜ್ಞರು ಅಥವಾ ವೃತ್ತಿಪರ–ಸಮಾಲೋಚಕರನ್ನು ಹೊಂದಿರ ಬೇಕಾದ ಒತ್ತಡವಿದೆ ಆದರೆ ಅದಕ್ಕೆ ಬದಲಾಗಿ ಅವರು ಮಕ್ಕಳ ಭಾಷೆ ಮತ್ತು ಸಂಸ್ಕೃತಿಯನ್ನು ಒಪ್ಪಿಕೊಂಡು ಅವರಿಗೆ ಸೂಕ್ತವಾದ ಕಲಿಕಾ ಪರಿಸರವನ್ನು ಸೃಷ್ಟಿಸುವುದಕ್ಕೆ ಹೆಚ್ಚಿನ ಗಮನವನ್ನು ನೀಡಿದ್ದಾರೆ. ವಿಫಲರು ಎಂದು ಗೆಳೆಯರು ಮತ್ತು ಕುಟುಂಬದವರು ನೋಡಿದಾಗ ಅದು ಯಾವಾಗಲೂ ಮಗುವಿಗೆ ತನ್ನಲ್ಲಿರುವ ನಂಬಿಕೆಯ ಬುಡವನ್ನೇ ನಡುಗಿಸಿರುತ್ತದೆ ಮತ್ತು ತುಲನಾತ್ಮಕವಾಗಿ ಏಕಾಂಗಿ ಪ್ರದೇಶವೆನಿಸುವಂತೆ ಹಿಂದುಳಿದ ಗ್ರಾಮಗಳಲ್ಲಿನ ಅವರ ಜೀವನವು ಅವರನ್ನು ತಾವು ಬಾಳಬೇಕಾದ ಬದುಕಿಗೆ ತಕ್ಕಂತೆ ಉತ್ತಮವಾಗಿ ಸಿದ್ಧಗೊಳಿಸಿರುವುದಿಲ್ಲ ಎನ್ನುವುದು ಅವರಿಗೆ ಮನವರಿಕೆಯಾಗಿದೆ. ಹೀಗಾಗಿ ಸಂಸ್ಥೆಯು, ವಿದ್ಯಾರ್ಥಿಗಳಿಗೆ ಜವಾಬ್ಧಾರಿಗಳನ್ನು ತೆಗೆದುಕೊಳ್ಳಲು, ನಿರ್ಧಾರಗಳನ್ನು ಮಾಡಲು, ಅನುಮತಿ ನೀಡುತ್ತಾ ಇದೆಲ್ಲದಕ್ಕಿಂತಾ ಮುಖ್ಯವಾಗಿ ಅವರಲ್ಲಿ ಆಳವಾದ ನಂಬಿಕೆಯನ್ನು ತೋರುತ್ತಾ ಅವರಲ್ಲಿ ಸ್ವ–ನಂಬಿಕೆ ಮತ್ತು ಆತ್ಮವಿಶ್ವಾಸವನ್ನು ಬಲಗೊಳಿಸುವುದಕ್ಕೆ ಮತ್ತು ಪುನರ್ನಿರ್ಮಿಸುವುದಕ್ಕೆ ಶ್ರಮಿಸುತ್ತಿದೆ.

SECMOL ಇನ್ನೂ ತನ್ನ ಕಾರ್ಯದ ನವೀಕರಣವನ್ನು ಸ್ಥಳೀಯ ಸರ್ಕಾರದೊಂದಿಗೆ ಮಾಡಿಕೊಂಡಿಲ್ಲ ಮತ್ತು ಅದು ಅನೇಕ ಸವಾಲುಗಳನ್ನು ಎದುರಿಸುತ್ತಿದೆ (ಮೆನನ್ 2010). ಮರುದಿನ ನಾನು ಬಿಡಾರವನ್ನು ಬಿಟ್ಟು ಲೇಹ್‌ಗೆ ಮರಳಲು ರಸ್ತೆಗೆ ಇಳಿದಾಗ, ಬಿಡಾರದ ಬಗ್ಗೆ ನನ್ನಲ್ಲಿ ಮೂಡಿದ ಮೊದಲ ಛಾಪನ್ನು ಸಾರಾಂಶಗೊಳಿಸುವ ಪದ ನನಗೆ ಪುನಃ ನೆನಪಿಗೆ ಬಂದಿತು. ತನ್ನ ಪೋರ್ಟಲ್ ಮೂಲಕ ತೇರ್ಗಡೆಯಾಗಿರುವ ಸಾವಿರಾರು ವಿದ್ಯಾರ್ಥಿಗಳಿಗೆ ನಿಜಕ್ಕೂ ಸಂಸ್ಥೆಯು ಒಂದು ಓಯಸಿಸ್ – ಅವರ ಇರುವಿಕೆಯನ್ನು ಪುನಃಶ್ಚೇತನಗೊಳಿಸುತ್ತಾ, ಅವರಷ್ಟಕ್ಕೆ ಅವರೇ ತಯಾರಾಗಲು ಬೆಂಬಲ ನೀಡುತ್ತಾ ಮತ್ತು ಹೊಸ ಹಾದಿಗಳನ್ನು ಕಂಡುಕೊಳ್ಳಲು ಮತ್ತು ಹೊಸ ಗಮ್ಯದೆಡೆಗೆ ಮುನ್ನಡೆಯುವಂತೆ ಅವರನ್ನು ಹೊಸದಾಗಿ ಸಿದ್ಧಗೊಳಿಸುತ್ತಾ ಸಂಸ್ಥೆಯು ಸ್ಥಳೀಯರಿಗೆ ಒಂದು ಓಯಸಿಸ್ ಆಗಿದೆ.

**References**


- *Cummins J (2001) Bilingual Children's Mother Tongue: Why Is It Important for Education? Sprogforum, 7(19), 15-20. Retrieved from:http://www.fiplv.org/Issues/CumminsENG.pdf*
- *Ganguly , A. (2001, June 25). Ladakh's schools are now more culturally rooted, thanks to SECMOL. Outlook , Retrieved from http://www.outlookindia.com/article.aspx?212285*
- *Ashoka India. (2002). Profile of Sonam Wangchuk. Retrieved from http://india.ashoka.org/fellow/sonam-wangchuk*
- *Mingle, J. (2010). Rewriting the books in Ladakh. Cultural Survival, Retrieved from http://www.culturalsurvival.org/publications/cultural-survival-quarterly/india/rewriting-books-ladakh*
- *Menon, S. G. (2010, July 19). What you did not watch in 3 idiots - rethink after Ladakh education initiative fell victim to bureaucracy and resentment. The Telegraph. Retrieved from http://www.telegraphindia.com/1100719/jsp/frontpage/story_12700204.jsp*
- *Accessible Horizon Films. (Producer) (2012). Secmol: Short documentary film [Web]. Retrieved fro http://www.youtube.com/watch?v=MC31jkmymlwm*





**ಅವಿನಾಶ್** ಅವರು ವಿಪ್ರೋದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ವಿಪ್ರೊ ಅಪ್ಲೈಯಿಂಗ್ ಥಾಟ್ ಇನ್ ಸ್ಕೂಲ್ಸ್ (ಡಬ್ಲ್ಯುಎಟಿಐಎಸ್) ಉಪಕ್ರಮದ ನಿರ್ವಹಣೆಗೆ ಬೆಂಬಲ ಮತ್ತು ನೆರವನ್ನು ನೀಡುತ್ತಿದ್ದಾರೆ. ಈ ಉಪಕ್ರಮವು ನಾಗರಿಕ ಸಮಾಜದೊಂದಿಗೆ ಮತ್ತು ಭಾರತದಲ್ಲಿನ ಶಾಲಾ ಶಿಕ್ಷಣ ಸುಧಾರಣೆಯಲ್ಲಿ ಸಾಮರ್ಥ್ಯವನ್ನು ನಿರ್ಮಾಣ ಮಾಡುವ ಇನ್ನಿತರ ಸಂಸ್ಥೆಗಳೊಂದಿಗೆ ಪಾಲುದಾರಿಕೆಯನ್ನು ಹೊಂದಿದೆ. ಅವಿನಾಶ್‌ರವರು ಇದಕ್ಕೆ ಪೂರ್ವದಲ್ಲಿ ಒಂದು ಮಾಧ್ಯಮ ಸಂಸ್ಥೆಯಲ್ಲಿ ಯೋಜನಾ ನಿರ್ವಾಹಕರಾಗಿ ಕಾರ್ಯವೆಸಗುತ್ತಿದ್ದರು ಅಲ್ಲದೇ ಆರಂಭಿಕ ಸ್ಥಿತಿಯಲ್ಲಿನ ಒಂದು ಶೈಕ್ಷಣಿಕ ಸಂಸ್ಥೆಯ ಭಾಗವಾಗಿದ್ದರು. ಅವಿನಾಶ್‌ರವರು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಬೆಂಗಳೂರಿನಲ್ಲಿರುವ ಅಜೀಂ ಪ್ರೇಂಜಿ ವಿಶ್ವವಿದ್ಯಾನಿಲಯದಿಂದ ಮತ್ತು ಇಂಜಿನಿಯರಿಂಗ್‌ನಲ್ಲಿ ಪದವಿಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಿಂದ ಪಡೆದುಕೊಂಡಿದ್ದಾರೆ. ಇವರನ್ನು atavinash.kumar@apu.edu.in ಇಲ್ಲಿ ಸಂಪರ್ಕಿಸಬಹುದು.

# ಚೈತನ್ಯ ಸಂಸ್ಕೃತಿ: ಕಲಿಕೆಗೆ ಸಶಕ್ತ

## ಆಂತರಿಕ ಪರಿಸರದ ಸೃಷ್ಟಿ

ಪ್ರೇರಣಾ ಶಿವಪುರಿ ಮತ್ತು ಶ್ರೀನಿವಾಸನ್

ನಾಲ್ಕನೇ ತರಗತಿಯ ಮಕ್ಕಳಿಂದ ನಿರೀಕ್ಷಿಸಬಹುದಾದ ಚಟ-ಪಟ ಶಬ್ದದೊಂದಿಗೆ ಪ್ರತಿಯೊಂದು ಮಗುವೂ ತರಗತಿಯೊಳಗೆ ಜೋಡಿಯಲ್ಲಿ ಕೆಲಸ ಮಾಡುತ್ತಿದ್ದರು. ಶಿಕ್ಷಕರು ಒಂದು ಸಣ್ಣ ಘಂಟೆಯನ್ನು ಅಲ್ಲಾಡಿಸಿದೊಡನೆ ಅದರ ರಿಂಗಣದಿಂದ ಚಟ-ಪಟ ಮಾತಿನ ಸದ್ದು ಕ್ರಮೇಣ ಅಡಗಿ ಮೌನ ಆವರಿಸುತ್ತಿತ್ತು. ಮಕ್ಕಳು ತಾವು ಕುಳಿತಿದ್ದ ಚಾಪೆಯನ್ನು ತೆಗೆದುಕೊಂಡು, ವೃತ್ತಾಕಾರದಲ್ಲಿ ಕುಳಿತು ಕಣ್ಣು ಮುಚ್ಚಿ ತಮ್ಮ ದೈನಂದಿನ ಅಭ್ಯಾಸವನ್ನು ಪ್ರಾರಂಭಿಸುತ್ತಿದ್ದರು. ಇಷ್ಟೆಲ್ಲಾ ನಡೆಯುತ್ತಿದ್ದಾಗ, ತರಗತಿಯಲ್ಲಿ ಇದ್ದ ಒಬ್ಬ ವಯಸ್ಕರ (ಶಿಕ್ಷಕರ) ಉಪಸ್ಥಿತಿಯು ನನ್ನ ಗಮನಕ್ಕೆ ಬರಲಿಲ್ಲ. ಅವರು ಅಲ್ಲಿ ಇರಲೇ ಇಲ್ಲ ಎನ್ನುವಂತಿತ್ತು.



ಚಿತ್ರ ಕೃಪೆ: ದ ಹೆರಿಟೇಜ್ ಸ್ಕೂಲ್ ಗುರಗಾಂವ್

ಮೇಲೆ ನಿರೂಪಿಸಿರುವ ದೃಶ್ಯ ನಾವು ಒಂದು ತರಗತಿಯಲ್ಲಿ ಕಣ್ಣಾರೆಕಂಡ ಒಂದು ದೃಶ್ಯವಾಗಿದ್ದು ಮೇಲ್ನೋಟಕ್ಕೆ ಬೋಧನೆಯಲ್ಲಿ ಬಹಳಷ್ಟು ವ್ಯತ್ಯಾಸ ಕಂಡುಬಂದರೂ ಇಂತಹಾ ಒಂದು ಸುಂದರವಾದ ದೃಶ್ಯವನ್ನು ಹೊರಹೊಮ್ಮಿಸುವಲ್ಲಿ ಶಿಕ್ಷಕರು ಮತ್ತು ಪ್ರತಿಯೊಂದು ಮಗುವು ಆಂತರಿಕವಾಗಿ ನಡೆಸಿರುವ ಶ್ರಮವನ್ನು ಗಮನಿಸದೇ ಅಥವಾ ಮನಗಾಣದೇ ಹೋಗಿಬಿಡುತ್ತೇವೆ. ಒಂದು ಮಗುವಿನ ಆಂತರಿಕ ಪ್ರಪಂಚವನ್ನು ಪರಿಗಣಿಸದಿರುವ ಅಸಮರ್ಥತೆಯು ಪದ್ಧತಿ ಶಿಕ್ಷಣ ಕ್ಷೇತ್ರದಲ್ಲಿ ಹೊಸದೇನಲ್ಲ ಎಂದು ಇಲ್ಲಿ ತಪ್ಪದೇ ಹೇಳಲೇ ಬೇಕು. ವಾಸ್ತವವಾಗಿ, ನಾವೇನು ಮಾಡುತ್ತೇವೆಂದರೆ ಮಕ್ಕಳ ವೈಯಕ್ತಿಕ ಸಾಮರ್ಥ್ಯ ಎಷ್ಟಿದೆ ಎಂದು ಗುರುತಿಸುವ ಬದಲಾಗಿ, ಮಕ್ಕಳಿಗೆ ಹೇಳಿಕೊಟ್ಟ ಜ್ಞಾನವನ್ನು ಹೇಳಿಕೊಟ್ಟ ರೀತಿಯಲ್ಲಿಯೇ ಭಟ್ಟಿ ಇಳಿಸುವ ಮತ್ತು ಪುನರುಚ್ಚರಿಸುವ ಸಾಮರ್ಥ್ಯವನ್ನು ಮಾತ್ರವೇ ವಿದ್ಯಾರ್ಥಿಗಳಲ್ಲಿ ಗುರುತಿಸಿ ಮನ್ನಣೆ ನೀಡುತ್ತೇವೆ ಮತ್ತು ಅದಕ್ಕೆ ಮಾತ್ರ ನಾವು ಮೌಲ್ಯ ನೀಡುತ್ತೇವೆ. ಒಂದೆಡೆ ಮಾನಕ ಗುಣಮಟ್ಟ ಮತ್ತು ಮಟ್ಟ ಗುರುತುಗಳನ್ನು ಉಪಯೋಗಿಸಿ ವಸ್ತುನಿಷ್ಠತೆಯನ್ನು ತರಲು ಪ್ರಯತ್ನಿಸುತ್ತೇವೆ, ಆದರೆ ಮತ್ತೊಂದೆಡೆ, ಕಲಿಕೆಯು ವೈಯಕ್ತಿಕವಾದ ಮತ್ತು ವ್ಯಕ್ತಿನಿಷ್ಠವಾದ ಅನುಭವ ಎನ್ನುವುದನ್ನು ಸುಲಭವಾಗಿ ಮರೆತುಬಿಡುತ್ತೇವೆ. ಒಂದು ನಿರ್ದಿಷ್ಟ ವಯೋಮಾನದ ಮಕ್ಕಳ ಗುಂಪು ಕಾರ್ಯವೆಸಗಲು ಗುರಿಗಳನ್ನು ನಿಗದಿ ಪಡಿಸುವುದು ತಪ್ಪು ಎಂದು ನಾವು ಹೇಳುತ್ತಿಲ್ಲ. ಆದರೆ ಪ್ರತಿಯೊಂದು ಮಗುವೂ ಹೇಗೆ ಈ ಗುರಿಗಳೆಡೆಗೆ ಸಾಗುತ್ತದೆ ಎನ್ನುವುದು ಪ್ರತಿ ಮಗುವಿಗೂ ವಿಶಿಷ್ಟ ಪಯಣ ಹಾಗು ಅತ್ಯಂತ ವ್ಯಕ್ತಿನಿಷ್ಠ ಅನುಭವವೆಂಬುದನ್ನು ಇಲ್ಲಿ ಎತ್ತಿ ಹೇಳುವುದಕ್ಕೆ ಪ್ರಯತ್ನಿಸುತ್ತಿದ್ದೇವೆ

ಪ್ರತಿಯೊಂದು ಮಗುವಿನಲ್ಲಿರುವ ಈ ಅನನ್ಯ ಆಂತರಿಕ ಪರಿಸರವನ್ನು ಪೋಷಿಸುವುದು ಏಕೆ ಬಹು ಮುಖ್ಯ? ಇದು ಮಗುವಿನ ಕಲಿಕಾ ಪ್ರಕ್ರಿಯೆಯಲ್ಲಿ ಯಾವ ಪಾತ್ರವನ್ನು ವಹಿಸುತ್ತದೆ ಮತ್ತು ಇದನ್ನು ನಾವು ಶಿಕ್ಷಣದ ಮುಖ್ಯವಾಹಿನಿಯಲ್ಲಿರುವ ಶಾಲೆಗಳಲ್ಲಿ ಜಾರಿಗೊಳಿಸುವುದು ನಿಜವಾಗಿಯೂ ಸಾಧ್ಯವೇ? ಇವು ಮೇಲಿನ ವಾದದಿಂದ ಮೂಡುವ ಕೆಲವೊಂದು ಪ್ರಶ್ನೆಗಳಾಗಿವೆ ಮತ್ತು ಇವು ಒಮ್ಮೆಯಾದರೂ ನಿಮ್ಮ ಮನಸ್ಸಿನಲ್ಲಿ ಬಂದಿರಬಹುದು.

ಇದನ್ನು ಒಂದೊಂದಾಗಿ ನೋಡುವ ಪ್ರಯತ್ನ ಮಾಡೋಣ. ಆರಂಭಕ್ಕೆ ಮಗುವಿನ 'ಆಂತರಿಕ ಪರಿಸರ' ಎಂದರೆ ಏನು ಮತ್ತು ಇದು ಯಾವುದರಿಂದ ಆಗಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಿಸೋಣ. ಯೋಗ ಸಿದ್ಧಾಂತದ ಪ್ರಕಾರ, ಮನೋಭೂಮಿಕೆಯು ನಾಲ್ಕು ರೀತಿಯಲ್ಲಿ ಕಾರ್ಯ ನಡೆಸುತ್ತದೆ.

1. **ಮನಸ್ಸು** – ಯೋಚಿಸುವ ಮತ್ತು ಪರಿಭಾವಿಸುವ ಮನಸ್ಸು.
2. **ಚಿತ್ತ** – ಸ್ಮರಣೆಯ ಕಾರ್ಯಗಳು, ಹವ್ಯಾಸಗಳು ಮತ್ತು ವಿನ್ಯಾಸಗಳು.
3. **ಅಹಂಕಾರ** – ತೊಡಗಿಕೊಳ್ಳುವಿಕೆ ಮತ್ತು ಸ್ವ-ಗುರುತಿಸುವಿಕೆ.
4. **ಬುದ್ಧಿ** – ವಿವೇಚನೆ ಮತ್ತು ಉನ್ನತ ಚಿಂತನೆಯನ್ನು ಮಾಡುವ ಮನಸ್ಸು.

ಈ ಬಗ್ಗೆ ಯೋಗದ ಪರಿಭಾಷೆ ಗೊತ್ತಿಲ್ಲದೇ ಇದ್ದರೂ ನಾವೆಲ್ಲರೂ ನಮ್ಮದೇ ಆದ ಅನುಭವದಲ್ಲಿ ಇವುಗಳೆಲ್ಲವನ್ನೂ ಅರಿತಿದ್ದೇವೆ. ನಾವು ನಮಗೆ ದೊರೆತಿರುವ ಮತ್ತು ಶಿಕ್ಷಣದ ಮುಖ್ಯವಾಹಿನಿಯಲ್ಲಿ ಇಂದು ಪ್ರಸ್ತುತ ನೀಡುತ್ತಿರುವ ಶಿಕ್ಷಣದ ಬಗ್ಗೆ ಪರ್ಯಾಲೋಚಿಸಿದಾಗ. ಅದು ಮೊದಲಿನ ಎರಡು ಕಾರ್ಯಗಳನ್ನು ಮಾತ್ರ ತರಬೇತುಗೊಳಿಸುವತ್ತ ಪ್ರಮುಖವಾಗಿ ಗಮನವನ್ನು ನೀಡುತ್ತಿದೆ ಎಂದು ನಮಗೆ ಮನವರಿಕೆಯಾಗುತ್ತದೆ. ಈ ಎರಡು ಕಾರ್ಯಗಳನ್ನು ಮೀರಿ ಇನ್ನಿತರ ವಿಷಯಗಳೆಡೆಯೂ ಗಮನಹರಿಸುವ ಪ್ರಯತ್ನ ಮಾಡುತ್ತಿರುವ ಮತ್ತು ಕಲಿಕೆಯಲ್ಲಿ ವಿದ್ಯಾರ್ಥಿಗಳು ತಲ್ಲೀನರಾಗುವಂತೆ ಮಾಡಲು, ಕಲಿಕೆಯ ಹೊಣೆಗಾರಿಕೆ-ಯನ್ನು ಅವರೊಂದಿಗೆ ಹಂಚಿಕೊಳ್ಳಲು ಮತ್ತು ಸ್ವಯಂ ಅಭಿವೃದ್ಧಿಗೆ ಪೂರಕವಾಗುವಂತೆ ಅಥವಾ ವಿದ್ಯಾರ್ಥಿಗಳ ಅಹಂ ವೃದ್ಧಿಯಾಗಲು ಅನುಕೂಲವಾಗುವಂತೆ ಮಾಡಲು ಕೇವಲ ಕೆಲವೇ ಕೆಲವು ಶಾಲೆಗಳು ಪ್ರಯತ್ನಿಸುತ್ತಿವೆ. ಇನ್ನು ನಾಲ್ಕನೇ ಅಂಶವಾದ ವಿದ್ಯಾರ್ಥಿಗಳನ್ನು ಉನ್ನತ ಮಟ್ಟದ ಆಲೋಚನೆಯನ್ನು ಮಾಡುವಂತೆ ಉದ್ದೀಪಿಸಿ ಅವರಲ್ಲಿ ವಿವೇಚನೆ ಬೆಳೆಯುವಂತೆ ಮಾಡುತ್ತಿರುವ ಶಾಲೆಗಳು ಅಥವಾ ಶೈಕ್ಷಣಿಕ ತಾಣಗಳು ಇಲ್ಲವೇ ಇಲ್ಲ ಎನ್ನಬೇಕು. ಪ್ರತಿಯೊಂದು ಮಗುವಿನಲ್ಲಿರುವ ಅನನ್ಯತೆಯನ್ನು ನಾವು ನಿಜವಾಗಲೂ ಪೋಷಿಸಲು ಬಯಸಿದರೆ, ನಾವು ಬೋಧಿಸುವಾಗ ವಿದ್ಯಾರ್ಥಿಗಳ ಮನಸ್ಸಿನ ಈ ನಾಲ್ಕೂ ಅಂಶಗಳು ಕಾರ್ಯಪ್ರವೃತ್ತವಾಗುವಂತೆ ಬೋಧಿಸಬೇಕು. ಇವುಗಳಲ್ಲಿ ನಾಲ್ಕನೇ ಅಂಶವಾದ ಬುದ್ಧಿಯು ಕೆಲಸಮಾಡುವುದು, ಎರಡು ಕಾರಣಗಳಿಗಾಗಿ ಅತಿಮುಖ್ಯ – ಒಂದು: ಈ ದಿಶೆಯಲ್ಲಿ ಹೆಚ್ಚಿನ ಕೆಲಸ ನಡೆದಿಲ್ಲ ಮತ್ತು ಶಿಕ್ಷಕರು ತಮ್ಮ ದೈನಂದಿನ ಬೋಧನೆಯ ಪರಿಮಿತಿಯೊಳಗೆ ವಿವೇಚನೆಯನ್ನು ಬೆಳೆಸುವುದು ಹೇಗೆ ಎನ್ನುವುದನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ. ಎರಡು: ನಾವು ನಮ್ಮ ಅನುಭವದಿಂದ ಮಾತ್ರ ಕಲಿಯದೇ ನಮ್ಮ ಅನುಭವದ ಬಗ್ಗೆ ಪರ್ಯಾಲೋಚಿಸುವ ಮೂಲಕವೂ ಕಲಿಯುತ್ತೇವೆ. ಹೀಗಾಗಿ, ಪರ್ಯಾಲೋಚಿಸುವ ಸಾಮರ್ಥ್ಯ, ತೀರ್ಮಾನಿಸುವುದು ಮತ್ತು ನಿರ್ಣಯಕ್ಕೆ ಬರುವುದು ಇವನ್ನೇ ನಾವು ವಿವೇಚನಾ ಶಕ್ತಿ ಎನ್ನುತ್ತೇವೆ. ಇದೇ ನಾವು ನಮ್ಮ ಜೀವನದ ಮುನ್ನಡೆಯ ಪ್ರಮುಖ ಭಾಗ. ಮಕ್ಕಳು ಕಲಿಯುತ್ತಿರುವಾಗ ಮನಸ್ಸಿನ ಈ ನಾಲ್ಕೂ ಅಂಶಗಳು ಸಕ್ರಿಯವಾಗಿರುವಂತೆ ನೋಡಿಕೊಂಡರೆ, ನಾವು ಅವರ ಅಸ್ತಿತ್ವದ ಗ್ರಹಣಶಕ್ತಿ, ಪರಿಣಾಮ ಬೀರುವ ಶಕ್ತಿ ಮತ್ತು ಭೌತಿಕ ಶಕ್ತಿ ಕೆಲಸ ಮಾಡುವಂತೆ ಮಾಡುತ್ತೇವೆ.; ಇದರ ಮೂಲಕ ಕಲಿಕೆಗಾಗಿ ಸಶಕ್ತ ಆಂತರಿಕ ಪರಿಸರವನ್ನು ಸೃಷ್ಟಿಸುತ್ತೇವೆ.

ನಮ್ಮ ಮುಖ್ಯವಾಹಿನಿ ಶಿಕ್ಷಣದ ಕ್ರಮದಲ್ಲಿ ವಿದ್ಯಾರ್ಥಿಗಳಲ್ಲಿ ಆಂತರಿಕವಾದ ಸಶಕ್ತ ಪರಿಸರವನ್ನು ಸೃಷ್ಟಿಸುವುದು ಆಗದ ಕೆಲಸ ಎಂದೇ ಅನಿಸಬಹುದು. ಇಂತಹದ್ದನ್ನು ಸೃಷ್ಟಿಸಲು ಖಂಡಿತವಾಗಿಯೂ ಸಾಕಷ್ಟು ಸಮಯ ಮತ್ತು ಪ್ರಯತ್ನದ ಅವಶ್ಯಕತೆ ಇದೆ ಎಂಬುದನ್ನು ಒಪ್ಪುತ್ತೇನೆ. ಆದರೆ ಕೆಲವು ಸರಳ ವಿಷಯಗಳ ಮೂಲಕ ಶಿಕ್ಷಕರು ಈ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು. ಇದರೆಡೆಗೆ ಮೊದಲ ಹೆಜ್ಜೆ ಎಂದರೆ ಮಕ್ಕಳ ಗಮನವನ್ನು ತರಬೇತುಗೊಳಿಸುವುದು. ನಾವು ಜೀವನವನ್ನು ಅನುಭವಿಸುವುದು ಗಮನ ಕೊಟ್ಟು ನೋಡುವ ಮೂಲಕ. ಹೀಗಾಗಿ ಚಿತ್ತದೊಂದಿಗೆ/ಲಕ್ಷ್ಯವಿಟ್ಟು ಕಾರ್ಯಮಾಡುವುದು ಒತ್ತಡವನ್ನು ನಿವಾರಿಸುವುದಕ್ಕೂ ಮೀರಿ ಗಮನ ಕೇಂದ್ರೀಕರಣವನ್ನು ಉತ್ತಮಗೊಳಿಸುತ್ತದೆ. ನಾವು ನಮ್ಮನ್ನು ಅರ್ಥಮಾಡಿಕೊಳ್ಳುವ ಮತ್ತು ಅನುಭವಕ್ಕೆ ತಂದುಕೊಳ್ಳುವ (ಸ್ವ ಚಿತ್ರಣ), ಇತರರು ನಮ್ಮನ್ನು ನೋಡುವ ಹಾಗೂ ವಿಶಾಲಾರ್ಥದಲ್ಲಿ ತೆಗೆದುಕೊಂಡರೆ, ಪ್ರಪಂಚವು ನಮ್ಮನ್ನು ಕಾಣುವ ವಿಧಾನವನ್ನು ಇದು ಬದಲಾಯಿಸುತ್ತದೆ. ಲಕ್ಷ್ಯವನ್ನು ತರಬೇತುಗೊಳಿಸಲು ಅನೇಕ ಮೂಲಭೂತ ಅಭ್ಯಾಸಗಳು ಮತ್ತು ತತ್ವಗಳಿವೆ. ಅವುಗಳಲ್ಲಿ ಕೆಲವನ್ನು ವಿಚಾರಶೀಲ ಸಂಪ್ರದಾಯಗಳಿಂದ ಮತ್ತು ಇನ್ನು ಹೆಚ್ಚಿನ ಅಭ್ಯಾಸಗಳನ್ನು ಜ್ಞಾನಾತ್ಮಕ ನರವಿಜ್ಞಾನ, ಸಾಕ್ಷ್ಯಾಧಾರಿತ ತರಗತಿ ಬೋಧನಾ ಶಾಸ್ತ್ರ, ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕೆಯ (ಎಸ್ಇಎಲ್) ಸಿದ್ಧಾಂತಗಳು, ಧನಾತ್ಮಕ ಮನಃಶಾಸ್ತ್ರದ ಮಾರ್ಗದರ್ಶಿ ತತ್ವಗಳಲ್ಲಿ ನಡೆಯುತ್ತಿರುವ ಇತ್ತೀಚಿನ ಸಂಶೋಧನೆಗಳನ್ನು ಆಧರಿಸಿ ತೆಗೆದುಕೊಂಡಿರುತ್ತೇವೆ. ಲಕ್ಷ್ಯವನ್ನು ತರಬೇತುಗೊಳಿಸುವುದು ಮೆದುಳಿನಲ್ಲಿ ರಚನಾತ್ಮಕ ಬದಲಾವಣೆಗಳನ್ನು ಹೇಗೆ ತರುತ್ತವೆ ಮತ್ತು ಇದರಿಂದ ಜನರಲ್ಲಿ ಧನಾತ್ಮಕ ಬದಲಾವಣೆಗಳಿಗೆ ಹೇಗೆ ಎಡೆ ಮಾಡಿಕೊಡುತ್ತವೆ ಎಂದು ಈ ಸಂಶೋಧನೆಗಳು

ಎತ್ತಿ ತೋರಿಸಿವೆ. ಉದಾಹರಣೆಗೆ; ಲಕ್ಷ್ಯದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡಿರುವವರಲ್ಲಿ ಸ್ವ-ಪರ್ಯಾಲೋಚನೆಯಲ್ಲಿ ತೊಡಗುವ ಮತ್ತು ಅನುಭೂತಿಯನ್ನು ಹೊಂದಲು ನೆರವಾಗುವ ಮೆದುಳಿನ ಅಂಗಗಳು ಗಮನಾರ್ಹವಾಗಿ ದಪ್ಪವಾಗಿರುವುದು ಕಂಡುಬರುತ್ತದೆ. ಆಂತರಿಕ ಸ್ಥಿತಿಯ ಅರಿವನ್ನು ನೀಡುವಲ್ಲಿ ಒಳಗೊಂಡಿರುವ ಹಾಗೂ ಭಾವನೆ ಮತ್ತು ಗ್ರಹಿಕೆಯನ್ನು ಐಕ್ಯಗೊಳಿಸುವ ಬ್ರಾಡ್‌ಮನ್ ಏರಿಯಾ 9/10 ಇವುಗಳೇ ಆಂಟೀರಿಯರ್ ಇನ್ಸುಲಾ ಆಗಿದೆ.[1]

ಹಾಗಾದರೆ, ನಾವು ಚರ್ಚಿಸುತ್ತಿರುವಂತಹ ಆಂತರಿಕ ಪರಿಸರವನ್ನು ನಿರ್ಮಿಸಲು ವಿದ್ಯಾರ್ಥಿಗಳ ಲಕ್ಷ್ಯ / ಚಿತ್ತವನ್ನು ಹೇಗೆ ತರಬೇತುಗೊಳಿಸಬಹುದು. ವಿದ್ಯಾರ್ಥಿಗಳಲ್ಲಿ ಈ ಪ್ರಮುಖವಾದ ಸಾಮರ್ಥ್ಯವನ್ನು ಬೆಳೆಸಲು ಸುಲಭವಾಗಿ ಶಾಲೆಯ ಕಾರ್ಯಕ್ರಮಗಳಲ್ಲಿ ಸಂಯೋಜಿಸಬಹುದಾದ ಮುನ್ನಡೆಯಲ್ಲಿ ಮೂರು ಹಂತಗಳು ಇವೆ:

**ಹಂತ 1.** ಲಕ್ಷ್ಯವನ್ನು ಸ್ಥಿರಗೊಳಿಸುವುದು

ಮೊದಲ ಹೆಜ್ಜೆ ಎಂದರೆ, ತಾವು ಮಾಡುತ್ತಿರುವ ಕಾರ್ಯದ ನಿಯಂತ್ರಣವನ್ನು ತೆಗೆದುಕೊಳ್ಳಲು ತಮ್ಮ ಲಕ್ಷ್ಯವನ್ನು ಸ್ಥಿರಗೊಳಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗುವುದು. ಇದನ್ನು:

- ಗಮನ ಕೇಂದ್ರೀಕರಿಸುವ ಮತ್ತು ಲಕ್ಷ್ಯವಿಟ್ಟು ಮಾಡುವ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಸ್ಮರಣೆಯನ್ನು ತರಬೇತುಗೊಳಿಸುವುದು.
- ಸೃಜನಾತ್ಮಕತೆಯನ್ನು ಪೋಷಿಸುವುದು ಮತ್ತು ಸಮಸ್ಯಾ ಪರಿಹಾರಕ ಸಾಮರ್ಥ್ಯಗಳನ್ನು ಬೆಳೆಸುವುದು.

**ಹಂತ 2:** ಭಾವನಾತ್ಮಕ ಸಮತೋಲನವನ್ನು ಸೃಷ್ಟಿಸುವುದು.

ಎರಡನೇ ಹಂತವು ನಮ್ಮ ಭಾವನೆಗಳೊಂದಿಗೆ ಕಾರ್ಯವೆಸಗುವುದನ್ನು ಒಳಗೊಂಡಿದೆ – ನಕಾರಾತ್ಮಕ ಭಾವನೆಗಳನ್ನು ಚದುರಿಸುವುದು ಮತ್ತು ಸಕಾರಾತ್ಮಕ ಮನೋಭಾವನೆಯ ಸ್ಥಿತಿಯನ್ನು ವೃದ್ಧಿಸುವುದು:

- ಭಾವನೆಗಳನ್ನು ಗುರುತಿಸುವುದು ಮತ್ತು ಅರಿತು-ಕೊಳ್ಳುವುದು.
- ಆಧಾರಭೂತವಾಗಿರುವ ವಿನ್ಯಾಸಗಳನ್ನು ಕಾಣುವುದು.
- ಉತ್ತಮ ಪರ್ಯಾಯಗಳನ್ನು ಆಯ್ದುಕೊಳ್ಳುವುದು.

**ಹಂತ 3:** ವಿಶಿಷ್ಟವಾದ ನಮ್ಮತನವನ್ನು ಕಂಡುಕೊಳ್ಳುವುದು

ಪ್ರತಿಯೊಂದು ಮಗುವೂ ತನ್ನದೇ ಪ್ರಪಂಚದಲ್ಲಿ ತೊಡಗಿಕೊಳ್ಳುವ ಆಂತರಿಕ ಭಾವನೆಯೊಂದಿಗೆ ಜನ್ಮ ತಳೆದಿರುತ್ತದೆ. ಮನಸ್ಸು ಮತ್ತು ಭಾವನೆಯನ್ನು ಶಾಂತಗೊಳಿಸುವುದು ಹಾಗೂ ಸಮತೋಲನದಲ್ಲಿಡುವುದರ ಮೂಲಭೂತ ಕಾರ್ಯಗಳನ್ನು ಮುಗಿಸಿದ ಮೇಲೆ, ಅದರ ಸ್ವಾಭಾವಿಕ ತಲ್ಲೀನತೆ ಭಾವನೆಯ ಸಂಪೂರ್ಣ ಅಭಿವ್ಯಕ್ತಿಯು ಈ ಕೆಳಗಿನವುಗಳಿಂದ ಆಗುತ್ತದೆ. ಅವುಗಳೆಂದರೆ:

- ಪರ್ಯಾಲೋಚಿಸುವ ಮತ್ತು ಅರಿತುಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು.
- ತಮ್ಮ ಜೀವನದ ಉದ್ದೇಶ ಮತ್ತು ತುಡಿತವನ್ನು ಕಂಡುಕೊಳ್ಳುವುದು.
- ತಮ್ಮ ಪ್ರಮುಖ ಸಾಮರ್ಥ್ಯಗಳು ಮತ್ತು ಪ್ರತಿಭೆಗಳನ್ನು ಕಂಡುಕೊಳ್ಳುವುದು.

ಈ ಮೇಲಿನ ವಿನ್ಯಾಸವು ಯಾರಾದರೂ ವಿದ್ಯಾರ್ಥಿ-ಗಳೊಂದಿಗೆ ಅವರ ಆಂತರಿಕ ಮಟ್ಟದಲ್ಲಿ ಹೇಗೆ ಕೆಲಸ ಮಾಡುವುದು ಮತ್ತು ಅವರೊಳಗೆ ಸಶಕ್ತಗೊಳಿಸುವ ಆಂತರಿಕ ಸಂಸ್ಕೃತಿಯನ್ನು ಪೋಷಿಸುವುದು ಎನ್ನುವುದಕ್ಕೆ ಸಲಹಾತ್ಮಕ ರೂಪುರೇಷೆಗಳು. ವಿವಿಧ ಅನುಭವಗಳು, ಚಟುವಟಿಕೆಗಳು ಮತ್ತು ಅಭ್ಯಾಸಗಳನ್ನು ಈ ಪರಿಕಲ್ಪನೆಯಲ್ಲಿ ಅಭಿವೃದ್ಧಿಗೊಳಿಸಲಾಗಿದೆ. ಇವುಗಳನ್ನು ಮುಖ್ಯವಾಹಿನಿ-ಯಲ್ಲಿರುವ ಶಾಲಾ ಪಠ್ಯಕ್ರಮದಲ್ಲಿ ಸುಲಭವಾಗಿ ಅಳವಡಿಸಬಹುದಾಗಿದೆ. ಇವುಗಳಲ್ಲಿ ಕೆಲವು ಪ್ಲಮ್ ವಿಲೇಜ್, ದಿ ಹಾನ್ ಫೌಂಡೇಶನ್ – ಮೈಂಡ್ ಅಪ್ ಕರಿಕ್ಯುಲಮ್ ಮುಂತಾದ ಸಂಸ್ಥೆಗಳವರ ಗಮನ ಕೇಂದ್ರೀಕರಿಸುವುದನ್ನು ಆಧರಿಸುವ ಅಭ್ಯಾಸಗಳಾಗಿವೆ.

ವಿದ್ಯಾರ್ಥಿಗಳಲ್ಲಿ ಸಶಕ್ತ ಆಂತರಿಕ ವಾತಾವರಣವನ್ನು ಯಶಸ್ವಿಯಾಗಿ ನಿರ್ಮಿಸಲು, ವಿದ್ಯಾರ್ಥಿಗಳ ಕಲಿಕೆಯಲ್ಲಿ ಇದರ ಪ್ರಾಮುಖ್ಯತೆಯನ್ನು ಅರಿತುಕೊಳ್ಳಬೇಕಾಗುತ್ತದೆ ಮತ್ತು ಇದಕ್ಕೆ ಶಾಲಾ ಪಠ್ಯಕ್ರಮದಲ್ಲಿ ಸಾಕಷ್ಟು ಒತ್ತನ್ನು ನೀಡಬೇಕಾಗುತ್ತದೆ. ಇದಲ್ಲದೇ, ಶಿಕ್ಷಕರು ತರಬೇತಿಯನ್ನು ಪಡೆದುಕೊಂಡು ಮೊದಲಿಗೆ ತಮ್ಮಲ್ಲಿ ಈ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಮತ್ತು ತಮ್ಮ ವಿದ್ಯಾರ್ಥಿಗಳಲ್ಲಿ ಇವುಗಳನ್ನು ಬೆಳಸುವಲ್ಲಿ ಸೌಲಭ್ಯವನ್ನು ಒದಗಿಸುವ ಕೌಶಲಗಳನ್ನು ಗಳಿಸಿಕೊಳ್ಳಲು ತಯಾರಿರಬೇಕಾಗುವುದು

[1] Lazar SW, Kerr CE, Wasserman RH, Gray JR, Greve DN, Treadway MT, McGarvey M, Quinn BT, Dusek JA, Benson H, Rauch SL, Moore CI, Fischl B. Neuroreport. 2005 Nov 28;16(17):1893-7.

ಅನಿವಾರ್ಯವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಸಮುದಾಯಗಳಾಗಿ ಶೈಕ್ಷಣಿಕ ತಾಣಗಳು ಈ ವಲಯದಲ್ಲಿ ಕಾರ್ಯವೆಸಗುವ ಗಂಭೀರತೆಯನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ ಮತ್ತು ಇದನ್ನು ಸಾಧ್ಯವಾಗಿಸುವಲ್ಲಿ ಬದ್ಧತೆಯನ್ನು ತೋರಬೇಕಾದ ಅಗತ್ಯವಿದೆ.





**ಪ್ರೇರಣಾ** ಅವರು ಬೆಂಗಳೂರಿನಲ್ಲಿರುವ ದಿ ಟೀಚರ್ ಫೌಂಡೇಶನ್ ಸಂಸ್ಥೆಯಲ್ಲಿ ಹಿರಿಯ ಸಂಯೋಜಕರು – ತರಬೇತಿ ಮತ್ತು ಶಿಕ್ಷಕ ನೆರವು ವೃತ್ತಿಯಲ್ಲಿದ್ದಾರೆ. ಇವರು ಅಜೀಂ ಪ್ರೇಂಜಿ ಫೌಂಡೇಶನ್ ಸಂಸ್ಥೆಯ ಶಿಕ್ಷಕರ ಪ್ರಶಿಕ್ಷಣ ತಂಡದಲ್ಲಿ ತರಬೇತುದಾರರಾಗಿ ಮತ್ತು ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದಲ್ಲದೇ ಇವರು ಹೆರಿಟೇಜ್ ಶಾಲೆ ಮತ್ತು ಗುರ್‌ಗಾವದಲ್ಲಿರುವ ಶಿಕ್ಷಾಂತರ್ ಶಾಲೆಗಳಲ್ಲಿಯೂ ಕೆಲಸ ಮಾಡಿದ್ದಾರೆ. ಪ್ರೇರಣಾರವರು ಮುಖ್ಯವಾಗಿ ಪ್ರಾಥಮಿಕ ಪೂರ್ವಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿಯಲ್ಲಿ ಕಳೆದ 12 ವರ್ಷಗಳಿಂದಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಶಿಕ್ಷಣದಲ್ಲಿ ಪದವಿಯನ್ನು ಪಡೆದಿದ್ದು ಸಂಘರ್ಷ ಪರಿವರ್ತನೆ ಮತ್ತು ಶಾಂತಿ ನಿರ್ಮಾಣದ ವಿಷಯದಲ್ಲಿ ಡಿಪ್ಲಮೊ ಪದವಿಯನ್ನೂ ಹೊಂದಿದ್ದಾರೆ. ಇವರನ್ನು prernashivpuri@gmail.com ಇಲ್ಲಿ ಸಂಪರ್ಕಿಸಬಹುದು.



ಶಾಲೆ, ಕಾಲೇಜುಗಳು ಮತ್ತು ಕಾರ್ಪೋರೇಟ್ ವಲಯದಲ್ಲಿ ಗಮನ ಕೇಂದ್ರೀಕರಣ ತರಬೇತಿ, ಸ್ವ–ಅರಿವು ಮತ್ತು ಧ್ಯಾನಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳ ವಿನ್ಯಾಸ ಮತ್ತು ನಿರ್ವಹಣೆ ಹಾಗೂ ಪಠ್ಯಕ್ರಮ ತಯಾರಿಕೆಯಲ್ಲಿ ಶ್ರೀನಿವಾಸನ್‌ರವರಿಗೆ 8 ವರ್ಷಗಳಿಗಿಂತಲೂ ಹೆಚ್ಚಿನ ಅನುಭವವಿದೆ. ಶ್ರೀಯವರು ಬಿಹಾರ್ ಸ್ಕೂಲ್ ಆಫ್ ಯೋಗ, ಶಿವಾನಂದ ಕೇಂದ್ರ ಮತ್ತು ಸ್ಕ್ಯಾಂಡಿನೇವಿಯನ್ ಯೋಗ ಮತ್ತು ಧ್ಯಾನ ಶಾಲೆ, ಸ್ವೀಡನ್‌ನಲ್ಲಿ ಯೋಗ ಮತ್ತು ಮುಂದುವರಿದ ಚಿಂತನಾಶೀಲ ಅಭ್ಯಾಸಗಳಲ್ಲಿ ತರಬೇತಿಯನ್ನು ಹೊಂದಿದ್ದಾರೆ. ಇದಲ್ಲದೇ ಇವರು ಮನಃಶಾಸ್ತ್ರದ ವಿದ್ಯಾರ್ಥಿಯಾಗಿದ್ದು, ಚಿಕಿತ್ಸಾ ಮನಃಶಾಸ್ತ್ರದಲ್ಲಿ ವಿಶೇಷ ಪರಿಣತಿಯನ್ನು ಹೊಂದಿದ್ದಾರೆ. ಪ್ರಸ್ತುತ ಇವರು ರಷ್ಯಾದ ದಿ ಕೆರೇಲ ಸೆಂಟರ್ ಇನ್ ಮಾಸ್ಕೋದಲ್ಲಿ ತರಬೇತುದಾರರಾಗಿದ್ದಾರೆ. ಇವರನ್ನು write2sri.in@gmail.com ಇಲ್ಲಿ ಸಂಪರ್ಕಿಸಬಹುದು.

# ಕಲಿಕಾ ವರ್ಧನೆಗಾಗಿ ಹೊಸ ವಿಧಾನ

ಇ ಎಸ್ ರಾಮಮೂರ್ತಿ



ಸರಕಾರಿ ಶಾಲೆಗಳಲ್ಲಿನ ಪ್ರಾಥಮಿಕ ಶಿಕ್ಷಣದ ಸ್ಥಿತಿಯನ್ನು ಶೈಕ್ಷಣಿಕ ವರದಿಗಳ ವಾರ್ಷಿಕ ಸಮೀಕ್ಷೆಯಲ್ಲಿ ಅಸರ್ (ಆನ್ಯುಯಲ್ ಸರ್ವೇ ಆಫ್ ಎಜುಕೇಶನಲ್ ರಿಪೋರ್ಟ್ಸ್– ಎಎಸ್ಇಆರ್) ಕಾಲ ಕಾಲಕ್ಕೆ ತಪ್ಪದೇ ಎತ್ತಿ ಹೇಳುತ್ತಿದೆ. ಅದರಲ್ಲಿ ಹೇಳಿರುವ ವಿಷಯಗಳಲ್ಲಿ ಕೆಲವು ಹೆಚ್ಚು ಕಳವಳವನ್ನು ಉಂಟುಮಾಡುವಂತಹದ್ದಾಗಿವೆ. ಇದಕ್ಕೆ ಒಂದು ಉದಾಹರಣೆಯನ್ನು ನೀಡಬೇಕೆಂದರೆ, ಕರ್ನಾಟಕದಲ್ಲಿನ 7ನೇ ತರಗತಿಯಲ್ಲಿರುವ 27 ಪ್ರತಿಶತ ವಿದ್ಯಾರ್ಥಿಗಳಿಗೆ ತಮ್ಮ ಮಾತೃ ಭಾಷೆಯಲ್ಲಿರುವ ಪಠ್ಯೇತರ ಪುಸ್ತಕಗಳನ್ನು ತಪ್ಪಿಲ್ಲದಂತೆ ಓದುವ ಸಾಮರ್ಥ್ಯವಿಲ್ಲ ಎಂಬುದು. ಇಂತಹ ಕೌಶಲ್ಯಗಳ ಕೊರತೆಯನ್ನು, ಈ ಘಟ್ಟದಲ್ಲಿಯೇ ಪರಿಹರಿಸದಿದ್ದಲ್ಲಿ ಇದು ಜೀವನದುದ್ದಕ್ಕೂ ಒಂದು ಪ್ರಬಲವಾದ ತೊಂದರೆಯಾಗಿಯೇ ಉಳಿದುಬಿಡುವ ಸಾಧ್ಯತೆಯಿದೆ. ಇದು ಅತ್ಯಂತ ಕಾಳಜಿವಹಿಸಬೇಕಾದ ವಿಷಯ. ಪ್ರಾಥಮಿಕ ಶಾಲೆಯಲ್ಲಿನ ವಿದ್ಯಾಭ್ಯಾಸವನ್ನು ಮುಗಿಸುವ ಹೊತ್ತಿಗೆ ಎಲ್ಲ ಮಕ್ಕಳು ಮೂರು ಮೂಲಭೂತ ಕೌಶಲ್ಯಗಳಾದ ಓದುವುದು, ಬರೆಯುವುದು ಮತ್ತು ತನ್ನದೇ ಭಾಷೆಯಲ್ಲಿ ಮಾತನಾಡುವ ಕೌಶಲ್ಯವನ್ನು ಸಂಪೂರ್ಣ ಕಲಿತಿರಬೇಕು ಎಂದು 'ಶಿಕ್ಷಣ'[i] ಸಂಸ್ಥೆಯ ಪ್ರಯತ್ನ. ಇದರ ಒಂದು ಭಾಗವಾಗಿ, ಸರಾಗವಾಗಿ ಓದುವುದನ್ನು ಕಲಿಸುವ ಗುರಿಯತ್ತ ತನ್ನ ಮೊದಲ ಹಜ್ಜೆಯನ್ನು ಈ ಸಂಸ್ಥೆಯು ಇಟ್ಟಿತು. 'ಶಿಕ್ಷಣ' ಸಂಸ್ಥೆಯು ಒಂದು ನೂತನ ವಿಧಾನವನ್ನು ಬಳಸಿ ಈ ಗುರಿಯನ್ನು ಸರಿಸುಮಾರು ಸಾಧಿಸಿದೆ. ಅದೇ ಈ ಲೇಖನದ ವಸ್ತು ವಿಷಯ. ಈ ವಿಧಾನವು ಬಹಳ ಸುಲಭವಾಗಿದ್ದು ಇದನ್ನು ವಿಭಿನ್ನ ಪರಿಸರಗಳಲ್ಲಿ ಅಳವಡಿಸಿಕೊಳ್ಳ ಬಹುದಾಗಿದೆ. ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಇನ್ನಿತರ ವಲಯಗಳಲ್ಲೂ ಇದನ್ನು ಅನ್ವಯಿಸಲು ಸಾಧ್ಯವಾಗುವುದು ಇದರ ಬಗ್ಗೆ ಮತ್ತಷ್ಟು ಕುತೂಹಲವನ್ನು ಮೂಡಿಸುವಂತೆ ಮಾಡಿದೆ.

ಸರಕಾರಿ ಶಾಲೆಯಲ್ಲಿನ ಶಿಕ್ಷಕರು ಅಸರ್ ವರದಿ ಮಾಡಿರುವ ಕುಂದು–ಕೊರತೆಗಳನ್ನು ಪರಿಹರಿಸಲು ಬೇಕಾದ ಅರ್ಹತೆ ಮತ್ತು ಅನುಭವ ಹೊಂದಿದ್ದರೂ ಈ ಪರಿಸ್ಥಿತಿ ಉಳಿದಿರುವುದು 'ಶಿಕ್ಷಣ'ಕ್ಕೆ ಅರಿವಾಯಿತು. ಹೋಗಲಿ ವಿದ್ಯಾರ್ಥಿಗಳಲ್ಲಿ ಅಡಗಿರುವ ಸಾಮರ್ಥ್ಯ ಮತ್ತು ಬುದ್ಧಿವಂತಿಕೆಯ ಮಟ್ಟ ಇದಕ್ಕೆ ಕಾರಣವೇ ಎಂದು ಪರಿಶೋಧಿಸಿದಾಗ, ಎಲ್ಲೋ ಕೆಲವರನ್ನು ಹೊರತುಪಡಿಸಿ ಅನೇಕರು ಈ ವಿಷಯದಲ್ಲಿ ನಪಾಸಗುವುದು ಸಾಧ್ಯವೇ ಇಲ್ಲ ಎನ್ನುವಷ್ಟು ಚುರುಕಾಗಿರುವುದು ಕಂಡುಬಂದಿತು.

[i] http://www.sikshana.org

ಸಾಮಾನ್ಯವಾಗಿ ಕಲಿಯುವುದಕ್ಕೆ ಎರಡು ಮಾರ್ಗಗಳಿವೆ. ಇನ್ನೊಬ್ಬರ ಬೋಧನೆಯಿಂದ ಜ್ಞಾನವನ್ನು ಗಳಿಸಿಕೊಳ್ಳುವುದು ಮತ್ತು ಸ್ವಂತ ಅಭ್ಯಾಸ ಮಾಡಿ ಮಾಡಿ ಸಾಮರ್ಥ್ಯವನ್ನು ಬೆಳಸಿಕೊಳ್ಳುವುದು. ಮೊದಲನೆಯದಕ್ಕೆ ಶಿಕ್ಷಕರು ಆವಶ್ಯಕ, ಎರಡನೆಯದ್ದು ವಿದ್ಯಾರ್ಥಿ ಎಷ್ಟು ಶ್ರಮ ವಹಿಸಿ ಕಲಿಯುತ್ತಾನೆ ಎಂಬುದನ್ನು ಅವಲಂಬಿಸಿರುತ್ತದೆ. ಈ ಕೌಶಲ್ಯದ ಮೇಲೆ ಗಮನವನ್ನು ಕೇಂದ್ರೀಕರಿಸಿ 'ಶಿಕ್ಷಣ'ವು ಯಾದೃಚ್ಛಿಕವಾಗಿ ಆಯ್ದ ವಿವಿಧ ಶಾಲೆಗಳ ಅನೇಕ ಕನ್ನಡ ಶಿಕ್ಷಕರನ್ನು ಪ್ರಶ್ನಿಸಿ ಒಂದು ಸಮಂಜಸವಾದ ಕಾಲಾವಧಿಯೊಳಗೆ ವಿದ್ಯಾರ್ಥಿಗಳು ಆ ಕೌಶಲ್ಯವನ್ನು ಗಳಿಸಿಕೊಳ್ಳುವ ಸಾಧ್ಯತೆಗಳನ್ನು ಕಲಿತುಕೊಳ್ಳಬಲ್ಲರೇ ಎಂಬುದನ್ನು ಖಚಿತಪಡಿಸಿಕೊಂಡಿತು. ಇದರ ಮುಂದಿನ ಹಂತವೆಂದರೆ, ವಿದ್ಯಾರ್ಥಿಗಳು ಸಾಕಷ್ಟು ಶ್ರಮವನ್ನು ಹಾಕುವಂತಿರಬೇಕು ಮತ್ತು ಅದನ್ನು ಪರಿಶೀಲಿಸಿ ನೋಡುವಂತಿರಬೇಕು ಇಂಥ ಒಂದು ಅದಕ್ಕೆಂದೇ ರಚಿಸಿದ ಕಾರ್ಯಕ್ರಮವನ್ನು ಹೊರತರುವುದ್ದು. ಹೀಗಾಗಿ ಈ ಕೆಳಗೆ ಹೇಳಿರುವಂತಹ ಪ್ರಕ್ರಿಯೆಯು ಸೃಷ್ಟಿಯಾಯಿತು.

ಕನ್ನಡವನ್ನು ಓದಲು ಕಲಿಯುವುದಕ್ಕೆ ಇದೇ ಕಡೆಯ ಅವಕಾಶ, ಇದರ ಅನಂತರ ಅವರ ವಿದ್ಯಾಭ್ಯಾಸದ ಅವಧಿಯಲ್ಲಿ ಇನ್ಯಾವುದೇ ರೀತಿಯ ಪಾಠವು ಈ ನಿಟ್ಟಿನಲ್ಲಿ ಇರುವುದಿಲ್ಲ ಎಂದು ಪ್ರಾರಂಭದಲ್ಲಿಯೇ ವಿದ್ಯಾರ್ಥಿಗಳಿಗೆ ಕಟ್ಟು-ನಿಟ್ಟಾಗಿ ತಿಳಿಸಲಾಯಿತು. ಹೀಗಿದ್ದರೂ, ವಿದ್ಯಾರ್ಥಿಗಳು ಒಂದು ಸ್ವಲ್ಪ ಕಾಲ ಪಟ್ಟು ಹಿಡಿದು ಕಲಿತರೆ, ಅನೇಕ ವರ್ಷ ಶಾಲಾ ವಿದ್ಯಾಭ್ಯಾಸ ಮಾಡಿದರೂ ಅವರಿಗೆ ಕರಗತವಾಗದಿದ್ದ ಬಹುಮುಖ್ಯವಾದ ಒಂದು ಜೀವನ ಕೌಶಲ್ಯವನ್ನು ತಡವಾಗಿಯಾದರೂ ಅವರು ಗಳಿಸಿಕೊಳ್ಳಬಹುದು ಎಂದು ಹೇಳಲಾಯಿತು.

ಸಾಧ್ಯವಾದಲ್ಲೆಲ್ಲಾ ಶಾಲಾ ಕಾರ್ಯಾವಧಿಯಲ್ಲಿಯೇ ಇದರ ಅಭ್ಯಾಸದ ಅವಧಿಗಳು ಶಾಲಾ ಆವರಣದಲ್ಲಿಯೇ ನಡೆದವು. ಇವು ಒಂದು ತಾಸಿನ ಅವಧಿಯದ್ದಾಗಿದ್ದು, ವಾರದಲ್ಲಿ ಆರು ದಿನ, ಐದು ವಾರಗಳವರೆಗೆ ಯಾವುದೇ ಕಾರಣಕ್ಕೂ ವಿರಾಮವಿಲ್ಲದೇ ಮತ್ತು ಸಮಯ ಹಾಗೂ ಸ್ಥಳದಲ್ಲಿ ಬದಲಾವಣೆ ಇಲ್ಲದೇ ನಡೆದವು. ಇಡೀ ಕಾರ್ಯವ್ಯವಸ್ಥೆಯಲ್ಲಿ ಕಟ್ಟು-ನಿಟ್ಟಾದ ಶಿಸ್ತು ಪಾಲನೆಗೆ ನಿಗಾವಹಿಸಲಾಗಿದ್ದು, ಇದುವೇ ಯಶಸ್ಸಿಗೆ ಪ್ರಮುಖ ಕಾರಣವಾಯಿತು.

ಇಲ್ಲಿ ಕಲಿಕೆಯನ್ನು ಉಪಾಧ್ಯಾಯರಿಂದ ಮಾಡಿಸದೇ ಸಹಪಾಠಿಯಿಂದ ಮಾಡಿಸಲಾಯಿತು. ವಾಸ್ತವವಾಗಿ, ಈ ಅವಧಿಗಳಲ್ಲಿ ಸಾಂಪ್ರದಾಯಿಕ ಬೋಧನೆಯು ನಡೆಯುತ್ತಿರಲಿಲ್ಲ. ಮಕ್ಕಳು ತಮ್ಮ ಜೊತೆಗಾರರೊಂದಿಗೆ ಅಭ್ಯಾಸದಲ್ಲಿ ತೊಡಗಿಕೊಂಡು ಸಾಮರ್ಥ್ಯವನ್ನು ಬೆಳಸಿಕೊಳ್ಳಲು ಬಯಸುತ್ತಾರೆ ಎಂಬುದು ತಿಳಿದ ವಿಷಯವೇ; ಇದಲ್ಲದೇ, ಒಂದು ಭಯರಹಿತ ಪ್ರೋತ್ಸಾಹಕ ವ್ಯವಸ್ಥೆಯಲ್ಲಿ ಕಲಿಕೆಯು ಪರಿಣಾಮಕಾರಿಯಾಗಿ ಆಗುತ್ತದೆ ಎನ್ನುವುದು ಒಂದು ಒಪ್ಪಿತ ವಿಷಯವೇ ಆಗಿದೆ. ಇದು ಪ್ರಸ್ತಾವಿಸಲಾದ ಅವಧಿಗಳಿಗೆ ಆಧಾರವಾಗಿ ರೂಪಿತಗೊಂಡು, ಈ ಕೆಳಗಿನಂತೆ ಅವುಗಳನ್ನು ರಚಿಸಲಾಯಿತು.

ಕಲಿಯಲು ಬಂದ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಈಗಾಗಲೇ ಬೇಕಾದ ಕೌಶಲ್ಯವನ್ನು ಗಳಿಸಿದ್ದ ಮತ್ತೊಬ್ಬ ವಿದ್ಯಾರ್ಥಿಯೊಂದಿಗೆ ಜೋಡಿಯನ್ನಾಗಿ ಮಾಡಲಾಗುತಿತ್ತು. 15 ರಿಂದ 20 ವಿದ್ಯಾರ್ಥಿಗಳ ಜೋಡಿಯಿರುವ ಒಂದು ಗುಂಪಿಗೆ ಒಬ್ಬ ಸುಗಮಕಾರರು ಮೇಲುಸ್ತುವಾರಿಯನ್ನು ಮಾಡುತ್ತಿದ್ದರು. ಪ್ರತಿಯೊಂದು ಜೋಡಿಗೂ ಓದಲು ಸೂಕ್ತವಾದ ಒಂದೇ ಪಠ್ಯವಿಷಯವನ್ನು ಕೊಡಲಾಗತ್ತಿತ್ತು. ತಮಗೆ ನೀಡಿರುವ ಪಠ್ಯವನ್ನು ಓದಲು ಪ್ರಯತ್ನಿಸುವಂತೆ ವಿದ್ಯಾರ್ಥಿಗಳಿಗೆ ಹೇಳಲಾಗುತ್ತಿತ್ತು. ವಿದ್ಯಾರ್ಥಿಗೆ ಓದಲು ಅಡಚಣೆ ಉಂಟಾಗಿ ಅವರು ನಿಲ್ಲಿಸಿದಲ್ಲಿ, ಮಾರ್ಗದರ್ಶಕನಾದ ವಿದ್ಯಾರ್ಥಿಯು ಅದೇ ಪದವನ್ನು ಗಟ್ಟಿಯಾಗಿ ಓದಬೇಕೆಂದು ಹೇಳಲಾಗಿತ್ತು. ಕಲಿಯುತ್ತಿರುವ ವಿದ್ಯಾರ್ಥಿಯು ಎರಡು ಅಥವಾ ಮೂರು ಬಾರಿ ಓದುವ ಪ್ರಯತ್ನವನ್ನು ಮಾಡಿ ವಿಫಲವಾದಲ್ಲಿ ಕೂಡಲೆ ಜೊತೆಗಾರ ವಿದ್ಯಾರ್ಥಿಯು ಈ ಕ್ರಮವನ್ನು ಅನುಸರಿಸಬೇಕಾಗಿತ್ತು. ವಿದ್ಯಾರ್ಥಿಯು ತನ್ನ ಪ್ರಯತ್ನಗಳು ವಿಫಲವಾದದ್ದರಿಂದ ಹತಾಶೆಗೊಳ್ಳದೇ ಓದುವುದನ್ನು ಒಂದು ನಿರ್ದಿಷ್ಟ ವೇಗದಲ್ಲಿ ಮುಂದುವರೆಸಿಕೊಂಡು ಹೋಗುವಂತೆ ನೋಡಿಕೊಳ್ಳಲು ಈ ರೀತಿ ಸಮಯದ ವಿನ್ಯಾಸವನ್ನು ಮಾಡಲಾಗಿತ್ತು. ಈ ಸಂಪೂರ್ಣ ಪ್ರಕ್ರಿಯೆಯು ಮೂರು ಹಂತಗಳನ್ನು ಒಳಗೊಂಡಿದೆ: ಓದಲು ಪ್ರಯತ್ನಮಾಡುವುದು, ವಿಫಲರಾದಲ್ಲಿ ಪದಗಳ ಸರಿಯಾದ ಉಚ್ಚಾರಣೆಯನ್ನು ಕೇಳಿಸಿಕೊಳ್ಳುವುದು ಮತ್ತು ಅದೇ ಸಮಯದಲ್ಲಿ, ಪದವನ್ನು ನೋಡಿ ಗಮನಿಸಿ ಸರಿಯಾಗಿ ಓದುವುದು. ಹೀಗಾಗಿ, ಸರಿಯಾಗಿ ಓದ ಬೇಕಾದರೆ ಈ ಮೂರೂ ಪ್ರಕ್ರಿಯೆ ಸರಿಯಾಗಿ ನಡೆಯಬೇಕು ಎಂದು ವಿದ್ಯಾರ್ಥಿಯ ಮನದಲ್ಲಿ ಮೂಡಿಸಿದಾಗ ಕಲಿತದ್ದು ದೀರ್ಘ ಕಾಲದವರೆಗೂ ಗಟ್ಟಿಯಾಗಿ ಉಳಿಯುವಂತಾಗುತ್ತದೆ. ಮತ್ತೆ ಮತ್ತೆ ಇಂಥ ಅಭ್ಯಾಸದ ಅವಧಿಗಳಲ್ಲಿ ಸಾಕಷ್ಟು ಬಾರಿ ಅಭ್ಯಾಸ ಮಾಡಿದಾಗ, ಕ್ಲಿಷ್ಟವೆನಿಸಿದ ಪದಗಳು ವಿದ್ಯಾರ್ಥಿಯ ಮನದಲ್ಲಿ ಅಚ್ಚಳಿಯದಂತೆ ಮೂಡಲು ಸಹಾಯವಾಗುತ್ತದೆ.

ನಮಗೆ ಕಂಡು ಬಂದ ಪ್ರಕಾರ ಒಬ್ಬ ವಯಸ್ಕರು ಜೊತೆಯಲ್ಲಿ ಇದ್ದಾಗ ಅವರು ತರಬೇತಿ ಪಡೆದ ಶಿಕ್ಷಕನಲ್ಲದಿದ್ದರೂ, ಕಲಿಯುವುದು, ಮಕ್ಕಳಿಗೆ ಸುರಕ್ಷಿತ,

ಸುಭದ್ರ ಮತ್ತು ಪ್ರೇರಣಾದಾಯಕವಾಗಿರುತ್ತದೆ. ಈ ಅವಧಿಗಳ ಸಮಯದಲ್ಲಿ ಮೇಲಿನ ಮಾರ್ಗದರ್ಶನಗಳ ಅನುಸರಣೆ ಸರಿಯಾಗಿ ಆಗುವಂತೆ ನೋಡಿಕೊಳ್ಳಲು ಒಬ್ಬ ಸುಗಮಕಾರನನ್ನು ಒದಗಿಸಲಾಗುತ್ತದೆ. ಹೀಗಿದ್ದರೂ ಆತ ಮಧ್ಯ ಪ್ರವೇಶಿಸುವುದಿಲ್ಲ, ಅದರಲ್ಲೂ ಶಿಕ್ಷಕರಂತೆ ಬೋಧಿಸಲು ತೊಡಗುವುದಿಲ್ಲ.

ಈ ಒಂದು ವಿಭಿನ್ನ ಪ್ರಯತ್ನದಲ್ಲಿ ನಿರೀಕ್ಷಿಸುವ ಯಶಸ್ಸು, ಪ್ರಾಸಂಗಿಕವಾಗಿ ಅವಿರತ ಪ್ರಯತ್ನ, ದೃಢ ನಿಶ್ಚಯ ಮತ್ತು ಮನೋಸ್ಥೈರ್ಯಗಳಂತಹ ಗ್ರಹಣೇತರ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವುದನ್ನು ಅವಲಂಬಿಸಿರುತ್ತದೆ. ಮೇಲೆ ಹೇಳಿರುವಂತಹ ವಿಧಾನಕ್ಕೆ ವಿದ್ಯಾರ್ಥಿಯು ತನ್ನನ್ನು ತಾನು ಒಪ್ಪಿಸಿಕೊಳ್ಳಲು ತೀರ್ಮಾನಿಸಿದಲ್ಲಿ, ಅವನು/ಅವಳು ಯಶಸ್ಸಿನೆಡೆಗೆ ಹೆಜ್ಜೆ ಇಟ್ಟಂತಾಗುತ್ತದೆ; ಉಳಿದದ್ದನ್ನು ಮೇಲೆ ಹೇಳಿರುವ ಅಭ್ಯಾಸಗಳು ನೋಡಿಕೊಳ್ಳುತ್ತವೆ.

ಈ ವಿಧಾನಗಳನ್ನು ಪರೀಕ್ಷಿಸಲು, ಒಂದು ಶಾಲೆಯಲ್ಲಿ 13 ವಿದ್ಯಾರ್ಥಿಗಳೊಂದಿಗೆ ಇದನ್ನು ಪ್ರಾಯೋಗಿಕವಾಗಿ ಉಪಯೋಗಿಸಲಾಯಿತು. ಈ ವಿದ್ಯಾರ್ಥಿಗಳು "ಉಪಯೋಗಕ್ಕೆ ಬಾರದವರು" ಎಂದು ಪರಿಗಣಿಸಲ್ಪಟ್ಟಿದ್ದು ಇವರ ಕೌಶಲ್ಯಗಳು ಅತ್ಯಂತ ಕೆಳಮಟ್ಟದಲ್ಲಿದ್ದವು. ಇದಲ್ಲದೇ ಇವರು ತರಗತಿಗಳಿಗೂ ಪದೇ-ಪದೇ ಗೈರುಹಾಜರಾಗುವ ಪ್ರವೃತ್ತಿಯನ್ನು ಹೊಂದಿದ್ದು ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿಯನ್ನೇ ಹೊಂದಿರದವರು ಎಂದು ಗುರುತಿಸಲಾದವರು. ನಿಗದಿಪಡಿಸಿದಂತೆ ಒಂದು ಕಿರುಪರಿಚಯದ ಅನಂತರ ಆಗಸ್ಟ್ 31ರಿಂದ ಅಕ್ಟೋಬರ್ 5ರವರೆಗೂ 30 ದಿನಗಳ ಕಾಲ ಯಾವುದೇ ವಿರಾಮವಿಲ್ಲದೇ ಶಿಬಿರವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಮೂರು ದೊಡ್ಡ ಹಬ್ಬಗಳಿಗಾಗಿ ದೊರಕುವ ರಜೆಯೂ ಸೇರಿತ್ತು. ಹೀಗಿದ್ದರೂ ಮಕ್ಕಳು ಭಾನುವಾರದಂದೂ ಬರುತ್ತೇವೆ ಎಂದು ತಿಳಿಸಿದ್ದರಿಂದ ಇದು ಒಟ್ಟು 35 ದಿನಗಳ ಕಾರ್ಯಕ್ರಮವಾಯಿತು. ಮೊದಲಿನಿಂದ ಕಡೆಯವರೆಗೂ 100% ಹಾಜರಾತಿಯನ್ನು ಪಡೆದು ಈ ಕಾರ್ಯಕ್ರಮ ನಡೆಯಿತು ಮತ್ತು ಮಕ್ಕಳು ಗರಿಷ್ಠ ಮಟ್ಟದ ಉತ್ಸಾಹವನ್ನು ತೋರಿಸುತ್ತಿದ್ದು ಕಾರ್ಯಕ್ರಮದ ಉದ್ದಕ್ಕೂ ಸುಧಾರಣೆಯತ್ತ ಸಾಗುತ್ತಿದ್ದ ತಮ್ಮ ಸಾಮರ್ಥ್ಯದ ಬಗ್ಗೆ ಹೆಮ್ಮೆಯ ಭಾವನೆಯನ್ನೂ ಹೊಂದಿದ್ದರು. ನಿಗದಿತ ಸಮಯದ ಕೊನೆಯಲ್ಲಿ ಹತ್ತು ವಿದ್ಯಾರ್ಥಿಗಳು ಅಸರ್‌ನಲ್ಲಿ ವ್ಯಾಖ್ಯಾನಿಸಲಾಗಿರುವ ಎರಡನೇ ಹಂತದ ಓದುವ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದರು. ಇನ್ನಿಬ್ಬರು ಮತ್ತೆರಡು ವಾರಗಳ ಅಭ್ಯಾಸದ ನಂತರ ಗಳಿಸಿಕೊಂಡರು. 13ರಲ್ಲಿ 12 ಜನರು ಗಳಿಸಿದ ಯಶಸ್ಸು 2012 ಅಕ್ಟೋಬರ್/ನವೆಂಬರ್ ತಿಂಗಳಲ್ಲಿ 43 ಶಾಲೆಗಳಲ್ಲಿ ಎರಡನೆ ಹಂತವಾಗಿ ಈ ಪ್ರಯತ್ನವನ್ನು ಜಾರಿಗೊಳಿಸಲು ಹುರಿದುಂಬಿಸಿತು. ಈ ಅವಧಿಯಲ್ಲಿ ಬರುವ ಮಧ್ಯಂತರದ ರಜೆ ಮತ್ತು ಮೂರು ದೊಡ್ಡ ಹಬ್ಬಗಳ ಹೊರತಾಗಿಯೂ ಇಲ್ಲಿ ಸಂಪೂರ್ಣ ಎನ್ನುವಷ್ಟು ಪ್ರಮಾಣದ ಹಾಜರಾತಿ ಇತ್ತು. ಈ ಕಾರ್ಯಕ್ರಮವು ಒಳಗೊಂಡಿದ್ದ 506 ವಿದ್ಯಾರ್ಥಿಗಳಲ್ಲಿ 327 ವಿದ್ಯಾರ್ಥಿಗಳು ಹೇಳಲಾಗಿದ್ದ ಕೌಶಲ್ಯದಲ್ಲಿ 65 ಪ್ರತಿಶತದಷ್ಟನ್ನು ಗಳಿಸಿಕೊಂಡಿದ್ದರು. ಮೊದಲ ಪ್ರಯತ್ನದಲ್ಲಿ ಗಳಿಸಿದ್ದಕ್ಕಿಂತ ಇದು ಕಡಿಮೆ ಸಂಖ್ಯೆಯಿದ್ದರೂ, 2011-12ರಲ್ಲಿ ಶಿಕ್ಷಣವು 136 ಶಾಲೆಗಳಲ್ಲಿನ 3789 ವಿದ್ಯಾರ್ಥಿಗಳನ್ನೊಳಗೊಂಡ ಸಾಂಪ್ರದಾಯಿಕ ವಿಧಾನದ ವಿದ್ಯಾಭ್ಯಾಸದ ಪ್ರತಿ ತಿಂಗಳೂ ಶೇ 8 ಕುಗ್ಗುತ್ತಿದ್ದ ವಿದ್ಯಾರ್ಥಿಗಳ ಸ್ಥಿತಿಗಿಂತ ಇದು ಮಹತ್ವದ ಹೆಚ್ಚಳವನ್ನು ತೋರಿಸಿತ್ತು.



ಅನಂತರ ಈ ಕಾರ್ಯಕ್ರಮವನ್ನು ಕೆಲವು ಸುಧಾರಣೆ-ಗಳೊಂದಿಗೆ 2012-13ರ ಅವಧಿಯಲ್ಲಿನ ಉಳಿದ ಸಮಯದಲ್ಲಿ 220 ಶಿಕ್ಷಣ ಶಾಲೆಗಳಲ್ಲಿನ 7ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಯಿತು. 30 ದಿನಗಳ ಅವಧಿಯ ಕೊನೆಯಲ್ಲೂ ಪರಿಣಿತಿಯಲ್ಲಿ ಸ್ವಲ್ಪ ಮಾತ್ರ ಹಿಂದುಳಿದಿದ್ದರೂ ಅವರಿಗೆ ಹದಿನೈದು ದಿನಗಳವರೆಗೆ ಪುನಃ ಅಭ್ಯಾಸದಲ್ಲಿ ತೊಡಗುವಂತೆ ಮಾಡಲಾಗುತ್ತಿತ್ತು. ಮುಂದೆ, ಅಕ್ಷರ/ಪದಗಳನ್ನು ತಿಳಿದಿಲ್ಲದವರನ್ನು ಪ್ರಾರಂಭದಲ್ಲಿಯೇ ಬೇರ್ಪಡಿಸಿ ಅವರಿಗೆ 30 ದಿನಗಳ ಅರ್ಹತಾ ಕಾರ್ಯಕ್ರಮವನ್ನು ಅಪೇಕ್ಷಿತ ಕೌಶಲ್ಯ ಗಳಿಕೆ ಮಾದರಿಯಲ್ಲಿಯೇ ನಡೆಸಲಾಯಿತು. ಈ ಹಂತದಲ್ಲಿ ಭಾಗವಹಿಸಿದ್ದ 7894 ವಿದ್ಯಾರ್ಥಿಗಳಲ್ಲಿ 7166 ವಿದ್ಯಾರ್ಥಿಗಳು ಅಂದರೆ ಶೇಕಡಾ 90.8 ವಿದ್ಯಾರ್ಥಿಗಳು ನಿಗದಿಪಡಿಸಿದ ಹಂತವನ್ನು ಸಾಮರ್ಥ್ಯದಲ್ಲಿ ಗಳಿಸಿಕೊಂಡಿದ್ದರು. ಈಗಾಗಲೇ ಸಾಮರ್ಥ್ಯವನ್ನು ಹೊಂದಿದ್ದವರು ಅಥವಾ ಶಿಕ್ಷಣ ಶಾಲೆಯ ಇನ್ನಿತರ ಉಪಕ್ರಮಗಳಲ್ಲಿ ಸಾಮರ್ಥ್ಯವನ್ನು ಗಳಿಸಿದವರನ್ನೂ ಒಳಗೊಂಡಂತೆ ಒಟ್ಟಾರೆ ಶಿಕ್ಷಣ ಶಾಲೆಯ 18471 ವಿದ್ಯಾರ್ಥಿಗಳಲ್ಲಿ 17904 ವಿದ್ಯಾರ್ಥಿಗಳು ಅಸರ್ ನಿಗದಿಪಡಿಸಿದ ಓದುವಿಕೆಯ ಎರಡನೇ ಹಂತದಲ್ಲಿ

ತೇರ್ಗಡೆಯನ್ನು ಹೊಂದಿದ್ದರು. ಇದು ಶೇಕಡಾ 96.9 ಒಟ್ಟಾರೆ ಫಲಿತಾಂಶವಾಗಿತ್ತು. ಪ್ರತಿಧ್ವನಿತವಾದ ಈ ಕ್ರಮಬದ್ಧವಾದ ವಿಧಾನದ ಯಶಸ್ಸಿನಿಂದ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಣ ಶಾಲೆಯಲ್ಲಿನ 7ನೇ ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಈ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು.

ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕಾಗುತ್ತದೆ. ಅಸರ್ ಮಾಪನದ ಅಡಿಯಲ್ಲಿ ಗಳಿಸಿದ ಓದುವಿಕೆಯ ಪರಿಣಿತಿಯು ತಾನೇ ತಾನಾಗಿ ವಿಷಯ ಗ್ರಹಿಸಿ ಓದುವಿಕೆಯ ಕಾರ್ಯಕ್ರಮದ ಅಂತಿಮ ಗುರಿಯಾದ ಗ್ರಹಿಸುವಿಕೆಯನ್ನು ಒದಗಿಸುವುದಿಲ್ಲ; ಆದರ ಗ್ರಹಿಕೆಗೆ ಈ ಪರಿಣಿತಿಯ ಪೂರ್ವಾಪೇಕ್ಷಿತವಾಗಿರುವುದರಿಂದ ಈ ಗುರಿಯ ಸಾಧನೆಗೆ ಸಾಮರ್ಥ್ಯ ಗಳಿಸುವಿಕೆಯು ಒಂದು ಪ್ರಮುಖವಾದ ಹೆಜ್ಜೆಯಾಗುತ್ತದೆ.

ಸಾಂದರ್ಭಿಕವಾಗಿ, ಇದೇ ಮಾದರಿಯ ಕಾರ್ಯಕ್ರಮವನ್ನು ಪೂರ್ಣಾಂಕಗಳ ಸರಳ ಭಾಗಾಕಾರದಲ್ಲಿ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಸಾಧ್ಯವಾಗುವಂತೆ ಶಿಕ್ಷಣ ಸಂಸ್ಥೆಯು ಅನೇಕ ಶಾಲೆಗಳಲ್ಲಿ ನಡೆಸಿತು. ಇಲ್ಲಿನ ಯಶಸ್ಸು ಓದುವಿಕೆಯ ಕಾರ್ಯಕ್ರಮದಲ್ಲಿ ಗಳಿಸಿದ ಯಶಸ್ಸಿಗೆ ಹೋಲಿಸಲು ಸಾಧ್ಯವಾಗುವಂತೆ ಇತ್ತು. ಹೀಗಾಗಿ, ಗುರಿಯಾಗಿಸಿದ ಓದುವಿಕೆಯ ಸಾಮರ್ಥ್ಯಗಳಿಕೆಯು ಇಲ್ಲಿ ಗಣನೆಗೆ ಬಾರದೆ; ನಿಯಂತ್ರಿತ ಪರಿಸ್ಥಿತಿಯಲ್ಲಿಯೂ ಕಲಿಕಾ ವರ್ಧನೆಗೆ ಜ್ಞಾನಗ್ರಹಣೇತರ ಕೌಶಲ್ಯಗಳ ಪಾತ್ರವನ್ನು ಪರಿಗಣಿಸುವಂತೆ ಮಾಡುತ್ತದೆ. ಈ ಕಾರ್ಯಕ್ರಮದ ಯಶಸ್ಸು ಮತ್ತು ಕೆಲವು ನಿರ್ದಿಷ್ಟ ಕಲಿಕಾ ಪ್ರಕ್ರಿಯೆಯ ಬಗ್ಗೆ ಇದು ಒದಗಿಸಿದ ಒಳನೋಟ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದಲ್ಲಿ ಬೃಹತ್ ಶ್ರೇಣಿಯ ಕೌಶಲ್ಯಗಳ ಗಳಿಕೆಯಲ್ಲಿಯೂ ಈ ವಿಧಾನವನ್ನು ಬಳಸಬಹುದೆಂಬ ಆಶಾ ಭಾವನೆಯನ್ನು ನಮಗೆ ನೀಡಿತು.

ಮೇಲಿನ ಫಲಿತಾಂಶಕ್ಕೆ ಕಾರಕವಾದ ಅಂಶಗಳು ಮತ್ತು ಪ್ರಮುಖ ಪೂರ್ವಕಲ್ಪನೆಗಳಿಗೆ ಸೈದ್ಧಾಂತಿಕ ಬೆಂಬಲವನ್ನು ಒದಗಿಸುವ ಒಂದು ವಿವರವಾದ ಸಂಶೋಧನಾ ಲೇಖನವು "ಶೈಕ್ಷಣಿಕ ಭಾಷಾವಿಜ್ಞಾನದ ಕಾರ್ಯನಿರತ ಸಂಶೋಧನಾ ಲೇಖನಗಳು (ವರ್ಕಿಂಗ್ ಪೇಪರ್ಸ್ ಆನ್ ಎಜುಕೇಷನಲ್ ಲಿಂಗ್ವಿಸ್ಟಿಕ್ಸ್)" ಎನ್ನುವ ಲೇಖನದಲ್ಲಿ ಸಧ್ಯದಲ್ಲಿಯೇ ಪ್ರಕಟಗೊಳ್ಳಲಿದೆ.





**ರಾಮಮೂರ್ತಿ**ಯವರು ಉದ್ಯಮ ಕ್ಷೇತ್ರದಲ್ಲಿ ವಿಶಿಷ್ಟವಾದ ಮತ್ತು ಸುದೀರ್ಘವಾದ ವೃತ್ತಿ ಜೀವನವನ್ನು ನಡೆಸಿದವರು. ಅದು ಉತ್ತುಂಗದಲ್ಲಿದ್ದಾಗಲೇ ಹೊರಗೆ ಬರಲು ನಿರ್ಧರಿಸಿ ಅವರು **ಶಿಕ್ಷಣ** ಸಂಸ್ಥೆಯನ್ನು ಹುಟ್ಟುಹಾಕಿ ಅಲ್ಲಿ ಈಗ ಮುಖ್ಯ ಮಾರ್ಗದರ್ಶಕರಾಗಿದ್ದಾರೆ. ಈ ಕಾರ್ಯಕ್ರಮವು ಸಾರ್ವಜನಿಕ ಶಾಲಾ ವ್ಯವಸ್ಥೆಯಲ್ಲಿ ಸುಸ್ಥಿರವಾದ ಒಂದು ಮಾದರಿಯನ್ನು ಹೊರತರುವ ಗುರಿಯನ್ನು ಹೊಂದಿದೆ. ಇವರನ್ನು esrmurthy@gmail.com ಇಲ್ಲಿ ಸಂಪರ್ಕಿಸಬಹುದು.

# ನಲಿ ಕಲಿ:
# ಕಲಿಕೆಗೆ ಸಾಮರ್ಥ್ಯವರ್ಧನೆ
## ಇನ್ನೂ ಹೆಚ್ಚಿನದನ್ನು ಮಾಡಬಹುದೇ?

ನಮಿತಾ ಗುಪ್ತಾ

ನಮಗೆಲ್ಲರಿಗೂ ಒಂದು ಶಾಲಾ ಕೊಠಡಿ ಹೇಗಿರುತ್ತದೆ ಎಂಬ ಚಿತ್ರ ಮನಸ್ಸಿನಲ್ಲಿ ಇದ್ದೇ ಇದೆ. ಇದಕ್ಕೆ ಆಧಾರ ನಮ್ಮ ಶಾಲೆ ಹೇಗಿತ್ತು ಅಥವಾ ನಮ್ಮ ಮಕ್ಕಳು ಕಲಿತ ಶಾಲೆಗಳು ಹೇಗಿವೆ ಅಥವಾ ನಾವೇ ಪಾಠಮಾಡುತ್ತಿರುವ ಶಾಲೆ ಹೇಗಿದೆ ಎಂಬುದು ಇರಬಹುದು. ಹೆಚ್ಚಿನ ಪ್ರಕರಣಗಳಲ್ಲಿ, ಈ ಶಾಲಾ ಕೊಠಡಿ ಎಂಬ ಚಿತ್ರದಲ್ಲಿ ಒಬ್ಬ ಶಿಕ್ಷಕರು ಯಾವುದೇ ವಿಷಯವನ್ನು ಕುರಿತು ಮಕ್ಕಳೊಂದಿಗೆ ಮಾತನಾಡುತ್ತಿರುತ್ತಾರೆ, ಸುಮಾರು 25ರಿಂದ 50 ಮಕ್ಕಳು ಶಿಕ್ಷಕರು ಹೇಳುತ್ತಿರುವುದನ್ನು ಕೇಳುತ್ತಿರುತ್ತಾರೆ. ಒಂದು ಕಪ್ಪು ಹಲಗೆ, ಪುಸ್ತಕಗಳು, ಅಭ್ಯಾಸ ಪತ್ರಗಳು ಮತ್ತು ಮಕ್ಕಳು ಅದೃಷ್ಟವಂತರಾದರೆ ಬಣ್ಣ ಬಣ್ಣದ ಚಾರ್ಟ್‌ಗಳು ಮತ್ತು ಗೋಡೆಯ ಮೇಲೆ ವಿವಿಧ ಚಿತ್ರಪಟಗಳು ಇರುತ್ತವೆ. ಸರ್ಕಾರಿ ಶಾಲೆಯ ಚಿತ್ರ ಕೂಡಾ ಸಾಮಾನ್ಯವಾಗಿ ಹೀಗೆಯೇ ಇರುತ್ತದೆ. ಆದರೆ ಹೆಚ್ಚಿನ ಶಾಲೆಗಳು ಕೊಳಕಾಗಿ ಇರುತ್ತವೆ. ಆದರೆ ಇತ್ತೀಚೆಗೆ ಕಿರಿಯ ಪ್ರಾಥಮಿಕ ಶಾಲಾ ಕೊಠಡಿಗಳ ಚಿತ್ರ ಬದಲಾಗಿದೆ. ಕರ್ನಾಟಕ, ತಮಿಳು ನಾಡು, ಛತ್ತಿಸ್‌ಗಢ್ ಮುಂತಾದ ರಾಜ್ಯಗಳಲ್ಲಿಯ ಕಿರಿಯ ಪ್ರಾಥಮಿಕ ಶಾಲೆಗಳ ಚಿತ್ರ ನಾವಂದುಕೊಂಡಂತೆ ಇಲ್ಲ. ಇವರುಗಳು ಬಹು ತರಗತಿಗಳ ಹಾಗೂ ಬಹು ಹಂತದ ಚಟುವಟಿಕೆಗಳನ್ನು ಆಧರಿಸಿದ ಕಲಿಕಾ ಕಾರ್ಯಕ್ರಮವನ್ನು ರೂಢಿಸಿಕೊಂಡಿದ್ದಾರೆ. ಇದು ಮಾಂಟೆಸ್ಸರಿ ರೀತಿಯ ಶಿಕ್ಷಣವನ್ನು ಹಲವು ವಿಧದಲ್ಲಿ ಹೋಲುತ್ತದೆ. ಕರ್ನಾಟಕದಲ್ಲಿ ಈ ಕಾರ್ಯಕ್ರಮವನ್ನು ನಲಿ-ಕಲಿ ಎಂದು ಕರೆಯಲಾಗುತ್ತಿದೆ. ಈ ಲೇಖನವು ನಲಿ ಕಲಿ ಶಿಕ್ಷಣದ ನಾಲ್ಕು ವರ್ಷಗಳ ಮೌಲ್ಯಮಾಪನವನ್ನು ಆಧಾರವಾಗಿರಿಸಿಕೊಂಡಿದೆ. ಈ ಮೌಲ್ಯಮಾಪನವನ್ನು ಅಜೀಂ ಪ್ರೇಂಜಿ ಫೌಂಡೇಷನ್ ಮತ್ತು ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ, ಕ್ಯಾಟಲಿಸ್ಟ್ ಮ್ಯಾನೇಜ್‌ಮೆಂಟ್ ಸರ್ವಿಸಸ್‌ನ ಪ್ರೋ. ಅಂಜಿನಿ ಕೊಚಾರ್ ಅವರು ಜೊತೆಯಾಗಿ ನಡೆಸಿದ್ದಾರೆ.

ಶಿಕ್ಷಣದ ನಾಲ್ಕು ವರ್ಷಗಳ ಮೌಲ್ಯಮಾಪನವನ್ನು ಆಧಾರವಾಗಿರಿಸಿಕೊಂಡಿದೆ. ಈ ಮೌಲ್ಯಮಾಪನವನ್ನು ಅಜೀಂ ಪ್ರೇಂಜಿ ಫೌಂಡೇಷನ್ ಮತ್ತು ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ, ಕ್ಯಾಟಲಿಸ್ಟ್ ಮ್ಯಾನೇಜ್‌ಮೆಂಟ್ ಸರ್ವಿಸಸ್‌ನ ಪ್ರೋ. ಅಂಜಿನಿ ಕೊಚಾರ್ ಅವರು ಜೊತೆಯಾಗಿ ನಡೆಸಿದ್ದಾರೆ.

ದೇಶದಾದ್ಯಂತ ಸರ್ಕಾರಿ ಶಾಲೆಗಳು ವಿವಿಧ ಸವಾಲುಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ಒಂದು ಶಿಕ್ಷಕರು ಮತ್ತು ಮಕ್ಕಳ ನಡುವಿನ ಅನುಪಾತ. ಈಗ ದೇಶದಾದ್ಯಂತ ಪ್ರತಿ 30 ಮಕ್ಕಳಿಗೆ ಒಬ್ಬ ಶಿಕ್ಷಕರು ಇರಬೇಕೆಂದು ನಿಗದಿಯಾಗಿದೆ. ಅಲ್ಲದೆ ಪ್ರತಿಯೊಂದು ಜನವಸತಿಯ ಒಂದು ಕಿಲೋ ಮೀಟರ್‌ಗೆ ಒಂದು ಶಾಲೆ ಇರಬೇಕು ಎಂಬ ನಿಯಮ ಕೂಡಾ ಇದೆ. ಅಲ್ಲದೆ ಏಕ ಶಿಕ್ಷಕ ಶಾಲೆಗಳನ್ನು ಆದಷ್ಟು ಕಡಿಮೆ ಮಾಡಲು ಕೂಡಾ ಯೋಚಿಸಲಾಗುತ್ತಿದೆ.

ಈ ನಿಯಮಗಳನ್ನು ಬಹಳಷ್ಟು ಕಾರ್ಯರೂಪಕ್ಕೆ ತಂದಿದ್ದರೂ ಇವು ಹಲವಾರು ವಿಚಿತ್ರ ಸಂದರ್ಭಗಳಿಗೆ ಕಾರಣವಾಗುತ್ತಿವೆ. ಹಲವಾರು ಗ್ರಾಮೀಣ ಶಾಲೆಗಳು ತುಂಬಾ ಚಿಕ್ಕದಿವೆ ಹಾಗೂ ಪ್ರತಿ ಒಂದು ತರಗತಿಗೆ ಒಬ್ಬ ಶಿಕ್ಷಕರನ್ನು ನೇಮಿಸುವಷ್ಟು ಮಕ್ಕಳನ್ನು ಹೊಂದಿಲ್ಲ. ಆದ್ದರಿಂದ ಶಿಕ್ಷಕರು ಹಲವು ತರಗತಿಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಅಲ್ಲದೆ ಕೆಲವು ಕಡೆಗಳಲ್ಲಿ ಮಂಜೂರು ಮಾಡಲಾದ ಹುದ್ದೆಗೆ ಯಾರೂ ಬಂದಿರುವುದು ಕಾಣುತ್ತಿಲ್ಲ, ಆದ್ದರಿಂದ ಒಬ್ಬ ಶಿಕ್ಷಕರೇ ವಿವಿಧ ತರಗತಿಗಳಿಗೆ ಪಾಠ ಮಾಡುವುದು ಅನಿವಾರ್ಯವಾಗಿದೆ. ವಿದ್ಯಾರ್ಥಿಗಳೂ ವಿವಿಧ ಹಂತದ ಕಲಿಕೆಯಲ್ಲಿರುವುದು ಕಂಡುಬಂದಿದೆ. ಈ ಸವಾಲು ಕೇವಲ ಗ್ರಾಮೀಣ ಪ್ರದೇಶದ ಅಥವಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಕಂಡುಬರುತ್ತಿಲ್ಲ. ಇದು ಕಲಿಕೆ ಮತ್ತು ಬೋಧನೆಯಲ್ಲಿ ಹಲವು

ಕಾಲದಿಂದ ನಡೆದುಬಂದಂತಹದ್ದಾಗಿದೆ. ಅದೇನೆ ಇದ್ದರೂ, ಈ ಸಮಸ್ಯೆಯು ಕೆಲವು ಸಮುದಾಯಗಳಲ್ಲಿ ಇನ್ನೂ ಅದ್ವಾನವಾಗಿರಬಹುದು. ಕೆಲವು ಸಮುದಾಯಗಳಲ್ಲಿ ಮಕ್ಕಳು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳ ಕಾರಣದಿಂದಾಗಿ ಶಾಲೆಗೆ ನಿಯಮಿತವಾಗಿ ಹಾಜರಾಗುತ್ತಿರುವುದಿಲ್ಲ. ಅವರು ಬಹಳದಿನಗಳಂದ ತರಗತಿಗೆ ಹಾಜರಾಗದೇ ಇರಬಹುದು ಮತ್ತು ಅವರು ಮರಳ ಬಂದಾಗ ತರಗತಿಯಲ್ಲಿ ಪಾಠ ಪ್ರವಚನ ತುಂಬಾ ಮುಂದೆ ಹೋಗಿದ್ದರೆ. ಇವರು ತಳಬುಡ ಅರ್ಥವಾಗದೆ ಕಷ್ಟಪಡುವಂತಾಗುತ್ತದೆ. ಹಲವಾರು ಮಕ್ಕಳು ಮತ್ತು ಶಾಲೆಗಳಿಗೆ ಹೋಗಿ ಪಾಠ ಕಲಿಯಲು/ಕಲಿಸಲು ಮತ್ತು ನಿಯಮಿತವಾಗಿ ಹಾಜರಾತಿ ಇರುವಂತೆ ನೋಡಿಕೊಳ್ಳಲು ಹೆಚ್ಚಿನ ಅನುಕೂಲ ಇಲ್ಲ. ಆದ್ದರಿಂದ ಶಿಕ್ಷಕರು ಹಲವಾರು ಹಂತದ ಪಾಠವನ್ನು ಮಾಡಬೇಕಾಗುತ್ತದೆ ಜೊತೆಗೆ ವಿವಿಧ ತರಗತಿಗಳಿಗೆ ಕೂಡಾ ಪಾಠ ಮಾಡಬೇಕಾಗಿರುತ್ತದೆ. ಅಂತಿಮವಾಗಿ ಶಾಲೆಗಳು ವಿದ್ಯಾರ್ಥಿಗಳಿಗೆ ಪರಕೀಯ ತಾಣವಾಗಿ ಭಾಸವಾಗುತ್ತದೆ. ವಿದ್ಯಾರ್ಥಿಗಳು, ಅದರಲ್ಲೂ ಕುಟುಂಬದಲ್ಲಿ ಇವರೇ ಶಾಲೆಗೆ ಹೋಗುತ್ತಿರುವ ಮೊದಲ ಪೀಳಿಗೆಯುವರಾದರೆ ವಿದ್ಯಾರ್ಥಿಗಳಿಗೆ ಶಾಲೆಗೆ ಹೋಗಿ ಕಲಿತರೆ ಒಳ್ಳೆಯದು ತಮಗೇ ಅನುಕೂಲ ಎಂದು ಯಾರೂ ಮನವರಿಕೆ ಮಾಡಿಕೊಟ್ಟಿರುವುದಿಲ್ಲ. ಹಾಗಾಗಿ, ಈ ಅಪರಿಚಿತ ಅಸಂಬದ್ಧ, ನಿರಸ, ಕಷ್ಟಕರ ಶಾಲೆಗೆ ಹೋಗಲು ಅವರಲ್ಲಿ ಹುರುಪು ಉತ್ಸಾಹವೇ ಇರುವುದಿಲ್ಲ. ಸಂಶೋಧನೆ ಮತ್ತು ಸಿದ್ಧಾಂತಗಳು ಶಿಫಾರಸ್ಸು ಮಾಡುವ ಪ್ರಕಾರ ಮಕ್ಕಳಿಗೆ ಆಸಕ್ತಿ ಇದ್ದರೆ, ಕಲಿಕೆಗೆ ಸಂಬಂಧಿಸಿದಂತೆ ಅವರಿಗೆ ಅರ್ಥವಾಗುವ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿದರೆ ಅವರು ಚೆನ್ನಾಗಿ ಕಲಿಯುತ್ತಾರೆ.

ಕರ್ನಾಟಕ ಸರ್ಕಾರದ ನಲಿಕಲಿ ಕಾರ್ಯಕ್ರಮವು ಈ ಎಲ್ಲ ವಿವಿಧ ಸವಾಲುಗಳನ್ನು ಎದುರಿಸಲು ಹಾಗೂ ಇವುಗಳಿಗೆ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಕಾರ್ಯಕ್ರಮವನ್ನು 15 ವರ್ಷಗಳ ಹಿಂದೆ ಪ್ರಾಯೋಗಿಕವಾಗಿ ಪ್ರಾರಂಭಿಸಲಾಯಿತು. ಇದು ಋಷಿ ವ್ಯಾಲಿಯ ರಿವರ್ ಪದ್ಧತಿಯನ್ನು ಆಧಾರವಾಗಿರಿಸಿಕೊಂಡಿತ್ತು. ರಾಜ್ಯದಲ್ಲಿ 2009-10ರಲ್ಲಿ ಇದನ್ನು ಇಲ್ಲಿಯ ಕನ್ನಡ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ 1 ಮತ್ತು 2 ನೇ ತರಗತಿಗೆ ವಿಸ್ತರಿಸಲಾಯಿತು. ನಂತರದ ವರ್ಷದಲ್ಲಿ ಇದನ್ನು 3ನೇ ತರಗತಿಗೆ ವಿಸ್ತರಿಸಲಾಯಿತು. ನಲಿ ಕಲಿ ಕಾರ್ಯಕ್ರಮವು ಕೆಲವು ಪ್ರಮುಖ ಗುಣಲಕ್ಷಣಗಳನ್ನು ಹೊಂದಿದೆ. ಮೊಟ್ಟಮೊದಲನೆಯದಾಗಿ, ವಿದ್ಯಾರ್ಥಿಗಳನ್ನು ಗ್ರೇಡ್ ಪ್ರಕಾರ ವಿಂಗಡಿಸಲಾಗುವುದಿಲ್ಲ. ವಿವಿಧ ತರಗತಿಗಳ ವಿದ್ಯಾರ್ಥಿಗಳನ್ನು ಅಂದರೆ 1, 2, 3ನೇ ತರಗತಿಯ ವಿದ್ಯಾರ್ಥಿಗಳನ್ನು ಒಂದೇ ಕೋಣೆಯಲ್ಲಿ ಒಬ್ಬರೇ ಶಿಕ್ಷಕರ ಸುಪರ್ದಿಯಲ್ಲಿ ಕೂರಿಸಲಾಗುವುದು. ಎರಡನೆಯದಾಗಿ, ವಿದ್ಯಾರ್ಥಿಗಳು ತಮ್ಮದೇ ಆದ ವೇಗದಲ್ಲಿ ಕಲಿಯುವ ಅವಕಾಶವನ್ನು ನೀಡಲಾಗುವುದು. ಸಂಪೂರ್ಣ ಶೈಕ್ಷಣಿಕ ಪ್ರಕ್ರಿಯೆಯನ್ನು ವಿವಿಧ ಹಂತಗಳಾಗಿ ವಿಂಗಡಿಸಲಾಗಿದೆ.

ಪ್ರತಿಯೊಂದು ಹಂತವೂ ವಿವಿಧ ನಿರ್ದಿಷ್ಟ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಈ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ವಿವಿಧ ಅಂಶಗಳನ್ನು ಕಲಿಯುತ್ತಾರೆ ಮತ್ತು ಹಂತವನ್ನು ಪೂರೈಸಿ ಮುಂದಿನ ಹಂತಕ್ಕೆ ಹೋಗುತ್ತಾರೆ. ಮೂರನೆಯದಾಗಿ, ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸ-ಲಾಗುತ್ತದೆ. ಒಂದು ಹಂತಕ್ಕೆ ನೀಡಿರುವ ಸಮಯದಲ್ಲಿ ಒಂದು ತರಗತಿಕೋಣೆಯಲ್ಲಿ 5 ರವರೆಗೂ ಗುಂಪುಗಳು ಇರಬಹುದಾಗಿದೆ. ಇವುಗಳ ಮೂಲಕ ವಿದ್ಯಾರ್ಥಿಗಳು ಪರಸ್ಪರ ಸಹಕಾರದ ಮೂಲಕ ಕಲಿಯುತ್ತಾರೆ. ಶಿಕ್ಷಕರು ಒಂದು ಅಥವಾ ಎರಡು ಗುಂಪಿನಲ್ಲಿ ಕಾರ್ಯನಿರ್ವಹಿಸುತ್ತಾರೆ. ಇನ್ನೊಂದು ಗುಂಪಿನಲ್ಲಿರುವ ವಿದ್ಯಾರ್ಥಿಗಳು ಪರಸ್ಪರ ಇತರ ಗುಂಪಿನ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗುತ್ತಾರೆ ಅಥವಾ ಸ್ವತಃ ತಮ್ಮನ್ನು ತಾವು ಮೌಲ್ಯಮಾಪನಕ್ಕೆ ಒಳಪಡಿಸುತ್ತಾರೆ. ಪರಸ್ಪರ ಸಹಕಾರದ ಗುಂಪಿನಲ್ಲಿರುವ ವಿದ್ಯಾರ್ಥಿಗಳು ಬೇರೆ ಬೇರೆ ಹಂತದಲ್ಲಿರುವವರಾಗಿರಬಹುದಾಗಿದೆ ಅಲ್ಲದೆ ಬೇರೆ ಬೇರೆ ತರಗತಿಯವರಾಗಿರಬಹುದಾಗಿದೆ. ಅವರು, ಎಲ್ಲರೂ ಜೊತೆಯಾಗಿ ಸಾಮಾನ್ಯ ಅಂಶದ ಮೇಲೆ ಅಥವಾ ವಿಷಯದ ಮೇಲೆ ಕೆಲಸ ಮಾಡುತ್ತಿರುತ್ತಾರೆ.

ಪ್ರತಿಯೊಬ್ಬ ಮಗುವು ಮಾಡುವ ಚಟುವಟಿಕೆಯೂ ವೈವಿಧ್ಯಮಯವಾಗಿರುತ್ತದೆ ಮತ್ತು ನಿರ್ದಿಷ್ಟವಾದ ಗ್ರೇಡ್ ಮತ್ತು ಹಂತಕ್ಕಾಗಿ ಮಾಡಿರಲಾಗುತ್ತದೆ. ನಾಲ್ಕನೆಯದಾಗಿ, ಈ ಶಿಕ್ಷಣಶಾಸ್ತ್ರದ ಮುಖ್ಯ ಉದ್ದೇಶ, ಕಾರ್ಯದ ಮೂಲಕ ಕಲಿಕೆಯಾಗಿದೆ. ನಲಿಕಲಿ ತರಗತಿಗಳಲ್ಲಿ ಪಠ್ಯಪುಸ್ತಕಗಳ ಪಾತ್ರ ತುಂಬಾ ಕಡಿಮೆಯಾಗಿರುತ್ತದೆ ಮತ್ತು ಪುಸ್ತಕಗಳನ್ನು ಇಲ್ಲಿ ಪುನರಾವರ್ತನೆಗೆ ಮತ್ತು ಓದಿನ ಕಲಿಕೆಗಾಗಿ ಬಳಸಲಾಗುತ್ತದೆ. ಕಲಿಕಾ ಏಣಿಯಲ್ಲಿ ಮುಂದಿನ ಹಂತಕ್ಕೆ ಹೋಗಲು ಅಗತ್ಯವಾದ ಚಟುವಟಿಕೆಗಳನ್ನು ಕುರಿತ ವಿವರಗಳನ್ನು ಕಾರ್ಡ್‌ನಲ್ಲಿ ವಿವರಿಸಲಾಗಿರುತ್ತದೆ. ಈ ಚಟುವಟಿಕೆಗಳನ್ನು ವಿದ್ಯಾರ್ಥಿಯೆ ಸ್ವಯಂಪ್ರೇರಣೆಯಿಂದ ಮಾಡುವಂತೆ ನಿರೀಕ್ಷಿಸಲಾಗಿರುತ್ತದೆ.

ಮಕ್ಕಳ ಕಲಿಕೆಯಲ್ಲಿ ನಲಿಕಲಿ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಪರೀಕ್ಷಿಸಲು ನಾವು ನಾಲ್ಕು ವರ್ಷಗಳ

ಸಂಶೋಧನೆಯನ್ನು ಮಾಡಿದ್ದೇವೆ. ಅಲ್ಲದೆ ಇದರಲ್ಲಿ ಗ್ರಹಿಕೆಯೇತರ ಫಲಿತಾಂಶಗಳನ್ನು ಅಂದರೆ ಸಾಮಾಜಿಕ ಕೌಶಲ್ಯ, ಸಂವಹನ, ನಾಯಕತ್ವದ ಗುಣ ಮುಂತಾದವುಗಳ ಮೇಲೆ ಇದರ ಪರಿಣಾಮವನ್ನು ಕೂಡಾ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಲಾಯಿತು. ನಾವು ಈ ಎಲ್ಲ ಪರಿಣಾಮಗಳನ್ನು ಉಂಟುಮಾಡಲು ಅಗತ್ಯವಾಗಿರುವ ತರಗತಿಯ ಪ್ರಕ್ರಿಯೆಯನ್ನು ಕೂಡಾ ಅಧ್ಯಯನ ಮಾಡುವುದರ ಜೊತೆಗೆ ಶಿಕ್ಷಕರು ಈ ಕಾರ್ಯಕ್ರಮವನ್ನು ಹೇಗೆ ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಅಧ್ಯಯನ ಮಾಡಿದ್ದೇವೆ. ಇದರ ಫಲಿತಾಂಶಗಳು ತೋರ್ಪಡಿಸಿರುವಂತೆ ಇದು ವಿದ್ಯಾರ್ಥಿಗಳು ಟೆಸ್ಟ್‌ನಲ್ಲಿ ಪಡೆಯುವ ಸ್ಕೋರ್ ಅನ್ನು ಹೆಚ್ಚಿಸಿದೆ. ಅದರಲ್ಲೂ ಭಾಷಾ ವಿಷಯದಲ್ಲಿ ಇದರ ಪರಿಣಾಮ ಹೆಚ್ಚಾಗಿರುವುದು ಕಂಡುಬಂದಿದೆ. ಇದು ವಿದ್ಯಾರ್ಥಿಗಳು ಮೇಲಿನ ತರಗತಿಯಲ್ಲಿದ್ದಾಗ ಕೆಳಗಿನ ತರಗತಿಯ ಪಠ್ಯವನ್ನು ಕರಗತ ಮಾಡಿಕೊಳ್ಳುವ ಅಂಶವನ್ನು ಆಧಾರವಾಗಿರಿಸಿ-ಕೊಂಡಿರುತ್ತದೆ. ನಾಯಕತ್ವ ಗುಣದ ಮೇಲೆ ಗಮನಾರ್ಹ ಉತ್ತಮ ಪರಿಣಾಮವನ್ನು ಇದು ಉಂಟು ಮಾಡಿರುವುದು ಕಂಡುಬಂದಿದೆ.

ಇದು ಉತ್ತಮ ಫಲಿತಾಂಶವಾಗಿದ್ದು, ಅದರಲ್ಲೂ ಈ ಶಾಲೆಗಳಲ್ಲಿ ಕಲಿಕಾ ಸಾಮರ್ಥ್ಯ ಕಡಿಮೆ ಇದ್ದ ಮಕ್ಕಳ ಮೇಲೆ ಇದು ಅತ್ಯುತ್ತಮ ಪರಿಣಾಮವನ್ನು ಬೀರಿದೆ. ತರಗತಿಯ ಅವಲೋಕನಗಳು ಮತ್ತು ಶಿಕ್ಷಕರ ಜೊತೆಗಿನ ಮಾತುಕತೆಯಿಂದ ಹೆಚ್ಚಿನ ಎಲ್ಲ ಶಾಲೆಗಳಲ್ಲೂ ಪ್ರಾಥಮಿಕ ಅಂಶಗಳು ಸರಿಯಾದ ಸ್ಥಿತಿಯಲ್ಲಿ ಇರುವುದು ಕಂಡುಬಂದಿದೆ. ಅಂದರೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತರಗತಿಗಳನ್ನು ಆಯೋಜಿಸುವ ಹೊಸ ರೀತಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧದ ಕುರಿತು ಹೊಸ ದೃಷ್ಟಿಕೋನಕ್ಕೆ ಹೊಂದಿಕೊಂಡಿದ್ದಾರೆ ಎಂಬುದು ಇದರಿಂದ ತಿಳಿದುಬರುತ್ತದೆ. ವಿದ್ಯಾರ್ಥಿಗಳು ತಮ್ಮ ಪ್ರಸ್ತುತ ಹಂತವನ್ನು ಹಾಗೂ ತಾವು ತರಗತಿಯಲ್ಲಿ ಮಾಡಬೇಕಾದ ಚಟುವಟಿಕೆಗಳನ್ನು, ತಾವು ಸೇರಬೇಕಾದ ಗುಂಪನ್ನು ಸೇರಿಕೊಳ್ಳುವುದನ್ನು ಕಲಿತುಕೊಂಡಿದ್ದಾರೆ. ಇದು ಕಲಿಕೆಯಲ್ಲಿ ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳುತ್ತಿರುವುದು ಹಾಗೂ ಈ ಚಟುವಟಿಕೆಯಲ್ಲಿ ತಮ್ಮ ಪಾಲುಗಾರಿಕೆಯನ್ನು ಕಂಡುಕೊಂಡಿರುವುದನ್ನು ತಿಳಿಸುತ್ತದೆ. ಶಿಕ್ಷಕರೂ ಕೂಡಾ ಈ ಕಾರ್ಯಕ್ರಮವನ್ನು ಕುರಿತು ಸಾಮಾನ್ಯವಾದ ಜ್ಞಾನ, ಇದು ಹೇಗೆ ಕಾರ್ಯನಿರ್ವಹಿಸುತ್ತದೆ ಹಾಗೂ ಇದರ ಪ್ರಮುಖ ಅಂಶಗಳು ಯಾವುವು ಎಂಬುದರ ಕುರಿತು ಉತ್ತಮ ಮಟ್ಟದ ಜ್ಞಾನವನ್ನು ತೋರ್ಪಡಿಸಿರುವುದು ಕಂಡುಬಂದಿದೆ. ಅದೇನೆ ಇದ್ದರೂ ನಲಿ ಕಲಿ ಕಾರ್ಯಕ್ರಮದಲ್ಲಿ ಶಿಕ್ಷಕರ ಪಾತ್ರವು ಸೀಮಿತವಾಗಿರುತ್ತದೆ.

ಶಿಕ್ಷಕರು ಕೇವಲ ಒಂದು ಅಥವಾ ಎರಡು ಗುಂಪುಗಳ ಜೊತೆಗೆ ಮಾತ್ರ ಹತ್ತಿರದಿಂದ ಕಾರ್ಯನಿರ್ವಹಿಸುತ್ತಾರೆ. ಉಳಿದಂತೆ ಇತರೆ ಗುಂಪುಗಳ ಚಟುವಟಿಕೆಗಳ ಕುರಿತು ನಿಗಾ ವಹಿಸುವುದಷ್ಟೆ ಇವರ ಕೆಲಸ. ಶಿಕ್ಷಕರು ಹಿಂದಿನಂತೆ ಪಠ್ಯಪುಸ್ತಕದಲ್ಲಿಯ ಅಂಶಗಳ ಕುರಿತು ಹೆಚ್ಚು ಗಮನವಹಿಸಬೇಕಾಗಿಲ್ಲ ಏಕೆಂದರೆ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಗುರಿಯಾಗಿರಿಸಿಕೊಂಡಿರುತ್ತವೆ. ಅಂದರೆ




ಉಳಿದ ಅಂಶಗಳ ಜೊತೆಗೆ ಶಿಕ್ಷಕರು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರೆಯುವ ಅವಧಿಯು ತುಂಬಾ ಕಡಿಮೆಯಾಗಿರುತ್ತದೆ. ಈ ಸಮಯದ ಅಭಾವವನ್ನು ವಿದ್ಯಾರ್ಥಿಗಳ ಸ್ವಕಲಿಕೆಯ ಮುಖಾಂತರ ನೀಗಿಸಿಕೊಳ್ಳಲಾಗುತ್ತದೆ. ಅದೇನೆ ಇದ್ದರೂ ಕೂಡಾ ನಮ್ಮ ಸಂಶೋಧನೆಯು ಕಂಡುಕೊಂಡಿರುವ ಪ್ರಕಾರ 20ಶೇ ಪರಸ್ಪರ ಸಹಾಯದ ಕಲಿಕೆಯ ಗುಂಪಿನಲ್ಲಿ ಕಡಿಮೆ ಪ್ರಮಾಣದಲ್ಲಿ ಪರಸ್ಪರ ಚರ್ಚೆಗಳು ಕಂಡುಬಂದಿದೆ. ಒಂದು ವೇಳೆ ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಮಾತನಾಡದಿದ್ದರೂ ಕೂಡಾ ಪರಸ್ಪರ ಕಲಿಯುತ್ತಾರೆಯೇ? ಅಥವಾ ಈ ಕಲಿಕೆಯಲ್ಲಿ ನೀಡಲಾಗುವ ಪರಿಕರಗಳು ಮತ್ತು ಶಿಕ್ಷಕರಿಗೆ ನೀಡಲಾಗುವ ತರಬೇತಿಯು ಇವೆರಡರಲ್ಲಿ ಯಾವುದು ಹೆಚ್ಚಿನ ಪ್ರಮಾಣದ ಕೌಶಲ್ಯವನ್ನು ಮಕ್ಕಳಲ್ಲಿ ಬೆಳೆಸಲು ಕಾರಣವಾಗುತ್ತದೆ ? ನಲಿ ಕಲಿಯಲ್ಲಿ ಉಪಯೋಗಿಸಲಾಗುವ ಸ್ವಯಂ ನಿರ್ಧಾರದ ಕಲಿಕೆ ಮತ್ತು ಪರಸ್ಪರ ಸಹಾಯದ ಕಲಿಕೆಯು ನಲಿಕಲಿಯ ಪ್ರಮುಖ ವಿಧಾನವಾಗಿದ್ದು ಇದನ್ನು ಇನ್ನೂ ಸೈದ್ಧಾಂತಿಕಗೊಳಿಸ-ಬೇಕಾಗಿದೆ. ಅಲ್ಲದೆ ಈ ಕಾರ್ಯಕ್ರಮದಲ್ಲಿ ಇನ್ನೂ ಕೆಲವು ವೈರುಧ್ಯದ ಅಂಶಗಳಿವೆ ಉದಾಹರಣೆಗೆ ಈ ರೀತಿಯ ಕಲಿಕೆಯಲ್ಲಿ ಪರಸ್ಪರ ಸಹಾಯದಿಂದ ಕಲಿಯುವ ಎಲ್ಲರೂ ಒಂದೇ ಸಮಯಕ್ಕೆ ಕೊನೆಯ ಹಂತವನ್ನು ತಲುಪುತ್ತಾರೆ.

ಇದು ಒಂದು ಗಮನಾರ್ಹ ಪ್ರಶ್ನೆಯನ್ನು ನಮ್ಮಲ್ಲಿ ಉಂಟು ಮಾಡುತ್ತದೆ. ಅಂದರೆ ನಲಿ ಕಲಿ ಶಿಕ್ಷಣವು ಮಕ್ಕಳಿಗೆ ಯಾವ ನಿಟ್ಟಿನಲ್ಲಿ ತರಬೇತಿ ನೀಡುತ್ತಿದೆ ? ಮುಕ್ತವಾದ ಶಾಲೆಯು ಸ್ನೇಹಿತರ ಜೊತೆಗೆ ಬೆರೆಯಲು ಹೆಚ್ಚು ಸಹಾಯ ನೀಡುತ್ತಿದ್ದು ಶಾಲಾ ವಾತಾವರಣದಲ್ಲಿ ಗಲಾಟೆಯ ವಾತಾವರಣಕ್ಕೆ ಕಾರಣವಾಗದೇ ಇರುವಂತೆ ನೋಡಿಕೊಳ್ಳುವುದು ಮುಖ್ಯವಲ್ಲವೆ. ವಿದ್ಯಾರ್ಥಿಗಳು ಪ್ರಾರಂಭದ 3 ವರ್ಷಗಳಲ್ಲಿ ಸಾಮಾನ್ಯವಾದ ಜ್ಞಾನವನ್ನು ಭಾಷೆ ಮತ್ತು ಗಣಿತ ವಿಷಯದಲ್ಲಿ ಪಡೆದುಕೊಳ್ಳುತ್ತಾರೆ. ಆದರೆ ನಲಿ ಕಲಿಯು 4 ಮತ್ತು 5 ನೇ ತರಗತಿಯಲ್ಲಿ ಸಾಂಪ್ರದಾಯಿಕ ತರಗತಿಯಲ್ಲಿ ಕಲಿಕೆಯನ್ನು ಮಾಡಲು ಸಹಾಯಕವಾಗುವಂತೆ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುತ್ತಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ನಲಿ ಕಲಿ ಕಲಿಕೆಯಲ್ಲಿ ಶಿಕ್ಷಕರ ಪಾತ್ರವನ್ನು ಕುರಿತು ನಾವು ಗಹನವಾಗಿ ಯೋಚಿಸ-ಬೇಕಾಗಿದೆ. ಹಾಗೂ ಶಿಕ್ಷಕರು ತಮ್ಮ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಮಂಜಸವಾದ ಉಪಕರಣಗಳನ್ನು ಪೂರೈಸುವ ನಲಿ ಬಗ್ಗೆ ಕಲಿಯನ್ನು ಸಂಪೂರ್ಣವಾಗಿ ಜಾರಿಗೆ ತರುವ ಮೊದಲು ಯೋಚಿಸಬೇಕಾಗಿದೆ.

**ಸಾರಾಂಶ :**

ಕರ್ನಾಟಕದಲ್ಲಿ ಇರುವ ನಲಿ ಕಲಿ ಶಿಕ್ಷಣ ಪ್ರಕಾರವು ಚಟುವಟಿಕೆ ಮತ್ತು ವಿವಿಧ ಗ್ರೇಡ್ ಹಾಗೂ ವಿವಿಧ ಹಂತಗಳನ್ನು ಒಳಗೊಂಡಿರುವಂತದ್ದಾಗಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಕುರಿತು ತಾವೇ ಜವಾಬ್ದಾರಿಯನ್ನು ಹೊಂದಿರುತ್ತಾರೆ ಹಾಗೂ ತಮ್ಮ ಅನುಕೂಲಕ್ಕೆ ತಕ್ಕಂತೆ ಇದರ ಕುರಿತು ಕಾರ್ಯಚಟುವಟಿಕೆಯನ್ನು ಕೈಗೊಳ್ಳುತ್ತಿರುತ್ತಾರೆ. ಇಲ್ಲಿ ಮಕ್ಕಳ ಕೌಶಲ್ಯದಲ್ಲಿ ಅಭಿವೃದ್ಧಿ ಕಂಡುಬಂದರೂ ಕೂಡಾ ಅದು ಸೀಮಿತವಾಗಿದೆ. ಪರಸ್ಪರ ಸಹಾಯದ ಮೂಲಕ ಮಾಡಲಾಗುವ ಕಲಿಕೆಯು ಉತ್ತಮವಾಗಿ ನಡೆಯುತ್ತಿಲ್ಲ ಹಾಗೂ ಅದು ಹೇಗೆ ಕಾರ್ಯನಿರ್ವಹಿಸಬೇಕೋ ಹಾಗೆ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ.



**ನಮಿತಾ** ಅವರು ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ, ಶೈಕ್ಷಣಿಕ ನೀತಿ ಮತ್ತು ಸಂಶೋಧನೆಯ ಬೋಧಕರಾಗಿದ್ದಾರೆ. ಇವರು ಪುಟಾಣಿ ಮಕ್ಕಳ ಶಿಕ್ಷಣ MGML ಮತ್ತು ಶೈಕ್ಷಣಿಕ ಭಾಗವಹಿಸುವಿಕೆಯಲ್ಲಿ ನಿರ್ಧಾರಕಾಂಶಗಳು ಮುಂತಾದ ನೀತಿ ಸಂಬಂಧಿತ ವಿಷಯಗಳ ದೀರ್ಘಕಾಲೀನ ಸಂಶೋಧನೆ ಯಲ್ಲಿ ಭಾಗವಹಿಸಿದ್ದಾರೆ. ಅವರನ್ನು namita@azimpremjifoundation.org ನಲ್ಲಿ ಸಂಪರ್ಕಿಸಬಹುದು.



# ಶಾಲೆಗಳಲ್ಲಿ ಸಾಮರ್ಥ್ಯ ವರ್ಧನೆಯ ವಾತಾವರಣ ಸೃಷ್ಟಿ

## ಉಷಾ ಅಶ್ವಥ್ ಅಯ್ಯರ್ ಜತೆ ಸಂದರ್ಶನ

ನಿವೇದಿತಾ ಬೆಡದೂರ್



**ಶ್ರೀಮತಿ ಉಷಾ ಅಶ್ವಥ್ ಅಯ್ಯರ್** ಅವರು ಭುವನೇಶ್ವರದಲ್ಲಿರುವ ಶಿಕ್ಷಣ ಮತ್ತು ತರಬೇತಿಯ ವಲಯ ಸಂಸ್ಥೆಯ (ಝಡ್‌ಐಇಟಿ) ನಿರ್ದೇಶಕಿ ಹಾಗೂ ಉಪ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸ್ನಾತಕೋತ್ತರ ಶಿಕ್ಷಕಿ, ಪ್ರಾಂಶುಪಾಲೆಯಾಗಿ ಮತ್ತು ಶಿಕ್ಷಕರ ಪ್ರಶಿಕ್ಷಕಿಯಾಗಿ ಅವರದು ಬಹು ದೊಡ್ಡ ಅನುಭವ. ಮಾಸ್ಕೋದ ಕೇಂದ್ರೀಯ ವಿದ್ಯಾಲಯದಲ್ಲಿ ಉಷಾ ಅವರು ಆಫ್ರಿಕಾದಿಂದ ಹಿಡಿದು ಆಗ್ನೇಯ ರಾಷ್ಟ್ರಗಳವರೆಗೆ ವಿವಿಧೆಡೆಯಿಂದ ಬಂದಿದ್ದ ಮಿಶ್ರ ಸಾಮರ್ಥ್ಯದ ವಿದ್ಯಾರ್ಥಿಗಳ ಗುಂಪುಗಳಿಗೆ ಕಲಿಸಿದ್ದಾರೆ. ಕೇಂದ್ರೀಯ ವಿದ್ಯಾಲಯ, ಕ್ಯಾಲಿಕಟ್ ಹಾಗೂ ಕೇಂದ್ರೀಯ ವಿದ್ಯಾಲಯ, ನಂ 2 ಲೋಹೆಗಾಂವ್‌ನಲ್ಲಿ ಸಮನ್ವಯ ವಿಧಾನಗಳನ್ನು ಪರಿಚಯಿಸುವಲ್ಲಿ ಅವರು ಮೊದಲಿಗರಾಗಿದ್ದಾರೆ.

ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಹಾಗೂ ಬೋಧನಾ ಕಲೆಯಲ್ಲಿ ವಿಶೇಷ ತಜ್ಞೆಯಾಗಿರುವ ನಿವೇದಿತಾ ಬೆಡದೂರ್, ಕೇಂದ್ರೀಯ ವಿದ್ಯಾಲಯ ಸಂಘಟನೆಗಳಲ್ಲಿ ಉಷಾ ಅಯ್ಯರ್ ಅವರು ನಡೆಸುವ ಕೆಲಸಗಳಲ್ಲಿ ಸಹಭಾಗಿಗಳಾಗಿದ್ದಾರೆ.

ನಿವೇದಿತಾ (ನಿ): ಶಾಲೆಗಳಲ್ಲಿ ವಿಶೇಷ ಮಕ್ಕಳಿಗೆ ಕಲಿಕೆಗೆ ಸಾಮರ್ಥ್ಯ ವರ್ಧನೆಯ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ನಿಮ್ಮ ಅನುಭವ ಏನು? ಒಬ್ಬ ಶಿಕ್ಷಕಿ ಮತ್ತು ಪ್ರಾಂಶುಪಾಲೆಯಾಗಿ ಇದನ್ನು ನಿರ್ವಹಿಸಲು ನಿಮಗೆ ಯಾವುದಾದರೂ ವಿಶೇಷ ಅರಿವು, ತರಬೇತಿ ಅಥವಾ ಕಾರ್ಯನೀತಿಯ ಅಗತ್ಯವಿದೆಯೇ?

ಉಷಾ(ಉ): ನಾನು ಕೆಲಸ ಮಾಡಿದ ಶಾಲೆಗಳಲ್ಲಿ ವಿಶೇಷ ಅಗತ್ಯವಿರುವ ಮಕ್ಕಳು ತೀರಾ ಕಡಿಮೆ ಇದ್ದರು. ನನ್ನ ವೃತ್ತಿಯ ಆರಂಭದ ದಿನಗಳಲ್ಲಿ ಭೌತಿಕ ಪರಿಸರಕ್ಕೆ ಸಂಬಂಧಿಸಿದ ಅವರ ಸಮಸ್ಯೆಗಳನ್ನು ನನಗಿದ್ದ ಸಾಮಾನ್ಯ ಜ್ಞಾನದೊಂದಿಗೆ ಪರಿಹರಿಸಲು ಪ್ರಯತ್ನಿಸುತ್ತಿದ್ದೆ. ಶಿಕ್ಷಕರಿಗಾಗಲೀ, ಆಡಳಿತ ಸಿಬ್ಬಂದಿಗಾಗಲೀ ಈ ಬಗ್ಗೆ ಯಾವುದೇ ತರಬೇತಿ ಇರುತ್ತಿರಲಿಲ್ಲ. ಅಂಥ ಮಕ್ಕಳಿಗೆ ನೆರವು ನೀಡಿ, ಅವರು ಬದುಕು ಮತ್ತು ಕಲಿಕೆಯ ಅನುಭವ ಪಥದಲ್ಲಿ ದೃಢವಾಗಿ ಚಲಿಸುತ್ತಾ ಸಂತಸದಿಂದ ಕಲಿಯುವಂತೆ ಮಾಡಲು ತಂದೆತಾಯಿಗಳಿಗಷ್ಟೇ ಅಲ್ಲ; ಶಿಕ್ಷಕರು ಹಾಗೂ ಪ್ರಾಂಶುಪಾಲರೂ ಸುಸಂವೇದನೆಯನ್ನು ಹೊಂದಿರಬೇಕಲ್ಲದೆ ಆ ಬಗ್ಗೆ ಅವರಿಗೆ ತಿಳುವಳಿಕೆಯ ಸಲಹೆ ಬೇಕಾಗುತ್ತದೆ.

ನಿವೇದಿತಾ: ಮಗುವಾಗಿದ್ದಾಗ ನಾನೂ ಸೇರಿದಂತೆ ಎಲ್ಲ ಮಕ್ಕಳಿಗೂ ಒಂದಲ್ಲ ಒಂದು ಬಗೆಯಲ್ಲಿ ಬೆಂಬಲ ಬೇಕು ಎಂದು ನಾನು ಭಾವಿಸುತ್ತೇನೆ. ಶಾಲೆಯಲ್ಲಿದ್ದಾಗ ಗಣಿತ ಅಂದರೆ ನನಗೆ ಎಷ್ಟು ಭಯವಿತ್ತೆಂದರೆ, ಯಾವುದೇ ಲೆಕ್ಕ ಮಾಡಬಲ್ಲೆನು ಎಂದು ನಾನು ನಂಬಿರಲಿಲ್ಲ.

ಉಷಾ: ನನ್ನದೂ ಅದೇ ಅನುಭವ. ಆದರೆ ಅದನ್ನು ಶಿಕ್ಷಕ ಅಥವಾ ಪ್ರಾಂಶುಪಾಲರಾಗಿ ನಾವು ಯೋಚನೆ ಮಾಡುತ್ತೇವೆಯೇ? ಅದರಲ್ಲೂ, ಶಾಲಾ ತಪಾಸಣೆ ಸಮಯದಲ್ಲಿ ಶಿಕ್ಷಕರು ಒಂದು ಮಗು ಉತ್ತರ ಹೇಳುವ

ಸಾಮರ್ಥ್ಯವನ್ನು 'ಆಕೆ/ ಆತ ಕಲಿಕೆಯಲ್ಲಿ ನಿಧಾನ' ಎಂದು ಹೇಳಿ ಮುಗಿಸಿಬಿಡುವುದನ್ನು ನಾನು ದ್ವೇಷಿಸುತ್ತೇನೆ. ಅಚ್ಚರಿಯ ವಿಷಯವೆಂದರೆ, ಅಥವಾ ಅಚ್ಚರಿ ಮೂಡಿಸದ ಸಂಗತಿ ಎಂದರೆ, ಎರಡನೇ ತರಗತಿ ಅಥವಾ ಅದಕ್ಕಿಂತ ಮೇಲಿನ ತರಗತಿಯಲ್ಲಿ ಯಾರು ನಿಧಾನವಾಗಿ ಕಲಿಯುತ್ತಾರೆ ಎಂಬುದು ವಿದ್ಯಾರ್ಥಿಗಳಿಗೂ ಗೊತ್ತಾಗಿರುತ್ತದೆ! ಆ ಮಗುವಿಗೆ ನೆರವಾಗುವುದು ತಮ್ಮ ಕರ್ತವ್ಯ ಎಂದು ಯಾವ ಶಿಕ್ಷಕನಿಗೂ ಅನಿಸುವುದಿಲ್ಲ. ತರಗತಿಯಲ್ಲಿರುವ ಶಿಕ್ಷಕ ಒಂದು ಬಗೆಯಲ್ಲಿ ಪಾಲಕ ಇದ್ದಂತೆ. ತನ್ನ ಮಗುವನ್ನು ಕುರಿತ ಟೀಕೆ, ದಾಳಿ ಅಥವಾ ಬೈಗುಳವನ್ನು ಹೇಗೆ ಪಾಲಕರು ಪ್ರತಿಭಟಿಸುತ್ತಾರೋ, ಹಾಗೆಯೇ ಶಿಕ್ಷಕರೂ ಸಹಜವಾಗಿ ತಕ್ಷಣವೇ ಪ್ರತಿಕ್ರಿಯೆ ನೀಡಿ ಆ ಮಗುವಿನ ಸಮಸ್ಯೆಯನ್ನು ಪರಿಹರಿಸಲು ಎಲ್ಲ ಅವಕಾಶವನ್ನು ಕಲ್ಪಿಸಿಕೊಡಬೇಕು.

**ನಿವೇದಿತಾ: ಸಾಮರ್ಥ್ಯ ವರ್ಧನೆಯ ವಾತಾವರಣ ಸೃಷ್ಟಿಸುವಲ್ಲಿ ಮೂಲಭೂತ ಸೌಲಭ್ಯಗಳು ಯಾವ ಪಾತ್ರ ವಹಿಸುತ್ತವೆ?**

ಉಷಾ: ಹೌದು, ಕಲಿಕಾ ವಾತಾವರಣ ಸೃಷ್ಟಿಸುವಲ್ಲಿ ಮೂಲಭೂತ ಸೌಕರ್ಯಗಳು ಬಹು ಮಹತ್ವದ ಪಾತ್ರವನ್ನು ವಹಿಸುತ್ತವೆ. ಬಹುತೇಕ ಶಾಲೆಗಳಲ್ಲಿ ಆಸನ ವ್ಯವಸ್ಥೆಯದೇ ದೊಡ್ಡ ಸಮಸ್ಯೆಯಾಗಿದ್ದು, ಪೀಠೋಪಕರಣಗಳು ಹೆಚ್ಚು ತೂಕವಿರುತ್ತವೆ ಹಾಗೂ ಆರಾಮದಾಯಕ ಆಗಿರುವುದಿಲ್ಲ ಎಲ್ಲೆಡೆ ಒಂದೇ ತರಹದ ಮಾನಕ ಪೀಠೋಪಕರಣ ನೀಡಿದಾಗ ವಿವಿಧ ವಯೋಮಾನದ ಮಕ್ಕಳಿಗೆ ಅನುಕೂಲವಾಗುವಂಥ, ಆಯಾ ಮಕ್ಕಳಿಗೆ ಹಾಗೂ ವಾತಾವರಣಕ್ಕೆ ಪೂರಕವಾಗಿರದ ಪೀಠೋಪಕರಣ ಅಲ್ಲಿರುತ್ತವೆ. ಇದೇನೇ ಇದ್ದರೂ ಭಾವನಾತ್ಮಕ ಸಂಬಂಧ ಹಾಗೂ ವ್ಯವಹಾರ ಜ್ಞಾನ ಪೀಠೋಪಕರಣಕ್ಕೂ ಮಿಗಿಲಾದದ್ದು.

ಶಿಕ್ಷಕರೊಬ್ಬರು, ಕಪ್ಪುಹಲಗೆ (ಬ್ಲ್ಯಾಕ್ ಬೋರ್ಡ್) ಪಕ್ಕದಲ್ಲಿ ಇರುವ ಜಾಗದಲ್ಲಿ ಒಂದು ಚಾಪೆ ಹಾಸಿ ಒಂದಷ್ಟು ಪತ್ರಿಕೆಗಳನ್ನು ತೂಗುಹಾಕಿ ತಾತ್ಕಾಲಿಕ ಗ್ರಂಥಾಲಯ ಕಲ್ಪಿಸಿದ್ದರು. ಸಮಯ ಸಿಕ್ಕಾಗ ಆ ಸಂಪನ್ಮೂಲ ಬಳಸಿಕೊಳ್ಳಲು ಮಕ್ಕಳಿಗೆ ತಿಳಿಸಿದ್ದರು. ನಾನು ಹೇಳುತ್ತಿರುವುದು ಎರಡನೇ ತರಗತಿಯ ಕೊಠಡಿಯಲ್ಲಿ (ಆರರಿಂದ ಏಳು ವರ್ಷ ವಯಸ್ಸಿನ ಮಕ್ಕಳ ತರಗತಿ). ನಾನು ಒಮ್ಮೆ ಆ ಕಡೆ ಪರಿಶೀಲನೆಗೆಂದು ಹೋಗಿದ್ದಾಗ ಅಲ್ಲಿ ಶಿಕ್ಷಕರು ಇರದೇ ಹೋದರೂ ವಿದ್ಯಾರ್ಥಿಗಳು ತಮ್ಮ ಪಾಡಿಗೆ ತಾವು ಯಾವುದೋ ಕೆಲಸದಲ್ಲಿ ನಿರತವಾಗಿದ್ದರು.ಇಬ್ಬರು ವಿದ್ಯಾರ್ಥಿಗಳು ಇನ್ನಿಬ್ಬರಿಗೆ ಅಂದಿನ ಓದನ್ನು ಕಲಿಸುತ್ತಿದ್ದುದು ಕಂಡುಬಂತು.

ಶಿಕ್ಷಕಿಯಾಗಿ ನನಗೆ ನೆನಪಿಗೆ ಬರುವುದು ನನ್ನ ವಿದ್ಯಾರ್ಥಿ ಅಶುತೋಷ್. ಆತ ವಿಜ್ಞಾನ ವಿಷಯದಲ್ಲಿ ಬಹಳ ಜಾಣನಾಗಿದ್ದ. ಆತ ಊರುಗೋಲು ಬಳಸುತ್ತಿದ್ದುದರಿಂದ, ಅತ್ತಿತ್ತ ಓಡಾಡುವುದು ಅವನಿಗೆ ಬಹಳ ಕಷ್ಟವಾಗುತಿತ್ತು. ಆದರೆ ಆತ ಉತ್ಸಾಹದಿಂದ ಕಲಿಕೆಯಲ್ಲಿ ಪಾಲ್ಗೊಂಡು, ಕಪ್ಪುಹಲಗೆ ಮೇಲೆ ಬರೆಯಲು ಮುಂದಾಗುತ್ತಿದ್ದ. ನಾವೆಲ್ಲರೂ ಆತನನ್ನು ಹುರಿದುಂಬಿಸುತ್ತಿದ್ದೆವು. ಒಂದು ದಿನ ತಪಾಸಣೆಯ ಸಮಯದಲ್ಲಿ ಆತ ಎದ್ದು ನಿಲ್ಲದೇ ಉತ್ತರ ನೀಡಿದ. ಇದರಿಂದ ಶಿಕ್ಷಣಾಧಿಕಾರಿಗೆ ಕೋಪ ಬಂತು.ತರಗತಿಯಲ್ಲೇ ಆ ಬಗ್ಗೆ ಆಕ್ಷೇಪ ಎತ್ತಿದ್ದೇ ಅಲ್ಲದೆ ನನ್ನ ತಪಾಸಣಾ ವರದಿಯಲ್ಲಿ ಅವರು ಇದನ್ನು ನಮೂದಿಸಿದರು. ಅಶುತೋಷ್ ಅಂಗವಿಕಲನಾಗಿದ್ದು ತಕ್ಷಣವೇ ಎದ್ದು ನಿಲ್ಲಲು ಆಗುವುದಿಲ್ಲ ಎಂಬುದನ್ನು ಶಿಕ್ಷಣಾಧಿಕಾರಿಗೆ ತಿಳಿಸಲು ನನಗೆ ತುಂಬಾ ಮುಜುಗರ ಅನಿಸಿತು.

**ನಿವೇದಿತಾ: ಸಾಮರ್ಥ್ಯವರ್ಧನೆ ವಾತಾವರಣ ನಿರ್ಮಿಸುವಲ್ಲಿ ಮುಖ್ಯ ಅಥವಾ ಅತಿ ದೊಡ್ಡ ಸವಾಲು ಯಾವುದು: ಪ್ರತಿ ಮಗುವನ್ನೂ ಗೌರವಿಸುವುದು ಮತ್ತು ಬೆಲೆ ನೀಡುವುದು, ಅವರು ಹೇಳುವುದನ್ನು ಕೇಳುವುದು ಹಾಗೂ ಕಲಿಕೆ ಮತ್ತು ಮುಕ್ತತೆ?**

ಉಷಾ: ನಾನು ನಂಬುವುದು ಬಹು ಮುಖ್ಯವಾಗಿ, ಪ್ರತಿ ಮಗುವನ್ನೂ ಗೌರವಿಸಿ, ಆ ಮಗುವಿಗೆ ಬೆಲೆ ನೀಡಿ ಎಂಬುದನ್ನು. ನಿಜಕ್ಕೂ ಒಂದು ದೊಡ್ಡ ಸವಾಲೆಂದರೆ ನಮಗಿಂತ ಭಿನ್ನವಾದವರನ್ನು ನಾವು ಯಾಕೆ ವಿಭಿನ್ನವಾಗಿ ಪರಿಗಣಿಸುತ್ತೇವೆ ಎಂಬುದನ್ನು ಜನರು ವಿಶ್ಲೇಷಿಸಬೇಕು. ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಭಿನ್ನವಾಗಿರುವುದರಿಂದಲೇ ಅಥವಾ ಸಾಮರ್ಥ್ಯದಿಂದ ಭಿನ್ನವಾಗಿರುವುದರಿಂದಲೇ? ನಮ್ಮ ವರ್ತನೆಗೆ ಸಾಂಸ್ಕೃತಿಕ ಬೇರುಗಳಿವೆ. ಸಾಮಾಜಿಕ ಧೋರಣೆಗಳಿಂದು ರೂಢಿಸಿಕೊಂಡು ಬಂದಿರುವ ಪೂರ್ವಗ್ರಹಗಳನ್ನು ತೆರೆದ ಮನಸ್ಸಿನಿಂದ ಬದಲಾಯಿಸುವುದು ನಿಜಕ್ಕೂ ದೊಡ್ಡ ಸವಾಲು. ಹಾಗಿದ್ದರೂ ಇಂಥ ಬದಲಾವಣೆ ಸಂಭವಿಸುವಾಗ ಕೆಲವೊಂದು ಸಲ ಹೃದಯಸ್ಪರ್ಶಿ ಘಟನೆಗಳು ನಡೆಯುತ್ತವೆ.

ನಮ್ಮ ಶಾಲೆಯೊಂದರಲ್ಲಿ ಶಿಕ್ಷಕಿಯೊಬ್ಬರು ನಿಧಾನ ಕಲಿಕೆಯ ಮಕ್ಕಳನ್ನು ಉಳಿದವರಂತೆ ಮಾಡಲು ತಮ್ಮದೇ ಆದ ವಿಧಾನವನ್ನು ಕಂಡುಕೊಂಡಿದ್ದರು. ಇಂಗ್ಲಿಷ್ ಗಂಧವೇ ಇಲ್ಲದೇ ಹೋದರೂ ಹೇಗೋ ಮಾಡಿ ಐದನೇ ತರಗತಿವರೆಗೆ ಬಂದಿದ್ದ ನಾಲ್ಕೈದು ಮಕ್ಕಳು ಅಲ್ಲಿದ್ದರು. ಅವರನ್ನು ಅಷ್ಟಕ್ಕೇ ಬಿಟ್ಟು ಉಳಿದವರಿಗೆ ಕಲಿಸಲು ಆ ಶಿಕ್ಷಕಿಗೆ ಇಷ್ಟವಿರಲಿಲ್ಲ. ಅದಕ್ಕೆ ಆ ಶಿಕ್ಷಕಿ ಒಂದು ವಿಧಾನ ಅನುಸರಿಸಿದರು. ಅದೆಂದರೆ, ಅವರಿಗೆ ಒಂದನೇ ತರಗತಿಯ ಪಠ್ಯಪುಸ್ತಕದಿಂದ ಇಂಗ್ಲಿಷ್ ಕಲಿಸುವುದು. ಬಳಿಕ ಎರಡನೇ, ಹಾಗೂ ಮೂರನೇ ತರಗತಿ ಪುಸ್ತಕ ಕಲಿಸುವುದು. ಅದರಿಂದ ಆದ ಬದಲಾವಣೆ ಪವಾಡದಂತೆ ಕಂಡಿತು. ಸದಾ ಯಾಕೆ ನೀನು ಇಂಗ್ಲಿಷ್ ಮಾತಾಡೋಲ್ಲ ಎಂಬುದನ್ನು

ಕೇಳುತ್ತಿದ್ದ ಮಕ್ಕಳು ನೋಡ್ದಾ ಎಷ್ಟು ಚೆನ್ನಾಗಿ ಮಾತಾಡ್ತೆ ಎಂಬುದನ್ನು ಕೇಳಿ ಖುಷಿ ಪಡಲಾರಂಭಿಸಿದರು.

ಮಕ್ಕಳು ಹೇಳುವುದನ್ನು ಕೇಳಿರಿ ಮತ್ತು ಕಲಿಯಿರಿ – ಇದು ಬದಲಾವಣೆ ಮಾಡಲು ಬಹಳ ಕಷ್ಟವಾದ ಮತ್ತೊಂದು ಧೋರಣೆ. ಯಾಕೆಂದರೆ ದೊಡ್ಡವರು ತಮಗೆ ಎಲ್ಲಾ ಗೊತ್ತಿದೆ ಹಾಗೂ ಮಕ್ಕಳಿಗೇನಿದ್ದರೂ ತಮ್ಮ ಆದೇಶ ಮಾಡಿ ಕೆಲಸಮಾಡಿಸಬೇಕು ಎಂದು ತಿಳಿದಿರುತ್ತಾರೆ. ಮಕ್ಕಳು ಪ್ರಶ್ನೆ ಕೇಳುವುದಕ್ಕೆ ನಾವು ಸಾಕಷ್ಟು ಅವಕಾಶವನ್ನು ಕೊಡುವುದೇ ಇಲ್ಲ. ಒಂಬತ್ತನೇ ತರಗತಿಯ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದ ಸಂದರ್ಭ ನನಗೆ ನೆನಪಾಗುತ್ತದೆ. ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಅವರು ಕೇಳಿದ ಪ್ರಶ್ನೆಗಳನ್ನು ನೋಡಿ ನನಗೆ ಅಚ್ಚರಿಯಾಯಿತು. ಪಾಲಕರಿಗೆ ಒಬ್ಬಳೇ ಮಗಳು ಇದ್ದರೆ, ಆಕೆಗೆ ಉಚಿತ ಶಿಕ್ಷಣ ಕೊಡುವ ನೀತಿಯೊಂದು ಕೇಂದ್ರೀಯ ವಿದ್ಯಾಲಯದಲ್ಲಿದೆ. ಪಾಲಕರಿಗೆ ಇರುವ ಏಕೈಕ ಮಗಳಿಗೆ ಉಚಿತ ಶಿಕ್ಷಣ ಕೊಡುವ ಯೋಜನೆಗಿಂತಲೂ ಪಾಲಕರಿಗೆ ಗಂಡುಮಕ್ಕಳೊಂದಿಗೆ ಒಬ್ಬಳೇ ಮಗಳಿದ್ದರೆ ಆಕೆಗೆ ಉಚಿತ ಶಿಕ್ಷಣ ಕೊಡುವುದು ಉತ್ತಮ ಎಂದು ಬಾಲಕನೊಬ್ಬ ಅಭಿಪ್ರಾಯಪಟ್ಟಿದ್ದನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ಒಬ್ಬಳೇ ಮಗಳಿದ್ದರೆ, ಬೇರೆ ಯಾರ ಜೊತೆಯಲ್ಲೂ ಹೋಲಿಸ–ಬೇಕಾಗಿಲ್ಲವಾದ್ದರಿಂದ ಆಕೆಯ ಪಾಲಕರು ಆಕೆಯನ್ನು ಹೆಚ್ಚೆಚ್ಚು ಮುತುವರ್ಜಿ ವಹಿಸಿ ನೋಡಿಕೊಳ್ಳುತ್ತಾರೆ ಎಂದೂ ಆತ ಹೇಳಿದ್ದ.

**ನಿವೇದಿತಾ: ಪ್ರಾಂಶುಪಾಲೆಯಾಗಿ 10 ವರ್ಷಗಳ ಸುದೀರ್ಘ ಅವಧಿಯಲ್ಲಿ, ಶಿಕ್ಷಕರ ಮನೋಭಾವದಲ್ಲಿ ಬದಲಾವಣೆ ತರಲು ಮತ್ತು ಪೂರ್ವಗ್ರಹಗಳನ್ನು ಮೆಚ್ಚುಗೆಯಾಗಿ ಬದಲಾಯಿಸಲು ಹಲವು ಕ್ರಮ ತೆಗೆದುಕೊಂಡಿದ್ದೀರಿ. ಆ ಅನುಭವಗಳ ಬಗ್ಗೆ ಒಂದಷ್ಟು ಹೇಳಿ.**

ಉಷಾ: ಪುಣೆಯ ಕೇಂದ್ರೀಯ ವಿದ್ಯಾಲಯದ ಅಭಯ್ ಎಂಬ ಬಾಲಕನ ಬಗ್ಗೆ ನೆನಪಿದೆಯಲ್ಲವೇ? ಆಗ ಆತ 5ನೇ ತರಗತಿಯಲ್ಲಿ ಇದ್ದ. ನಾನು ನಿಯಮಿತದಂತೆ ತಪಾಸಣೆಗೆ ಹೋದಾಗ, ಆತನ ತರಗತಿಯಲ್ಲಿ ಇಂಗ್ಲಿಷ್ ಕ್ಲಾಸ್ ನಡೆಯುತ್ತಿತ್ತು. ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಒಂದಷ್ಟು ಹುಡುಗರು ಉತ್ತರಿಸುತ್ತಿದ್ದರು. ಒಂದು ಸಲ ಅಭಯ್ ಕೈಯೆತ್ತಿ, ಸರಿಯಾಗಿ ಉತ್ತರಿಸಿದ. ಆತನ ಉತ್ತರ ಹಿಂದಿ ಭಾಷೆಯಲ್ಲಿ ಇತ್ತು. ಪ್ರಶ್ನೆ ಏನಾಗಿತ್ತೆಂದರೆ, ಬೇಸಿಗೆ ಸಮಯದಲ್ಲಿ ನಿಮ್ಮನ್ನು ನೀವು ತಂಪಾಗಿಟ್ಟುಕೊಳ್ಳಲು ಏನು ಮಾಡುತ್ತೀರಿ? ಏರ್ ಕಂಡೀಷನ್, ಫ್ಯಾನ್, ಕೂಲರ್ ಇಟ್ಟುಕೊಳ್ಳಬೇಕು ಎಂಬಂಥ ಉತ್ತರಗಳ ಮಧ್ಯೆ ಆತ 'ಡೂಬ್‌ಕಿಲಗಾನಾ' (ನೀರಲ್ಲಿ ಮುಳುಗೇಳುವುದು) ಎಂದು ಹೇಳಿದ್ದ. ಬಡತನದ ಕುಟುಂಬದಿಂದ ಬಂದಿದ್ದ ಅಭಯ್, ಬಹುಶಃ ಕೊಳಗೇರಿ ನಿವಾಸಿಯಾಗಿದ್ದನೆಂದು ಕಾಣುತ್ತದೆ. ನೀರಿನ ಕೊಳದಲ್ಲಿ – ಅದು ಯಾವುದೇ ನೀರು ಆಗಿರಬಹುದು – ಮುಳುಗುವ ಮೂಲಕ ಶರೀರವನ್ನು ತಂಪು ಮಾಡಿಕೊಳ್ಳಬಹುದು ಎಂಬುದು ಆತನ ಉತ್ತರ. ನಮ್ಮ ಅನೇಕ ವಿದ್ಯಾರ್ಥಿಗಳ ಉತ್ತರವೂ ಅದೇ ಆಗಿರುತ್ತದೆ. ಈಜುಕೊಳವನ್ನು ಎಷ್ಟು ಜನ ಬಳಸಬಲ್ಲರು? ಆದರೆ ಶಿಕ್ಷಕರ ಪ್ರತಿಕ್ರಿಯೆ 'ಸುಮ್ಮನೇ ಕೂಡು' ಎಂಬುದಾಗಿತ್ತು. ಆಗ ನಾನು ಮಧ್ಯೆ ಪ್ರವೇಶಿಸಬೇಕಾಯಿತು. ನಾನು ನೀಡಿದ ಉತ್ತೇಜನದಿಂದ, ಆತ ಇನ್ನಷ್ಟು ಉತ್ತರಗಳನ್ನು ಹುಡುಕಿ ಕೊಡತೊಡಗಿದ.

ಇನ್ನೊಂದು ಪ್ರಶ್ನೆಗೆ ಅವನು ಐಸ್ಕಾಗೋಲ್ಲ ಎಂದ ಅದನ್ನೂ ನಾನು ಸಂತೋಷದಿಂದ ಸ್ವೀಕರಿಸಿದೆ ಆ ಬಳಿಕ ಅಭಯ್ ನಮ್ಮೆಲ್ಲರ ಮೆಚ್ಚಿನ ವಿದ್ಯಾರ್ಥಿಯಾಗಿ ರೂಪುಗೊಂಡ.

ದೈಹಿಕವಾಗಿ ಅಸಮರ್ಥರಾದ ವಿದ್ಯಾರ್ಥಿಗಳಿಗೆ ವಿಶೇಷ ಅಗತ್ಯ ಇರುತ್ತದೆ ಹಾಗೂ ಅದರ ಕಡೆಗೆ ನಾವೆಲ್ಲ ಹೆಚ್ಚು ಗಮನ ಹರಿಸುವುದಿಲ್ಲ ಎಂಬುದನ್ನು ನಾನು ಪ್ರಾಂಶುಪಾಲೆಯಾದ ಬಳಿಕವೇ ಅರಿತುಕೊಂಡೆ. ಹತ್ತನೇ ತರಗತಿಯಲ್ಲಿದ್ದ ಒಬ್ಬ ಬಾಲಕಿಯು ಕಿವುಡಿಯಾಗಿದ್ದಳು. ಶ್ರವಣ ಸಾಧನವನ್ನು ಆಕೆ ಹಾಕಿಕೊಳ್ಳುತ್ತಿರಲಿಲ್ಲ. ಅದಕ್ಕೆ ಕಾರಣ – ಎರಡು ತರಗತಿಗಳ ಮಧ್ಯೆ ಸಹಪಾಠಿಗಳ ಗದ್ದಲ ಹೆಚ್ಚಾಗಿ, ಅದು ಆಕೆಗೆ ಅಸಹನೀಯ ಅನಿಸುವಂತೆ ಮಾಡುತ್ತಿತ್ತು. ನಾನು ಆಕೆಯ ಶಿಕ್ಷಕರ ಜತೆ ಚರ್ಚೆ ನಡೆಸಿದೆ. ಸಿದ್ಧಪಡಿಸಿದ್ದ ನೋಟ್ಸ್‌ಗಳನ್ನು ಆಕೆಗೆ ಕೊಟ್ಟು, ಅವುಗಳನ್ನು ಅಭ್ಯಾಸ ಮಾಡುವಂತೆ ಸೂಚಿಸಿದೆವು. ಆಕೆಗೆಂದೇ ಕೆಲವು ವರ್ಕ್ ಶೀಟ್ ಸಿದ್ಧಪಡಿಸಿ ಕೊಟ್ಟೆವು.

ಇನ್ನೊಂದು ಘಟನೆ. ಕ್ಯಾಲಿಕಟ್ ಶಾಲೆಯಲ್ಲಿ ಹುಡುಗಿ–ಯೊಬ್ಬಳು ಇದ್ದಳು. ಆಕೆಗೆ ನಡೆಯಲು ಬರುತ್ತಿರಲಿಲ್ಲ. ಸಾಮಾನ್ಯವಾಗಿ ಭಾರತದಲ್ಲಿ ಬಳಸುವ ಶೌಚಾಲಯವನ್ನು ಬಳಸಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ ಎಂಬುದು ನನಗೆ ಗೊತ್ತಾಗಲು ಒಂದು ವರ್ಷ ತೆಗೆದುಕೊಂಡಿತು. ನಾನು ಸಿಪಿಡಬ್ಲ್ಯೂಡಿ ಸಂಪರ್ಕಿಸಿ, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಬೇಕಾದ ಶೌಚಾಲಯ ನಿರ್ಮಿಸುವಲ್ಲಿ ಸಫಲಳಾದೆ. ಇದಕ್ಕೆಲ್ಲ ವಿದ್ಯಾಲಯದ ವ್ಯವಸ್ಥಾಪಕ ಸಮಿತಿ ಬೆಂಬಲ ನೀಡಿತು.

**ನಿವೇದಿತಾ: ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವಲ್ಲಿ ಶಿಕ್ಷಕಿ, ಪ್ರಾಂಶುಪಾಲೆ ಹಾಗೂ ಶಿಕ್ಷಕರ ತರಬೇತುದಾರರಾಗಿ ನೀವು ನಿರ್ವಹಿಸಿದ ಪಾತ್ರಗಳಲ್ಲಿ ವ್ಯತ್ಯಾಸವೇನು?**

ಉಷಾ: ಶಿಕ್ಷಕಿಯಾಗಿ ನಾನು ಎಲ್ಲ ವಿದ್ಯಾರ್ಥಿಗಳಿಗೂ ಬೆಂಬಲ ನೀಡುತ್ತೇನೆ ಹಾಗೂ ನನ್ನ ಸ್ನೇಹ ಸ್ವಭಾವ ಅವರಿಗೆ ಉಲ್ಲಾಸ ಕೊಡುತ್ತದೆ. ಅವರಿಗೆಂದೇ ನಾನು ವಿಶೇಷವಾದದ್ದೇನೂ ಮಾಡಿಲ್ಲ ಎಂದು ನಾನು ಭಾವಿಸುತ್ತೇನೆ. ಪ್ರಾಂಶುಪಾಲೆಯಾಗಿ



ಕೆಲವೊಂದಷ್ಟು ಬದಲಾವಣೆಗಳನ್ನು ಅಗತ್ಯವಿದ್ದಲ್ಲಿ ಸುಲಭವಾಗಿ ಮಾಡಿದ್ದೇನೆ. ಅದು ತರಗತಿ ಕೊಠಡಿ-ಯಾಗಿರಬಹುದು, ವಿಶೇಷ ಶೌಚಾಲಯ ಆಗಿರಬಹುದು ಅಥವಾ ಎಲ್ಲ ಮಕ್ಕಳಿಗೆ ಸಿಗುವಂತೆ ಪುಸ್ತಕಗಳನ್ನು ಇಡುವ ವ್ಯವಸ್ಥೆ ಆಗಿರಬಹುದು. ಶಿಕ್ಷಕ ತರಬೇತುದಾರಳಾಗಿ ಶಾಲೆಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಲು ಕಾರ್ಯಾಗಾರ ಏರ್ಪಡಿಸಿದ್ದೇನೆ. ಅದೇನೇ ಇದ್ದರೂ, ನಾನು ನೀತಿ ನಿರೂಪಣೆಯಲ್ಲಿ ನೇರವಾದ ನಿಯಂತ್ರಣ ಹೊಂದಿಲ್ಲ.

**ನಿವೇದಿತಾ: ಸಮುದಾಯದ ಗೈರುಹಾಜರಿಯಲ್ಲಿ ಹಿಂಸೆ, ಜಗಳ ಹಾಗೂ ಬೈಗುಳದ ಮಧ್ಯೆಯೇ ಎಲ್ಲ ಮಕ್ಕಳಿಗೆ ಕಲಿಕಾ ವಾತಾವರಣ ಸೃಷ್ಟಿ ಮಾಡುವುದು ಸುಲಭ ಅನಿಸಿದೆಯೇ?**

ಉಷಾ: ಹೌದು. ಒಂಬತ್ತನೇ ತರಗತಿಯಲ್ಲಿ ಒಬ್ಬ ಹುಡುಗ ಓದುತ್ತಿದ್ದರೂ ಆತನಲ್ಲಿ ಆರನೇ ತರಗತಿ ಬಾಲಕನ ಮುಗ್ಧತೆಯಿತ್ತು. ಆತನಿಗೆ ಸೆರೆಬ್ರಲ್ ಪಾಲ್ಸಿ ಇದ್ದುದರಿಂದ, ಆತ ಕೊಂಚ ಸೊಟ್ಟಗೆ ಕುಳತುಕೊಳ್ಳುತ್ತಿದ್ದ. ಆತ ಸರಿಯಾಗಿ ಕುಳಿತುಕೊಳ್ಳುವಂತೆ ತರಗತಿಯಲ್ಲಿ ಶಿಕ್ಷಕ ಪದೇ ಪದೇ ತಾಕೀತು ಮಾಡುತ್ತಿದ್ದರು. ನನ್ನ ಕೋಪವನ್ನು ಆತ ಅರ್ಥ ಮಾಡಿಕೊಳ್ಳುತ್ತಿರಲಿಲ್ಲ. ಆ ಶಿಕ್ಷಕನ ಈ ಧೋರಣೆಯು ಉಳಿದ ಮಕ್ಕಳ ಮೇಲೂ ಆಗುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? ಆ ಮಗು ಉಳಿದ ಸಹಪಾಠಿಗಳಿಂದ ಅಂಥದೇ ವರ್ತನೆಗೆ ಈಡಾಗುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ?

**ನಿವೇದಿತಾ: ಕಲಿಕಾ ವಾತಾವರಣ ಸೃಷ್ಟಿಸಲು ಒಂದು ಶಾಲೆಯ ನೀತಿಯನ್ನು ನೀವು ನಿರೂಪಿಸುವ ಅಧಿಕಾರ ನಿಮಗೆ ಸಿಕ್ಕರೆ, ಏನು ಮಾಡುತ್ತೀರಿ?**

ಉಷಾ: ಶೈಕ್ಷಣಿಕ ನೀತಿಗಳು, ಅಗತ್ಯತೆಗಳು, ವಿಧಾನಗಳು ಹಾಗೂ ವಿವಿಧ ಪಾಲುದಾರಿಕೆ ಸಹಭಾಗಿಗಳ ಜತೆ ಜಾಗೃತಿ ಕ್ರಮಗಳನ್ನು ವಿವಿಧ ಹಿತಾಸಕ್ತಿದಾರರಿಗೆ ಮನವರಿಕೆ ಮಾಡಿಸಬೇಕು. ವಿಶೇಷ ಸಾಮರ್ಥ್ಯವುಳ್ಳ ಮಕ್ಕಳು ಎದುರಿಸುವ ಸಮಸ್ಯೆಗಳನ್ನು ಕುರಿತು ನಿಗದಿತವಾಗಿ ಚರ್ಚೆಗಳನ್ನು ನಡೆಸಿ, ಅವುಗಳಿಗೆ ಪರಿಹಾರ ಕಂಡುಕೊಳ್ಳ-ಬೇಕು. ಬಿ.ಇಡಿ. ಓದುವವರಿಗೆ ವಿಶೇಷ ಶಿಕ್ಷಕರ ಭಾಗ ಇರಬೇಕು. ಅಗತ್ಯವುಳ್ಳ ಮಕ್ಕಳಿಗೆ ಶಿಕ್ಷಕರು ಹೇಗೆ ನೆರವಾಗಬೇಕು ಎಂಬುದನ್ನು ತಿಳಿಸಿಕೊಡಲು ವಿಶೇಷ ಶಿಕ್ಷಕರ ಹುದ್ದೆಯೊಂದನ್ನು ಪ್ರತಿ ಶಾಲೆಯೂ ಹೊಂದಿರಬೇಕು.

ಎಸ್‌ಡಿಎಂಸಿ ಅಥವಾ ಪಿಡಿಎಯಂಥ ಶಾಲಾ ಮಂಡಳಿಗಳಲ್ಲಿ ವಿದ್ಯಾರ್ಥಿಗಳ ಪರಿಷತ್ತು, ವಿದ್ಯಾರ್ಥಿಗಳ ಪ್ರಾತಿನಿಧಿಕವು ವಿದ್ಯಾರ್ಥಿಗಳ ಧ್ವನಿ ಆಲಿಸಲು ನೆರವಾಗುತ್ತದೆ. ಮೌಲ್ಯಯುತ ಶಿಕ್ಷಣ, ಧರ್ಮ, ಮಹಾನ್ ನಾಯಕರ ಜೀವನಗಾಥೆಗಳು

ಮಕ್ಕಳ ಮೇಲೆ ಪರಿಣಾಮ ಉಂಟು ಮಾಡುತ್ತವೆ. ಹೌದು... ಪ್ರತಿ ಮಗುವಿನ ವಿಶೇಷತೆಯನ್ನು ಗುರುತಿಸಿ, ಗೌರವಿಸುವುದು ಹಾಗೂ ಆಧುನಿಕ ಜಗತ್ತಿಗೆ ಬೇಕಾಗುವ ಕೌಶಲ್ಯ ಹಾಗೂ ಪ್ರತಿಭೆಯನ್ನು ಹೊಂದಲು ನೆರವು ನೀಡುವುದರಲ್ಲಿ ಪಾಲಕರು, ಶಿಕ್ಷಕರು ಹಾಗೂ ಮಕ್ಕಳಲ್ಲಿ ಜಾಗೃತಿ ಉಂಟು ಮಾಡಬೇಕು.

ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ, ಸಮಾಜದಲ್ಲಾಗಲಿ ಅಂಕ ಸೂಚಿಸುವ ರಿಪೋರ್ಟ್ ಕಾರ್ಡ್ ಹೋಲಿಕೆ ಮತ್ತು ಕೀಳರಿಮೆ ಭಾವನೆಗೆ ಎಡೆಮಾಡಿಕೊಡುವುದರಿಂದ ರಿಪೋರ್ಟ್ ಕಾರ್ಡ್ ಆ ಮಗುವಿನ ಕೇವಲ ಮೌಖಿಕ ಹಾಗೂ ಸಕಾರಾತ್ಮಕ ಅಂಶಗಳನ್ನು ಮಾತ್ರ ಪರಿಗಣಿಸುವುದು ಹಾಗೂ ಹೋಲಿಕೆ ಮಾಡಬಹುದಾದ ಅಂಕಿಗಳ ಮಾರ್ಕ್ಸ್ ಕೊಡದೇ ಇರುವ ನೀತಿಯನ್ನು ನಾನು ಸ್ವಾಗತಿಸುತ್ತೇನೆ.

(ಈ ಲೇಖನದಲ್ಲಿ ಹೇಳಲಾದ ಮಕ್ಕಳ ಹೆಸರುಗಳನ್ನು ಬದಲಾಯಿಸಲಾಗಿದೆ.)





**ನಿವೇದಿತಾ ಬೆಡದೂರ್** ಅವರು ಪ್ರಸ್ತುತ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಸಂಪನ್ಮೂಲ ಕೇಂದ್ರದಲ್ಲಿ ಅಕೆಡೆಮಿಕ್ಸ್ ಮತ್ತು ಪೆಡಗೋಜಿ ವಿಭಾಗದಲ್ಲಿ ವಿಶೇಷಜ್ಞರಾಗಿ ಕೆಲಸ ಮಾಡುತ್ತಿದ್ದಾರೆ.ಭಾಷೆ ಕಲಿಕೆಯಲ್ಲಿ ಮೊಬೈಲ್ ಗಳ ಬಳಕೆ ಕುರಿತ ಸಂಶೋಧನೆಯಲ್ಲಿ ಇವರು ಆಸಕ್ತರಾಗಿದ್ದಾರೆ. ಎಸ್ ಎಂ ಎಸ್ ಮತ್ತು ಭಾಷಾ ಕಲಿಕೆ ಕುರಿತು ಕೆಲವೊಂದು ಪ್ರಯೋಗಗಳನ್ನು ಮಾಡಿದ್ದಾರೆ. ಆ ಬಗ್ಗೆ ಒಂದು ಸಂಶೋಧನಾ ಪತ್ರಿಕೆಯನ್ನು ಬ್ರಿಟಿಷ್ ಕೌನ್ಸಿಲ್ ನವರು ಪ್ರಕಟಿಸಿದ Continuing Professional Development: Lessons from India ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. 29 ವರ್ಷಗಳ ಕಾಲ ಭಾರತದ ಕೇಂದ್ರೀಯ ವಿದ್ಯಾಲಯಗಳು ಮತ್ತು ವಿದೇಶದಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಇಂಗ್ಲಿಷ್ ಬೋಧನೆಯ ಅನುಭವ ಇವರಿಗಿದೆ.ತಮ್ಮ ಸೇವಾವಧಿಯಲ್ಲಿ ಇವರು ಕೇಂದ್ರೀಯ ವಿದ್ಯಾಲಯಗಳಲ್ಲಿ ಮತ್ತು ಒಂದು ಖಾಸಗಿ CBSE ಶಾಲೆಯಲ್ಲಿ ಉಪಪ್ರಾಂಶುಪಾಲರು ಮತ್ತು ಪ್ರಾಂಶುಪಾಲರಾಗಿ ಕೆಲಸ ಮಾಡಿದ್ದಾರೆ. ಕಠ್ಮಂಡುವಿನ ಕೇಂದ್ರೀಯ ವಿದ್ಯಾಲಯದಲ್ಲಿ ಉಪಾಧ್ಯಾಯರಾಗಿದ್ದಾಗ ಶಿಕ್ಷಕರಿಗೆ ಪ್ರೋತ್ಸಾಹಕ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಇವರನ್ನು nivedita@azimpremjifoundation.org ನಲ್ಲಿ ಸಂಪರ್ಕಿಸಬಹುದು.

# ಧೋರಣೆಯಲ್ಲಿ ಬದಲಾವಣೆ

## ಅರುಣ್ ವಿ. ಪ್ರಸಾದ್

> **ಇತರರ ಬಗ್ಗೆ ನಮಗೆ ಕಿರಿಕಿರಿಯುಂಟು ಮಾಡುವ ಎಲ್ಲವೂ ನಮ್ಮನ್ನು ನಾವು ಅರಿತುಕೊಳ್ಳಲು ನಮಗೆ ಸಹಾಯ ಮಾಡುತ್ತದೆ**
>
> – ಕಾರ್ಲ್ ಯೂಂಗ್

ಯೂಂಗ್ ಅವರ ಈ ವಾಕ್ಯದ ಪ್ರಕಾರ, ಜೀವನ ಹಲವು ರೀತಿಯಲ್ಲಿ ನಮಗೆ ಸವಾಲನ್ನು ಹಾಕುತ್ತದೆ ಹಾಗೂ ನಮ್ಮನ್ನು ನಾವು ಕಂಡುಕೊಳ್ಳಲು ಇದು ಸಹಾಯ ಮಾಡುತ್ತದೆ. ಇದನ್ನು ವಿವರವಾಗಿ ತಿಳಿದುಕೊಳ್ಳಲು ಒಂದು ಪ್ರಕರಣವನ್ನು ಉದಾಹರಣೆಯಾಗಿ ನಾವು ತೆಗೆದುಕೊಳ್ಳೋಣ.

ಉಧಾಮ್‌ಸಿಂಗ್ ನಗರದಲ್ಲಿರುವ ಅಜೀಂ ಪ್ರೇಂಜಿ ಶಾಲೆಯಲ್ಲಿದ್ದ 15 ಜನ ಹದಿಹರೆಯದವರ ಜೀವನದಲ್ಲಿ 9 ವರ್ಷದ ಒಂದು ಮಗುವಿನ ಪ್ರವೇಶವಾಗುತ್ತದೆ. ಶಾಲೆಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಮಗುವಿನ ನಡತೆಯನ್ನು ಕುರಿತ ಅಂಶಗಳು ಈ ರೀತಿ ಇವೆ –

- ಶಾಲೆಯ ಕುರಿತಾದ ಹಾಗೂ ಇದರ ಅಗತ್ಯತೆ, ಇದು ಬೇಡುವ ಅಂಶಗಳ ಕುರಿತಾಗಿ ತೀರಾ ಕಡಿಮೆ ವಿಷಯ ಅವಳಿಗೆ ತಿಳಿದಿತ್ತು.
- ವೈದ್ಯಕೀಯವಾಗಿ ಈ ಮಗುವು ಅತ್ಯಂತ ಕಡಿಮೆ ಪ್ರಮಾಣದ ಐಕ್ಯೂ ಹಂತವನ್ನು ಹೊಂದಿತ್ತು.

ಈ ಮಗುವನ್ನು ಆರ್‌ಟಿಇ ನಿಯಮದ ಪ್ರಕಾರ ಶಾಲೆಗೆ ಸೇರ್ಪಡೆ ಮಾಡಿಕೊಳ್ಳಲಾಗಿತ್ತು. ಸ್ವಲ್ಪ ಸಮಯದಲ್ಲೇ ಎಲ್ಲರಿಗೂ ಮಗುವಿನ ಬಗ್ಗೆ ತಿಳಿದ ಅಂಶವೆಂದರೆ

- ಶಾಲಾ ನಿಯಮಗಳು, ಶಾಲೆ ಅವಳಿಂದ ಬಯಸುವ ಪ್ರತಿಕ್ರಿಯೆ ಮತ್ತು ದಿನಚರಿಯ ಅಂಶಗಳ ಬಗ್ಗೆ ಅವಳಿಗೆ ಯಾವುದೇ ಗಮನವಿರಲಿಲ್ಲ.
- ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿ ಮತ್ತು ನಡತೆಯಲ್ಲಿಯೂ ಕೂಡಾ ಸಮಸ್ಯೆಯನ್ನು ಹೊಂದಿದ್ದಳು.
- ಗೆಳೆಯರೊಂದಿಗಿನ ಅವಳ ವರ್ತನೆ ಕೂಡಾ ಅಷ್ಟೊಂದು ಉತ್ತಮವಾಗಿರಲಿಲ್ಲ
- ಪ್ರಚೋದನೆಗಳು ಅತಿಯಾಗಿದ್ದವು.
- ಕೆಲವೊಮ್ಮೆ ಆಕ್ರಮಣಕಾರಿ ವರ್ತನೆಯನ್ನು ತೋರ್ಪಡಿಸುತ್ತಿದ್ದಳು.
- ಒಂದೇ ಕಡೆ ಕುಳಿತುಕೊಳ್ಳುವುದಿಲ್ಲ.
- ಇತರರಿಂದ ವಸ್ತುಗಳನ್ನು ಕಸಿದುಕೊಳ್ಳುತ್ತಿದ್ದಳು.
- ಅವಳಿಗೆ ಅನಿಸಿದ್ದಲ್ಲೆಲ್ಲ ಮಲಗುತ್ತಿದ್ದಳು ಮತ್ತು ಅವಳು ಶುಚಿತ್ವದ ಬಗ್ಗೆ ಸರಿಯಾದ ತರಬೇತಿಯನ್ನು ಹೊಂದಿರಲಿಲ್ಲ
- ಅವಳಿಗೆ ಪದೇ ಪದೇ ಒಂದು ವಿಷಯದ ಬಗ್ಗೆ ಸೂಚನೆಯನ್ನು ಮತ್ತು ಪುನರ್ಬಲನ (ಪ್ರೇರೇಪಣೆ)ವನ್ನು ನೀಡಬೇಕಾಗುತ್ತಿತ್ತು ಮತ್ತು ನೀಡಿದ ಸೂಚನೆಯನ್ನು ಅರ್ಥ ಮಾಡಿಕೊಳ್ಳುವಂತೆ ಮಾಡಬೇಕಾಗುತ್ತಿತ್ತು.

ಕಿಶೋರಾವಸ್ಥೆಯಲ್ಲಿ ನಾವು ಏನನ್ನಾದರೂ 'ಕಲಿಯಲು' (ಶೈಕ್ಷಣಿಕ ಅಂಶಗಳನ್ನು ಓದಲು), ಮಕ್ಕಳ ಬೆಳವಣಿಗೆಯ ಹಂತವನ್ನು ಲಘುವಾಗಿ ಪರಿಗಣಿಸುತ್ತೇವೆ. ಅಲ್ಲದೆ ಕಲಿಯಲು ಹೆಚ್ಚು ಸಮಯ ತೆಗೆದುಕೊಳ್ಳುವ ಅಥವಾ ವಿಭಿನ್ನ

ಸಾಮರ್ಥ್ಯವನ್ನು ಹೊಂದಿರುವ ಮಕ್ಕಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಮಗು ಇತರರಿಗಿಂತ ಭಿನ್ನವಾಗಿದ್ದರೆ ಏನಾಯ್ತು ? ಅವನು ಅಥವಾ ಅವಳು ಕಲಿಯುವ ರೀತಿಯಲ್ಲಿ ಇಲ್ಲವೆ ಮಗುವು ಸ್ವತಂತ್ರವಾಗಿರು-ವಂತೆ ಬೆಳೆಸಲು ಸಾಧ್ಯವಾಗುವಂತಹ ರೀತಿಯಲ್ಲಿ ಶಿಕ್ಷಣ ನೀಡುತ್ತೇವೆಯೇ ? ಹಾಗಾದರೆ ಪ್ರತಿಯೊಂದು ಶಾಲೆಯಲ್ಲಿಯೂ ಕೂಡಾ ವಿಶೇಷ ಶಿಕ್ಷಕರು ಇರುವುದು ಅಗತ್ಯವಾಗುತ್ತದೆ; ಅದೇನೆ ಇದ್ದರೂ ಕೂಡಾ ಸತ್ಯವು ಅದಕ್ಕಿಂತ ತುಂಬಾ ಭಿನ್ನವಾಗಿದೆ. 'ಸಾಮಾನ್ಯ' ಮಕ್ಕಳಿಗೆ ಶಿಕ್ಷಣ ನೀಡುವ ಶಿಕ್ಷಕರು ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ಶಿಕ್ಷಣ ನೀಡಲಿ ಎಂದುಕೊಳ್ಳಲಾಗುತ್ತದೆ. ಆದರೆ ಸಾಮಾನ್ಯವಾಗಿ ಅವರಿಗೆ ಈ ಕುರಿತು ಯಾವುದೇ ಅನುಭವ ಇರುವುದಿಲ್ಲ ಅಲ್ಲದೆ ಈ ರೀತಿಯ ಮಕ್ಕಳನ್ನು ನಿರ್ವಹಿಸುವಲ್ಲಿ ಹದಿವಯಸ್ಕರಾಗಿರುವ ಇವರಿಗೆ ಎಲ್ಲ ಹದಿವಯಸ್ಕರಂತೆಯೇ ಕೆಲವು ಧೋರಣೆಯ ಅಡಚಣೆಗಳನ್ನು ಕಾಣಬಹುದಾಗಿದೆ ! ಇದು ಶಿಕ್ಷಣದಲ್ಲಿ ನಿಚ್ಚಳವಾಗಿ ಕಾಣಿಸುತ್ತದೆ ಏಕೆಂದರೆ ಅವರು ತಮ್ಮ ವೃತ್ತಿಯ ಕಲಿಕೆಯಲ್ಲಿ ಎಲ್ಲರಿಗೂ ಸಮನಾಗಿ ಕಲಿಸುವುದನ್ನು ಕಲಿತಿರುತ್ತಾರೆಯೇ ಹೊರತು ವಿಶೇಷ ಸಾಮರ್ಥ್ಯದ ಮಕ್ಕಳಿಗಾಗಿನ ವಿಶೇಷ ಕಲಿಕೆಯನ್ನು ಕಲಿತಿರುವುದಿಲ್ಲ.

ಇದು ನಿರ್ವಹಿಸಬಹುದಾದ ಸಾಮಾನ್ಯ ಸ್ಥಿತಿಯಾಗಿರಲಿಲ್ಲ ಮತ್ತು ಶಿಕ್ಷಕರು ಈ ಕುರಿತು ತಮ್ಮ ಕೈಚೆಲ್ಲಿದರು. ಅಲ್ಲದೆ ವಿಶೇಷ ಅಗತ್ಯ ಇರುವ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಂತೆ ಶಿಕ್ಷಕರನ್ನು ಹೇಗೆ ತಯಾರು ಮಾಡುವುದು? ಎಂಬುದು ನನಗೆ ಸಮಸ್ಯೆ ಎನಿಸಿತು. ಇದರ ಕುರಿತು ಅಸಮಾಧಾನವಿದೆ ಎಂಬುದು ನನಗೆ ಗೊತ್ತಿತ್ತು ಆದರೆ ಯಾರೂ ಈ ಕುರಿತು ನೇರವಾಗಿ ಮಾತನಾಡುತ್ತಿರಲಿಲ್ಲ. ಈ ಕುರಿತು ಶಿಕ್ಷಕರನ್ನು ಮೊದಲು ತಯಾರು ಮಾಡಬೇಕಾಗಿತ್ತು ಯಾಕೆಂದರೆ ಅವರೇ ಮಗುವನ್ನು ನಿರ್ವಹಿಸುವವರಲ್ಲವೇ.

ನಾವು ಈ ಬಗ್ಗೆ ನಡೆಸಿದ ಸಭೆಯಲ್ಲಿ, ಕೇವಲ ಒಬ್ಬರಲ್ಲ ಎಲ್ಲರೂ ಕೂಡಾ ಶಾಲೆಯಲ್ಲಿರುವ ಈ ಮಗುವಿನ ಜವಾಬ್ಧಾರಿಯನ್ನು ತೆಗೆದುಕೊಳ್ಳಬೇಕು ಎಂದು ನಿರ್ಧರಿಸಲಾಯಿತು. ಇದೊಂದು ತಂಡದ ಪ್ರಯತ್ನವಾಗಿರಬೇಕು ಎಂಬುದು ನಮ್ಮ ಆಶಯವಾಗಿತ್ತು. ಪೋಷಕರ ಜೊತೆ ಒಬ್ಬರು ಪರಸ್ಪರ ಸಂಪರ್ಕ ಇರಿಸಿಕೊಳ್ಳಬೇಕು ಎಂಬ ದೃಷ್ಟಿಯಿಂದ ಒಬ್ಬರನ್ನು ತರಗತಿಯ ಮುಖ್ಯಸ್ಥರನ್ನಾಗಿ ಮಾಡಲಾಯಿತು. ಈ ಕೆಲಸವನ್ನು ಪ್ರಾರಂಭಿಸಲು ಕೆಲವು ಸಾಮಾನ್ಯ ಅಂಶಗಳನ್ನು ಅರಿತುಕೊಳ್ಳುವುದು ಮುಖ್ಯವಾಗುತ್ತದೆ. ಅದರಲ್ಲಿ ಕೆಲವನ್ನು ಈ ಕೆಳಗೆ ನೀಡಲಾಗಿದೆ :

1) ಆ ವಿದ್ಯಾರ್ಥಿಗೆ ನೀಡಲಾಗುವ ಸೂಚನೆಗಳು ಸರಳ, ಸ್ಪಷ್ಟ ಮತ್ತು ಸಣ್ಣದಾಗಿರಬೇಕು.
2) ಆದ್ಯತೆಯ ಮೇರೆಗೆ ಪರಿಶೀಲಿಸಬೇಕಾದ ಮಗುವಿನ ಸಮಸ್ಯಾತ್ಮಕ ನಡತೆಯನ್ನು ಶಿಕ್ಷಕರು ಗುರುತಿಸಿ-ಕೊಳ್ಳಬೇಕು.
3) ಶಿಕ್ಷಕರು ಮತ್ತು ಪೋಷಕರ ನಡುವಿನ ವರ್ತನೆಯಲ್ಲಿ ಏಕತೆ, ನಿರಂತರತೆ ಮತ್ತು ಸಾಮ್ಯತೆಯನ್ನು ತರುವ ಸಲುವಾಗಿ ಪೋಷಕರ ಜೊತೆಗೆ ನಿರಂತರ ಸಂಪರ್ಕದಲ್ಲಿರುವಂತೆ ನೋಡಿಕೊಳ್ಳಬೇಕು. ಮನೆಯಲ್ಲಿ ಮತ್ತು ಶಾಲೆಯಲ್ಲಿ ನೀಡುವ ಸೂಚನೆಗಳು ಒಂದೇ ರೀತಿಯಲ್ಲಿರಬೇಕಾಗುತ್ತದೆ. ಅಲ್ಲದೆ ಮಗುವಿನ ಜೊತೆಗೆ ವರ್ತಿಸುವ ರೀತಿಯನ್ನು ಒಬ್ಬರಿಂದೊಬ್ಬರು ಕಲಿತುಕೊಳ್ಳಬೇಕು.
4) ದೀದಿ (ಸಹಾಯಕಿ) ನನ್ನ ಅನುವಾದಕಿಯಾಗಿರಬೇಕು ಏಕೆಂದರೆ ಮಗುವಿಗೆ ಕೇವಲ ಬೆಂಗಾಲಿ ಭಾಷೆ ಮಾತ್ರ ಗೊತ್ತು. ಮಗು ಸ್ವಚ್ಛವಾಗಿರುವಂತೆ ಮತ್ತು ಮಗುವಿನ ಇತರೆ ಅಗತ್ಯತೆಗಳ ಬಗ್ಗೆ ದೀದಿಯು ಲಕ್ಷ್ಯವಹಿಸಬೇಕು.
5) ಅಲ್ಲದೆ ಶೈಕ್ಷಣಿಕ ವಿಷಯಕ್ಕೆ ಪ್ರಾಮುಖ್ಯತೆಯನ್ನು ಕೊಡದೇ ಇರಲು ನಿರ್ಧರಿಸಲಾಯಿತು. ಇದನ್ನು ಪೋಷಕರಿಗೂ ಕೂಡಾ ತಿಳಿಸಿಕೊಡಲಾಯಿತು.
6) ಕ್ಲಾಸ್ ಟೀಚರ್‌ಗೆ ಪ್ರತಿಯೊಂದು ವಿಷಯದ ಕುರಿತು ಮಾಹಿತಿ ನೀಡುತ್ತಿರಬೇಕು ಮತ್ತು ಪೋಷಕರ ಜೊತೆಗೆ ನಿರಂತರ ಸಂಪರ್ಕದಲ್ಲಿರಬೇಕು

ಈ ಎಲ್ಲ ಕಾರ್ಯನಿರ್ವಹಣೆಯ ಅಂಶಗಳು ಯಾವುದೇ ರೀತಿಯಲ್ಲಿ ಸಹಾಯ ಮಾಡಲಾರವು ಎಂದು ನನಗೆ ತಿಳಿದಿದ್ದರೂ ಕೂಡಾ ನಾನು ಇವೆಲ್ಲವನ್ನೂ ಮಾಡಲು ಅವಕಾಶ ನೀಡಿದೆ ಏಕೆಂದರೆ ಎಲ್ಲದಕ್ಕಿಂತ ಹೆಚ್ಚಾಗಿ ಶಿಕ್ಷಕರಿಗೆ ಈ ಮಗುವಿನ ಬಗ್ಗೆ ತಿಳಿದುಕೊಳ್ಳಲು ಸಾಕಷ್ಟು ಸಮಯದ ಅಗತ್ಯವಿದೆ ಎಂದು ನನಗೆ ಗೊತ್ತಿತ್ತು. ನಾನು ನವೆಂಬರ್‌ನಲ್ಲಿ ಶಾಲೆಗೆ ಭೇಟಿ ನೀಡಿದಾಗ, ನಾನಂದುಕೊಂಡಂತೆ ಯಾವುದೂ ಸರಿ ಇಲ್ಲ ಎನಿಸಿತು ಅಲ್ಲದೆ ಶಿಕ್ಷಕರು ಹೆಚ್ಚು ಅಸಹಾಯಕರಾಗಿದ್ದರು ಮತ್ತು ಮಗುವನ್ನು ನಿಯಂತ್ರಿಸಲು ಶಿಕ್ಷಕರು ಹೊಸ ಐಡಿಯಾಗಳಿಲ್ಲದೆ ಖಾಲಿಯಾಗಿದ್ದರು. ಮಗುವಿನ ಕುರಿತ ಅವರ ಅನುಭವಗಳನ್ನು ಬರೆಯಲು ಹೇಳಲಾಯಿತು.

**ಸಾರಾಂಶಗಳು:**

"ಅವಳಿಗೆ ಪ್ರವೇಶ ನೀಡಿದ್ದಾರೆ ಎಂಬುದೇ ನನಗೆ ಆಶ್ಚರ್ಯದ ವಿಷಯ. ಮೇಡಮ್ ತಪ್ಪು ಮಾಡಿದ್ದಾರೆ. ಈ ಮಗುವನ್ನು ವಿಶೇಷ ಮಕ್ಕಳ ಶಾಲೆಗೆ ಸೇರ್ಪಡೆ ಮಾಡಬೇಕಾಗಿತ್ತು. ನನಗೆ

ಅನಿಸಿದೆ ಅವಳ ಮೆದುಳು ಬೆಳೀಲಿಲ್ಲ ಎಂಬುದು ಅವಳ ತಪ್ಪಲ್ಲ. ಆದರೆ ನಮ್ಮ ಜೊತೆ ಸೇರಿದ ನಂತರದಲ್ಲಿ ಅವಳ ವರ್ತನೆಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ."

"ಅವಳು ಇಲ್ಲಿಗೆ ಸೇರ್ಪಡೆ ಆದಾಗ, ಇತರ ಹುಡುಗರ ಜೊತೆಗೆ ಅವಳು ಹೇಗೆ ಸೇರುತ್ತಾಳೆ ಎಂಬುದರ ಕುರಿತು ಅನುಮಾನವಿತ್ತು. ಅವಳಿಗೆ ತನ್ನ ಅಗತ್ಯಗಳನ್ನು ಹೇಳೋಕೆ ಕೂಡಾ ಗೊತ್ತಿಲ್ಲವಾಗಿತ್ತು. ಆದರೆ ಈಗ ಅವಳು ತನಗೆ ಏನು ಬೇಕು ಎಂಬುದನ್ನು ಗುರುತಿಸಿ ಸೂಚಿಸುತ್ತಾಳೆ. ಅವಳು ನಮ್ಮನ್ನು ಅರ್ಥ ಮಾಡಿಕೊಳ್ಳುತ್ತಾಳೆ. ನಾನು ಕೂಡಾ ಅವಳನ್ನು ಅರ್ಥ ಮಾಡಿಕೊಳ್ಳೋದು ಸಾಧ್ಯವಾಗಿದೆ. ಕೆಲವು ಸಮಯದ ನಂತರ ಅವಳು ಸರಿ ಹೋಗ್ತಾಳೆ."

"ಅವಳಿಗೆ ಕೆಟ್ಟದ್ದು ಒಳ್ಳೇದು ಎಂಬುದರ ಬಗ್ಗೆ ಗಮನವೇ ಇಲ್ಲ. ಏನಾದರೂ ಮಾಡಿದರೆ ಅದನ್ನು ಅವಳು ಯಾಕೆ ಮಾಡಿದ್ಲು ಎಂಬ ಬಗ್ಗೆ ಕೂಡಾ ಅವಳಿಗೆ ಗೊತ್ತಿಲ್ಲ. ಒಂದು ವೇಳೆ ಅವಳಿಗೆ ಕೆಲವು ಸರಿಯಾದ ಕೆಲಸ ನೀಡಿದರೆ ಅವಳು ಕೆಲಹೊತ್ತು ಆ ಕೆಲಸ ಮಾಡಿಕೊಂಡು ಕುಳಿತಿರುತ್ತಾಳೆ. ಅವಳಿಗೆ ಸೂಚನೆ ನೀಡಿದರೆ ಮಾತ್ರ ಕೆಲಸ ಮಾಡ್ತಾಳೆ. ಉದಾಹರಣೆಗೆ 'ಆಹಾರವನ್ನು ಹಾಳು ಮಾಡಬೇಡ', 'ನಿನ್ನ ಪ್ಲೇಟ್ ಅನ್ನು ತೊಳೆ' ಮುಂತಾದವು. ನನಗನಿಸುತ್ತೆ ಅವಳು ಬೆಳವಣಿಗೆಯ ಸರಿಯಾದ ದಿಕ್ಕಿನಲ್ಲಿದ್ದಾಳೆ. ಮನೆಯ ರೀತಿಯ ಪ್ರೀತಿಯನ್ನೇ ಇಲ್ಲಿ ಪಡೆಯುತ್ತಿದ್ದಾಳೆ. ಇಲ್ಲಿ ಬಂದ ನಂತರದಲ್ಲಿ ಬಹಳಷ್ಟು ವಿಷಯವನ್ನು ಅವಳು ಕಲಿತಿದ್ದಾಳೆ. ಅವಳು ಖುಷಿಯಾಗಿದ್ದಾಳೆ. ನಾನು ಖುಷಿಯಾಗಿದ್ದೇನೆ."

"ಪ್ರಾರಂಭದಲ್ಲಿ ನನಗೆ ಅವಳ ಬಗ್ಗೆ ಭಯ ಇತ್ತು. ಅವಳ ಜೊತೆ ಆದಷ್ಟು ದೂರವಾಗೇ ಇರೋಕೆ ಪ್ರಯತ್ನಿಸಬೇಕು ಅನಿಸ್ತಿತ್ತು. ಕೆಲವೊಮ್ಮೆ ಅವಳನ್ನು ಬೆದರಿಸಿ ದೂರ ಕಳ್ಸೋದು ಕೂಡಾ ಇತ್ತು. ಒಮ್ಮೆ ಅವಳು ಹೂವನ್ನು ತಂದು ನನ್ನ ಕೂದಲಿಗೆ ಮುಡಿಸಿದಳು. ನಾನು ಇಷ್ಟು ದಿನ ತಪ್ಪು ಮಾಡಿದೆ ಅಂತಾ ನನಗೆ ಅನಿಸ್ತು. ನಾನು ಅವಳ ಜೊತೆಗೆ ಮಾತನಾಡೋಕೆ ಪ್ರಾರಂಭಿಸಿದೆ. ನಾನು ಹೆಚ್ಚುವರಿ ತರಗತಿಗಾಗಿ ಅವಳ ತರಗತಿಗೆ ಹೋದಾಗ ಅವಳು ಖುಷಿ ಪಡ್ತಾ ಇದ್ಲು. ಅವಳು ಈ ರೀತಿ ಹುಟ್ಟಿದ್ದು ಅವಳ ತಪ್ಪಲ್ಲ ಎಂದು ನನಗನಿಸ್ತು."

"ಇದೊಂದು ಹೊಸ ಅನುಭವ. ಅವಳು ಇತರ ಹುಡುಗರನ್ನು ನೋಡಿ ಅನುಕರಿಸತೊಡಗಿದಳು."

"ನನಗನಿಸುತ್ತೆ ಅವಳಿಗೆ ಮಾನಸಿಕ ಸಮಸ್ಯೆ ಇರಬೇಕು. ಇತ್ತೀಚಿನ 3 ತಿಂಗಳಲ್ಲಿ ಅವಳಲ್ಲಿ ಹೆಚ್ಚೇನೂ ಬದಲಾವಣೆ ಕಂಡುಬಂದಿಲ್ಲ. ಅವಳು ಶಿಕ್ಷಕರು ಮತ್ತು ಮಕ್ಕಳಿಗೆ ಸಾಕಷ್ಟು ಸಮಸ್ಯೆ ಕೊಟ್ಟಿದ್ದಾಳೆ."

"ಪ್ರಾರಂಭದಲ್ಲಿ ನಾನು ಕಿರಿಕಿರಿ ಮಾಡಿಕೊಳ್ಳುತ್ತಿದ್ದೆ ಮತ್ತು ಸಿಟ್ಟಾಗುತ್ತಿದ್ದೆ. ನನಗನಿಸಿತ್ತು ಅವಳಿಗೆ ಕೆಲಸ ನೀಡಬೇಕು ಅಂತಾ. ಅದಕ್ಕಾಗಿ ಅವಳನ್ನು ನನ್ನ ಪಕ್ಕ ಕೂರಿಸಿಕೊಂಡೆ. ಅವಳಲ್ಲಿ ಬದಲಾವಣೆ ಆಗುತ್ತಿರುವುದನ್ನು ನಾನು ಗಮನಿಸಿದ್ದೇನೆ. ಒಂದು ದಿನ ಅವಳು ಇಂಗ್ಲಿಷ್‌ನಲ್ಲಿ ಹೇಳಿದ್ಲು, 'may I come in ma'am?' ನನಗೆ ತುಂಬಾ ಖುಷಿಯಾಯ್ತು."

"ಪ್ರಾರಂಭದಲ್ಲಿ ಅವಳ ತಾಯಿಯು ಜೊತೆಯಲ್ಲಿ ಇಲ್ಲವೆಂದಾದರೆ ಅವಳು ಶಾಲೆಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಆದರೆ ಈಗ ಅವಳು ಒಬ್ಬಳೇ ಕುಳಿತುಕೊಳ್ಳುತ್ತಾಳೆ, ಶಾಲೆಗೆ ಬರುವುದೆಂದರೆ ಅವಳಿಗೆ ಇಷ್ಟ, ಶಿಕ್ಷಕರ ಮಾತನ್ನು ಕೇಳುತ್ತಾಳೆ. ಅವಳನ್ನು ಕುರಿತು ನಾವು ಇನ್ನೂ ಹೆಚ್ಚಿನ ಲಕ್ಷ್ಯವಹಿಸಿದರೆ ಅವಳು ಖಂಡಿತ ಬದಲಾವಣೆ ಹೊಂದುತ್ತಾಳೆ"

"ಅವಳಿಗೆ ಯಾರು ಕಲಿಸ್ತಾರೆ ಎಂದು ನನಗೆ ಆಶ್ಚರ್ಯ–ವಾಗುತ್ತಿತ್ತು. ಕೆಲವು ಸಮಯ ಕಳೆದ ನಂತರದಲ್ಲಿ ಅವಳಲ್ಲಿ ಬದಲಾವಣೆ ಕಂಡುಬಂದಿತು. ಅವಳು ಈಗ ಒಂದು ತಡೆ ಎಂದು ಎನಿಸುತ್ತಿಲ್ಲ."

"ನನಗನಿಸುತ್ತೆ, ಅವಳು ಮಾನಸಿಕವಾಗಿ ಅನಾರೋಗ್ಯ–ವಾಗಿದ್ದಾಳೆ. ಸಾಮಾನ್ಯ ಮಕ್ಕಳ ಜೊತೆ ಅವಳಿಗೆ ನಾವು ಶಿಕ್ಷಣ ನೀಡುವಂತಿಲ್ಲ."

"ಅವಳು ಸೇರ್ಪಡೆಯಾದಂದಿನಿಂದ ಇಂದಿಗೆ ಸಾಕಷ್ಟು ಬದಲಾವಣೆಯನ್ನು ಆಕೆ ಕಂಡಿದ್ದಾಳೆ. ಅವಳು ನಮಗೆ ಹೊಡೆಯುವುದಿಲ್ಲ ಎಂದಾದರೆ ಅವಳ ಸಹಪಾಠಿಗಳಿಗೆ ಯಾಕೆ ಹೊಡೆಯುತ್ತಾಳೆ? ಅವರು ಇವಳ ಹತ್ತಿರ ಏನನ್ನೂ ಹಂಚಿಕೊಳ್ಳುವುದಿಲ್ಲ ಎನಿಸುತ್ತದೆ!"

"ಅವಳು ತನ್ನ ಸ್ನೇಹಿತರು ಹೇಳುವುದನ್ನು ಕೇಳಲು ಪ್ರಾರಂಭಿಸಿದ್ದಾಳೆ. ಅವರು 'ಮಾಡಬೇಡ' ಎಂದು ಹೇಳುವುದನ್ನು ಅವಳು ಮಾಡುವುದಿಲ್ಲ. ಅವಳ ಮೇಲೆ ಲಕ್ಷ್ಯವಹಿಸಲಿ ಎಂದು ಅವಳು ಬಯಸುತ್ತಾಳೆ. ಅವಳು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದ್ದಾಳೆ ಮತ್ತು ಜನರ ಜೊತೆ ಬೆರೆಯುತ್ತಿದ್ದಾಳೆ."

ಪ್ರತಿಕ್ರಿಯೆಯನ್ನು ನೋಡಿದಾಗ ಕಂಡುಬಂದಂತೆ ಕೆಲವರನ್ನು ಹೊರತು ಪಡಿಸಿ ಇನ್ನುಳಿದವರೆಲ್ಲರೂ ಅವಳಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ಅಲ್ಲದೆ ಅವಳು ಹ್ಯಾಗಿದ್ದಾಳೆಯೋ ಹಾಗೆ ಅವಳನ್ನು ಎಲ್ಲರೂ ಒಪ್ಪಿಕೊಳ್ಳಲು ಪ್ರಾರಂಭಿಸಿದ್ದಾರೆ. ಅಲ್ಲದೆ ಉಳಿದ ಮಕ್ಕಳ ಜೊತೆಗೆ ಅವಳನ್ನು ನೋಡಲು ಪ್ರಾರಂಭಿಸಿದ್ದಾರೆ. ಮೂರನೇ ತರಗತಿಯ ಮಕ್ಕಳು ಅವಳು ಯಾವ್ಯಾವಾಗ ಮೊಂಡು ಹಟ ಮಾಡುತ್ತಾಳೆಯೋ ಅಥವಾ ಸಾಮಾಜಿಕವಾಗಿ ಒಪ್ಪಿಕೊಳ್ಳದ

ವರ್ತನೆ ತೋರ್ಪಡಿಸುತ್ತಾಳೆಯೋ ಆಗ ಅವಳಿಗೆ ವಾಪಸ್ ಹೊಡೆಯುವ ಅಥವಾ ಅವಳಿಗೆ ಕೀಟಲೆ ಮಾಡುವ ಬದಲಿಗೆ 'ಮಾಡಬೇಡ' ಎಂದು ಹೇಳುವುದನ್ನು ರೂಢಿಸಿಕೊಂಡಿದ್ದಾರೆ.

ಆಡ್ಮಿನ್ ಹಾಗೂ ಪ್ರಿನ್ಸಿಪಲ್ ಕೂಡಾ ಅವಳೊಂದಿಗೆ ಆಗಾಗ ಮಾತನಾಡುವ ಮೂಲಕ ಹಾಗೂ ಅವಳಿಗೆ ಕೆಲವು ಅಕ್ಷರಗಳನ್ನು ಹೇಳಿಕೊಡುವ ಮೂಲಕ ಅವಳ ಜೊತೆಗೆ ಸಂಪರ್ಕ ಇರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅವಳು ಬಣ್ಣ ಹಚ್ಚುವುದರಲ್ಲಿ ಆಸಕ್ತಿಯನ್ನು ತೋರ್ಪಡಿಸಿದ್ದಾಳೆ. ಕೆಲವು ವರ್ಕ್‌ಶೀಟ್‌ಗಳನ್ನು (ಬಣ್ಣಹಚ್ಚುವುದು, ಕಾಗುಣಿತಗಳನ್ನು ಬರೆಯುವುದು ಮುಂತಾದವುಗಳನ್ನು) ಅವಳ ಕೈಗೆ ಸಿಗುವಂತೆ ಇಡಲಾಗಿದೆ. ಅವಳು ತರಗತಿಗೆ ಬಂದನಂತರದಲ್ಲಿ ಶಿಕ್ಷಕರು ಇದನ್ನು ಅವಳಿಗೆ ನೀಡುತ್ತಿದ್ದಾರೆ. ಕೆಲವೊಮ್ಮೆ ಕೆಲವು ಶೀಟ್‌ಗಳನ್ನು ಮನೆಗೆ ಕೂಡಾ ನೀಡಲಾಗುತ್ತದೆ.

ಶೈಕ್ಷಣಿಕ ವರ್ಷದ ಕೊನೆಯಲ್ಲಿ ಪ್ರಗತಿ ಪತ್ರ ಕೊಡುವ ಒಂದು ಸವಾಲು ನಮಗೆ ಎದುರಾಯಿತು. ಪ್ರಗತಿ ಪತ್ರದಲ್ಲಿ ಏನು ಬರೆಯುವುದು ? ತಂಡವು ಈ ಹಂತದಲ್ಲಿ ಮತ್ತೊಮ್ಮೆ ಸಭೆ ಸೇರಿ ಅವಳ ಬಗ್ಗೆ ಉತ್ತಮ ಅಂಶಗಳನ್ನು ಮತ್ತು ಅವಳು ಅಭಿವೃದ್ಧಿ ಹೊಂದಿದ ಅಂಶಗಳನ್ನು ಗುರುತಿಸಿದರು.

**ಈ ಮುಂದಿನ ಅಂಶಗಳನ್ನು ಇಲ್ಲಿ ಕಂಡುಕೊಳ್ಳಲಾಯಿತು:**

- ಅವಳು ಅಲ್ಲಿ ಇಲ್ಲಿ ಅಲೆದಾಡುವುದನ್ನು ನಿಲ್ಲಿಸಿದ್ದಾಳೆ.
- ಪುಸ್ತಕಗಳನ್ನು ನೋಡುವುದು, ಪ್ರಶ್ನೆಗಳನ್ನು ಕೇಳುವುದನ್ನು ಮಾಡುತ್ತಿದ್ದಾಳೆ.
- ಸರಳವಾದ ಸೂಚನೆಗಳನ್ನು ಅನುಸರಿಸುತ್ತಿದ್ದಾಳೆ.
- ಅವಳು ತನ್ನ ಸಹಪಾಠಿಗಳನ್ನು ಅನುಸರಿಸುತ್ತಾಳೆ ಮತ್ತು ಹಾಡಲು ಪ್ರಯತ್ನಿಸುತ್ತಿದ್ದಾಳೆ.
- ಶುಚಿತ್ವದ ಬಗ್ಗೆ ತರಬೇತಿಗೊಂಡಿದ್ದಾಳೆ ಮತ್ತು ಇನ್ನೂ ಹಲವಾರು

**ಕಾಳಜಿವಹಿಸಬೇಕಾದ ಅಂಶಗಳು**

- ಕೆಲವೊಂದು ಸಮಯ ಅವಳು ತುಂಬಾ ಆಕ್ರಮಣಕಾರಿ-ಯಾಗಿರುವುದು ಮುಂದುವರೆದಿದೆ
- ಪೇಪರ್ ಹರಿಯುತ್ತಾಳೆ

ಪ್ರತಿಯೊಬ್ಬರು ಆಶ್ಚರ್ಯವಾಗುವಂತೆ 10 ಕಾಳಜಿವಹಿಸ-ಬೇಕಾದ ಅಂಶಗಳ ಜೊತೆಗೆ ಅವಳಿಗೆ ದೊರೆತ ಉತ್ತಮ ಅಂಶಗಳು 29 !

ಈ ಕುರಿತಂತೆ ಪೋಷಕರು ಮತ್ತು ಶಿಕ್ಷಕರ ಸಭೆಯಲ್ಲಿ ಇಬ್ಬರನ್ನೂ ನೋಡುವುದು ತುಂಬಾ ಖುಷಿ ಎನಿಸುವ ವಿಷಯವಾಗಿತ್ತು. ಅವರು ಹೇಳಿದರು "ನಮ್ಮ ಮಗು ಶಾಲೆಗೆ ಬರುವುದನ್ನು ನೋಡುವುದೇ ನಮಗೆ ಖುಷಿಯ ವಿಷಯವಾಗಿದೆ. ಅವಳು ಪುಸ್ತಕಗಳನ್ನು ನೋಡುತ್ತಾ ಮತ್ತು ಶಾಲೆಯಲ್ಲಿ ನಡೆದ ವಿಚಾರಗಳನ್ನು ಹೇಳುತ್ತಾ ತಾನು ತುಂಬಾ ಬ್ಯೂಸಿಯಾಗಿರುವಂತೆ ನಟಿಸುತ್ತಾಳೆ. ಇದೆಲ್ಲಕ್ಕಿಂತ ಹೆಚ್ಚಾಗಿ ಅವಳನ್ನೂ ಕೂಡಾ ಒಬ್ಬ ಸಾಮಾನ್ಯ ಮನುಷ್ಯನಂತೆ ನೋಡಿರುವುದು ಮತ್ತು ಅವಳಿಗೂ ಸ್ನೇಹಿತರು ಇರುವಂತೆ ಮಾಡಿದ್ದು ತುಂಬಾ ಖುಷಿಯೆನಿಸುತ್ತದೆ."

ಶಿಕ್ಷಕರಿಗೆ ನಿಜವಾಗಿಯೂ ಹಲವಾರು ಅಂಶಗಳನ್ನು ತಿಳಿದುಕೊಳ್ಳಲು ಸಮಯ ಮತ್ತು ಸ್ಥಳದ ಅಗತ್ಯವಿದೆ. ಹಲವಾರು ಅಂಶಗಳನ್ನು ತಿಳಿದುಕೊಳ್ಳಲು ಸ್ಥಳ ಮತ್ತು ಸಮಯಾವಕಾಶವನ್ನು ನೀಡಿದ್ದರಿಂದ ಮಗುವನ್ನು ಒಪ್ಪಿಕೊಳ್ಳುವ ಹಂತಕ್ಕೆ ತಲುಪಿದ್ದರು. ಈಗ ಮಗುವನ್ನು ನಿಭಾಯಿಸಲು ಅವರು ತಮ್ಮದೆ ಆದ ಕಾರ್ಯನಿರ್ವಹಣೆಯ ಐಡಿಯಾಗಳ ಜೊತೆಗೆ ಬರುತ್ತಿದ್ದಾರೆ. ನನಗನಿಸುತ್ತದೆ ಇದು ಮಗು ಹಾಗೂ ಶಿಕ್ಷಕ ಇಬ್ಬರನ್ನೂ ಸ್ವತಂತ್ರವಾಗಿಸುವ ನಿಟ್ಟಿನಲ್ಲಿ ಕೊನೆಗೊಳ್ಳುತ್ತದೆ.

**ಮಕ್ಕಳು ತಾರತಮ್ಯ ಮಾಡುವುದಿಲ್ಲ. ಬದಲಾಗಿ,**
**ನಾವು ಈ ರೀತಿಯ ವ್ಯತ್ಯಾಸವನ್ನು ಒಪ್ಪಿಕೊಳ್ಳಲು ಸಾಧ್ಯವಾಗದೇ ತಾರತಮ್ಯ ಮಾಡುತ್ತೇವೆ.**




**ಅರುಣಾ ವಿ ಪ್ರಸಾದ್** ಅವರು ಪ್ರಸ್ತುತ ಅಜೀಂ ಪ್ರೇಂಜಿ ಪ್ರತಿಷ್ಠಾನದ ಸ್ಕೂಲ್ಸ್ ಸೆಂಟ್ರಲ್ ಟೀಮ್ ನಲ್ಲಿ ವೃತ್ತಿ ನಿರತರಾಗಿದ್ದಾರೆ. ಪ್ರತಿಷ್ಠಾನವನ್ನು ಸೇರುವ ಮೊದಲು ಅವರು ಹೈದರಾಬಾದಿನ ಇಂಡಸ್ ಇಂಟರ್ ನ್ಯಾಷನಲ್ ಸ್ಕೂಲ್‌ನ ಸಲಹೆ ಮತ್ತು ವಿಶೇಷ ವಿದ್ಯಾಭ್ಯಾಸ ಅಗತ್ಯತೆಗಳ ವಿಭಾಗದ ಮುಖ್ಯಸ್ಥರಾಗಿ ಅಲ್ಲಿ ಪಾಠವನ್ನೂ ಮಾಡುತಿದ್ದರು.ಅದಕ್ಕೂ ಮೊದಲು ಅವರು ಕೃಷ್ಣಮೂರ್ತಿ ಫೌಂಡೇಷನ್ ಆಫ್ ಇಂಡಿಯಾ ಚೆನ್ನೈ ಅವರ "ದ ಸ್ಕೂಲ್" ನಲ್ಲಿ ಶಿಕ್ಷಕರಾಗಿದ್ದು ಮಿಶ್ರ ವಯಸ್ಕರ ಕಾರ್ಯಕ್ರಮ ಪ್ರಯೋಗದ ತಂಡದಲ್ಲಿ ಒಬ್ಬರಾಗಿದ್ದರು.ತರುವಾಯ ಅವರು ಆಂಧ್ರಪ್ರದೇಶದ ಮದನಪಲ್ಲಿ ಬಳಿಯ ಖುಷಿ ವ್ಯಾಲಿ ಶಾಲೆಯಲ್ಲಿ ಬಲು ನಿಧಾನ ಕಲಿಕೆಯ ವಿದ್ಯಾರ್ಥಿಗಳಿಗೆ ಚಟುವಟಿಕೆಯ ಕೇಂದ್ರವನ್ನು ಪ್ರಾರಂಭಿಸಿದರು. ಇದಲ್ಲದೆ ಗುರುಗಾಂವ್ ನ ಪಾತ್ ವೇಸ್ ಮತ್ತು ಜಿ.ಡಿ.ಗೊಯೆಂಕಾ ವರ್ಲ್ಡ್ ಸ್ಕೂಲ್‌ನಲ್ಲಿ ಅವರು ಸಮಾಲೋಚಕರು ಮತ್ತು ಶಿಕ್ಷಕರಾಗಿ ತಮ್ಮ ದೀರ್ಘಕಾಲೀನ ಪ್ರಯಾಣದಲ್ಲಿ ಶಿಕ್ಷಕರು ಮತ್ತು ಮಕ್ಕಳಿಗಾಗಿ ಅನೇಕ ಬಗೆಯ ಚಟುವಟಿಕೆಗಳನ್ನು ರೂಪಿಸಿದ್ದಾರೆ. ಅವರನ್ನು aruna.v@azimpremjifoundation.org ನಲ್ಲಿ ಸಂಪರ್ಕಿಸಬಹುದು.

# ಅವಶ್ಯವಾಗಿ ಬೇಕಾದ ಸಂಸ್ಕೃತಿ

**ಕರ್ಪಗಮ್ ಎಸ್.**


ಮಾಧ್ಯಮಿಕ ಶಾಲೆಯ (ಗ್ರೇಡು 5, 6 ಮತ್ತು 7ರ) ಶಿಕ್ಷಕಿಯಾಗಿ ನಾನು ಮಕ್ಕಳು ತರಗತಿಯಲ್ಲಿ ಪಾಠ ನಡೆದಿರುವಾಗ, ತಮ್ಮ ಬಸ್ಸುಗಳಿಗಾಗಿ ಕಾಯುತ್ತಾ ಶಾಲೆಯ ಅಂಗಳದಲ್ಲಿ ಕುಳಿತು ಮಾತನಾಡುವಾಗ ಅಥವಾ ಶಿಕ್ಷಕರ ಕೊಠಡಿಯನ್ನು ದಾಟಿ ಮುಂದೆ ಹೋಗುವಾಗ ಒಬ್ಬರನ್ನೊಬ್ಬರು ಬೈಯುತ್ತಿರುವುದನ್ನು ಗಮನಿಸಿದ್ದೇನೆ. ಆರಂಭದಲ್ಲಿ ನಾನು ಹರೆಯಕ್ಕೆ ಬರುತ್ತಿರುವ ಮಕ್ಕಳು ಮಾತನಾಡುವಾಗ ಈ ರೀತಿಯಾಗಿ ಒಡ್ಡೊಡ್ಡಾಗಿ ಹಾಗೂ ಇನ್ನೊಬ್ಬ ಸ್ನೇಹಿತನ ಜತೆ ಮಾತು ಶುರು ಮಾಡಲು ಮೃದುವಾಗಿ ಚುಡಾಯಿಸುತ್ತಾ ಮಾತನಾಡುತ್ತಾರೆ ಅಂದುಕೊಂಡಿದ್ದೆ. ಆದರೆ ನಾನೊಬ್ಬ ಶಿಕ್ಷಕಿಯಾಗಿ ಯಾವಾಗಲೂ ಅವರು ಒಬ್ಬರಿಗೊಬ್ಬರು ಎಂಥ ಭಾಷೆಯನ್ನು ಬಳಸುತ್ತಾರೆ, ಅವರು ಹಾಗೆ ಪ್ರತಿಕ್ರಿಯಿಸುವಾಗ ಕೋಪದಿಂದ ಇರುತ್ತಾರೆಯೇ ಎಂಬುದಕ್ಕೆ ಸದಾ 'ಕಿವಿ'ಯಾಗಿರುತ್ತೇನೆ. ಅದೇ ಸಮಯಕ್ಕೆ ಪ್ರತಿಯೊಂದು ಪ್ರತಿಕ್ರಿಯೆಗೂ ನಾನು ಮಧ್ಯೆ ಪ್ರವೇಶಿಸಲು ಹೋಗುವುದಿಲ್ಲ ಅಥವಾ ಇದೊಂದು ಅವರ ಬೆಳವಣಿಗೆಯ ಮಹತ್ವದ ಹಂತ ಎಂದು ತಿಳಿಯುತ್ತೇನೆ. ಈ ಪ್ರಕ್ರಿಯೆಯೊಂದಿಗೇ ಅವರು ಬೆಳೆದು, ತಮ್ಮ ದಾರಿಯನ್ನು ಕಂಡುಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ, ಈ ಮಕ್ಕಳಿಗೆ ಯಾವುದೇ ಚುಡಾಯಿಸುವಿಕೆಯನ್ನು ಅವರು ಎದುರಿಸುವಾಗ ಅದನ್ನು ಅವರೇ ನಿಭಾಯಿಸಲು ಆಗದೇ ಇದ್ದಾಗ ನನ್ನಿಂದ ಏನಾದರೂ ಅಗತ್ಯ ಸಹಾಯ ಬೇಕಿದ್ದರೆ ಕೇಳಬಹುದು ಎಂಬುದನ್ನು ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಸಮಯಗಳಲ್ಲಿ ಅವರಿಗೆ ಸೂಚಿಸಿದ್ದೇನೆ. ನಾವು ಉಪಾಧ್ಯಾಯರು ಸೇರಿ ಕೆಲವೊಂದು ಇಂಥ ಸಹಾಯ ಬೇಕಿರುವ ಮಕ್ಕಳಿಗೆ ಆ ಮಗು ಒಂಟಿಯಾಗಿದ್ದಾಗ ಅದಕ್ಕೆ ಏನು ಬೇಕು ಎಂಬುದನ್ನು ನಾವು ತಿಳಿದುಕೊಂಡು ನೆರವುನೀಡಬೇಕು ಎಂದು ನಿರ್ಧರಿಸಿದ್ದೇವೆ.




ಏನಾದರೂ ಆಗಬಾರದ್ದು ಆದರೆ ಅವರು ಧೈರ್ಯವಾಗಿ ಬಂದು ನಮಗೆ ಹೇಳುವಷ್ಟು ಸಾಮರ್ಥ್ಯ ಅವರಿಗೆ ಇರಬೇಕು. ಇದನ್ನು ಎಷ್ಟು ನಾಜೂಕಾಗಿ ಮಾಡಲಾಯಿತೆಂದರೆ, ಅವರು ತಮ್ಮ ಸಹಪಾಠಿಗಳ ಎದುರು ಯಾವುದೇ ಮುಜುಗರಕ್ಕೆ ಈಡಾಗಲಿಲ್ಲ. ಸ್ವಲ್ಪ ದಬ್ಬಾಳಿಕೆ ಮಾಡುವ ಹಾಗೂ ನಮ್ಮ ಮಾತುಗಳು ಅಥವಾ ಎಚ್ಚರಿಕೆಗಳನ್ನು ಹಗುರವಾಗಿ ತೆಗೆದುಕೊಳ್ಳುವ ಮಕ್ಕಳ ಜತೆ ಸಹ ಈ ಬಗ್ಗೆ ನಾವು ಮಾತಾಡಿದೆವು.


ಒಮ್ಮೆ ನಾನು ತರಗತಿಯೊಳಗೆ ಹೋದಾಗ, ಇಬ್ಬರು ಮಕ್ಕಳ ಮಾತುಕತೆ ಕೇಳಿಸಿಕೊಂಡೆ. 'ಹೇ, ಇವತ್ತು ಉಪ್ಪಿಟ್ಟು ಮಾಡಿದ್ದಾರೆ... ಥೀ' ಎಂದು ಒಬ್ಬ ಹೇಳಿದ. ನಾನು ತರಗತಿಯೊಳಗೆ ಹೋದ ತಕ್ಷಣ 'ನಿಮಗೆ ಉಪ್ಪಿಟ್ಟು ಇಷ್ಟವಿಲ್ಲವೇ?' ಎಂದು ಕೇಳಿ, ಪಾಠ ಶುರು ಮಾಡಿದೆ. ಆಗ ಒಬ್ಬರ ಮುಖವನ್ನು ಇನ್ನೊಬ್ಬ ನೋಡುತ್ತ ಹೇಳಿದರು: 'ಹಾಗೇನೂ ಇಲ್ಲ ಆಂಟಿ' (ನಾನು ಕೆಲಸ ಮಾಡುತ್ತಿದ್ದ ಶಾಲೆಯಲ್ಲಿ ಶಿಕ್ಷಕಿಯರನ್ನು ಹಾಗೆ ಕರೆಯಲಾಗುತ್ತಿತ್ತು). ಸಮಯ ವ್ಯರ್ಥ ಮಾಡಿಕೊಳ್ಳಬಾರದು ಎಂದು ನನ್ನಷ್ಟಕ್ಕೇ



ನಾನು ಹೇಳಿಕೊಂಡು ಪಾಠ ಮುಂದುವರಿಸಿದೆ. ಆದರೆ ಆಹಾರ ಸೇವನೆ ಅಭ್ಯಾಸ ಹೇಗಿರಬೇಕೆಂದೂ ಮಕ್ಕಳೊಡನೆ ಮಾತನಾಡಬೇಕು ಎಂದು ನನ್ನಷ್ಟಕ್ಕೆ ನಾನು ಹೇಳಿಕೊಂಡೆ.

ಇದಾಗಿ ಒಂದು ತಿಂಗಳು ಕಳೆದ ಬಳಿಕ, ಊಟದ ಕೊಠಡಿಯ ವ್ಯವಸ್ಥಾಪಕರು ಶಿಕ್ಷಕರ ಎದುರು ಒಂದು ದೂರನ್ನು ಸಲ್ಲಿಸಿದರು. ಅದೇನೆಂದರೆ, ಪಾವ್‌ಭಜಿ, ಭೇಲ್‌ಪುರಿ, ಸಿಹಿ ಬನ್, ಎಣ್ಣೆಯಲ್ಲಿ ಕರಿದ ತಿಂಡಿಗಳು ಇದ್ದಾಗ ಮಕ್ಕಳು ನುಗ್ಗಿಬರುತ್ತಾರೆ ಹಾಗೂ ಬೇಯಿಸಿದ ಆಹಾರ ಅಥವಾ 'ಆರೋಗ್ಯಕ್ಕೆ ಒಳ್ಳೆಯದು' ಎಂಬಂತಿದ್ದ ತಿಂಡಿಗಳತ್ತ ಯಾರೂ ಸುಳಿಯುತ್ತಿರಲಿಲ್ಲ.


ಒಂದು ದಿನ ಬಾಲಕನೊಬ್ಬ, ತನ್ನ ತಂದೆಯು ನನ್ನನ್ನು ಭೇಟಿ ಮಾಡಲು ಬಂದರೂ ಬರಬಹುದು ಎಂದು ಹೇಳಿದ. ಆ ಬಾಲಕ ಅವನ ಸಹಪಾಠಿಯೇ ಹೇಳುವಂತೆ ದಯಾಳು ಯಾವಾಗಲೂ ಮೃದುವಾಗಿ ಮಾತಾಡುತ್ತಿದ್ದ ಹಾಗೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ. ಆತನ ಸ್ನೇಹಿತರು ಅವನ ಬಗ್ಗೆ ಹೇಳುತ್ತಿದ್ದ ಸ್ವಭಾವವನ್ನು ಆತನ ಪಾಲಕರಿಗೆ ತಿಳಿಸಬೇಕು ಎಂದು ನಾನೇ




ಹಲವು ಸಲ ಅಂದುಕೊಂಡಿದ್ದೆ. ಮಧ್ಯಾಹ್ನದ ಬಳಿಕ ಆ ಬಾಲಕನ ತಂದೆ ಬಂದು ಶಿಕ್ಷಕರ ವಿಶ್ರಾಂತಿ ಕೊಠಡಿಯಲ್ಲಿ ನನ್ನನ್ನು ಭೇಟಿ ಮಾಡಿದರು. ಮುಂದಿನ ಒಂದೆರಡು ನಿಮಿಷಗಳಲ್ಲಿ ಅವರು ತಿಳಿಸಿದ ಮಾತುಗಳನ್ನು ಕೇಳಿ ನನಗೆ ಆಘಾತವಾಯಿತು ಹಾಗೂ ಆ ಮಾತನ್ನು ನಾನೇ ನಂಬಲಿಲ್ಲ. ಆತನ ಮಗ ಇತ್ತೀಚೆಗೆ ಹೆಚ್ಚೆಚ್ಚು ಹಠಮಾರಿಯಾಗುತ್ತಿದ್ದಾನೆ ಹಾಗೂ ಬೇಕೆಂದಿದ್ದು ಸಿಗದೇ ಹೋದರೆ ರಂಪಮಾಡುತ್ತಾನೆ ಎಂದು ಅವರು ಹೇಳಿದರು. ಮೊದಲೆಲ್ಲ ಆತ ತನಗೆ ಏನು ಬೇಕೆಂದು ಹೇಳುತ್ತಿದ್ದ, ಆದರೆ ಪಾಲಕರು ಹೇಳಿದ್ದಕ್ಕೆ ಕೂಡಲೇ ಒಪ್ಪಿಗೆ ಕೊಡುತ್ತಿದ್ದ. ಆರಂಭದಲ್ಲಿ ಆತ ತನ್ನದೇ ಆದ ದಾರಿಯಲ್ಲಿ ಸಾಗುತ್ತಿದ್ದಾನೆ ಎಂದು ಪಾಲಕರು ಭಾವಿಸಿದ್ದರು. ಆದರೆ ಕೆಲವು ತಿಂಗಳ ಬಳಿಕ ಆ ಬಾಲಕ ದುಬಾರಿ ಬ್ರಾಂಡೆಡ್ ಟಿ-ಶರ್ಟ್, ಶೂಗಳು, ಸಾಕ್ಸ್ ಇತರ ಕ್ರೀಡಾ ಸಲಕರಣೆಯನ್ನೇ ಕೇಳುತ್ತಿದ್ದ. ಈ ವರ್ತನೆ ಬಗ್ಗೆ ನೀವೇನಾದರೂ ನನ್ನ ಮಗನ ಜತೆ ಗುಪ್ತವಾಗಿ ಮಾತಾಡುತ್ತೀರಾ ಎಂದು ಬಾಲಕನ ತಂದೆ ನನ್ನನ್ನು ಕೇಳಿದರು. ನನ್ನ ಕೈಲಾದ ಸಹಾಯ ಮಾಡುವುದಾಗಿ ನಾನು ಅವರಿಗೆ ಭರವಸೆ ನೀಡಿದೆನಾದರೂ, ಮುಂದೇನಾಗಬಹುದೋ ಎಂಬುದು ನನಗೂ ಖಚಿತವಾಗಿ ಗೊತ್ತಿರಲಿಲ್ಲ.

ಇತರ ತರಗತಿಗಳ ಹುಡುಗರದೂ ವರ್ತನೆ ಹೀಗೇ ಆಗುತ್ತಿರುವುದು ಅವರ ಪಾಲಕರಿಂದ ನನ್ನ ಸಹೋದ್ಯೋಗಿಗಳಿಗೆ ತಿಳಿದುಬಂತು. ಆಗ ಮಕ್ಕಳನ್ನು ನಾವು ಗಮನಿಸಲು ಶುರು ಮಾಡಿದೆವು. ಆಗ ಗೊತ್ತಾಗದ್ದೇನೆಂದರೆ, ಅವರೆಲ್ಲ ಒಂದೇ ಬ್ರ್ಯಾಂಡ್‌ನ ಬಟ್ಟೆ ಧರಿಸುತ್ತಿದ್ದರು; ಶ್ರೇಷ್ಠ ಎಂದು ಅವರು ಭಾವಿಸಿಕೊಂಡಿದ್ದ ಒಂದೇ ಆಟವನ್ನೇ ಅವರು ಆಡುತ್ತಿದ್ದರು. ಬೇರೆ ಒಳಾಂಗಣ ಕ್ರೀಡೆಗಳನ್ನು ಆಡುವಂತೆ ನಾವು ಸೂಚಿಸಿದಾಗ ಅವೆಲ್ಲ ಮಕ್ಕಳ ಆಟಗಳು ಎಂದು ಜರೆದು, ನಿರ್ಲಕ್ಷ್ಯ ವಹಿಸಿದರು. ಇದೆಲ್ಲಾ ಬೆಳವಣಿಗೆ ಲಕ್ಷಣ ಮತ್ತು ಅವರ ಹಿರಿಯ ತರಗತಿ ವಿದ್ಯಾರ್ಥಿಗಳನ್ನು ಅನುಕರಿಸುತ್ತಿದ್ದಾರೆ ಎಂದು ನಾವು ಅದನ್ನು ಬೆಳೆಸಲಿಲ್ಲ.

ನಾವು ಅದನ್ನು ಅಲ್ಲಿಗೇ ಬಿಟ್ಟರೂ, ಮುಂದಿನ ತಿಂಗಳಲ್ಲಿ ಮತ್ತೆ ಕೆಲವು ಪಾಲಕರು ನಮ್ಮನ್ನು ಭೇಟಿ ಮಾಡಿದಾಗ ನಮಗೆ ಏನೋ ನಡೆಯಬಾರದ್ದು ನಡೆಯುತ್ತಿದೆ ಎಂಬುದು ಗೊತ್ತಾಯಿತು. ಈ ಬಗ್ಗೆ ಶಿಕ್ಷಕರ ಸಭೆಯಲ್ಲಿ ಪ್ರಸ್ತಾಪಿಸಿ, ಚರ್ಚೆ ನಡೆಸಿದೆವು. ಇಂಥದೇ ಘಟನೆಯಲ್ಲಿ ಪಾಲಕರೊಬ್ಬರು ತಮ್ಮ ಮಗನನ್ನು ಮಾತಾಡಿಸುವಂತೆ ಕೋರಿದರು. ನಾನು ಆ ಮಗುವನ್ನು ಕರೆದು, ಆತನ ಹೊಸ ಶೂ ಬಗ್ಗೆ ಕೇಳಿದೆ. ಅದನ್ನು ಹಾಕಿಕೊಂಡು ಸಂತಸದಿಂದ ಆಟವಾಡುತ್ತಿರುವೆಯಾ ಎಂದು ಕೇಳಿದೆ. ಅದಕ್ಕೆ ಆ ಬಾಲಕ ಆಟ ಆಡಲು ಅವಕಾಶ ಸಿಕ್ಕಿಲ್ಲವೆಂದೂ, ಅದನ್ನು ಶಿಕ್ಷಕರಿಗೇನಾದರೂ ಹೇಳಿದರೆ ಇತರರು ತನ್ನನ್ನು ದೂರ ಇಡುತ್ತಾರೆ ಎಂದು ಶಿಕ್ಷಕರಿಗೆ ಹೇಳಿರಲಿಲ್ಲವೆಂದನು. ಆಗ ಗೊತ್ತಾಗಿದ್ದೇನೆಂದರೆ, ಒಬ್ಬರನ್ನೊಬ್ಬರು ನೋಡಿ ಶೂ, ಡ್ರೆಸ್ ಧರಿಸುವಲ್ಲಿ ಹಾಗೂ ತಿಂಡಿತಿನಿಸು ಸೇವನೆಯಲ್ಲೂ ನಕಲು ಮಾಡುತ್ತಿದ್ದರು. ಅಂದರೆ ಒಂದು ಚತುರ ದಬ್ಬಾಳಿಕೆ ಪ್ರಾರಂಭವಾಗಿದೆ ಎಂದಾಯ್ತು! ಇದರಿಂದ ಇನ್ನೇನೇನೋ ಆಗಬಹುದು. ದಾದಾಗಿರಿ ಎಲ್ಲ ತಂಡಗಳಿಗೂ ಅಪಾಯಕಾರಿಯಾದುದೇ ಹಾಗೂ ಇದನ್ನು ತಡೆಯದೇ ಹೋದರೆ ಈ ದಾದಾಗಿರಿ ಮಾಡುವ ಮಕ್ಕಳು ಶಾಲೆಯನ್ನು ಬಿಟ್ಟು ಹೋದ ಮೇಲೆ ಸಮಾಜವಿರೋಧಿ



ಶಕ್ತಿಗಳಾಗುವ ಅಪಾಯವೂ ಇರುತ್ತದೆ (ರಿಗ್‌ಬಿ, 2003). ಹೀಗಾಗಿ, ಮಕ್ಕಳು ತಮ್ಮ ಸಹಪಾಠಿಗಳ ಜತೆ ನಡೆಸುವ ಮಾತುಕತೆಯಲ್ಲಿ ನಾವು ಮಧ್ಯೆ ಪ್ರವೇಶಿಸಬಾರದು ಎಂಬ ನಿಲುವನ್ನು ಮತ್ತೊಮ್ಮೆ ಪರಿಷ್ಕರಿಸಿದೆವು ಹಾಗೂ ವಿಷಯದ ಗಾಂಭೀರ್ಯವನ್ನು ತಿಳಿಸಿಕೊಡಲು ಮಧ್ಯೆ ಪ್ರವೇಶಿಸಿ ಮಾರ್ಗದರ್ಶನ ನೀಡಲು ನಿರ್ಧರಿಸಿದೆವು. ಈ ವಿಷಯಕ್ಕೆ ನಾವು ಅಸೆಂಬ್ಲಿಯನ್ನು ಬಳಸಿಕೊಂಡೆವು ಮತ್ತು ದಾದಾಗಿರಿಯ ಅಪಾಯದ ಪ್ರದರ್ಶಿಕೆ ತೋರಿಸಿದೆವು. ನಿಧಾನವಾಗಿ ಈ ವಿಷಯ ಪ್ರಸ್ತಾಪಿಸಿದೆವು ಹಾಗೆಯೇ ವಿಷಯದ ಗಂಭೀರತೆಯನ್ನು ಮನದಟ್ಟು ಮಾಡಿಸಿದೆವು. ಆ ಸಭೆಯಲ್ಲಿ ಮಕ್ಕಳು ಕೂಡ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಂತೆ ಹೇಳಿದೆವು. ಮಕ್ಕಳು ತಮ್ಮ ಸಹಪಾಠಿಗಳು ತಮ್ಮ ಮೇಲೆ ಬೀರಿದ ಪ್ರಭಾವದ ಬಗ್ಗೆ ಬರೆದರು.

ಮೌಲ್ಯಗಳ ಬಗ್ಗೆ ಚರ್ಚೆನಡೆಸಲು ಮುಕ್ತ ಅವಕಾಶ ನೀಡಿದರೆ, ವಿದ್ಯಾರ್ಥಿಗಳ ಆರೋಗ್ಯಕರ ವಾತಾವರಣ ಹೆಚ್ಚುತ್ತದೆ ದಾದಾಗಿರಿ ಕಡಿಮೆಯಾಗಿ ಕಲಿಕಾ ವಾತಾವರಣ ಉತ್ತಮವಾಗಿ ರೂಪುಗೊಳ್ಳುತ್ತದೆ ಎಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ (ಲೋವಟ್, ಟೂಮೆ, ಕ್ಲೆಮೆಂಟ್, ಕ್ರೊಟಿ ಅಂಡ್ ನೆಲ್ಸನ್, 2009). ದಾದಾಗಿರಿಯಲ್ಲಿ ಹಾನಿ ಅನುಭವಿಸುವವರಿಗಿಂತ ದಾದಾಗಿರಿ ಮಾಡುವವರಿಗೇ ಹೆಚ್ಚು ನೆರವು ಮತ್ತು ಸಲಹೆ ಬೇಕಾಗಿರುವುದು ನಮಗೆ ಗೊತ್ತಾಯಿತು. ಅವರಿಗೆ ಯಾರೋ ದಾದಾಗಿರಿ ಮಾಡಿದ್ದರು ಈಗ ತಮ್ಮ ಸರದಿ ಬಂದಾಗ ಇವರು ಶುರು ಹಚ್ಚಿಕೊಂಡಿರುತ್ತಾರೆ ಇದೆಲ್ಲ ಲಘು ಹಾಸ್ಯದಿಂದ ಆರಂಭವಾಗಿದ್ದು ಒಂದು ಹಂತ ದಾಟಿದ ಮೇಲೆ ಇದನ್ನು ಹೇಗೆ ನಿಲ್ಲಿಸುವುದು ಎಂಬುದೇ ಅವರಿಗೆ ಗೊತ್ತಾಗುತ್ತಿರಲಿಲ್ಲ. ತಮ್ಮನ್ನು ಯಾರೂ ಆಕ್ಷೇಪಿಸುವುದಿಲ್ಲ ಎಂಬುದು ಗೊತ್ತಾಗುತ್ತಲೇ, ಅವರೇ ಖುದ್ದಾಗಿ ನಮ್ಮ ಕಡೆಗೆ ಸಮಸ್ಯೆ ಪರಿಹಾರ ಕೋರಿ ಬಂದರು.


ಒಂದು ಟರ್ಮ್ ವರೆಗೆ ಈರೀತಿ ನೆರವು ನೀಡಿದ ಬಳಿಕ ಅವರಿಗೆ ಸ್ವಸಾಮರ್ಥ್ಯ ಮೈಗೂಡಿಸಲು ಇದು ಸಕಾಲ ಎಂದು ನಮಗೆ ಅನಿಸಿತು. ಶಿಕ್ಷಕರ ಸಭೆಯೊಂದರಲ್ಲಿ ನಾವು ಕಂಡುಕೊಂಡಿದ್ದನ್ನು ಕುರಿತು ಚಿಂತನ ಮಂಥನ ನಡೆಸಿದೆವು ಹಾಗೂ ಈ ಅನುಭವ ನಮ್ಮನ್ನು ಇನ್ನಷ್ಟು ಶ್ರೀಮಂತಗೊಳಿಸಿತು ಎಂದು ಮನಗಂಡೆವು. ಶೈಕ್ಷಣಿಕ ಕೆಲಸಕಾರ್ಯಗಳಿಗಿಂತಲೂ ಒಂದು ಸಾಮರ್ಥ್ಯವರ್ಧನೆಯ ವಾತಾವರಣ ಹೆಚ್ಚು ಮಹತ್ವದ್ದಾಗಿರುತ್ತದೆ. ವಿದ್ಯಾರ್ಥಿಗೆ ಮಾನಸಿಕ ನೆಮ್ಮದಿ ಭದ್ರತೆ ದೊರಕಿದರೆ, ಅವರು ಚೆನ್ನಾಗಿ ಕಲಿಕೆಗೆ ಮುಂದಾಗುತ್ತಾರೆ ಎಂಬುದನ್ನು ಮಿದುಳು ಹಾಗೂ ಭಾವನೆಗಳ ಕುರಿತ ಅಧ್ಯಯನವು ಒತ್ತಿ ಹೇಳಿದೆ (ಬರ್ನಾರ್ಡ್, 1996; ಗೋಲ್‌ಮನ್, 2006): ಶಾಲೆಗಳಲ್ಲಿ ಮಾನಸಿಕ ಭದ್ರತೆ, ಸಾಮಾಜಿಕ ಹಾಗೂ ಭಾವನಾತ್ಮಕ ತಿಳಿವಳಿಕೆಗೆ ಒತ್ತು ಕೊಡುವ ಸಮಗ್ರ, ಕಾಳಜಿಯುಳ್ಳ ಹಾಗೂ ವಿದ್ಯಾರ್ಥಿ ಕೇಂದ್ರಿತ ತರಗತಿ ವಾತಾವರಣ ಅಗತ್ಯವಾಗಿವೆ (ಹಾರ್ಟ್ 1992; ಜಾನ್‌ಸನ್ ಅಂಡ್ ಜಾನ್‌ಸನ್, 2003; ವಾಲ್‌ಬರ್ಗ್, ಜಿನ್ಸ್ ಅಂಡ್ ವಿಸ್‌ಬರ್ಗ್, 2004). ದೈಹಿಕ, ಮಾನಸಿಕ ಭದ್ರತೆಯನ್ನು ಕಲ್ಪಿಸುವುದು ನಮ್ಮ ಬಹು ದೊಡ್ಡ ಕಾರ್ಯ. ಹಲವು ಬಗೆಯ ಸಂಪನ್ಮೂಲಗಳು ಲಭ್ಯವಿದ್ದರೂ, ಮಗುವಿನ ದೃಷ್ಟಿಯಲ್ಲಿ ಅದೊಂದು ಸೂಕ್ಷ್ಮ ವಿಷಯ ಎಂಬುದು ನಮಗೆ ಗೊತ್ತು. ಈ ಲೇಖನ ಕೇವಲ ನಮ್ಮ ಅನುಭವಗಳನ್ನು ಬಿಂಬಿಸುತ್ತದೆ. ಈ ಅನುಭವದಲ್ಲಿ ನಾನು ವೈಯಕ್ತಿಕವಾಗಿ ಕಲಿತ ಕೆಲವು ಅಮೂಲ್ಯ ಸಂಗತಿಗಳನ್ನು ಇಲ್ಲಿ ನೀಡುತ್ತಿದ್ದೇನೆ.

1. ಖಂಡಿಸಬೇಡಿ – ಮಗುವಿನ ಕ್ರಿಯೆ-ಪ್ರತಿಕ್ರಿಯೆಗಳನ್ನು ಅರಿಯಲು ಸ್ವಲ್ಪ ಸಮಯವನ್ನು ವಿನಿಯೋಗಮಾಡಿ.
2. ಆ ಬಗ್ಗೆ ತಿಳಿವಳಿಕೆ ಪಡೆಯಲು ಆ ಮಗುವಿನ ಪಾಲಕರು, ಸಹಪಾಠಿಗಳು ಹಾಗೂ ಶಿಕ್ಷಕರ ಜತೆ ಚರ್ಚೆ ನಡೆಸಿ. ಇದು ಬರೀ ಮಾತುಕತೆ ಅಲ್ಲ; ಆ ಮಗುವಿನ ಪ್ರಸ್ತುತ ಸ್ಥಿತಿಯ ಬಗ್ಗೆ ಮಾಹಿತಿ ಪಡೆಯುವ ವಿಧಾನ.
3. ಪಾಲಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಅವರಿಗೆ ತಮ್ಮ ಮಗುವಿನ ಬಗ್ಗೆ ಮಾಹಿತಿ ಪಡೆಯುವ ಹಕ್ಕು ಇದೆ. ಅವರು ಜವಾಬ್ದಾರಿ ವಹಿಸಿಕೊಳ್ಳಬೇಕು.ಮಗು ಸಹಪಾಠಿಗಳ ಒತ್ತಡ ಮತ್ತು ಪ್ರಭಾವವನ್ನು ತಡೆದುಕೊಳ್ಳುವುದಕ್ಕೆ ಮತ್ತು ಸಮಾಜದಲ್ಲಿ ಬೆರೆತುಬಾಳುವುದಕ್ಕೆ ಅವರು ಸಹಾಯ ಮಾಡಬಲ್ಲರು.
4. ದಿನದಿನವೂ ಮಗುವಿನ ಬಗ್ಗೆ ಸಂಗತಿ ದಾಖಲಿಸುವ ಡೈರಿ ಬರೆದಿಟ್ಟುಕೊಳ್ಳಿ. ಈ ಅಂಶಗಳು ನಿಖರವಾದ ಸಲಹೆ ಹಾಗೂ ಮಾರ್ಗದರ್ಶನ ಪಡೆಯಲು ಸಹಾಯಮಾಡಬಲ್ಲವು. ಇದು ಅವರು ಇನ್ನಷ್ಟು ಸಮರ್ಥರಾಗಲುಬೇಕಾದ ವಾತಾವರಣವನ್ನು ರಚಿಸುತ್ತದೆ.

**ಉಲ್ಲೇಖಗಳು:**

- ಗೋಲ್ಮನ್ ಡಿ.(2006). ಸೋಷಿಯಲ್ ಇಂಟಲಿಜೆನ್ಸ್: ದಿ ನ್ಯೂ ಸೈನ್ಸ್ ಆಫ್ ಸೋಷಿಯಲ್ ರಿಲೇಶನ್‌ಶಿಪ್ಸ್. ನ್ಯೂಯಾರ್ಕ್: ಬಂಟಮ್ ಬುಕ್ಸ್.
- ಹರ್ಟ್ ಎಸ್. (1992). ಕೊಲಾಬ್ರಟಿವ್ ಕ್ಲಾಸ್‌ರೂಮ್ಸ್. ಇನ್ ಟಿ. ಬೂತ್, ಡಬ್ಲ್ಯೂ ಸ್ವಾನ್, ಎಂ.ಮಾಸ್ಟರ್‌ಟನ್ ಅಂಡ್ ಪಿ. ಪಾಟ್ಸ್. (ಎಡಿಎಸ್) ಲರ್ನಿಂಗ್ ಫಾರ್ ಆಲ್: ಕರಿಕುಲಾ ಫಾರ್ ಡೈವರ್ಸಿಟಿ ಇನ್ ಎಜುಕೇಶನ್ (ಪಿಪಿ. 9?22). ಲಂಡನ್: ರೌಟ್‌ಲೆಡ್ಜ್.
- ಜಾನ್‌ಸನ್ ಡಿ.ಡಬ್ಲ್ಯೂ ಅಂಡ್ ಜಾನ್‌ಸನ್ ಆರ್.ಟಿ. (2003). ಸ್ಟುಡೆಂಟ್ ಮೋಟಿವೇಶನ್ ಇನ್ ಕೋ ಆಪರೇಟಿವ್ ಗ್ರೂಪ್ಸ್: ಸೋಶಿಯಲ್ ಇಂಡಿಪೆಂಡೆನ್ಸ್ ಥೇರಿ. ಇನ್ ಆರ್.ಎಂ. ಗಿಲಿಸ್ ಅಂಡ್ ಎ.ಎಫ್.ಅಶ್ಮಾನ್ (ಇಡಿಎಸ್). ಕೋ ಆಪರೆಟಿವ್ ಲರ್ನಿಂಗ್: ದಿ ಸೋಶಿಯಲ್ ಅಂಡ್ ಇಂಟೆಲೆಕ್ಚುವಲ್ ಔಟ್‌ಕಮ್ಸ್ ಆಫ್ ಲರ್ನಿಂಗ್ ಇನ್ ಗ್ರೂಪ್ಸ್.
- ಲೋವಟ್ ಟಿ., ಟೂಮೆ ಆರ್., ಕ್ಲೆಮೆಂಟ್ ಎನ್.,ಕ್ರೊಟಾ ಆರ್. ಅಂಡ್ ನೆಲ್ಸನ್ ಟಿ. (ಎಡಿಎಸ್) (2009), ವ್ಯಾಲ್ಯೂಸ್ ಎಜುಕೇಶನ್, ಕ್ವಾಲಿಟಿ ಟೀಚಿಂಗ್ ಅಂಡ್ ಸರ್ವೀಸ್ ಲರ್ನಿಂಗ್: ಎ ಟ್ರೊಕಾ ಫಾರ್ ಇಫೆಕ್ಟಿವ್ ಟೀಚಿಂಗ್ ಅಂಡ್ ಟೀಚರ್ ಎಜುಕೇಶನ್. ಟರಿಗಲ್, ಆಸ್ಟ್ರೇಲಿಯಾ: ಡೇವಿಡ್ ಬಾರ್ಲೋ ಪಬ್ಲಿಶಿಂಗ್.
- ರಿಗ್‌ಬಿ ಕೆ. (2003). ಅಡ್ರೆಸಿಂಗ್ ಬುಲಿಯಿಂಗ್ ಇನ್ ಸ್ಕೂಲ್ಸ್: ಥಿಯರಿ ಅಂಡ್ ಪ್ರಾಕ್ಟೀಸ್, ಟ್ರೆಂಡ್ಸ್ ಅಂಡ್ ಇಶ್ಯೂಸ್. ಆಸ್ಟ್ರೇಲಿಯನ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಮಿನಾಲಜಿ, 1–6. (ವ್ಯೂವ್ಡ್ 21 ಜೂನ್ 2010).
- ವಾಲ್‌ಬರ್ಗ್ ಎಚ್.ಜೆ., ಜಿನ್ಸ್ ಜೆ.ಇ. ಅಂಡ್ ವಿಸ್‌ಬರ್ಗ್ ಆರ್.ಪಿ. (2004). ರೆಕಮೆಂಡೇಶನ್ಸ್ ಅಂಡ್ ಕನ್‌ಕ್ಲೂಜನ್ಸ್: ಇಂಪ್ಲಿಕೇಶನ್ಸ್ ಫಾರ್ ಪ್ರಾಕ್ಟೀಸ್, ಟ್ರೇನಿಂಗ್, ರಿಸರ್ಚ್ ಅಂಡ್ ಪಾಲಿಸಿ. ಇನ್ ಜೆ.ಇ. ಜಿನ್ಸ್ ಆರ್.ಪಿ. ವಿಸ್‌ಬರ್ಗ್ ಎಂ.ಸಿ. ವಾಂಗ್ ಅಂಡ್ ಎಚ್.ಜೆ. ವಾಲ್‌ಬರ್ಗ್ (ಇಡಿಎಸ್), ಬಿಲ್ಡಿಂಗ್ ಅಕಡೆಮಿಕ್ ಸಕ್ಸೆಸ್ ಆನ್ ಸೋಶಿಯಲ್ ಅಂಡ್ ಎಮೋಶನಲ್ ಲರ್ನಿಂಗ್: ವಾಟ್ ಡಸ್ ದಿ ರಿಸರ್ಚ್ ಸೇ– (ಪಿಪಿ 209218). ನ್ಯೂಯಾರ್ಕ್: ಟೀಚರ್ಸ್ ಕಾಲೇಜ್ ಪ್ರೆಸ್.
- ಬುಲೀಸ್ ಅಂಡ್ ವಿಕ್ಟಿಮ್ಸ್ ಇನ್ ಎ ಪ್ರೈಮೆರಿ ಕ್ಲಾಸ್ರೂಮ್: ಸ್ಕಾಫ್‌ಫೋಲ್ಡಿಂಗ್ ಅಕೊಲಾಬ್ರೇಟಿವ್ ಕಮ್ಯೂನಿಟಿ ಆಫ್ ಪ್ರಾಕ್ಟೀಸ್, ವೆರೊನಿಕಾ ಮೊರ್ಕಾಮ್ ಅಂಡ್ ವೆಂಡಿ ಚಮಿಂಗ್? ಪೊಟ್ಟಿನ್, ಮರ್ಡೋಕ್ ಯೂನಿವರ್ಸಿಟಿ.





**ಕರ್ಪಗಮ್** ಅವರು ಪ್ರಸ್ತುತ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಶೈಕ್ಷಣಿಕ ನಾಯಕತ್ವ ಮತ್ತು ಆಡಳಿತ ನಿರ್ವಹಣೆ ತಂಡದಲ್ಲಿ ಕೆಲಸ ಮಾಡುತ್ತಿದ್ದಾರೆ.ಅವರು ಭಾರತದ ವಿವಿಧ ಭಾಗಗಳಲ್ಲಿರುವ KFI ಶಾಲೆಗಳಲ್ಲಿ 12 ವರ್ಷಗಳಕಾಲ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಪರಿಸರ ಶಿಕ್ಷಣವನ್ನು ಬೋಧಿಸಿದ್ದಾರೆ. ಸ್ಪೆಲ್ಲಿಂಗ್, ಓದುವಿಕೆ–ಗ್ರಹಿಸುವಿಕೆ ಮತ್ತು ಬರವಣಿಗೆಯಲ್ಲಿ ತೊಂದರೆಯನ್ನು ಅನುಭವಿಸುತ್ತಿರುವ ಮಕ್ಕಳೊಡನೆ ವಿಶೇಷ ಶಿಕ್ಷಕರಾಗಿ ಅವರ ಪ್ರಸಕ್ತ ಕಲಿಕೆಯ ಮಟ್ಟಕ್ಕೆ ಪೂರಕವಾದಂತಹ ಪರ್ಯಾಯ ಪಠ್ಯಕ್ರಮ ಹಾಗು ವಿಷಯಗಳನ್ನು ಯೋಜಿಸುವುದರಲ್ಲಿ ಮತ್ತು ರಚಿಸುವುದರಲ್ಲಿ ನಿರತರಾಗಿದ್ದರು. ಇವರು ಮನಶ್ಶಾಸ್ತ್ರ ಮತ್ತು ಶಿಕ್ಷಣದಲ್ಲಿ ಸ್ನಾತಕೊತ್ತರ ಪದವಿಯನ್ನು ಹೊಂದಿದ್ದು ಕಲಿಕೆಯಲ್ಲಿ ಕಷ್ಟ ಅನುಭವಿಸುವ ಮಕ್ಕಳನ್ನು ನಿಭಾಯಿಸುವ ಅವರಿಗೆ ಮಾರ್ಗದರ್ಶನ ಮತ್ತು ಸಲಹೆ ನೀಡುವಿಕೆ ಕುರಿತು ಸ್ನಾತಕೋತ್ತರ ಡಿಪ್ಲೊಮಾ ಹೊಂದಿದ್ದಾರೆ. ಅವರು ಒರಿಗಾಮಿಯನ್ನು ಮಾಡುವುದರಲ್ಲಿ ಒಲವು ಉಳ್ಳವರು ಮತ್ತು ಮಕ್ಕಳೊಡನೆ ಸಮಯ ಕಳೆಯಲು ಇಷ್ಟಪಡುತ್ತಾರೆ. ಇವರನ್ನು karpagam.s@azimpremjifoundation.org ಯಲ್ಲಿ ಸಂಪರ್ಕಿಸಬಹುದು.

# ಅಜೀಂ ಪ್ರೇಂಜಿ ಶಾಲೆಗಳಲ್ಲಿ ಕಲಿಕಾ ವಾತಾವರಣದ ನಿರ್ಮಾಣ

ತಪಸ್ಯಾ ಸಹಾ

" ಸಂಕ್ಷಿಪ್ತವಾಗಿ ಹೇಳುವುದಾದರೆ ಪರಿಸರವು ಜೀವಿಗಳ ಹೆಗ್ಗುರುತಾದ ಚಟುವಟಿಕೆಗಳನ್ನು ಉತ್ತೇಜಿಸುವ ಅಥವಾ ಅಡ್ಡಿಪಡಿಸುವ, ಹುರಿದುಂಬಿಸುವ ಅಥವಾ ತಡೆಯೊಡ್ಡುವ ಪರಿಸ್ಥಿತಿಗಳನ್ನು ಒಳಗೊಂಡಿರುತ್ತದೆ "

– ಜಾನ್ ಡೇವೆ



ಕಲಿಕೆ ಎನ್ನುವುದು ನಿರಂತರ ಪಯಣ. ಈ ವಿಚಾರ ಕನ್ಫೂಸಿಯಸ್ (ಕ್ರಿಸ್ತ ಪೂರ್ವ 551–479) ನಷ್ಟು ಹಳೆಯದಾದದ್ದು. ಕನ್ಫೂಸಿಯಸ್ ಹೇಳುತ್ತಿದ್ದ ಮಾತಿನಂತೆ, ಕಲಿತವನಿಗೇ ಜೀವನದಲ್ಲಿ ಯಶಸ್ಸು ಸಾಧ್ಯ, ಆದ್ದರಿಂದ ಕಲಿಕೆಯನ್ನು ಬಾಲ್ಯದಲ್ಲಿಯೇ ಮೈಗೂಡಿಸಬೇಕು. ಬೌದ್ಧ ಧರ್ಮದ 'ವಿನಯ' ಹಾಗು ಇಸ್ಲಾಂ ಧರ್ಮದ ಮದರಸಾ, ಇವೆರೆಡೂ ಧರ್ಮ ಹಾಗೂ ತತ್ವಗಳ ಬಗ್ಗೆ ಚರ್ಚೆ ನಡೆಸುವ ತಾಣಗಳ ಹೆಸರು. ಪ್ಲೇಟೋನ 'ಅಕಾಡೆಮಿ'ಯು ಪ್ರಾಯಶಃ ಮೊದಲ ಶಾಲೆ ಅಥವಾ ಅವನ ಬಹು ಪ್ರಖ್ಯಾತ ವಿದ್ಯಾರ್ಥಿ ಅರಿಸ್ಟಾಟಲ್‌ನ 'ಲೀಸಿಯಂ'ನಲ್ಲಿ ಸಿರಿವಂತರು ತತ್ವಶಾಸ್ತ್ರ, ರಾಜಕೀಯದ ಬಗ್ಗೆ ಚರ್ಚೆ ನಡೆಸಿ ಒಬ್ಬರ ಅಭಿಪ್ರಾಯಗಳಿಂದ ಇನ್ನೊಬ್ಬರು ಕಲಿಯುತ್ತಿದ್ದರು. ಕಾಲ ಸರಿದಂತೆಲ್ಲ, ಸಮಾಜಕ್ಕೆ ವಿವಿಧ ವರ್ಗಗಳ ಕೆಲಸಗಾರರು ಬೇಕಾಗುವಂತಾಯಿತು.

ನಿರ್ದಿಷ್ಟ ಪಠ್ಯಕ್ರಮ ಇಟ್ಟುಕೊಂಡು ವ್ಯವಸ್ಥಿತ ರೀತಿಯಲ್ಲಿ ಸಂರಚನೆ ಮೂಲಕ ವಿದ್ಯಾಭ್ಯಾಸ ನಡೆಯಬೇಕು ಎಂಬುದನ್ನು ಸಮಾಜ ಬಯಸುತ್ತದೆ; ಹೀಗಾಗಿ ಆಧುನಿಕ ಶಾಲಾ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿದೆ.

ವರ್ಷಗಳು ಕಳೆದಂತೆಲ್ಲ ಅಂಥ ಬೋಧನೆ ಹಾಗೂ ಕಲಿಕೆಯು ಯಾಂತ್ರಿಕವಾಗಿ, ಅದರ ಮೂಲ ಉದ್ದೇಶ ಬರೀ ಅಂಕ ಗಳಿಸುವುದಕ್ಕಷ್ಟೇ ಸೀಮಿತಗೊಂಡಿತು.

ಅಜೀಂ ಪ್ರೇಂಜಿ ಪ್ರತಿಷ್ಠಾನವು ಸುರಪುರದಲ್ಲಿ ಆರಂಭಿಸಿದ 'ಬಾಲ ಸ್ನೇಹಿ ಶಾಲಾ ಕಾರ್ಯಕ್ರಮ'ದಲ್ಲಿ, ಶಾಲೆಗಳಲ್ಲಿ 214 ಸೂಚಕಗಳನ್ನು ಪರಿಶೀಲಿಸಲಾಯಿತು. ಶಾಲೆಗಳಲ್ಲಿ ಮೂಲಭೂತ ಸೌಲಭ್ಯ, ಶಾಲಾಕೊಠಡಿ ವಾತಾವರಣ, ಬೋಧನೆ–ಕಲಿಕಾ ಪ್ರಕ್ರಿಯೆ, ಶಿಕ್ಷಕ–ಸಾಮರ್ಥ್ಯ ವೃದ್ಧಿ ಹಾಗೂ ಶಾಲೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯಂಥ ಸೂಚಕಗಳು ಇದರಲ್ಲಿ ಇದ್ದವು. ಈಗ 60 ಸೂಚಕಗಳನ್ನು ಮಾತ್ರ ಬಳಸಲಾಗುತ್ತಿದ್ದು, ಶಿಕ್ಷಕರ ಸಾಮರ್ಥ್ಯ ವೃದ್ಧಿ ಹಾಗೂ ಬೋಧನೆ ಕಲಿಕಾ ಪ್ರಕ್ರಿಯೆ ಗುಣಮಟ್ಟ ಎಂಬ ಎರಡು ಕ್ಷೇತ್ರಗಳ ಮೇಲೆ ಗಮನಹರಿಸಲಾಗಿದೆ. ಹೀಗಾಗಿ ಇವರಡೇ ವಲಯಗಳು ನಮಗೆ ಬಹುಮುಖ್ಯವಾಗಿವೆ.

ಈ ಎರಡು ಕ್ಷೇತ್ರಗಳ ಮೇಲೆ ಗಮನ ಹರಿಸುವ ಸಮಯದಲ್ಲಿ, ಪ್ರತಿಯೊಬ್ಬ ವಿದ್ಯಾರ್ಥಿಯ ಸುರಕ್ಷತೆ, ಆರೋಗ್ಯ, ಸಮಾನತೆ ಹಾಗೂ ಸಮನ್ವಯಗೊಳಸುವಿಕೆ ಇದ್ದಾಗ ಮಾತ್ರ ಕಲಿಕೆ ಉತ್ತಮವಾಗಿ ಆಗುತ್ತದೆ ಎಂದು ನಾವು ನೆನಪಿಡ'ಬೇಕಾಗುತ್ತದೆ. ಗುಣಾತ್ಮಕ ಕಲಿಕಾ ವಾತಾವರಣಕ್ಕೆ ಈ ಪ್ರತಿಯೊಂದು ಅಂಶವೂ ಮುಖ್ಯವಾಗಿವೆ. ಈ ನಾಲ್ಕು ತತ್ವಗಳನ್ನು ನಾವು ಕಲಿಕೆಯನ್ನು ಸುಗಮ ಗೊಳಸುವಾಗ ಪರಿಣಾಮಕಾರಿಯಾಗಿ ಸಂಯೋಜಿಸಿದರೆ ಮಾತ್ರ, ಆ ಕಲಿಕಾ ವಾತಾವರಣವು ಸುಸ್ಥಿರವಾಗಿ ಉಳಿಯಬಲ್ಲದು.

ಈ ವಿಚಾರಗಳನ್ನು ಶಿಕ್ಷಕರು ಆದಷ್ಟೂ ಅರ್ಥಮಾಡಿ–ಕೊಳ್ಳುವುದು ಹಾಗೂ ಇವುಗಳನ್ನು ಆದಷ್ಟೂ ಆಚರಣೆಗೆ ತರುವುದು ಮುಖ್ಯ. ಹೊಸದಾಗಿ ನೇಮಕಗೊಂಡ ಮತ್ತು ಬೋಧನೆ–ಕಲಿಕೆ ವಿಧಾನದ ಬಗ್ಗೆ ಸೀಮಿತ ತಿಳವಳಿಕೆ ಹೊಂದಿರುವ ಶಿಕ್ಷಕರನ್ನು ಪರಿಗಣಿಸಿ ನಾನು ಈ ಮಾತು ಹೇಳುತ್ತಿದ್ದೇನೆ. ಇಲ್ಲಿ ಚರ್ಚಿಸಿದ ಅಂಶಗಳನ್ನು ಗಮನಿಸಿ, ಅಜೀಂ ಪ್ರೇಂಜಿ ಶಾಲೆಗಳನ್ನು ರೂಪಿಸಿದ್ದೇವೆ.

ಹೀಗೆ 'ಗುಣಾತ್ಮಕ ಕಲಿಕೆ' ಗುರಿಯನ್ನು ಸಾಧಿಸಲು ನಾವು ಎಲ್ಲೆಡೆ ಪರಿಶೀಲನೆ ನಡೆಸಿ, ಈ ಗುಣಾತ್ಮಕ ಕಲಿಕೆ ಸಾಧಿಸಲು ಏನು ಮಾಡಬೇಕು ಎಂದು ಯೋಚಿಸಿದೆವು. ಮೂಲಭೂತ ಸೌಕರ್ಯಗಳೇ? ಆರೋಗ್ಯಕರ ಮಧ್ಯಾನದ ಬಿಸಿಯೂಟವೇ? ಮಕ್ಕಳ ಜತೆ ಖಡಾ ಖಂಡಿತವಾಗಿ ವರ್ತಿಸುವುದೇ? ಯಾವಾಗಲೂ ಅವರನ್ನು ಶಿಸ್ತಿಗೆ ಒಳಪಡಿಸುವುದೇ? ಹೆಚ್ಚೆಚ್ಚು ಹೋಮ್‌ವರ್ಕ್ ಕೊಡುವುದೇ? ಪದೇ ಪದೇ ಟೆಸ್ಟ್ ಹಾಗೂ ಪರೀಕ್ಷೆ ನಡೆಸುವುದೇ? ಶಿಕ್ಷಿಸುವುದೇ? ನಮ್ಮೆದುರು ಒಂದು ದೊಡ್ಡ ಪಟ್ಟಿಯೇ ಇತ್ತು. ನಾವು ಬೆಳೆಯುತ್ತಿದ್ದಾಗ ಇದನ್ನೆಲ್ಲ ಅನುಭವಿಸಿದ್ದೇವಲ್ಲ?

ದೈಹಿಕ ಹಾಗೂ ಮಾನಸಿಕ–ಸಾಮಾಜಿಕ ವಾತಾವರಣ ಪ್ರೇರಕವಾಗಿರಬೇಕು ಎಂಬುದನ್ನು ನಾವು ಕಂಡುಕೊಂಡೆವು.



**ಮಾನಸಿಕ–ಸಾಮಾಜಿಕ ವಾತಾವರಣ**

ನಮ್ಮ ಶಾಲೆಗಳಲ್ಲಿ, ಈ ಕ್ಷೇತ್ರಗಳಲ್ಲಿ ಪ್ರತಿಯೊಬ್ಬರ ಬಗ್ಗೆಯೂ ಕಾಳಜಿ ವಹಿಸಲು ನಾವು ಪ್ರಯತ್ನಿಸಿದೆವು. ಶಾಲೆಯು ಆರಂಭವಾಗುವುದಕ್ಕೂ ಮುನ್ನವೇ ಸಮುದಾಯದ ಮಕ್ಕಳನ್ನು ನಮ್ಮೊಂದಿಗೆ ಬರುವಂತೆ ಆಹ್ವಾನಿಸಿ, ಶಾಲೆಯ ಆವರಣದಲ್ಲಿ ನಮ್ಮ ಜತೆ ಇರಲು ಮನವಿ ಮಾಡಿದೆವು.

ಕಲಿಕಾ ಸಮಸ್ಯೆ ಎದುರಿಸುತ್ತಿದ್ದ ಮಕ್ಕಳನ್ನು ಸಿರೋಹಿ, ರುದ್ರಾಪುರ ಹಾಗೂ ಟೋಂಕ್ ಶಾಲೆಗೆ ಸೇರ್ಪಡೆ ಮಾಡಿದೆವು. ಮಕ್ಕಳ ಕಲಿಕಾ ಮಟ್ಟ ಬೇರೆ ಬೇರೆಯಾಗಿದ್ದುದನ್ನು ಗಮನಿಸಿದೆವು; ಶಿಕ್ಷಕರು ಪ್ರತಿ ಮಗುವಿನ ಅಗತ್ಯತೆಯನ್ನು ಪ್ರತ್ಯೇಕವಾಗಿ ದಾಖಲು ಮಾಡಿದರು. ಅದಕ್ಕೆ ಪೂರಕವಾಗಿ ಪಾಠಗಳನ್ನು ಯೋಜಿಸಿದರು. ಇದು ಕೇವಲ ಆ ಮಗುವಿನ ಬೌದ್ಧಿಕ ಮಟ್ಟಕ್ಕೆ ಮಾತ್ರವಲ್ಲ; ಶಾಲೆಗೆ ತಪ್ಪದೇ ಬರುವುದರ ಕಡೆಗೂ ಗಮನವಿಟ್ಟೆವು. ಸಿರೋಹಿಯಲ್ಲಿ ಕೆಲವು ಮಕ್ಕಳು ತಮ್ಮ ಸಹೋದರ, ಸಹೋದರಿಯೊಂದಿಗೆ ಬಂದರು; ಇನ್ನೊಬ್ಬ ಅಜ್ಜಿ ಅಥವಾ ತಾಯಿ ಜತೆ ಕೆಲವು ದಿನ ಬಂದ. ಸಿರೋಹಿಯಲ್ಲಿ ನಮ್ಮ ಶಾಲೆಯ ಶಿಕ್ಷಕಿಯೊಬ್ಬರು ಪ್ರತಿ ದಿನವೂ ತಮ್ಮ ಒಂದೂವರೆ ವರ್ಷದ ಮಗಳ ಜತೆ ಶಾಲೆಗೆ ಬರುತ್ತಿದ್ದರು. ಇದು ಶಾಲೆಯ ಕಾರ್ಯವೈಖರಿ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರಲಿಲ್ಲ. ಉಳಿದ ಸಿಬ್ಬಂದಿಯು ಆ ತಾಯಿ–ಮಗುವಿಗೆ ಸಹಕಾರ ನೀಡಿದರು.

ಆರಂಭದಲ್ಲಿ ಮಕ್ಕಳು ಅಡುಗೆ ಮನೆಯಲ್ಲಿ ಇಣುಕಿ, ಬಿಸ್ಕಿಟ್ ಬೇಕೆಂಬ ಆಸೆ ವ್ಯಕ್ತಪಡಿಸುತ್ತಿದ್ದರು. ಅದನ್ನು ನಾವು ಈಡೇರಿಸುತ್ತಿದ್ದೆವು. ಕೆಲ ಸಲ ಒಂದು ಹುಡುಗಿ ಚೆಂಡೊಂದನ್ನು ತೆಗೆದುಕೊಂಡು ಹೋಗಿ, ಇಡೀ ದಿನ ಹೊರಗೇ ಆಡುತ್ತಿದ್ದಳು. ಶಿಕ್ಷಕರು ಅವಳನ್ನು ಪ್ರೀತಿ ತಾಳ್ಮೆಯಿಂದ ಕಾಯುತ್ತಿದ್ದರು. ಸ್ವಲ್ಪ ದಿನಗಳ ಬಳಿಕ ಆ ಹುಡುಗಿ ಅದನ್ನು ಬಿಟ್ಟುಬಿಟ್ಟಳು. ಇದು ಶಿಕ್ಷಕರ ಸಾಧನೆಯೇ ಆಗಿತ್ತು ಹಾಗೂ ಇದರಿಂದ ಅವರಿಗೆ ಪ್ರೇರೇಪಣೆ ಸಿಕ್ಕಂತಾಯಿತು.



### ಭೌತಿಕ ವಾತಾವರಣ

ಎಲ್ಲ ಅಜೀಂ ಪ್ರೇಂಜಿ ಶಾಲೆಗಳೂ ಬಾಡಿಗೆ ಕಟ್ಟಡದಲ್ಲಿ ಆರಂಭವಾದವು. ಆ ಕಟ್ಟಡಗಳು ಶಾಲೆಗೆ ಹೇಳಿ ಮಾಡಿಸಿದಂತೆ ಇರಲಿಲ್ಲ. ತರಗತಿ ಕೊಠಡಿಗಳು ಗಾಳಿ-ಬೆಳಕಿನಿಂದ ಸಮೃದ್ಧವಾಗಿರಲಿಲ್ಲ. ಎಲ್ಲ ಶಾಲೆಗಳೂ ಆಟದ ಮೈದಾನವನ್ನು ಹೊಂದಿರಲಿಲ್ಲ. ಪೀಠೋಪಕರಣಗಳು ಕೆಲವೇ ಶಾಲೆಗಳಲ್ಲಿ ಇದ್ದವು. ಕೆಳಗೆ ಕುಳಿತುಕೊಳ್ಳಲು ದರಿಗಳನ್ನು ಬಳಸಿದೆವು. ಗಿಡ್ಡ ಟೇಬಲ್‌ಗಳನ್ನು ಮಕ್ಕಳು ಬಳಸುವಂತೆ ಇಟ್ಟೆವು. ಮಕ್ಕಳು ಮಾಡಿದ್ದನ್ನು ಪ್ರದರ್ಶಿಸಲು ದಾರ ಹಾಗೂ ಪುಸ್ತಕಗಳನ್ನು ಇಡಲು ಕಪಾಟು ಇದ್ದವು. ಶಿಕ್ಷಕರು ಕೆಲವು ಪೋಸ್ಟರ್ ಹಾಗೂ ಚಾರ್ಟ್‌ಗಳನ್ನು ಪ್ರದರ್ಶಿಸಿದರು ಭೌತಿಕ ವಾತಾವರಣವನ್ನು ರೂಪಿಸಲು ಒತ್ತನ್ನು ನೀಡದಿರಲು ಮೂರು ಕಾರಣಗಳಿದ್ದವು. ಒಂದು-ಈ ಕಟ್ಟಡಗಳು ಬಾಡಿಗೆಗೆ ಪಡೆದಿದ್ದಂಥವು. ಎರಡು-ಶಾಲೆಯು ಒಂದು ನಡುಗಡ್ಡೆಯಂತೆ ಪ್ರತ್ಯೇಕವಾಗಬಾರದು. ಮೂರು-ಮಕ್ಕಳು ತಮ್ಮ ಮನೆ ಅಥವಾ ಓಣಿಯಲ್ಲಿನ ಒಂದು ಭಾಗವೆಂಬಂತೆ ಈ ಶಾಲೆಯನ್ನು ಭಾವಿಸಬೇಕು.

ಇರುವ ಕಟ್ಟಡಗಳನ್ನೇ ಅತ್ಯುತ್ತಮವಾಗಿ ಬಳಸಿಕೊಂಡು ಅಜೀಂ ಪ್ರೇಂಜಿ ಶಾಲೆಗಳಲ್ಲಿ ಕನಿಷ್ಠ ಬದಲಾವಣೆ ಮಾಡಿಕೊಳ್ಳುವತ್ತ ಗಮನಹರಿಸಿದೆವು. ಶಾಲಾಕೊಠಡಿಗಳು ಸ್ವಚ್ಛವಾಗಿದ್ದವು ಹಾಗೂ ಆಹಾರ ಚೆನ್ನಾಗಿತ್ತು. ಅದೆಲ್ಲಕ್ಕಿಂತ ಹೆಚ್ಚಾಗಿ ಪ್ರತಿಯೊಂದು ಮಗು ಹಾಗೂ ಶಿಕ್ಷಕನ ಮಧ್ಯೆ ವಿಶ್ವಾಸ, ಗೌರವ, ಸ್ವಾತಂತ್ರ್ಯ ಹಾಗೂ ತಿಳಿವಳಿಕೆ ಇರುವಂತೆ ನೋಡಿಕೊಳ್ಳಲಾಯಿತು. ಸಿರೋಹಿಯಲ್ಲಿನ ಅಜೀಂ ಪ್ರೇಮ್‌ಜಿ ಶಾಲೆಗೆ ಸೇರಿದ ಬಹಳ ಮಕ್ಕಳು ಅದೇ ಮೊದಲಬಾರಿಗೆ ಶಾಲೆಗೆ ಬರುತ್ತಿರುವವರಾಗಿದ್ದರು ಕೆಲವರು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು ಆಗಿದ್ದರು. ಕೆಲವರು ಕೇವಲ 15 ನಿಮಿಷಗಳಷ್ಟು ಸಹ ತರಗತಿಯಲ್ಲಿ ಕೂರಲು ಬಯಸುತ್ತಿರಲಿಲ್ಲ. ಆರಂಭಿಕ ದಿನಗಳಲ್ಲಿ ಯಾವಾಗ ಹಾಗೂ ಯಾವ ತರಗತಿಯಲ್ಲಿ ಕುಳಿತುಕೊಳ್ಳಬೇಕು ಎಂಬುದನ್ನು ಮಕ್ಕಳು ನಿರ್ಧರಿಸುತ್ತಿದ್ದರು. ಒಂದೂವರೆ ತಿಂಗಳ ಬಳಿಕ, ಅದೇ ಮಕ್ಕಳು ವಾಸ್ತವವಾಗಿ ಯಾವ ತರಗತಿಯಲ್ಲಿ ಕುಳಿತುಕೊಳ್ಳಬೇಕಿತ್ತೋ ಅಲ್ಲಿಗೆ ಹಾಜರಾಗಲು ಶುರು ಮಾಡಿದರು.

ಒಬ್ಬರನ್ನೊಬ್ಬರು ಬೈಯುವುದು, ಹೊಡೆಯುವುದು, ಒದೆಯುವುದು ಇವೆಲ್ಲ ಪ್ರತೀಕಾರದ ಕ್ರಮಗಳಾಗಿರದೇ ಖುಷಿಯಿಂದ ಆಗುತ್ತಿದ್ದವು ಎಂದು ಅನಿಸುತ್ತದೆ. ಈ ಬಗ್ಗೆ ಮಕ್ಕಳೊಡನೆ ಚರ್ಚಿಸಿದಾಗ ಮಕ್ಕಳು ಇದ್ದ ಮನೆ ಅಥವಾ ಬಡಾವಣೆಯಲ್ಲಿ ಇವೇ ನಡೆಯುತಿದ್ದವೆಂಬುದು ತಿಳಿದುಬಂತು. ಹೊಡೆದಾಟ, ಬೈಗುಳ ಹಾಗೂ ಒಬ್ಬರನ್ನೊಬ್ಬರು ದೂಷಿಸುವುದು ನಡೆಯುತ್ತಿದ್ದವು. ಮಕ್ಕಳು ಪದೇ ಪದೇ ಓಡಿ



ಬಂದು ದೂರುವುದು, ನಾವು ಆ ಘಟನೆ ನಡೆದಿದ್ದು ಏಕೆಂದು ಕೇಳದೇ ಅವರನ್ನು ಸಮಾಧಾನಪಡಿಸಿ ಸ್ನೇಹಿತರನ್ನಾಗಿ ಮಾರ್ಪಡಿಸುವುದು ನಡೆಯುತ್ತಿತ್ತು, ಆ ಬಳಿಕ ಅವರನ್ನು ಬೇರೊಂದು ಆಟದಲ್ಲಿ ತೊಡಗಿಸುತ್ತಿದ್ದೆವು. ಇದರಿಂದ ದೊಡ್ಡ ಬದಲಾವಣೆ ಆಗದಿದ್ದರೂ ಕೋಪ, ವರ್ತನೆ ಹಾಗೂ ಅಸಹನೀಯ ಘಟನೆಗಳು ಕಡಿಮೆಯಾದವು. ಮೊದಲೆಲ್ಲ ನಡೆಸುತ್ತಿದ್ದ ಜಗಳಗಳ ಬದಲಿಗೆ ಹೊಸ ಹೊಸ ಆಟ ಆಡಲು ಆಸಕ್ತಿ ತೋರಿಸಲು ಆರಂಭಿಸಿದರು.

ಮಕ್ಕಳನ್ನು ಎಂದೂ ಬೆದರಿಸಲಿಲ್ಲ; ಯಾವುದೇ ಷರತ್ತು ಇಲ್ಲದೇ ಅವರು ಇದ್ದಂತೆಯೇ ಒಪ್ಪಿಕೊಳ್ಳಲಾಯಿತು. ಆಸಕ್ತಿ ಇಲ್ಲದ ಕಲಿಕೆ ಅಥವಾ ಹೋಮ್‌ವರ್ಕ್ ಹೊರೆಯನ್ನು ಅವರ ಮೇಲೆ ಹೇರಲೇ ಇಲ್ಲ. ಅರ್ಥಪೂರ್ಣ ಚಟುವಟಿಕೆಗಳು, ಗುಂಪು ಕ್ರೀಡೆಗಳ ಮೂಲಕ ಅವರಿಗೆ ಕಲಿಸಲು ಒತ್ತು ಕೊಡಲಾಯಿತು. ಪ್ರತಿ ಬಾಲಕ ಅಥವಾ ಬಾಲಕಿಯು ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಕಲಿಯಲು ಅವಕಾಶ ನೀಡಲಾಯಿತು ಹಾಗೂ ಅವಧಿಯ ಕೊನೆಗೆ ಗುಣಾತ್ಮಕ ಮೌಲ್ಯಮಾಪನ ಮಾಡಲಾಯಿತು. ಮಕ್ಕಳ ಕಲಿಕಾ ಮಟ್ಟವನ್ನು ಶಿಕ್ಷಕರು ಪರಿಶೀಲಿಸಿ, ಅವರಿಗೆ ತಕ್ಕಂತೆ ತಮ್ಮ ಬೋಧನಾ ಪ್ರಕ್ರಿಯೆಯನ್ನು ಪುನಾರಚಿಸಿಕೊಂಡರು.



ರುದ್ರಪುರದಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿನ ಮಗುವಿನ ಪಾಲಕರು ಒಮ್ಮೆ ಗೊಂದಲದಿಂದ ಈ ಶಾಲೇ ಏನು ಮಾಡುತ್ತಿದೆ ತಮ್ಮ ತಿಳವಳಿಕೆಗೂ ಆಚೆ ಈ ಶಾಲೆ ಇದೆಯಲ್ಲ ಎಂದು ನನ್ನನ್ನು ಪ್ರಶ್ನಿಸಿದರು. ಅಗ ನಾನು ಸಲ್ಲದ ಸಂವಾದಕ್ಕೆ ತೊಡಗಲು ಸಮಯವಿರದಿದ್ದರಿಂದ ಅವರಿಗೆ ಮರುಪ್ರಶ್ನೆ ಹಾಕಿದೆ: ನಿಮ್ಮ ಮಗು ದಿನನಿತ್ಯ ಶಾಲೆಗೆ ಬರುತ್ತಿದೆಯೇ? ಅದಕ್ಕೆ ಅವರು ಮುಗುಳ್ನಗುತ್ತ ಹೇಳಿದರು: 'ಹೌದು.. ಹೌದು. ಈಗ ನನ್ನ ಮಗು ಒಂದು ದಿನ ಕೂಡ ಶಾಲೆ ತಪ್ಪಿಸುತ್ತಿಲ್ಲ.'



**ತಪಸ್ಯ** ಅವರು ಈಗ ಅಜೀಂ ಪ್ರೇಂಜಿ ಪ್ರತಿಷ್ಠಾನದ 'ಸ್ಕೂಲ್ ಕೋರ್ ಟೀಂ' ನಲ್ಲಿ ಕೆಲಸಮಾಡುತ್ತಿದ್ದಾರೆ. ಇವರು ಪ್ರೌಢಶಾಲಾ ಮಟ್ಟದಲ್ಲಿ ಭೂಗೋಳ ಶಾಸ್ತ್ರವನ್ನು ಬೋಧಿಸಿದ್ದಾರೆ. ಇವರನ್ನು tapasya@azimpremjifoundation.org ನಲ್ಲಿ ಸಂಪರ್ಕಿಸಬಹುದು.



# ವಲಸೆ ಕಾರ್ಮಿಕರ ಮಕ್ಕಳ ಸಾಮರ್ಥ್ಯ ವರ್ಧನೆ

**ಶುಭ**

ಬಡತನದ ಬೇಗೆಯಿಂದ ತಪ್ಪಿಸಿಕೊಳ್ಳಲು ಅನೇಕ ಅಕುಶಲ ಮತ್ತು ಅರೆ ಕುಶಲ ಕಾರ್ಮಿಕರು ತಮ್ಮ ಹುಟ್ಟೂರು ತೊರೆದು ನಗರಗಳಿಗೆ ಕೆಲಸವನ್ನು ಹುಡುಕುತ್ತಾ ಬರುತ್ತಾರೆ. ಈ ಕಾರ್ಮಿಕರು ತಮ್ಮ ಸಂಸಾರದೊಂದಿಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಾರೆ. ಸಣ್ಣ, ಸಣ್ಣ ಶೆಡ್ಡುಗಳಲ್ಲಿ ಅವರ ವಾಸ. ಎಷ್ಟೋ ಬಾರಿ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ, ನಿರ್ಮಾಣ ಕಂಪನಿಯವರೇ ಈ ಶೆಡ್ಡುಗಳನ್ನು ಆ ಕಾಮಗಾರಿ ನಡೆಯುವವರೆಗೆ ಒದಗಿಸಿರುತ್ತಾರೆ. ಅವರೇನೂ ಈ ಕಾರ್ಮಿಕರಿಗೆ ವಿದ್ಯುತ್ ಅಥವಾ ನೈರ್ಮಲ್ಯ ಸೌಕರ್ಯವನ್ನು ಒದಗಿಸುವುದಿಲ್ಲ. ಇಲ್ಲಿ ಕಾಮಗಾರಿ ಮುಗಿದ ನಂತರ ಮತ್ತೊಂದು ಸ್ಥಳಕ್ಕೆ ವಲಸೆ. ಇದು ಇವರ ಪರಿಪಾಟು.

ಊರಿಂದ ಊರಿಗೆ ವಲಸೆ ಹೋಗುವುದರಿಂದ ಮತ್ತು ಕಾಮಗಾರಿ ಸ್ಥಳಕ್ಕೆ ಹತ್ತಿರದಲ್ಲಿ ಒಳ್ಳೆಯ ಗುಣಮಟ್ಟದ ಶಾಲೆಗಳು ದೊರಕದಿರುವುದರಿಂದ ವಲಸೆ ಕಾರ್ಮಿಕರ ಬಹಳಷ್ಟು ಮಕ್ಕಳು ಶಾಲೆಗೆ ಹೋಗುವುದೇ ಇಲ್ಲ. ಇದರ ಜೊತೆಗೆ ತಂದೆ ತಾಯಿಯರು ತಮ್ಮ ಕೆಲಸಕ್ಕೆ ಹೋದ ಸಮಯದಲ್ಲಿ ತಮ್ಮ ಕೈಕೂಸು ತಂಗಿ ತಮ್ಮಂದಿರ ಮತ್ತು ಮನೆಯ ನಿಗಾವಣೆಯನ್ನೂ ಇವರು ಮಾಡಬೇಕಾಗುತ್ತದೆ. ಹೀಗಾಗಿ ಮನೆಗೆಲಸ ಮತ್ತು ಮಕ್ಕಳ ಪಾಲನೆಯಲ್ಲಿ ಈ ಮಕ್ಕಳು ತಮ್ಮ ವಯಸ್ಸಿಗೆ ಮೀರಿ ಪ್ರಬುದ್ಧರಾಗಿರುತ್ತಾರೆ. ತಮ್ಮ ದೈನಂದಿನ ಹೊಟ್ಟೆಪಾಡಿಗೆ ಹೆಣಗಾಡುವುದೇ ಈ ಜನರ ಬದುಕಿನ ಮುಖ್ಯ ಜಂಜಾಟವಾಗಿರುವಾಗ ಮತ್ತು ಬಹಳಷ್ಟು ಸಲ ಕುಟುಂಬದಲ್ಲಿ ಈ ಮಕ್ಕಳೇ ಮೊದಲ ಬಾರಿಗೆ ಶಾಲೆ ಮೆಟ್ಟಿಲು ಹತ್ತುವವರಾದ್ದರಿಂದ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ವಲಸೆ ಕಾರ್ಮಿಕರ ತಲೆಗೆ ಹೊಳೆದಿರುವುದೇ ಇಲ್ಲ.

ಈ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕೆ ಪಠ್ಯಕ್ರಮ ಹೇಗಿರಬೇಕು ಮತ್ತು ಯಾವ ಯಾವ ವಿಷಯದಲ್ಲಿ ಇವರಿಗೆ ಸಾಮರ್ಥ್ಯ ಒದಗಿಸಬೇಕು ಎಂಬುದನ್ನು ಮನಗಾಣಲು ಅಜೀಂ ಪ್ರೇಂಜಿ ಫೌಂಡೇಶನ್ ಈ ಮಕ್ಕಳಿಗಾಗಿ ಶಾಲೆಯನ್ನು ಪ್ರಾರಂಭಿಸುವುದಕ್ಕೆ ನಿರ್ಧರಿಸಿತು. ಇಬ್ಬರು ಬಿಲ್ಡರುಗಳ ಸಹಭಾಗಿತ್ವದೊಂದಿಗೆ ನಾವು 2007ರಲ್ಲಿ ಬೆಂಗಳೂರಿನಲ್ಲಿ ವಲಸೆ ಕಾರ್ಮಿಕರ ಮಕ್ಕಳಿಗಾಗಿ ಎರಡು ಶಾಲೆಗಳನ್ನು ಪ್ರಾರಂಭಿಸಿದೆವು. ಶಾಲೆಯನ್ನು ಪ್ರಾರಂಭಿಸುವುದರಿಂದ ಹಿಡಿದು ಅದನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗುವುದು, ಇತರ ಸೌಕರ್ಯಗಳನ್ನು ಒದಗಿಸುವುದು, ಶಿಕ್ಷಕರಿಗೆ ತರಬೇತಿಯನ್ನು ನೀಡುವುದು ಮತ್ತು ಪಠ್ಯಕ್ರಮವನ್ನು ಇಲ್ಲಿನ ಅವಶ್ಯಕತೆಗೆ ತಕ್ಕಂತೆ ಆಮೂಲಾಗ್ರವಾಗಿ ಬದಲಾಯಿಸುವುದು ಈ ಹಾದಿಯಲ್ಲಿನ ಈವರೆಗಿನ ನಮ್ಮ ಪಯಣ ನಮಗೆ ಈ ಮಕ್ಕಳ ಅವಶ್ಯಕತೆಗಳನ್ನು ಅರಿಯುವುದಕ್ಕೆ ಸಹಾಯ ಮಾಡಿವೆ ಮತ್ತು ಈ ಸಂಗತಿಗಳು ಆ ಮಕ್ಕಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯಲು ನೆರವಾಗಿವೆ.

ಕೇವಲ 6 ರಿಂದ 12 ವರ್ಷದ ಒಳಗಿನ ಮಕ್ಕಳನ್ನು ಮಾತ್ರ ನಾವು ಶಾಲೆಗೆ ತೆಗೆದುಕೊಳ್ಳುವುದಕ್ಕೆ ನಿರ್ಧರಿಸಿದರೆ ನಾವು ತರಗತಿಗೆ ಮಕ್ಕಳನ್ನು ಸೇರಿಸಿಕೊಳ್ಳುವುದು ಆಗುವುದೇ ಇಲ್ಲ ಎಂಬುದು ನಮಗೆ ಮನವರಿಕೆಯಾದ ಸತ್ಯ. ಏಕೆಂದರೆ, ಈ ವಯಸ್ಸಿನ ಎಲ್ಲಾ ಮಕ್ಕಳು ತಮಗಿಂತ ಸಣ್ಣ ಮಕ್ಕಳ ಪಾಲನೆಯಲ್ಲಿ ಅಥವಾ ಪ್ರತಿ ತಿಂಗಳಿಗೆ ರೂ. 400ರಿಂದ 500ರವರೆಗಿನ ಹಣಕ್ಕಾಗಿ ನೆರೆ-ಹೊರೆಯ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಆದ್ದರಿಂದ, ಎಳೆಯ ಮಕ್ಕಳಿಗಾಗಿ ಶಾಲೆಯಲ್ಲಿಯೇ ಒಂದು ಶಿಶುಧಾಮವನ್ನು ನಿರ್ಮಿಸಲು ಮತ್ತು ಪುಟ್ಟ ಮಕ್ಕಳಿಗಾಗಿ ಒಂದು ಶಿಶು ವಿಹಾರವನ್ನು ನಿರ್ಮಿಸಲು ನಿರ್ಧರಿಸಿದೆವು.

ಮಕ್ಕಳಲ್ಲಿ ಶಾಲೆಯಲ್ಲಿ ತಾವು ಸುರಕ್ಷಿತವಾಗಿದ್ದೇವೆ ಎಂಬ ಭಾವನೆಯನ್ನು ಮೂಡಿಸುವುದಕ್ಕೆ ಮತ್ತು ಅವರು ತಮ್ಮ ಸಣ್ಣ ಟೆಂಟ್ಗಳು ಹಾಗೂ ತಮಗೆ ಸೇರಿದ ವಸ್ತುಗಳ ಮೇಲೆ ನಿಗಾ ಇರಿಸುವುದಕ್ಕೆ ಸಾಧ್ಯವಾಗುವಂತೆ ಮಾಡಲು ಶಾಲೆಯನ್ನು ಕಾಮಗಾರಿಯ ಕ್ಯಾಂಪ್‌ನಲ್ಲಿ ಅಥವಾ ಕ್ಯಾಂಪ್‌ನ ಸಮೀಪದಲ್ಲಿ ಪ್ರಾರಂಭಿಸಲು ನಾವು ನಿರ್ಧರಿಸಿದೆವು. ಈ ಮಕ್ಕಳು ಶಾಲೆಗೆ ಹೋಗದಿರುವುದಕ್ಕೆ ಈ ಸಂಗತಿಗಳೇ ಮುಖ್ಯ ಕಾರಣವಾಗಿದ್ದವು. ಈ ಒಂದು ಏರ್ಪಾಟಿನಿಂದಾಗಿ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುವುದಕ್ಕೆ ಸಹಾಯವಾಯಿತು ಮತ್ತು ತಂದೆ ತಾಯಿಯರು ತಮ್ಮ ಮಕ್ಕಳು ಮತ್ತು ತಮ್ಮ ವಸ್ತುಗಳು ಸುರಕ್ಷಿತವಾಗಿವೆ ಎಂಬ ನೆಮ್ಮದಿ ಹೊಂದಿದರು.

ಶಾಲೆಗೆ ಮಕ್ಕಳನ್ನು ಸೇರಿಸಿಕೊಂಡ ನಂತರ ಅವರಲ್ಲಿ ಅನೇಕರು ಪೌಷ್ಠಿಕ ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ ಎಂಬ ಸಂಗತಿ ನಮಗೆ ತಿಳಿದು ಬಂದಿತು. ಆದ್ದರಿಂದ ಎಲ್ಲಾ ಮಕ್ಕಳಿಗೂ ಮೂರು ಹೊತ್ತಿನ ಊಟವನ್ನು ನೀಡಲು ನಿರ್ಧರಿಸಿದೆವು. ಪೌಷ್ಠಿಕ ಆಹಾರ ತಜ್ಞರ ಸಲಹೆಯ ಆಧಾರದ ಮೇಲೆ ಮೂರು ಊಟದ ವಿವರವನ್ನು ನಿರ್ಧರಿಸಲಾಯಿತು. ಈಗ ಮಕ್ಕಳಿಗೆ ಪ್ರತಿ ದಿನ ಬೆಳಗಿನ ತಿಂಡಿ, ಮದ್ಯಾಹ್ನದ ಊಟ, ಮತ್ತು ಸಂಜೆಯ ಸಮಯದಲ್ಲಿ ಉಪಹಾರ ದೊರೆಯುತ್ತದೆ. ನಿಯತವಾದ (ದಂತ, ಇಡೀ ಶರೀರ ಮತ್ತು ಕಣ್ಣುಗಳ) ಆರೋಗ್ಯ ತಪಾಸಣೆ, ಅವಶ್ಯವಿದ್ದ ಚಿಕಿತ್ಸೆಗಳನ್ನು ಎಲ್ಲಾ ಮಕ್ಕಳಿಗೂ ನೀಡಲಾಗುತ್ತದೆ. ಇದಲ್ಲದೇ ಪ್ರತಿ ತಿಂಗಳೂ ಎಲ್ಲಾ ಮಕ್ಕಳ ಎತ್ತರ ಮತ್ತು ತೂಕವನ್ನು ಪರಿಶೀಲಿಸಲಾಗುತ್ತದೆ ಮತ್ತು ದಾಖಲಿಸಲಾಗುತ್ತದೆ ಮತ್ತು ನಮ್ಮ ಈ ಪ್ರಯತ್ನದ ಕಾರಣದಿಂದಾಗಿ ಆದ ಬದಲಾವಣೆಗಳನ್ನು ಪರಿಶೀಲಿಸಲಾಗುತ್ತದೆ. ಈ ಕಾರ್ಯಕ್ರಮದಿಂದ ಅವರ ಆರೋಗ್ಯ ಖಂಡಿತವಾಗಿ ಸುಧಾರಿಸಿತು. ವೈದ್ಯಕೀಯ ಸೇವೆ ಜೊತೆಗೆ ಶುಚಿತ್ವ ಮತ್ತು ಆರೋಗ್ಯಕರ ಅಭ್ಯಾಸಗಳ ಬಗ್ಗೆ ಮಕ್ಕಳಲ್ಲಿ ತಿಳುವಳಿಕೆ ಉಂಟುಮಾಡಲು ಪ್ರಯತ್ನ ನಡೆಸಿದೆವು.



ಇಷ್ಟೇ ಅಲ್ಲ ಮಕ್ಕಳು ಹಂಚಿಕೊಂಡು ಬಾಳುವುದು, ಜವಾಬ್ದಾರಿ ತಗೆದಕೊಳ್ಳುವುದು, ಆಹಾರವನ್ನು ಬಡಿಸುವುದು, ಒಟ್ಟಾಗಿ ಕುಳಿತು ತಿನ್ನುವುದು, ಒಂದಾಗಿ ಕಾರ್ಯ ನಿರ್ವಹಿಸುವುದು ಇತ್ಯಾದಿ ಗುಣಗಳನ್ನೂ ಕಲಿಯುತ್ತಾರೆ.





## ಹಂಚಿ ತಿಂದರೆ ಸ್ವರ್ಗ ಸುಖ

ಈಗ ಚಾಲ್ತಿಯಲ್ಲಿರುವ ರಾಜ್ಯ ಪಠ್ಯಕ್ರಮವು ಈ ಮಕ್ಕಳ ವಿಷಯದಲ್ಲಿ ಸಮಂಜಸವಲ್ಲ ಎನ್ನುವುದನ್ನು ಮನಗಂಡೆವು. ಅದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಮಕ್ಕಳು ಶಾಲೆಯಲ್ಲಿ ಕಳೆಯುವ ಅವಧಿಯು ಅನಿಶ್ಚಿತ ಮತ್ತು ತೀರಾ ಕಡಿಮೆ ಅವಧಿಯಾಗಿರುತ್ತದೆ. ಆದ್ದರಿಂದ, ಅವಶ್ಯಕ ಶೈಕ್ಷಣಿಕ ಕೌಶಲ್ಯಗಳನ್ನು ಕಲಿಸಿಕೊಡುವುದಕ್ಕೆ ನಮಗೆ ಹಲವಾರು ವರ್ಷಗಳು ಲಭ್ಯವಿಲ್ಲ. ಎರಡನೆಯದು, ಈ ಮಕ್ಕಳು ಭಾರತದ ವಿವಿಧ ಭಾಗದಿಂದ ಬಂದಿರುತ್ತಾರೆ ಮತ್ತು ವಿಭಿನ್ನ ಭಾಷೆಗಳು, ಸಂಸ್ಕೃತಿಗಳು ಮತ್ತು ವಿಭಿನ್ನ ಕಲಿಕೆಯ ಮಟ್ಟವನ್ನು ಹೊಂದಿರುತ್ತಾರೆ.

ಅಜೀಂ ಪ್ರೇಂಜೀ ಫೌಂಡೇಶನ್ ಈ ವೈವಿಧ್ಯಪೂರ್ಣ ಮಕ್ಕಳಿಗೆ ಸೂಕ್ತವಾದ ಬೇರೆಯದೇ ಆದ ಪಠ್ಯಕ್ರಮವನ್ನು ತಯಾರಿಸುವುದಕ್ಕೆ ಮತ್ತು ಸಮಂಜಸವಾದ ಬೋಧನಾ ವ್ಯವಸ್ಥೆಯನ್ನು ರೂಪಿಸುವುದಕ್ಕೆ ನಿರ್ಧರಿಸಿತು. ವಿಭಿನ್ನ ಭಾಷೆ. ಸಂಸ್ಕೃತಿ ಮತ್ತು ಸಮಾಜದ ಮಕ್ಕಳ ಅಗತ್ಯತೆಗಳನ್ನು ಈಡೇರಿಸುವಂತಹ ಒಂದು ಪ್ಯಾಕೇಜನ್ನು ಸಿದ್ಧಪಡಿಸುವುದು ಅನಿವಾರ್ಯವಾಯಿತು. ನಾವು ಮಾಡ್ಯೂಲ್ ಆಧಾರಿತ ವಿಧಾನವನ್ನು ಅಳವಡಿಸಿಕೊಂಡೆವು. ಮಕ್ಕಳು ಮಧ್ಯಂತರದಲ್ಲಿ ಈ ಶಾಲೆಯನ್ನು ಬಿಟ್ಟ ಸಂದರ್ಭದಲ್ಲಿ ಅವರು ಇತರ ಮುಖ್ಯವಾಹಿನಿಯ ಶಾಲೆಯನ್ನು ಸೇರಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಪ್ರತಿ ಮಾಡ್ಯೂಲ್‌ಕೂಡ





ಮೂಲಭೂತ ಸಾಮರ್ಥ್ಯಗಳು ಮತ್ತು ಕೌಶಲ್ಯಗಳನ್ನು ಒಳಗೊಂಡಿರುವಂತೆ ರೂಪಿಸಲಾಗಿತ್ತು. ಮಕ್ಕಳ ವಿವಿಧ ಕಲಿಕಾ ಮಟ್ಟಗಳ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಒಂದೇ ಸಮಯದಲ್ಲಿ ಎರಡರಿಂದ ಮೂರು ಮಾಡ್ಯೂಲ್‌ಗಳನ್ನು ಬಳಸಿ ಪಾಠ ಹೇಳಿಕೊಡಲಾಗುತಿತ್ತು. ಮಕ್ಕಳು ಸ್ವತಂತ್ರವಾಗಿ ಕಲಿಯುವುದನ್ನು ಪ್ರೋತ್ಸಾಹಿಸುವುದೇ ಈ ಮಾಡ್ಯೂಲ್ ಪ್ರಕಾರ ಬೋಧನೆಯ ಮುಖ್ಯ ಪ್ರಯತ್ನವಾಗಿತ್ತು.

## ಬಾಲ ಸ್ನೇಹೀ ತರಗತಿಗಳು

ಶಾಲೆಗೆ ಪ್ರವೇಶಮಾಡಿಸಿಕೊಳ್ಳುವಾಗ ವಿವಿಧ ವಿಷಯಗಳಲ್ಲಿ ಅವರ ಕಲಿಕೆಯ ಮಟ್ಟ ಎಷ್ಟಿದೆ ಮತ್ತು ಅವರ ಆರೋಗ್ಯ ಹೇಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ನಾವು ಪ್ರವೇಶಕಾಲೀನ ಮೌಲ್ಯಮಾಪನ ಫಾರಂಗಳನ್ನು ವಿನ್ಯಾಸಗೊಳಿಸಿ ಬಳಸುತ್ತಿದ್ದೇವೆ. ಇದನ್ನು ಆಧರಿಸಿ ಅವರನ್ನು ವಿಭಿನ್ನ ಮಾಡ್ಯೂಲ್‌ಗಳಲ್ಲಿ ಸೇರಿಸಲಾಗುತ್ತದೆ. ಈ ಕ್ಯಾಂಪ್‌ನಿಂದ ಹೊರಹೋಗಲು ಬಯಸುವ ಮಕ್ಕಳಿಗೆ ಮತ್ತು ಪಾಲಕರಿಗೆ ಮಗುವಿನ ವಿವರಗಳನ್ನು ಒಳಗೊಂಡ ಅಂದರೆ ಶಾಲೆಯಲ್ಲಿ ಅವನ/ಅವಳ ಕಲಿಕೆಯ ಅವಧಿ, ಕಲಿಸಲ್ಪಟ್ಟ ವಿಷಯಗಳು ಮತ್ತು ಈಗಿನ ಕಲಿಕೆಯ ಮಟ್ಟ ಇತ್ಯಾದಿ ವಿವರಗಳನ್ನೊಳಗೊಂಡ "ಎಗ್ಸಿಟ್ ಸರ್ಟಿಫಿಕೇಟ್"– ನಿರ್ಗಮನ ಪತ್ರವನ್ನು ನೀಡಲಾಗುತ್ತದೆ. ಈ ಸರ್ಟಿಫಿಕೇಟ್‌ನ ಆಧಾರದ ಮೇಲೆ ಮಗುವು ಇತರ ಶಾಲೆಗಳಲ್ಲಿ ನೋಂದಣಿ ಪಡೆಯುವುದು ಸಾಧ್ಯವಾಗುತ್ತದೆ.

ಮಕ್ಕಳು ಶಾಲೆಗೆ ಪ್ರವೇಶಪಡೆದ ಆರಂಭದಲ್ಲಿ ಮೊದಲ ಕೆಲವು ದಿನಗಳನ್ನು ಅವರು ಶಾಲೆಯಲ್ಲಿ ತಿರುಗಾಡುತ್ತಾ ಕಾಲಕಳೆಯುತ್ತಾರೆ. ಬಹಳಷ್ಟು ಸಲ ದೊಡ್ಡ ಮಕ್ಕಳು ಚಿಕ್ಕ ಮಕ್ಕಳನ್ನು ಸೊಂಟದ ಮೇಲೆ ಎತ್ತಿಕೊಂಡು ಶಾಲೆಯ ಸುತ್ತಾ ತಿರುಗಾಡುವ ದೃಶ್ಯ ಕಂಡು ಬರುತ್ತದೆ. ಅವರು ಇಷ್ಟ ಬಂದಂತೆ ಶಾಲೆಗೆ ಬರುತ್ತಾರೆ ಮತ್ತು ಮನೆಗೆ ಹೋಗುತ್ತಾರೆ ಯಾವ ನಿರ್ಬಂಧವೂ ಇರುವುದಿಲ್ಲ. ನಿಧಾನವಾಗಿ ಮತ್ತು ಸುಗಮವಾಗಿ ಚಿಕ್ಕವರೇ ಒಂದು ಗುಂಪು ಮತ್ತು ದೊಡ್ಡವರೇ ಒಂದು ಗುಂಪು ಶಾಲೆಯಲ್ಲಿ ಕಾಲ ಕಳೆಯಲು ಮನ ಮಾಡುವುದಕ್ಕೆ ಆ ಮಕ್ಕಳಿಗೆ ಸಾಕಷ್ಟು ಸಮಯವನ್ನು ನೀಡಲಾಗುತ್ತದೆ.

## ನಮ್ಮ ಪುಟ್ಟ ಪ್ರಬುದ್ಧರು

ಶಾಲೆಯಲ್ಲಿ ಮಕ್ಕಳ ಕಲಿಕಾ ಅವಧಿಯು ಅನಿಶ್ಚಿತ ಮತ್ತು ತುಂಬಾ ಕಡಿಮೆ ಅವಧಿಯದ್ದಾದ್ದರಿಂದ ಈ ಎರಡೂ ಶಾಲೆಗಳು ವರ್ಷ ಪೂರ್ತಿ ತೆರೆದಿರುತ್ತವೆ. ಈ ಶಾಲೆಯಲ್ಲಿ ಮಕ್ಕಳಿಗೆ ಹಾಗೆಯೇ ಶಿಕ್ಷರಿಗೂ ಯಾವುದೇ ರೀತಿಯ ವಿಧ್ಯುಕ್ತ



ರಜಾ ಅವಧಿಯನ್ನು ನೀಡಲಾಗುವುದಿಲ್ಲ. ಆದರೆ ಬೆಳೆ ಕಟಾವಿನ ಸಮಯದಲ್ಲಿ ಮಕ್ಕಳು ಒಂದು ಅಥವಾ ಎರಡು ತಿಂಗಳ ಕಾಲ ತಮ್ಮ ತಂದೆ ತಾಯಿಯ ಜೊತೆಗೆ ತಮ್ಮ ಹಳ್ಳಿಗೆ ಹೋಗುತ್ತಾರೆ. ಆರಂಭದಲ್ಲಿ ಮಕ್ಕಳು ಶಾಲೆಯನ್ನು ತಪ್ಪಿಸದಂತೆ ನಾವು ಪಾಲಕರ ಮನ ಒಲಿಸುವುದಕ್ಕೆ ಪ್ರಯತ್ನಿಸಿದೆವು. ಈಗ ಶಿಕ್ಷಕ ಅಭಿವೃದ್ಧಿ ಕಾರ್ಯಾಗಾರಗಳಿಗಾಗಿ ವಾರಾಂತ್ಯದಲ್ಲಿಯೂ ಶಾಲೆಯನ್ನು ಮುಚ್ಚದಂತೆ ಮಕ್ಕಳು ಶಿಕ್ಷಕರಿಗೆ ತಾಕೀತು ಮಾಡುತ್ತಾರೆ. ಮಕ್ಕಳಿಗೆ ಚಿಕ್ಕ, ಚಿಕ್ಕ ಸಂಗತಿಗಳೂ ದೊಡ್ಡ ವ್ಯತ್ಯಾಸವನ್ನು ಉಂಟು ಮಾಡುತ್ತವೆ. ಮಕ್ಕಳಿಗೆ ಒಂದು ದೊಡ್ಡ ಕನ್ನಡಿ, ಬಾಚಣಿಗೆ, ಕೇಶ ತೈಲ, ಟಾಲ್ಕಂ ಪೌಡರ್ ಮತ್ತು ಪೆಟ್ರೋಲಿಯಂ ಜೆಲ್ಲಿಯನ್ನು ನೀಡಲಾಗುತ್ತದೆ. ಪ್ರತಿ ದಿನ ಕನ್ನಡಿಯ ಮುಂದೆ ನಿಂತುಕೊಂಡು ತಮ್ಮನ್ನು ಮತ್ತು ಅವರ ತಮ್ಮ, ತಂಗಿಯರನ್ನು ತಯಾರು ಮಾಡುವುದು ಅವರಿಗೆ ಅತ್ಯಂತ ಪ್ರಿಯವಾದ ಕಾರ್ಯವಾಗಿದೆ – ಇದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವುದಕ್ಕೆ ಸಹಾಯ ಮಾಡುತ್ತದೆ. ಸುರಕ್ಷಿತ ಕುಡಿಯುವ ನೀರು, ನಲ್ಲಿ ನೀರು, ವಿದ್ಯುತ್, ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇತ್ಯಾದಿಗಳು ನಾವು ಶಾಲೆಯಲ್ಲಿ ಮಕ್ಕಳಿಗೆ ಒದಗಿಸುತ್ತಿರುವ ಮೂಲಭೂತ ಸೌಕರ್ಯಗಳಾಗಿವೆ ಮತ್ತು ಈಗ ಅದನ್ನು ಬಳಸುವುದು ಅವರಿಗೆ ಅಭ್ಯಾಸವಾಗಿ ಹೋಗಿದೆ.

ಅತ್ತಿತ್ತ ಜರುಗಿಸಿಡಬಲ್ಲ ಪೀಠೋಪಕರಣಗಳನ್ನು ಬಳಸಿ ತರಗತಿ ಸ್ಥಳಾವಕಾಶವನ್ನು ದೊಡ್ಡದು, ಚಿಕ್ಕದು ಮಾಡಬಹುದಾಗಿದೆ. ಶಾಲೆಯ ತಂಡ ಮತ್ತು ಮಕ್ಕಳು ಇಬ್ಬರೂ ಶಾಲಾ ಪರಿಸರವನ್ನು (ಮೂಲಭೂತ ಸೌಕರ್ಯಗಳನ್ನು) ಒಪ್ಪ ಓರಣವಾಗಿಟ್ಟು ಚೆನ್ನಾಗಿ ಕಾಳಜಿಯಿಂದ ನಿರ್ವಹಿಸಿಕೊಂಡು ಬರುತ್ತಾರೆ

ತರಗತಿಯಲ್ಲಿ ಮಕ್ಕಳೇ ನಿಯಮಗಳನ್ನು ರೂಪಿಸಿಕೊಳ್ಳುತ್ತಾರೆ ಮತ್ತು ಒಬ್ಬರಿಗೊಬ್ಬರು ಆ ನಿಯಮಗಳನ್ನು ನೆನಪಿಸುತ್ತಿರುತ್ತಾರೆ. ಶಾಲಾ ಪರಿಸರದಲ್ಲಿ ಸುರಕ್ಷತೆ ಬಹು

ಮುಖ್ಯ ಅಂಶ. ಶಾಲಾ ವಾತಾವರಣವನ್ನು ಸುರಕ್ಷಿತ, ಸ್ನೇಹಮಯಿ ಮತ್ತು ಸರಳವಾಗಿರಿಸುವುದಕ್ಕೆ ನಾವು ಹೆಚ್ಚಿನ ಪ್ರಯತ್ನವನ್ನು ನಡೆಸಿದ್ದೇವೆ. ಈ ರೀತಿಯಾಗಿ ಶಾಲೆಯು ಮಗುವಿನ ಮನೆಯ ಒಂದು ಭಾಗ ಎಂಬ ಭಾವನೆಯು ಮೂಡುತ್ತದೆ. ಈ ಭಾವನೆಗೆ ಇಂಬು ನೀಡುವುದಕ್ಕೆ ಅದೇ ಸಮುದಾಯದ ಒಬ್ಬರನ್ನು ಸಹಾಯಕರನ್ನಾಗಿ ಹಾಗೆಯೇ ಅವರ ಹುಟ್ಟೂರುಗಳ ಕಡೆಯಿಂದ ಬಂದ ಶಿಕ್ಷಕರನ್ನೇ ನೇಮಕ ಮಾಡಿಕೊಂಡಿದ್ದೇವೆ.

ಐದು ಮಾಡ್ಯೂಲ್‌ಗಳನ್ನು ಹಾಗೆಯೇ ಅದರ ಜೊತೆಯಲ್ಲಿ ಟ್ರಾನ್ಸಿಷನ್ ಮಾಡ್ಯೂಲ್‌ಗಳನ್ನು ಅಭ್ಯಾಸ ಮಾಡಿ ಮುಗಿಸಿದ ಮಕ್ಕಳಿಗೆ (ನಿಯಮಿತವಾದ ಶಾಲಾ ಪಠ್ಯಕ್ರಮವನ್ನು ತಿಳಿಯುವುದಕ್ಕೆ ಮಕ್ಕಳನ್ನು ತರಬೇತುಗೊಳಿಸುವುದಕ್ಕೆ) ಮುಖ್ಯ ವಾಹಿನಿಯ ಶಾಲೆಗೆ ಸೇರಿಸುವುದಕ್ಕೆ ಪಾಲಕರಿಗೆ ಅವಶ್ಯಕವಾದ ಎಲ್ಲಾ ರೀತಿಯ ಪ್ರೋತ್ಸಾಹ ಮತ್ತು ನೆರವನ್ನು ನಮ್ಮ ಶಾಲೆಯು ನೀಡುತ್ತದೆ. ಸ್ವಾರಸ್ಯದ ಸಂಗತಿ ಎಂದರೆ ಹೀಗೆ ಮುಖ್ಯವಾಹಿನಿ ಶಾಲೆಗೆ ಹೋಗುತ್ತಿರುವ ಮಕ್ಕಳು ಪ್ರತಿದಿನ ತಪ್ಪದೇ ನಮ್ಮ ಶಾಲೆಗೆ (ವಲಸೆ ಕಾರ್ಮಿಕರ ಶಾಲೆ) ಬಂದು ಅಲ್ಲಿ ತಮ್ಮ ಶಾಲೆಯಲ್ಲಿ ಆ ದಿನ ಏನಾಯಿತು ಎಂದು ಹೇಳಿ ಇಲ್ಲೇ ಸಂಜೆ ತಿಂಡಿ ತಿಂದು ಶಾಲೆಯಲ್ಲಿ ಕುಳಿತು ಹೋಂವರ್ಕ್‌ಗಳನ್ನು ಮುಗಿಸಿ ಆಮೇಲೆ ತಮ್ಮ ಮನೆಗೆ ಹೋಗುತ್ತಾರೆ. ನಮ್ಮ ಶಾಲೆಯಿಂದ ಹೊರಹೋದ ಮಕ್ಕಳ ವಿದ್ಯಾ ಪ್ರಗತಿಯನ್ನು ಗಮನಿಸಲು ಮೂರು ತಿಂಗಳಿಗೊಮ್ಮೆ ಭೇಟಿ ಮಾಡಿ ಪರಿಶೀಲಿಸಲಾಗುತ್ತದೆ.

ಶಾಲೆಯ ಕಾರ್ಯಕ್ರಮಗಳಲ್ಲಿ ತಂದೆ ತಾಯಿಯರೂ ಭಾಗವಹಿಸುತ್ತಾರೆ ಮಕ್ಕಳು ನಿರಂತರವಾಗಿ ಶಾಲೆಗೆ ಬರುವಂತೆ ಮಾಡುವುದಕ್ಕೆ ಪಾಲಕರ ಬೆಂಬಲ ಮತ್ತು ಒಪ್ಪಿಗೆ ಅತ್ಯಂತ ಅವಶ್ಯಕ ಎಂಬ ಸಂಗತಿಯನ್ನು ನಮ್ಮ ಶಾಲೆಯನ್ನು ಪ್ರಾರಂಭಿಸಿದ ಸಮಯದಲ್ಲಿಯೇ ನಾವು ಮನಗಂಡೆವು. ಆದ್ದರಿಂದ ಪಾಲಕರ ನಂಬಿಕೆಯನ್ನು ಗಳಿಸುವ ಸಲುವಾಗಿ ನಾವು ಸೌಹಾರ್ದತೆಯನ್ನು ಬೆಳೆಸುವುದಕ್ಕೆ ಮತ್ತು ವಿಶ್ವಾಸಾತ್ಮಕ ಸಂಬಂಧವನ್ನು ಬೆಳೆಸುವುದಕ್ಕೆ ಶ್ರಮವಹಿಸುತ್ತೇವೆ. ಒಬ್ಬ ಶಿಕ್ಷಕರು ಕ್ಯಾಂಪ್‌ಗೆ ಭೇಟಿ ನೀಡಿ ಮಗುವಿನ ಕುಟುಂಬದ ಬಗ್ಗೆ ತಿಳಿಯುತ್ತಾರೆ. ಮಗುವಿನ ಬಗ್ಗೆ ಪಾಲಕರ ಮಾತುಗಳನ್ನು ಆಲಿಸುತ್ತಾರೆ. ಮಗುವಿನ ಪ್ರಗತಿಯ ಬಗ್ಗೆ ಪಾಲಕರಿಗೆ ತಿಳಿಸುತ್ತಾರೆ ಮತ್ತು ಮಗುವಿನ ಶಿಕ್ಷಣವನ್ನು ಮುಂದುವರೆಸುವಂತೆ ಅವರ ಮನವೊಲಿಸುತ್ತಾರೆ. ಪಾಲಕರನ್ನು ನಿಯಮಿತವಾಗಿ ಶಾಲೆಗೆ ಆಹ್ವಾನಿಸಲಾಗುತ್ತದೆ ಮತ್ತು ಅವರ ಕೌಶಲ್ಯಗಳನ್ನು (ಕಥೆಹೇಳುವುದು, ಚಿತ್ರಕಲೆ, ಮರಗೆಲಸ, ಬಡಿಗೆ ವೃತ್ತಿ, ಕಲ್ಲು ಕೆಲಸ) ಮಕ್ಕಳೊಂದಿಗೆ ಹಂಚಿಕೊಳ್ಳುವಂತೆ ಹೇಳಲಾಗುತ್ತದೆ.

ಈ ಶಾಲೆಗಳನ್ನು ನಡೆಸುವುದಕ್ಕೆ ಸಮರ್ಥರಾದ ಜನರನ್ನು ಕಂಡು ಹಿಡಿದು ಒಂದು ತಂಡವನ್ನು ನಿರ್ಮಿಸುವುದಕ್ಕೆ ನಮಗೆ ಬಹಳ ಸಮಯ ಹಿಡಿಯಿತು. ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವ ಮಕ್ಕಳೊಂದಿಗೆ ಸರಿಯಾಗಿ ವ್ಯವಹರಿಸುವ ಜ್ಞಾನವಿರುವ ಮತ್ತು ಒಂದು ವೃತ್ತಿನಿರತ ಕಲಿಸುವಿಕೆಯ ಡಿಗ್ರಿಯನ್ನು ಪಡೆದಿರುವ ಸಂಶೋಧನಾತ್ಮಕ ಸ್ವಭಾವವನ್ನು ಹೊಂದಿರುವ ಜನರಿಗಾಗಿ ನಮ್ಮ ಅನ್ವೇಷಣೆ ನಡೆದಿತ್ತು. ಪ್ರಸ್ತುತ ನಾವು ಶಾಲೆಯ ಸಲುವಾಗಿ ಮತ್ತು ಮಕ್ಕಳಿಗಾಗಿ ಯಾವುದೇ ಪ್ರಯತ್ನವನ್ನು ನಡೆಸುವುದಕ್ಕೆ ಹಿಂಜರಿಯದೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವ ಯುವ ಪ್ರಭಾವಶಾಲಿ ವ್ಯಕ್ತಿಗಳ ಒಂದು ತಂಡವನ್ನು ಹೊಂದಿದ್ದೇವೆ. ಶಾಲೆಯಲ್ಲಿನ ವಯಸ್ಕರು ಮತ್ತು ಮಕ್ಕಳ ನಡುವಣ ಪರಸ್ಪರ ಕಾಳಜಿಯನ್ನು ಆಧರಿಸಿದ ಒಂದು ಸಂಬಂಧವೇ ಹೆಚ್ಚಿನ ಬದಲಾವಣೆ ತರುವುದಕ್ಕೆ ಕಾರಣವಾಗಿದೆ. ಪ್ರಬುದ್ಧರು ಮತ್ತು ಮಕ್ಕಳು ಇಬ್ಬರೂ ಶಾಲೆಯಲ್ಲಿ ಧರ್ಮ, ಸಂಸ್ಕೃತಿ ಮತ್ತು ಲಿಂಗ ಭೇದಗಳ ನಡುವಿರುವ ಅಂತರವನ್ನು ಅರ್ಥಮಾಡಿ–ಕೊಳ್ಳುತ್ತಾರೆ. ಶಾಲೆಯ ಈ ತಂಡವು ಮಕ್ಕಳಿಗೆ ಕೇವಲ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾತ್ರ ಜ್ಞಾನವನ್ನು ಒದಗಿಸುವುದಿಲ್ಲ. ಆದರೆ ಭಾವನಾತ್ಮಕವಾಗಿ, ದೈಹಿಕವಾಗಿ





ಮತ್ತು ನೈತಿಕವಾಗಿ ಸಂಪೂರ್ಣ ಮಟ್ಟದಲ್ಲಿ ಅವರು ಬೆಳೆಯುವಂತೆ ಪ್ರೇರೇಪಿಸುತ್ತದೆ.

**ಸಂತೃಪ್ತ ಶಿಕ್ಷಕ ಮತ್ತು ಸಂತುಷ್ಟ ಮಕ್ಕಳು**

ಇಂದು, ಪಾಲಕರು ಸುಪ್ರೇರಿತರಾದ ಮತ್ತು ಶಿಕ್ಷಕ ಕೆಲಸಕ್ಕೆ ಕಂಕಣ ಬದ್ಧರಾದ ಶಿಕ್ಷಕ ವರ್ಗ ಮತ್ತು ನಿರ್ಮಾಣದಾರರ ಇಚ್ಛೆಗಳನ್ನೊಳಗೊಂಡ ಒಂದು ಸಂಘಟಿತ ಪ್ರಯತ್ನವೇ ಈ ಶಾಲೆಗಳನ್ನು ಸ್ಪಂದನಶೀಲ ಉತ್ಸಾಹದಿಂದ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗಿದೆ.



**ಶುಭ** ಅವರು 2007 ರಿಂದ ಅಜೀಂ ಪ್ರೇಂಜಿ ಪ್ರತಿಷ್ಠಾನದಲ್ಲಿ ಕೆಲಸ ಮಾಡುತ್ತಿದ್ದಾರೆ. ವಲಸೆ ಕಾರ್ಮಿಕರ ಶಾಲೆ ಪ್ರಾರಂಭವಾದಾಗಿನಿಂದ ವಲಸೆ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಕಾರ್ಯಕ್ರಮದಲ್ಲಿ ನಿರತರಾಗಿರುತ್ತಾರೆ. ಪ್ರಸ್ತುತ ಇವರು ಯಾದಗಿರಿಯಲ್ಲಿರುವ ಅಜೀಂ ಪ್ರೇಂಜಿ ಶಾಲೆಯ ಪ್ರಾಂಶುಪಾಲರಿಗೆ ಮಾರ್ಗದರ್ಶಕರಾಗಿದ್ದಾರೆ. ಹಾಗೆಯೇ ಬೆಂಗಳೂರಿನಲ್ಲಿರುವ ಎರಡು ವಲಸೆಕಾರ್ಮಿಕರ ಶಾಲೆಯ ನಿರ್ವಹಣೆಯನ್ನೂ ಮಾಡುತ್ತಿದ್ದಾರೆ. ಇವರನ್ನು shubha@azimpremjifoundation.org ನಲ್ಲಿ ಸಂಪರ್ಕಿಸಬಹುದು.



# ದಿನದ ಆರಂಭ

ಸುರೇಂದ್ರ ಕುಂತಳ್

'ದಿನದ ಆರಂಭ ' ಎಂಬುದು ಪ್ರತಿದಿನ ಮುಂಜಾನೆ 40 ನಿಮಿಷಗಳವರೆಗೆ ಎಲ್ಲರೂ ಅನೌಪಚಾರಿಕವಾಗಿ ಸೇರುವ ಒಂದು ಚಟುವಟಿಕೆಗೆ ನೀಡಿದ ಹೆಸರು. ಪ್ರತಿದಿನ ಮುಂಜಾನೆ ನಾವೆಲ್ಲರೂ ಶಾಲೆಯ ಆವರಣದಲ್ಲಿ ಗುಂಪಾಗಿ ಸೇರುತ್ತೇವೆ. ನಂತರ ನಾವು ಒಬ್ಬೊಬ್ಬರಾಗಿ ಎಷ್ಟು ಜನ ಇದ್ದೇವೆ ಎಂಬುದನ್ನು ತಿಳಿದುಕೊಳ್ಳಲು ಎಣಿಕೆ ಪ್ರಾರಂಭಿಸುತ್ತೇವೆ. ಇದನ್ನು ಆಯಾ ದಿನದ ಚಟುವಟಿಕೆಯು ಯಾವ ಶಿಕ್ಷಕರದ್ದಾಗಿರುತ್ತದೆಯೋ ಅವರು ಮಾಡುತ್ತಾರೆ.

### ಇದನ್ನು ಯಾವ ಕಾರಣಕ್ಕೆ 'ದಿನದ ಆರಂಭ' ಎಂದು ಕರೆಯಲಾಗಿದೆ?

ಶಾಲೆಯ ಪ್ರಾರಂಭದ ತಿಂಗಳುಗಳಲ್ಲಿ ಒಂದಾದ ಜುಲೈ ತಿಂಗಳಲ್ಲಿ ಮಕ್ಕಳು ಕಲಿಕೆಯಮಟ್ಟದ ವಿಷಯದಲ್ಲಿ ವಿವಿಧ ಹಂತಗಳಲ್ಲಿರುತ್ತಾರೆ. ವಿದ್ಯಾರ್ಥಿಗಳು ಹೊಸಬರು ಮತ್ತು ಅವರಲ್ಲಿ ಹೆಚ್ಚಿನವರು ಶಾಲೆಬಿಟ್ಟ ಮಕ್ಕಳಾಗಿರುವುದರಿಂದ ಈ ವರೆಗೆ ಶಾಲೆಗೆ ಹೋಗಿರುವುದಿಲ್ಲ ಅಥವಾ ಅವರು ಶಾಲೆಗೆ ದಾಖಲಾಗಿರುವುದಿಲ್ಲ. ನಮಗೂ ಅವರೊಂದಿಗೆ ನಿಭಾಯಿಸುವುದು ಅಷ್ಟೊಂದು ಸುಲಭವಾಗಿರುವುದಿಲ್ಲ ಏಕೆಂದರೆ ಇಷ್ಟೊಂದು ಚಿಕ್ಕ ಮಕ್ಕಳಿಗೆ ನಾವು ಯಾವತ್ತೂ ಪಾಠ ಮಾಡಿರುವುದಿಲ್ಲ.

ಮಕ್ಕಳು ಶಾಲೆಗೆ ಅತೀ ಉತ್ಸಾಹದಿಂದ ಬರುವುದರಿಂದ ನಾವು ಇದನ್ನೆ ಉತ್ತಮಾಂಶವಾಗಿ ಬಳಸಿಕೊಳ್ಳಲು ನಿರ್ಧರಿಸಿದೆವು. ಎಲ್ಲ ಶಿಕ್ಷಕರು ದಿನದ ಪ್ರಾರಂಭದ ಪ್ರಾರ್ಥನೆಗೆ ಹಾಜರಿರುವುದರಿಂದ ಈ ಸಮಯದಲ್ಲಿ ಅವರೊಡನೆ ಬೆರೆಯುವುದು ಸುಲಭ ಎಂದು ನಾವು ನಿರ್ಧರಿಸಿದೆವು. ನಾವು ವಿಭಿನ್ನವಾಗಿ ಏನಾದರೂ ಮಾಡಬೇಕು ಎಂದು ನಿರ್ಧರಿಸಿ ವಿವಿಧ ಪರಿಕಲ್ಪನೆಗಳನ್ನು ಚರ್ಚಿಸಲು ಪ್ರಾರಂಭಿಸಿದೆವು. ಇದನ್ನು ಶಾಲೆಯದಿನದ ಪ್ರಾರಂಭದಲ್ಲಿ ನಡೆಸಲು ನಿರ್ಧರಿಸಿದ್ದರಿಂದ ಇದನ್ನು 'ದಿನದ ಆರಂಭ' ಎಂದು ಹೆಸರಿಸಲು ನಿರ್ಧರಿಸಲಾಯಿತು.

### ನಮ್ಮ ಉದ್ದೇಶಗಳು

- ಮಕ್ಕಳನ್ನು 30 ನಿಮಿಷಗಳವರೆಗೆ ಚಟುವಟಿಕೆ–ಯಿಂದಿರುವಂತೆ ನೋಡಿಕೊಳ್ಳುವುದು.
- ಒಂದು ಬಾಂಧವ್ಯವನ್ನು ಏರ್ಪಡಿಸುವುದು.
- ಆತ್ಮವಿಶ್ವಾಸವನ್ನು ಹೆಚ್ಚಿಸುವುದು.
- ಪ್ರೇರೇಪಣೆ ನೀಡಿ ಸ್ವಯಂ ಅಭಿವ್ಯಕ್ತಿಗೆ ಒಂದು ವೇದಿಕೆಯನ್ನು ಕಲ್ಪಿಸಿಕೊಡುವುದು.
- ವಿನೋದ ಮತ್ತು ಆಟಗಳ ಮೂಲಕ ಅವರು ಒಟ್ಟಾಗಿ ಕಲಿಕೆಯನ್ನು ಮಾಡುತ್ತಾರೆಯೋ ಇಲ್ಲವೋ ಎಂಬುದನ್ನು ಪ್ರಯೋಗಗಳ ಮೂಲಕ ತಿಳಿದುಕೊಳ್ಳುವುದು.
- ವಿವಿಧ ಹಂತ ಮತ್ತು ವಿವಿಧ ಗ್ರೇಡ್‌ಗಳ ಮಕ್ಕಳ ಜೊತೆ ಒಟ್ಟಿಗೆ ಬೆರೆಯಲು ಕಲಿಯುವುದು.

### ಇದರ ಸ್ವರೂಪ

ಪ್ರತಿಯೊಬ್ಬ ಶಿಕ್ಷಕರು ಶಾಲೆಯದಿನದ ಪ್ರಾರಂಭದಲ್ಲಿ 40 ನಿಮಿಷಗಳ ಕಾಲ ಮಕ್ಕಳಿಗೆ ಒಂದೊಂದು ಹಾಡನ್ನು ಅಥವಾ ತಮ್ಮ ತಮ್ಮ ವಿಷಯಕ್ಕೆ ಸಂಬಂಧಿಸಿದಂತೆ ಚಟುವಟಿಕೆಯೊಂದನ್ನು ಪರಿಚಯಿಸುವುದು ಹಾಗೂ ಈ ಮೂಲಕ ವಿದ್ಯಾರ್ಥಿಯು ಕಲಿಕೆಯನ್ನು ಉತ್ತಮಗೊಳಿಸಿ–ಕೊಳ್ಳುವಂತೆ ಮಾಡಲು ಸಹಾಯಕವಾಗುವಂತೆ ಮಾಡುವುದು ಎಂದು ನಿರ್ಧರಿಸಲಾಯಿತು. ಇದರ

ಸಮಯವನ್ನು ಕೂಡಾ ದಿನದ ಆರಂಭದಲ್ಲಿ 40 ನಿಮಿಷ ಇರುವಂತೆ ನಿರ್ಧರಿಸಲಾಯಿತು. ಇದನ್ನು ಈಗಾಗಲೇ ನಿರ್ಧರಿಸಲಾಗಿರುವ ಟೈಮ್ ಟೇಬಲ್ ಪ್ರಕಾರವೇ ಮಾಡಲಾಯಿತು.

### ಕೈಗೊಂಡ ಮತ್ತು ವಿಷಯಕ್ಕೆ ಸಂಬಂಧಿಸಿದಂತೆ ಇದ್ದ ಪ್ರಕ್ರಿಯೆಗಳು

**ಭಾಷೆ:** ಅಭಿನಯಿಸಿ ತೋರಿಸಬಹುದಾದ ಹಾಡುಗಳು ಮತ್ತು ಶಿಶುಪ್ರಾಸಗಳನ್ನು ಮೊದಲು ಶಿಕ್ಷಕರು ಹಾಡಿ ಮಕ್ಕಳಿಗೆ ಪರಿಚಯಿಸಿಕೊಟ್ಟರು. ನಂತರ ಮಕ್ಕಳು ಅವನ್ನು ಕಲಿತು ಹಾಡುವುದರ ಮುಖ್ಯ ಗಾಯಕರಾಗಿ ಸರದಿಯಲ್ಲಿ ಹಾಡಿದರು. ಮಕ್ಕಳು ತಮ್ಮ ದಿನನಿತ್ಯದ ಚಟುವಟಿಕೆಯಲ್ಲಿ ಬಳಸಬಹುದಾದಂತಹ ಶಬ್ದಗಳನ್ನು ಹಾಡುಗಳು, ಶಿಶುಪ್ರಾಸಗಳು ಅಥವಾ ಮಕ್ಕಳು ಆತ್ಮೀಯತೆ ಹೊಂದಿರುವ ಅವರ ಸುತ್ತಮುತ್ತಲಿನ ವಾತಾವರಣದಿಂದ ತೆಗೆದುಕೊಂಡು ಅವುಗಳನ್ನು ಮಕ್ಕಳು ಬಳಸುವಂತೆ ನೋಡಿಕೊಳ್ಳಲಾಯಿತು. ಮಕ್ಕಳು ಹಾಡುವುದರಲ್ಲಿ ಮತ್ತು ಶಿಶುಪ್ರಾಸಗಳನ್ನು ಬಾಯಿಪಾಠ ಮಾಡಿ ಒಪ್ಪಿಸುವಲ್ಲಿ ಹಾಗೂ ಗುಂಪಿನಲ್ಲಿ ಸರದಿಪ್ರಕಾರ ಮುಖ್ಯ ಗಾಯಕರಾಗಿ ಭಾಗವಹಿಸುವಲ್ಲಿ ತುಂಬಾ ಸಂತಸ ವ್ಯಕ್ತಪಡಿಸುವುದು ಕಂಡುಬಂದಿತು. ದೇಹದ ಭಾಗಗಳು, ಬಣ್ಣಗಳು, ಹಣ್ಣುಗಳು, ತರಕಾರಿಗಳು, ಪ್ರಾಣಿಗಳು, ದಿನಗಳು, ತಿಂಗಳು, ಇಂಗ್ಲೀಷ್ ಮತ್ತು ಹಿಂದಿಯ ವರ್ಣಮಾಲೆಗಳನ್ನು ಗುರುತಿಸಲು ವಿವಿಧ ರೀತಿಯ ಆಟಗಳನ್ನು ಪರಿಚಯಿಸಲಾಯಿತು. ಹಾಡುಗಳು ಮತ್ತು ಶಿಶುಪ್ರಾಸಗಳನ್ನು ಚಾರ್ಟ್‌ಗಳ ಮೂಲಕ ಗೋಡೆಯ ಮೇಲೆ

- ಕಾಲಿಫ್ಲಾವರ್ – ಮಧ್ಯಾಹ್ನದ ಊಟವನ್ನು ನೀಡುವಾಗ ಪ್ರವೀಣ ಎನ್ನುವ ವಿದ್ಯಾರ್ಥಿಯು 'ವ್ಹಾ... ಇವತ್ತಿನ ಊಟಕ್ಕೆ ಕಾಲಿಫ್ಲಾವರ್ ಪಲ್ಯ ಇದೆ' ಎಂದು ಹೇಳುತ್ತಾನೆ)
- ಹಿಂದಿ ಭಾಷೆಯಲ್ಲಿ ಒಗಟನ್ನು ಬಿಡಿಸುವುದು – ಒಗಟನ್ನು ಹೊಂದಿರುವ ಒಂದು ಹಿಂದಿ ಭಾಷೆಯ ಹಾಡನ್ನು ಗುಂಪಿನಲ್ಲಿ ಹಾಡಲಾಯಿತು. ಇದನ್ನು ಬಿಡಿಸಲು ಮಕ್ಕಳಿಗೆ ಸಾಮಾನ್ಯವಾದ ಕೂಡುವ ಮತ್ತು ಕಳೆಯುವ ಲೆಕ್ಕವನ್ನು ಬಳಸಲು ಹೇಳಲಾಯಿತು. ಎಲ್ಲ ವಿದ್ಯಾರ್ಥಿಗಳು ಅಂಗಳದ ನೆಲದ ಮೇಲೆ ಇದನ್ನು ಬಿಡಿಸುವಲ್ಲಿ ನಿರತರಾಗಿದ್ದರು.
- ನಿಯಮಗಳು ಇಲ್ಲಿ ಮುಖ್ಯವಲ್ಲ – ವಿದ್ಯಾರ್ಥಿನಿಯನ್ನು ಆಟದ ನಿಯಮ ಅರ್ಥವಾಗಿದೆಯೇ ಇಲ್ಲವೇ ಎಂದು ಕೇಳಿದಾಗ 'ಪತಾ ಹೈ ಹಾಪ್ ಎ ಲಿಟ್ಲ್ ಕರ್ಕೆ ಜಾನಾ ಹೈ!' ಎಂದು ಹೇಳುತ್ತಾನೆ.)



ಹಚ್ಚಲಾಯಿತು. ಪರಿಚಯಿಸಲಾದ ಶಬ್ಧಗಳನ್ನು ಮಕ್ಕಳು ಬರೆದುಕೊಳ್ಳಲು ಸಹಾಯಕವಾಗುವಂತೆ ಬರೆದು ಗೋಡೆಯ ಮೇಲೆ ಹಚ್ಚಲಾಗಿತ್ತು.

**ಗಣಿತ:** ಮೊದಲು ವೃತ್ತಾಕಾರದಲ್ಲಿ ನಿಂತುಕೊಂಡಾಗ ಮಕ್ಕಳೇ ಎಣಿಕೆ ಮಾಡುತ್ತಾರೆ. ನಂತರ ಆಟದ ಮುಖಾಂತರ ವಿವಿಧ ಪರಿಕಲ್ಪನೆಗಳನ್ನು ಪರಿಚಯಿಸಲಾಗುತ್ತದೆ. ಮಕ್ಕಳನ್ನು ಸಮ ಮತ್ತು ಬೆಸ ಸಂಖ್ಯೆಯ ರೀತಿಯಲ್ಲಿ ಗುಂಪು ಮಾಡುವಂತಹ ಆಟ ಹಾಗೂ ಕುಂಟಾಬಿಲ್ಲೆ, ಲೋಟವನ್ನು ಬಾಲ್‌ನಿಂದ ಹೊಡೆದುರುಳಿಸುವ ಆಟ ಹಾಗೂ ಮುಂತಾದವನ್ನು ಆಡಿಸಲಾಗುತ್ತದೆ. ಅವರನ್ನು ಗುರುತಿಸಲು ನೀಡಲಾಗಿರುವ ಸಂಖ್ಯೆಯನ್ನು ಮಕ್ಕಳು ಬರೆಯುವ ಮೂಲಕ ತಮ್ಮನ್ನು ನೋಂದಾಯಿಸಿಕೊಳ್ಳುತ್ತಾರೆ. ಇದನ್ನು ಸಾಮಾನ್ಯ ಅಂಶಗಳಾದ ಕೂಡುವ ಮತ್ತು ಕಳೆಯುವ ಲೆಕ್ಕಗಳನ್ನು ಪರಿಚಯಿಸಲು ಮುಂದುವರೆಸಲಾಗುತ್ತದೆ. ಹಗ್ಗ ಜಿಗಿಯುವಾಟದಲ್ಲಿ ಎಣಿಕೆ ಮಾಡುವುದನ್ನು ಮಾಡುತ್ತಾ ಗುಣಾಕಾರವನ್ನು ಅವರಿಗೆ ಪರಿಚಯಿಸಲಾಗುತ್ತದೆ.

**ಗಣಿತದ ಜೊತೆ ಮೋಜಿಗಾಗಿ:** ಮಕ್ಕಳು ಕಬಡ್ಡಿಯನ್ನು ಆಡಿದರು. ಇದಕ್ಕಾಗಿ ಅವರನ್ನು ಗುಂಪುಗಳನ್ನಾಗಿ ಮಾಡಿ ಆಡಿಸಲಾಯಿತು. ಆಟದ ಕೊನೆಯಲ್ಲಿ ಎಷ್ಟು ಜನರು ತಂಡದಲ್ಲಿ ಸುರಕ್ಷಿತವಾಗಿದ್ದರು ಎಂಬುದನ್ನು ಅವರಿಗೆ ಲೆಕ್ಕ ಮಾಡಲು ಹೇಳಲಾಯಿತು. ನಂತರ – ಕ್ಕಿಂತಾ ದೊಡ್ಡದು (>), ಕ್ಕಿಂತಾ ಚಿಕ್ಕದು (<) ಮತ್ತು ಸಮ(=) ಚಿಹ್ನೆಯನ್ನು ಪರಿಚಯಿಸಲಾಯಿತು

**ಗೋಡೆಗಳ ಬಳಕೆ:** ತಿಂಗಳುಗಳ ಕುರಿತು ಪರಿಚಯವನ್ನು ಹಾಡಿನ ಮೂಲಕ ಮಾಡಿಕೊಟ್ಟ ನಂತರದಲ್ಲಿ ಮಕ್ಕಳು ದಿನಾಂಕವನ್ನು ದಿನ/ತಿಂಗಳು/ವರ್ಷದ ರೀತಿಯಲ್ಲಿ ಬರೆದರು. ಆಯಾ ತಿಂಗಳ ಕ್ಯಾಲೆಂಡರ್ ಅನ್ನು ಗೋಡೆಯ ಮೇಲೆ ಬರೆಯಲಾಗಿರುತ್ತದೆ ಇದರ ಸಹಾಯದಿಂದ ಮಕ್ಕಳು ದಿನ ಮತ್ತು ದಿನಾಂಕವನ್ನು ಗುರುತಿಸುತ್ತಾರೆ. ಮಕ್ಕಳು ಈವರೆಗೆ ಅವರಿಗೆ ಪರಿಚಯಿಸಲಾದ ಶಬ್ದಗಳನ್ನು, ಹಾಡುಗಳನ್ನು,

ವಾರದಲ್ಲಿಯ ದಿನಗಳನ್ನು ಹಾಗೂ ಗೋಡೆಯ ಮೇಲೆ ಬರೆಯಲಾದ ನಾಲ್ಕು ದಿಕ್ಕುಗಳನ್ನು ಬರೆಯುತ್ತಾರೆ. ವಿದ್ಯಾರ್ಥಿಗಳ ಹೆಸರುಗಳು ಮತ್ತು ಇಂಗ್ಲೀಷ್‌ನ ವರ್ಣಮಾಲೆ, ಹಿಂದಿಯ ವರ್ಣಮಾಲೆಗಳನ್ನು ಆಟದ ಮೂಲಕ ಬರೆಯುವಂತೆ ಮಾಡಲಾಗುತ್ತದೆ.

**ದಿಕ್ಕುಗಳು:** ದಿಕ್ಕುಗಳನ್ನು ಅರಿಯುವ ವಿಧಾನದ ಥೀಮ್ ಅನ್ನು ಪರಿಚಯಿಸಲಾಗಿರುತ್ತದೆ. ಹೆಚ್ಚಿನ ಮಕ್ಕಳಿಗೆ ಸೂರ್ಯ ಯಾವ ದಿಕ್ಕಿನಲ್ಲಿ ಹುಟ್ಟುತ್ತಾನೆ ಎಂಬುದರ ಅರಿವಿರುತ್ತದೆ. ಮಕ್ಕಳು ಶಾಲೆಗೆ ಬರುವ ದಿಕ್ಕನ್ನು ಆಧರಿಸಿ ಹಾಗೂ ಅವರ ಮನೆ ಯಾವ ದಿಕ್ಕಿನಲ್ಲಿ ಇದೆ ಎಂಬುದನ್ನು ಗಮನದಲ್ಲಿರಿಸಿಕೊಂಡು ಅವರನ್ನು ಬೇರೆ ಬೇರೆ ಗುಂಪುಗಳನ್ನಾಗಿ ಮಾಡಲಾಯಿತು. ಇದರ ಆಧಾರದ ಮೇಲೆ, ನಾವು ದಿಕ್ಕಿನ ಹೆಸರುಗಳನ್ನು ಅರಿತುಕೊಳ್ಳಲು ಸಹಾಯಕವಾಗುವಂತಹ ಚಟುವಟಿಕೆಯನ್ನು ಮಾಡಿದೆವು.

**ಕ್ಯಾಲೆಂಡರ್:** ಇದರಲ್ಲಿಯ ಥೀಮ್‌ನಲ್ಲಿ ದಿನಗಳ ಮತ್ತು ತಿಂಗಳುಗಳ ಹೆಸರನ್ನು ಸೇರಿಸಲಾಗಿತ್ತು. ತಿಂಗಳುಗಳ ಹೆಸರನ್ನು ಹಾಡಿನ ಮೂಲಕ ಹಾಗೂ ಕಾರ್ಡ್‌ನಲ್ಲಿ ಬರೆಯಲಾದ ಹೆಸರುಗಳ ಮೂಲಕ ಪರಿಚಯಿಸಲಾಯಿತು. ನಂತರದಲ್ಲಿ ಮಕ್ಕಳು ಕಾರ್ಡ್‌ಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿದರು. ಈ ಸಮಯದಲ್ಲಾಗಲೇ ಮಕ್ಕಳು ಒಂದರಿಂದ ೩೦ ರವರೆಗಿನ ಸಂಖ್ಯೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸುವುದನ್ನು ಕಲಿತುಕೊಂಡಿದ್ದರು ಮತ್ತು ಇವರು ಸಂಖ್ಯೆಗಳನ್ನು ಕಾರ್ಡ್‌ನಲ್ಲಿ ಜೋಡಿಸುತ್ತಿದ್ದರು. ನಂತರ ಬ್ಲ್ಯಾಕ್ ಬೋರ್ಡ್ ಮೇಲೆ ದಿನ/ತಿಂಗಳು/ವರ್ಷದ ರೀತಿಯಲ್ಲಿ ದಿನಾಂಕಗಳನ್ನು ಬರೆಯಲು ತಿಳಿಸಲಾಯಿತು. ಎಲ್ಲ ಮಕ್ಕಳಿಗೂ ಇದು ತುಂಬಾ ಆಸಕ್ತಿದಾಯಕ ಚಟುವಟಿಕೆ ಎನಿಸಿತ್ತು.

**ತಕ್ಕಡಿ:** ಶಾಲೆಯ ಆವರಣದ ಒಂದು ಮೂಲೆಯಲ್ಲಿ 'ತಕ್ಕಡಿ'ಯನ್ನು ಇರಿಸಲಾಗಿತ್ತು. ಮೊದಲು ಇದನ್ನು ಇರಿಸಿದಾಗ ಎಲ್ಲ ಮಕ್ಕಳು ಇದರಲ್ಲಿ ಕೈಗೆ ಸಿಕ್ಕಿದ್ದನ್ನೆಲ್ಲ ತೂಕ




ಮಾಡುತ್ತ ತಕ್ಕಡಿಯ ಮುಳ್ಳು ಹೇಗೆ ಚಲಿಸುತ್ತದೆ ಎಂದು ನೋಡಲು ಬೇರೆ ಬೇರೆ ಪ್ರಯೋಗಗಳನ್ನು ಮಾಡಿದ್ದರಿಂದ ಅದರ ಮುಳ್ಳು ಮುರಿದು ಹೋಗಿತ್ತು. ಈಗ ತಕ್ಕಡಿಯನ್ನು ಶಾಶ್ವತವಾಗಿ ಶಾಲೆಯ ಆವರಣದಲ್ಲಿ ಇರಿಸಲಾಗಿದೆ ಮಕ್ಕಳು ಈಗ ತಮಗೆ ತೋಚಿದ ವಸ್ತುಗಳನ್ನು ಅಂದರೆ ಕಲ್ಲು, ಮಣ್ಣಿನಿಂದ ಹಿಡಿದು, ಕೋಲು, ಗಿಡ ಮುಂತಾದವುಗಳನ್ನು ಕೂಡಾ ತೂಕ ಮಾಡುತ್ತಿದ್ದಾರೆ. ಈಗ ಇದನ್ನು ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ.

**ಸೂರ್ಯನ ಕಿರಣಗಳನ್ನು ಗುರುತಿಸುವುದು:** ಶಾಲಾ ಆವರಣದಲ್ಲಿ ಪ್ರತಿದಿನ ಒಂದೇ ಜಾಗದಲ್ಲಿ ಸೂರ್ಯ ಕಿರಣಗಳು ಬೀಳುತ್ತಿರುವುದನ್ನು ಗಮನಿಸಿದ ನಾವು ಅದನ್ನು ಗುರುತು ಹಾಕಲು ನಿರ್ಧರಿಸಿದೆವು. ನಾವು ಇದನ್ನು ಎರಡು ದಿನಕ್ಕೊಮ್ಮೆ ಮಾಡಲು ನಿರ್ಧರಿಸಿದೆವು ಹಾಗೂ ಇದರಲ್ಲಿಯ ಕೋನಗಳಲ್ಲಿ ವ್ಯತ್ಯಾಸವಿರುವುದನ್ನು ಗುರುತಿಸಿದೆವು. ಮಕ್ಕಳು ಈ ಚಟುವಟಿಕೆಯಲ್ಲಿ ತುಂಬಾ ಉತ್ಸಾಹದಿಂದ ಭಾಗವಹಿಸಿದರು.



ಅಂತಿಮವಾಗಿ ನಾವು ಸೂರ್ಯನ ಸುತ್ತಲೂ ಭೂಮಿ ಸುತ್ತುವುದನ್ನು ತಿಳಿಸಲು ಗ್ಲೋಬ್ ಅನ್ನು ಬಳಸಿಕೊಂಡೆವು ಹಾಗೂ ವಿವಿಧ ಋತುಗಳನ್ನು ಕೂಡ ಈ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿದೆವು. ಹೆಚ್ಚಿನ ಎಲ್ಲ ಹಿರಿಯ ವಿದ್ಯಾರ್ಥಿಗಳಿಗೂ ಬೇಸಿಗೆಯಲ್ಲಿ ತುಂಬಾ ಬಿಸಿ ಏಕಿರುತ್ತದೆ ಮತ್ತು ಚಳಿಗಾಲದಲ್ಲಿ ಯಾಕೆ ವಾತಾವರಣ ತಂಪಾಗಿರುತ್ತದೆ ಎಂಬುದು ತಿಳಿದಿತ್ತು ಹಾಗೂ ಭೂಮಿಯ ಮೇಲೆ ಸೂರ್ಯನ ಕಿರಣಗಳು ಬೀಳುವುದರಿಂದ ಆಗುವ ಪರಿಣಾಮಗಳನ್ನು ಕುರಿತು ಅವರಿಗೆ ತಿಳಿದಿತ್ತು.

**ಗಡಿಯಾರದ ಚಟುವಟಿಕೆ:** ನಾವು ಒಂದು ಗಡಿಯಾರವನ್ನು ತೆಗೆದುಕೊಂಡು ಅದನ್ನು ಬಿಚ್ಚಿದೆವು. ಅಲ್ಲದೆ ಅದರ ಗ್ಲಾಸನ್ನು ತೆಗೆದು ಸೆಕೆಂಡ್‌ನ ಮುಳ್ಳನ್ನು ತೆಗೆದುಹಾಕಿದೆವು. ನಿಮಿಷದ ಮುಳ್ಳನ್ನು 12 ರ ಮೇಲೆ ಇಟ್ಟು ಸಮಯವನ್ನು ಕೇಳುವ ಮತ್ತು ಹೇಳುವ ಚಟುವಟಿಕೆಯನ್ನು ಪ್ರಾರಂಭಿಸಿದೆವು. ಸಂಖ್ಯೆಗಳನ್ನು ಗುರುತಿಸಲು ತಿಳಿದುಕೊಂಡಿದ್ದ ವಿದ್ಯಾರ್ಥಿಗಳು

ಸಮಯವನ್ನು ಸರಿಯಾಗಿ ಹೇಳಲು ಪ್ರಾರಂಭಿಸಿದರು. ನಂತರ ನಾವು ನಿಮಿಷದ ಮುಳ್ಳನ್ನು ಪರಿಚಯಿಸಿದೆವು. ಕೆಲವರಿಗೆ ಈ ವಿಧಾನವು ಗುಣಾಕಾರದ ಮಗ್ಗಿಲೆಕ್ಕ ಕಷ್ಟ ಎನಿಸಿದಂತೆ ಕಷ್ಟ ಎನಿಸಿತು. ನಾವು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಲು, ಹೇಳಲು ಮತ್ತು ಬಹುಮುಖ್ಯವಾಗಿ ಮುಳ್ಳನ್ನು ಮುಟ್ಟಲು ಮತ್ತು ಸಂಖ್ಯೆಗಳ ಸುತ್ತಲೂ ತಿರುಗಿಸಲು ಅವಕಾಶವನ್ನು ನೀಡಿದೆವು. ಮಕ್ಕಳು ಇದನ್ನು ಮುಟ್ಟಲು ಹೆಚ್ಚೆಚ್ಚು ಉತ್ಸಾಹವನ್ನು ತೋರಿಸಿದರು ಹಾಗೂ ತಮಗೆ ಸಮಯ ತಿಳಿದಿಲ್ಲವಾದರೂ ಕೂಡಾ ತಾಸಿನ ಮುಳ್ಳನ್ನು ತಿರುಗಿಸಿ ನೋಡತೊಡಗಿದರು.

**ಅಳತೆ ಪಟ್ಟಿ:** ಒಂದು ಮೂಲೆಯಲ್ಲಿ ಅಳತೆ ಪಟ್ಟಿಯನ್ನು ಅಂಟಿಸಲಾಗಿದ್ದು ಮಕ್ಕಳು ತಮ್ಮ ಎತ್ತರವನ್ನು ಇದರಲ್ಲಿ ನೋಡಿಕೊಳ್ಳಬಹುದಾಗಿತ್ತು. ನಂತರದಲ್ಲಿ ಮಕ್ಕಳು ಇದನ್ನು ಅಂಕಿಯನ್ನು ನೋಡಲು ಮತ್ತು ಇತರರ ಎತ್ತರವನ್ನು ನೋಡಲು ಬಳಸತೊಡಗಿದರು. ಸಂಖ್ಯೆಗಳ ಪರಿಚಯ ಇಲ್ಲದವರಿಗೂ ಕೂಡಾ ಈ ಅಳತೆ ಪಟ್ಟಿಯನ್ನು ನೋಡುವುದು ತುಂಬಾ ಆಸಕ್ತಿದಾಯಕ ಎನಿಸಿತು.

## ಸಾಧನೆಗಳು :

- ಮಕ್ಕಳು ಹೆಚ್ಚೆಚ್ಚು ಆತ್ಮವಿಶ್ವಾಸವನ್ನು ತೋರ್ಪಡಿಸಿದರು ಮತ್ತು ಅವರ ಭಾವನೆಗಳನ್ನು ನೇರವಾಗಿ ಹೇಳಿಕೊಳ್ಳಲು ಪ್ರಾರಂಭಿಸಿದವು.
- ಮಕ್ಕಳು ಹಿಂದಿ ಮತ್ತು ಇಂಗ್ಲೀಷ್ ರೈಮ್ಸ್‌ನ ಶಬ್ದಗಳನ್ನು ಮತ್ತು ನಟನೆಯನ್ನು ತುಂಬಾ ಸುಲಭವಾಗಿ ಕಲಿತರು. ವರ್ಷದ ಕೊನೆಗೆ ಅವರು 18 ಹಿಂದಿ ಹಾಡುಗಳನ್ನು ಮತ್ತು 12 ಇಂಗ್ಲೀಷ್ ಹಾಡುಗಳನ್ನು ಹೇಳುವಂತಾಗಿದ್ದರು.
- ಮಕ್ಕಳು ಗಣಿತದ ಹೆಚ್ಚಿನ ಎಲ್ಲ ಪರಿಕಲ್ಪನೆಗಳನ್ನು ಮತ್ತು ಇಂಗ್ಲಿಷ್ ಪದಗಳನ್ನು ಕಲಿತುಕೊಂಡಿದ್ದರು. ಅಲ್ಲದೆ ಮಕ್ಕಳು ತಮ್ಮ ಮಾತೃಭಾಷೆಯಾಗಿದ್ದ ಹಿಂದಿಯನ್ನು ಮಾತನಾಡಲು ಬಳಸತೊಡಗಿದರು.
- ಮಕ್ಕಳು ದಿನಾಂಕವನ್ನು ತಾವಾಗಿಯೇ ಬರೆಯತೊಡಗಿದರು.
- ಮಕ್ಕಳು ಸಮಯವನ್ನು ತಾಸಿನ ಲೆಕ್ಕದಲ್ಲಿ ಕೆಲವೊಮ್ಮೆ ತಾಸು ಮತ್ತು ನಿಮಿಷ ಎರಡರಲ್ಲೂ ಹೇಳತೊಡಗಿದರು.
- ಮಕ್ಕಳಿಗೆ ದಿಕ್ಕನ್ನು ಕುರಿತಾದ ಜ್ಞಾನ ಬೆಳೆಯಿತು.
- ಮಕ್ಕಳು ಒಬ್ಬರಿಗೊಬ್ಬರು ಕಂಠಪಾಠ ಒಪ್ಪಿಸಲು ವಿವಿಧ ಪರಿಕಲ್ಪನೆಗಳನ್ನು ತಿಳಿದುಕೊಳ್ಳಲು ಮತ್ತು ಬರೆಯಲು ಸಹಾಯ ಮಾಡತೊಡಗಿದರು.
- ಮಕ್ಕಳ ಜೊತೆಗೆ ನಾವು ಉತ್ತಮ ಬಾಂಧವ್ಯವನ್ನು ಹೊಂದಲು ಇದು ಸಹಾಯಕವಾಯಿತು ಹಾಗೂ ಇದು ತುಂಬಾ ಪ್ರಯೋಜನಕಾರಿ ಎನಿಸಿತು.
- ಅವರು ಎಲ್ಲರೂ ಒಟ್ಟಾಗಿ ಇದನ್ನು ಕಲಿತರು ನಾವು ಕೂಡಾ ಮಕ್ಕಳ ಜೊತೆ ತುಂಬಾ ಸುಲಭವಾಗಿ ಬೆರೆಯಲು ಇದರಿಂದ ಸಾಧ್ಯವಾಯಿತು.

## ಸವಾಲುಗಳು :

ಈಗ ಸುಮಾರು 75ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದಾರೆ. ಈ ಜಾಗವು ಚಟುವಟಿಕೆಗಳಿಗೆ ಮತ್ತು ಆಟಗಳಿಗೆ ತುಂಬಾ ಚಿಕ್ಕದಂತೆನಿಸುತ್ತಿದೆ. ಚಟುವಟಿಕೆಗಳನ್ನು ಪರಿಚಯಿಸಲು ಹಾಗೂ ಇರುವ ಜಾಗದಲ್ಲಿಯೆ ಕಲಿಕೆಯನ್ನು ಮುಂದುವರೆಸಲು ನಾವು ಈಗ ಬೇರೆ ರೀತಿಯ ವಿಧಾನವನ್ನು ಕಂಡುಕೊಳ್ಳಬೇಕಾಗಿದೆ. ಯಾವುದೇ ಚಟುವಟಿಕೆಯನ್ನು ಮಾಡಲು ಅದರಲ್ಲೂ ಆಟಗಳನ್ನು ಆಡಿಸಲು ಜಾಗದ ಕೊರತೆಯಿದ್ದರೂ ಕೂಡಾ ಮಕ್ಕಳ ಉತ್ಸಾಹವೇ ನಮಗೆ ಸ್ಫೂರ್ತಿಯಾಗಿದೆ.

**ಸುರೇಂದ್ರ** ಅವರು 2012ರ ಫೆಬ್ರವರಿಯಿಂದ ರಾಜಾಸ್ಥಾನದ ಸಿರೋಹಿ ಜಿಲ್ಲೆಯ ಮಂಡವಾದಲ್ಲಿರುವ ಅಜೀಂ ಪ್ರೇಂಜಿ ಶಾಲೆಯಲ್ಲಿ ಇಂಗ್ಲಿಷ್ ಶಿಕ್ಷಕರಾಗಿದ್ದಾರೆ. ಇದಕ್ಕೂ ಮುಂಚೆ ಇವರು ನಾಲ್ಕು ವರ್ಷಗಳ ಕಾಲ ಹೆಸರಾಂತ ಶಾಲೆಗಳಲ್ಲಿ ಹಿರಿಯ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ.ಓದುವುದು ಬ್ಯಾಡ್ಮಿಂಟನ್ ಆಡುವುದು ಮತ್ತು ಸ್ನೇಹಿತರೊಂದಿಗೆ ವಿರಾಮವಾಗಿ ಕಾಲ ಕಳೆಯುವುದು ಇವರ ಹವ್ಯಾಸ.ಸತತ ಶ್ರಮದಿಂದ ತಾವು ಗುರಿ ಇರಿಸಿದ ಕಾರ್ಯವನ್ನು ಸಾಧಿಸಬಹುದು ಎಂದು ನಂಬಿರುತ್ತಾರೆ. ಇವರನ್ನು surendrakuntal@azimpremjifoundation.org ಯಲ್ಲಿ ಸಂಪರ್ಕಿಸಬಹುದು.



# ಶಾಲೆಗಳಲ್ಲಿ ಬಾಲಕಿಯರಿಗೆ ಸಾಮರ್ಥ್ಯ ವರ್ಧನೆಯ ವಾತಾವರಣವನ್ನು ಸೃಷ್ಟಿ ಮಾಡುವುದು

ನಿರ್ಮಲಾ ವಿ.ಜಿ.

**ಹಿನ್ನೆಲೆ:**

ಭಾರತ ಗ್ರಾಮೀಣ ಸಮುದಾಯಗಳಲ್ಲಿ ಹದಿಹರೆಯದ ಹೆಣ್ಣುಮಕ್ಕಳನ್ನು ನಿರ್ಲಕ್ಷಿಸುವುದು ಮತ್ತು ಅವರು ಅಪಾಯಕ್ಕೆ ಪಕ್ಕಾಗುವುದು ಸಾಮಾನ್ಯ ಸಂಗತಿ. ಅವರು 'ಬೇರೊಬ್ಬರ ಆಸ್ತಿ' ಹಾಗೂ ಕುಟುಂಬಕ್ಕೆ ಹೊರೆ ಏನಿದ್ದರೂ ವರದಕ್ಷಿಣೆ ನೀಡಿ, ಆಕೆಯನ್ನು ಮದುವೆ ಮಾಡಿ ಕಳಸುವುದಕ್ಕಾಗಿಯೇ ಇರುವವರು ಎಂಬ ವಿಷಯವನ್ನು ಅವರ ತಲೆಗೆತುಂಬಿ ಅವರನ್ನು ಬೆಳಸುವುದುಂಟು. ಇತರ ಸಾಮಾಜಿಕ ನಂಬಿಕೆಗಳೂ ಇದಕ್ಕೆ ಪುಷ್ಟಿ ನೀಡುತ್ತವೆ. ಇದಕ್ಕೆ ಪೂರಕವಾಗಿ ಹೆಣ್ಣುಮಕ್ಕಳ ಕಡೆಗೆ ಪಾಲಕರು ತೋರುವ ತಾರತಮ್ಯ ಶಾಲೆಗಳಲ್ಲಿ ಲಿಂಗ ತಾರತಮ್ಯಕ್ಕೆ ಎಡೆ ಮಾಡಿಕೊಡುತ್ತದೆ. ಹೀಗಾಗಿ ಬಾಲಕಿಯರಿಗೆ ಮುಂದುವರಿಯಲು ಬೇಕಾದ ಅಗತ್ಯ ಜ್ಞಾನ ಹಾಗೂ ಕೌಶಲ್ಯ ಪಡೆಯುವುದು ಸಾಧ್ಯವಾಗುವುದಿಲ್ಲ. ಇದರಿಂದ ಅವರು ಸಾಮರ್ಥ್ಯ ರಹಿತರಾಗಿ ಉಳಿಯುತ್ತಾರೆ, ತಮ್ಮ ಸಹಪಾಠಿಗಳು, ಪಾಲಕರು ಮತ್ತು ಸಮಾಜದಿಂದ ಅಷ್ಟೇ ಏಕೆ ತಮ್ಮದೇ ಆದ ಆತ್ಮವಿಶ್ವಾಸದ ಕೊರತೆಯಿಂದಾಗಿ ತೀವ್ರ ಒತ್ತಡಕ್ಕೆ ಒಳಗಾಗುತ್ತಾರೆ.

ಈ ಹಿನ್ನೆಲೆಯಲ್ಲಿ, ಲಿಂಗ ತಾರತಮ್ಯ, ಜೀವನ ಕೌಶಲ್ಯ, ಪೌಷ್ಟಿಕಾಹಾರ ಹಾಗೂ ಆರೋಗ್ಯ ಸಂಬಂಧಿ ವಿಷಯಗಳ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ. ಈ ಎಲ್ಲ ವಿಷಯಗಳ ಬಗ್ಗೆ ಕಿರಿಯ ಹೆಣ್ಣು ಮಕ್ಕಳು ಜವಾಬ್ದಾರಿ ಹೊಂದಿದ್ದರೆ, ನಿರ್ಧಾರ ತೆಗೆದುಕೊಂಡರೆ ಆತ್ಮವಿಶ್ವಾಸ ಬೆಳೆಯುತ್ತದೆ ಎಂಬ ಮಾತು ದೃಢವಾಗುತ್ತದೆ. ತಮ್ಮ ಬಗ್ಗೆ ತಾವು ಜವಾಬ್ದಾರಿ ತೆಗೆದುಕೊಳ್ಳುವುದು ಮತ್ತು ಜೀವನದಲ್ಲಿ ಪರ್ಯಾಯಗಳ ಬಗ್ಗೆ ಆಲೋಚಿಸಿ ಸರಿಯಾದುದನ್ನು ಆಯ್ದುಕೊಳ್ಳುವುದು ಹಾಗು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಈ ಹೆಣ್ಣು ಮಕ್ಕಳ ಜೀವನದಲ್ಲಿ ಬಹುಮುಖ್ಯವಾದುದು. ಇದೊಂದು ಕಠಿಣ ಪ್ರಕ್ರಿಯೆ, ಆದರೆ ಈ ಕುರಿತು ಅವರು ಪಡೆಯುವ ಅರಿವಿನಿಂದ ಮಾತ್ರವೇ ಅವರು ಘನತೆಯುಳ್ಳ ಜೀವನ ನಡೆಸಬಲ್ಲರು.

**ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳೇ (ಕೆಜಿಬಿವಿ ಶಾಲೆಗಳು) ಏಕೆ?**

ಈ ಮೇಲಿನ ಪರಿಸ್ಥಿತಿಗಳನ್ನು ಎದುರಿಸಲು ಬಾಲಕಿಯು ಆತ್ಮವಿಶ್ವಾಸ ವೃದ್ಧಿಸಿಕೊಳ್ಳಬೇಕು; ತನ್ನ ಬಗ್ಗೆ ವಿಶ್ವಾಸಪೂರ್ಣ ನಿಲುವನ್ನು ಬೆಳೆಸಿಕೊಳ್ಳಬೇಕು. ಇದರಿಂದ ಅವರು ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯಗಳನ್ನು ಇನ್ನಷ್ಟು ಬೆಳೆಸಿಕೊಳ್ಳುತ್ತಾರೆ ಹಾಗೂ ಸೋಲಿನ ಭಯವನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದುತ್ತಾರೆ. ಈ ಪ್ರಕ್ರಿಯೆಗೆ ನೆರವಾಗಲು ಭಾರತ ಸರ್ಕಾರವು ಬಾಲಕಿಯರ ಶಿಕ್ಷಣಕ್ಕೆಂದೇ 'ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ' ಎಂಬ ಯೋಜನೆಗೆ ಚಾಲನೆ ನೀಡಿದೆ.

ಈ ಯೋಜನೆಯಡಿ ಊಟ-ವಸತಿಯುತ ಶಾಲಾ ಸೌಲಭ್ಯವನ್ನು ಹಿಂದುಳಿದ ಪ್ರದೇಶದಲ್ಲಿ ಶಾಲೆ ಬಿಟ್ಟ 11 ರಿಂದ 14 ವರ್ಷದ ಪರಿಶಿಷ್ಟ ಜಾತಿ, ಪಂಗಡ, ಇತರ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ಸಮುದಾಯದ ಬಾಲಕಿಯರಿಗೆ ಪ್ರಾಥಮಿಕ ಶಾಲಾ ಹಂತದಲ್ಲಿ ಕಲ್ಪಿಸಲಾಗುತ್ತದೆ. ಸಮಾಜದಲ್ಲಿ ಸೌಲಭ್ಯ ವಂಚಿತರಾದ ಬಾಲಕಿಯರಿಗೆ ಗುಣಮಟ್ಟದ ಶಿಕ್ಷಣ ಕೊಡುವುದು ಇದರ ಉದ್ದೇಶ. ಶಾಲೆಗೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಸೇರುವಂತೆ ಮಾಡುವ ಹಾಗೂ ಮಧ್ಯದಲ್ಲೇ ಶಾಲೆ ಬಿಡುವುದನ್ನು ತಪ್ಪಿಸುವ ಮಹತ್ತರ ಉದ್ದೇಶ ಇದರ ಹಿಂದಿದೆ. ಪ್ರಾಥಮಿಕ ಶಾಲಾ ಹಂತದಲ್ಲಿ ಸ್ವಲ್ಪ ವಯಸ್ಸಾದ ಶಾಲೆಯನ್ನು ಮಧ್ಯದಲ್ಲೇ ಬಿಟ್ಟು ಪ್ರಾಥಮಿಕ ಶಿಕ್ಷಣ ಪೂರೈಸಲು ಆಗದೇ ಇದ್ದ ಮಕ್ಕಳ ಬಗ್ಗೆ ಗಮನ ಕೇಂದ್ರೀಕರಿಸಲಾಗುವುದು. ಹಾಗಿದ್ದರೂ ಹಲವು ಸಮಸ್ಯಾತ್ಮಕ ಪ್ರದೇಶಗಳಲ್ಲಿ (ವಲಸೆ ಬಂದಿರುವ ಜನರು, ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆ ಸೌಲಭ್ಯ ಪಡೆಯಲು ನಿಗದಿತ ಜನಸಂಖ್ಯೆ ದೊರಕದ ಚದುರಿದಂತೆ ಇರುವ ವಸತಿ ಪ್ರದೇಶಗಳು) ಕಿರಿಯ ಬಾಲಕಿಯರಿಗೂ ಹಿರಿಯ ಪ್ರಾಥಮಿಕ

ಶಾಲಾ ಸೌಕರ್ಯ ಸಿಗುವಂತೆ ಮಾಡುವ ಗುರಿ ಇದೆ. ವಾಡಿಕೆಯ ಶಾಲೆಗೆ ಹಾಜರಾಗಲು ಸಾದ್ಯವಿರದಿದ್ದ ಹದಿಹರೆಯದ ಬಾಲಕಿಯರತ್ತ ಗಮನ ಕೇಂದ್ರೀಕರಿಸ-ಲಾಗುತ್ತದೆ. ಮುಖ್ಯವಾಹಿನಿಯ ಕೆಜಿಬಿವಿ ಶಾಲೆಗಳಿಗೆ ಸೇರಿಸುವ ಮುನ್ನ ಈ ಬಾಲಕಿಯರಿಗೆ ಸಂಪರ್ಕ ತರಗತಿಗಳನ್ನು (ಬ್ರಿಜ್ ಕೋರ್ಸ್) ನಡೆಸುವುದು ಅಗತ್ಯವಾಗಿರುತ್ತದೆ. ಯಾಕೆಂದರೆ ಅವರು ಕೆಳಗಿನ ಹಂತದ ತರಗತಿಗಳಿಗೆ ಸೇರಿಕೊಂಡಿರುವುದಿಲ್ಲ/ಹಾಜರಾಗಿರುವುದಿಲ್ಲ/ ಮಧ್ಯದಲ್ಲೇ ಶಾಲೆಯನ್ನು ಬಿಟ್ಟಿರುತ್ತಾರೆ.

ಕೆಜಿಬಿವಿ ಶಾಲೆಗಳ ಪ್ರಾಥಮಿಕ ಗುರಿ ಎಂದರೆ, ಕಲಿಸುವಿಕೆ ಹಾಗೂ ಕಲಿಕೆ ಪ್ರಕ್ರಿಯೆಯಲ್ಲಿ ಶಿಕ್ಷಕರಿಂದ ನೆರವು ಹಾಗು ಅರ್ಥ ಮಾಡಿಕೊಂಡು ಅನುಕೂಲ ಕಲ್ಪಿಸುವ ಶಾಲೆ ಹಾಗೂ ತರಗತಿ ವಾತಾವರಣ ಹಾಗೆಯೇ ಸಮುದಾಯದ ಜೊತೆ ಭಾಗವಹಿಸಲು ಅವಕಾಶ ಕಲ್ಪಿಸುವುದು ಇವುಗಳ ಮೂಲಕ ಅಗತ್ಯ ಬೆಂಬಲ ಕೊಟ್ಟು, ಸರ್ವಾಂಗೀಣ ವಿಧಾನದಲ್ಲಿ ವ್ಯಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸುವುದು. ಕೆಜಿಬಿವಿ ಶಾಲೆಗಳಲ್ಲಿ ಕೊಡುವ ಗುಣಮಟ್ಟದ ಶಿಕ್ಷಣವನ್ನು ಇನ್ನಷ್ಟು ಸುಧಾರಿಸುವ ಗುರಿ ಇದರ ಹಿಂದಿದೆ.

ಹಾಗಿದ್ದರೂ ಲಿಂಗದ ಸಾಂಪ್ರದಾಯಿಕ ವ್ಯಾಖ್ಯಾನ, ಸಮಾಜದಲ್ಲಿ ಬಾಲಕಿಯರ ಪಾತ್ರದ ಮೇಲೆ ಅದರ ಪ್ರಭಾವ ಹಾಗೂ ಬಾಲ್ಯವಿವಾಹ – ಇಂಥ ಹಲವು ಅಡಚಣೆಗಳು ಇವೆ. ನಿರೀಕ್ಷಿತ ಫಲಿತಾಂಶವನ್ನು ಸಾಧಿಸಲು ಅದು ಬಹು ದೊಡ್ಡ ಅಡ್ಡಿಯಾಗಿ ಪರಿಣಮಿಸಿವೆ. ಸಮುದಾಯಗಳಲ್ಲಿರುವ ಸಂಪ್ರದಾಯ, ಬಡತನದಂಥ ಸಮಾಜಿಕ-ಆರ್ಥಿಕ ಹಾಗೂ ಸಾಂಸ್ಕೃತಿಕ ಕಾರಣಗಳು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇನ್ನಷ್ಟು ಅಡ್ಡಿ ಉಂಟು ಮಾಡುತ್ತವೆ. ಈ ಹಿನ್ನೆಲೆಯಲ್ಲಿ, ಒಂದಷ್ಟು ಹಣ ಗಳಿಕೆ ಮಾಡಲು ಅವರನ್ನು ಕೆಲಸಕ್ಕೆ ಕಳಿಸುವ ಕುಟುಂಬಗಳು ಹೆಚ್ಚಾಗಿದ್ದು, ಇದರಿಂದಾಗಿ ಶಾಲೆಯನ್ನು ಮಧ್ಯದಲ್ಲೇ ಬಿಡುವ ಬಾಲಕಿಯರ ಸಂಖ್ಯೆ ಹೆಚ್ಚಾಗಿದೆ.

ಪ್ರೌಢಶಾಲಾ ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಬಾಲಕಿಯರು ಹಲವು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಬಡತನ, ಸಮರ್ಪಕ ಮಾಹಿತಿ ಪೂರೈಕೆ ಕೊರತೆ ಹಾಗೂ ಸಾಮಾನ್ಯ ಕಾಯಿಲೆ, ರಕ್ತಹೀನತೆ, ಪೋಷಕಾಂಶ ಕೊರತೆ ಹಾಗೂ ಋತುಚಕ್ರ ಸಂಬಂಧಿ ಸಮಸ್ಯೆಗಳಂಥ ಆರೋಗ್ಯ ಸಂಬಂಧಿ ವಿಷಯಗಳನ್ನು ಕುರಿತು ಸಮಯಕ್ಕೆ ಸರಿಯಾಗಿ ಸಿಗದ ಮಾಹಿತಿ ಇತ್ಯಾದಿ. ಋತುಚಕ್ರ ಮತ್ತು ಋತುಮತಿಯರ ವಿಷಯಗಳು ಸಾಮಾಜಿಕ-ಸಾಂಸ್ಕೃತಿಕ ನಿರ್ಬಂಧಗಳಿಗೆ ಒಳಪಟ್ಟಿದ್ದು, ಇದರಿಂದ ಹದಿಹರೆಯದ ಬಾಲಕಿಯರಲ್ಲಿ ಶುಚಿತ್ವ ಹಾಗೂ ಅದಕ್ಕೆ ಸಂಬಂಧಿಸಿದ ವಿಧಾನಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಇದರಿಂದಲೂ ಆಗಾಗ್ಗೆ ಅನಾರೋಗ್ಯ ಉಂಟಾಗುವ ಸಾಧ್ಯತೆ ಇದೆ.

### ಏನೇನು ಅಗತ್ಯವಿವೆ?

ಕೆಜಿಬಿವಿ ಶಾಲೆಗಳ ಹಿನ್ನೆಲೆಯಲ್ಲಿ, ಸಾಮರ್ಥ್ಯ ವರ್ಧನೆಯ ವಾತಾವರಣ ಅಂದರೆ ಬಾಲಕಿಯರು ತಮ್ಮ ಜೀವನವನ್ನು ಘನತೆಯಿಂದ, ಅರ್ಥಪೂರ್ಣವಾಗಿ ಹಾಗೂ ಸಂತಸದಾಯಕವಾಗಿ ನಡೆಸಲು ಅನುಕೂಲವಾಗುವಂತೆ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಭಾವನಾತ್ಮಕ ಸಾಧನಗಳನ್ನು ಒದಗಿಸುವುದು. ಇದರಲ್ಲಿ ಉತ್ತಮ ತರಗತಿ ಕೊಠಡಿಗಳು, ವಸತಿ ನಿಲಯ ಕೋಣೆಗಳು ಹಾಗೂ ಸರಿಯಾಗಿ ನಿರ್ವಹಿಸಿಕೊಂಡು ಬಂದ ಶೌಚಾಲಯಗಳಂಥ ಸೌಲಭ್ಯ ಕಲ್ಪಿಸುವುದು ತಪ್ಪದೇ ಸೇರುತ್ತವೆ. ಇದರೊಂದಿಗೆ ಸಾಕಷ್ಟು ಪ್ರಮಾಣದ ಬೋಧನಾ-ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು ಒಳ್ಳೆಯ ವಾತಾವರಣ ಸೃಷ್ಟಿಸಲು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಮರ್ಪಕ ಶೈಕ್ಷಣಿಕ ಬೆಂಬಲ ಹಾಗೂ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ ಕೈಗೊಂಡು ಪಾಲಕರು ತಮ್ಮ ಹೆಣ್ಣುಮಕ್ಕಳನ್ನು ಈ ವಸತಿ ಶಾಲೆಗೆ ಕಳಿಸುವಂತೆ ಪ್ರೇರೇಪಿಸಲು ಕ್ರಮ ಕೈಗೊಳ್ಳಬೇಕು.

ಶಾಲೆಯಿಂದ ಹೊರಗಡೆ ಬಾಲಕಿಯರು ಎದುರಿಸಬಹುದಾದ ನೈಜ ಸಂಗತಿಗಳನ್ನು ಹಾಗೂ ಸಾಮಾಜಿಕ ಮೌಲ್ಯಗಳನ್ನು ಪಠ್ಯದ ಜತೆ ಜೋಡಿಸುವುದು ಅಗತ್ಯವಾಗಿದೆ. ಉದಾಹರಣೆಗೆ, ನೀರಿನ ಕೊರತೆ, ದೌರ್ಜನ್ಯ ಎದುರಿಸುವುದು ಹಾಗೂ ಇನ್ನಿತರ ಸವಾಲುಗಳು. ಈ ಎಲ್ಲ ಸಂಗತಿಗಳನ್ನು ಗಮನದಲ್ಲಿ ಇಟ್ಟುಕೊಂಡು ಬಾಲಕಿಯರಿಗಾಗಿ ಹೇಗೆ ಇಂಥ ಪಠ್ಯಕ್ರಮ ರೂಪಿಸಬೇಕು ಎಂಬ ಪ್ರಶ್ನೆ ಮಹತ್ವದ್ದಾಗಿದೆ.

ಬಾಲಕಿಯರ ಬದುಕಿನ ವಿಧಾನದಿಂದಾಗಿ ಸಾಮಾನ್ಯವಾಗಿ ಅವರ ಆಚಾರ ವಿಚಾರಗಳಲ್ಲಿ ಅಡಗಿರುವ ತಾರತಮ್ಯದ ಭಾವವನ್ನು ಕುರಿತು ಅರಿವು ಮೂಡಿಸುವ ಕೆಲಸವನ್ನು ಮಾಡುವಂತೆ ಶಿಕ್ಷಕರಿಗೆ ಕಾರ್ಯತಂತ್ರ ಹೇಳಿಕೊಡಬೇಕು. ದೈನಂದಿನ ಕಲಿಕೆ ಅವಧಿಯಲ್ಲಿ ಶಿಕ್ಷಕರು ಇದನ್ನು ಪ್ರಾತ್ಯಕ್ಷಿಕೆ ಮೂಲಕ ಹೇಳಿಕೊಡಬೇಕು. ಆ ಮೂಲಕ ಅವರು ಸಮಾನತೆಯನ್ನು ತೋರಿಸಿಕೊಡುವ ಮಾದರಿ ವ್ಯಕ್ತಿ ಆಗಬೇಕು. ಪಠ್ಯಕ್ರಮ ಹಾಗೂ ಬೋಧನಾ ವಿಧಾನದಲ್ಲಿ ಹಲವು ಕ್ರಮಗಳನ್ನು ಅವರೇ ಅನುಸರಿಸಿ, ಸಾಮಾಜಿಕ ಅಸಮಾನತೆಯ ಬಗ್ಗೆ ತಿಳುವಳಿಕೆ ಮೂಡಿಸಬಹುದು.ಅವರು ವಾಸಿಸುತ್ತಿರುವ ಸಮಾಜದಲ್ಲಿ ಇರುವ ಅಸಮಾನತೆಗಳ ಮೂಲಕ ಉದ್ಭವಿಸುವ ಪುರುಷ ಪ್ರಧಾನ ಧೋರಣೆಗಳನ್ನು ಪ್ರಶ್ನಿಸುವ ಪಠ್ಯ ಕ್ರಮ ಮತ್ತು ಬೋಧನಾ ಕ್ರಮಗಳನ್ನು ಬಳಸಲು ಕ್ರಮ ಕೈಗೊಳ್ಳ ಬೇಕು.ಈ ಮಕ್ಕಳ ಕಲಿಕೆಯ ವಿವಿಧ ಮಟ್ಟಗಳು ಹಾಗೂ ವೈವಿಧ್ಯದ ಸಮಾಜಿಕ-ಆರ್ಥಿಕ

ಹಿನ್ನೆಲೆಗಳನ್ನು ಗಮನಿಸಿ, ಶಿಕ್ಷಕರು ಅದಕ್ಕೆ ಪ್ರಸ್ತುತವಾದ ಕಲಿಕಾ–ಬೋಧನಾ ವಿಧಾನಗಳನ್ನು ಅನುಸರಿಸಬಹುದು.

**ಅಂಥ ವಾತಾವರಣ ನಿರ್ಮಾಣ ಮಾಡಲು ಸಾಧನ:**

ಸ್ಥಳೀಯ ಸಮುದಾಯ, ಹಳ್ಳಿಗಳು, ಸ್ವಯಂಸೇವಕರು ಹಾಗೂ ಅಂತಾರಾಷ್ಟ್ರೀಯ ಹಿತೈಷಿಗಳ ಸಹಕಾರದೊಂದಿಗೆ ಇಂಥ ಮಕ್ಕಳ ಸಮುದಾಯದ ಜತೆ ಕೆಲಸ ಮಾಡುವ ಉತ್ಸಾಹಿಗಳ ಹೊಸ ತಲೆಮಾರಿಗೆ ತರಬೇತಿ ಕೊಡುವುದರ ಮೂಲಕ ಮಹಿಳೆಯರ ಶಿಕ್ಷಣದಲ್ಲಿ ಬದಲಾವಣೆ ತರಲು ಸಾಧ್ಯವಿದೆ.

ಲಿಂಗ ತಾರತಮ್ಯ ರಹಿತ ನಿಲುವನ್ನು ಕೆಜಿಬಿವಿ ಶಾಲೆಗಳಲ್ಲಿ ಅಳವಡಿಸುವುದು ಅತ್ಯಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಈ ಶಾಲೆಗಳನ್ನು ನಿರ್ವಹಿಸುವ ಹೊಣೆ ವಹಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಗಳ ಆಯ್ಕೆಯನ್ನು ತುಂಬ ಎಚ್ಚರದಿಂದ ನಡೆಸಬೇಕು. ಸಮುದಾಯಗಳ ಜತೆಗೆ ಕೆಲಸ ಮಾಡುವ ಸ್ವಯಂಸೇವಾ ಸಂಸ್ಥೆಗಳ ಶಿಕ್ಷಕರು ಅದೇ ಸಾಮಾಜಿಕ–ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದಿದ್ದರೆ, ಇದು ಸುಲಭವಾಗುತ್ತದೆ. ಏಕೆಂದರೆ, ಅವರಿಗೆ ಸಮಸ್ಯೆಗಳು ನಿಖರವಾಗಿ ಅರ್ಥವಾಗುತ್ತವೆ. ಜತೆಗೆ ಸಮುದಾಯಗಳ ಜನರು ಅವರೊಂದಿಗೆ ಸೌಹಾರ್ದದಿಂದ ನಡೆದುಕೊಳ್ಳುತ್ತಾರೆ. ಇವರು ಇದ್ದರೆ ವೃತ್ತಿಪರ ತರಬೇತಿ ಕೌಶಲ್ಯ, ಆರೋಗ್ಯ ಮತ್ತು ಪೌಷ್ಟಿಕಾಹಾರದಂಥ ಸಂಗತಿಗಳನ್ನು ಕೆಜಿಬಿವಿ ಶಾಲೆಗಳ ಉದ್ದೇಶವನ್ನು ಕಡೆಗಣಿಸದೇ ಸುಲಭವಾಗಿ ಮನದಟ್ಟು ಮಾಡಬಹುದು.

ಮುಂದಿನ ಜೀವನದ ಘಟ್ಟಗಳಲ್ಲಿ ಬಾಲಕಿಯರು ಎದುರಿಸಬೇಕಾದ ಪರಿಸ್ಥಿತಿ ಗಳಿಗೆ ತಕ್ಕಂತೆ ಅವರ ಆತ್ಮವಿಶ್ವಾಸ ವೃದ್ಧಿಸಿ, ಅವರಲ್ಲಿನ ಸಾಮರ್ಥ್ಯ ಹೆಚ್ಚಿಸಲು ಕ್ರೀಡೆ ಮತ್ತು ದೈಹಿಕ ಶಿಕ್ಷಣಕ್ಕೂ ಗಮನ ಕೊಡಬೇಕಾದ್ದು ಅತ್ಯಗತ್ಯ. ಕಲೆಗಳು ಮತ್ತು ಸೌಂದರ್ಯ ಪ್ರಜ್ಞೆಯನ್ನು ರೂಢಿಸುವುದಕ್ಕೆ ಕೆಜಿಬಿವಿ ಶಾಲೆಗಳಲ್ಲಿ ಆದ್ಯತೆ ನೀಡಿ, ಅವರಲ್ಲಿನ ಸೃಜನಶೀಲತೆಗೆ ಉತ್ತೇಜನ ನೀಡಬೇಕು. ಇದರಿಂದ ಅವರೊಳಗೆ ಅಡಗಿರುವ ಪ್ರತಿಭೆಗೆ ದಾರಿ ಮಾಡಿಕೊಡಬಹುದಾಗಿದೆ.

ಭವಿಷ್ಯದಲ್ಲಿ ಉದ್ದೇಶಿತ ಬದಲಾವಣೆ ತರಲು ಮಾಡಲಾದ ಕೆಲವು ಶಿಫಾರಸುಗಳು ಇಲ್ಲಿವೆ:

### 1. ಋತುಚಕ್ರದ ಕಾಲದಲ್ಲಿ ಅನುಸರಿಸಬೇಕಾದ ಶುಚಿತ್ವ

ಹದಿಹರೆಯದ ಬಾಲಕಿಯರಲ್ಲಿ ಋತುಚಕ್ರ ಹಾಗೂ ಅದಕ್ಕೆ ಸಂಬಂಧಿಸಿದ ಶುಚಿತ್ವದ ಬಗ್ಗೆ ಮಾಹಿತಿ ನೀಡಬೇಕಾದ್ದು ಕೆಜಿಬಿವಿ ಶಾಲೆಗಳಲ್ಲಿ ಬಹುಮುಖ್ಯ ಅಂಶವಾಗಿದೆ. ಸ್ವಚ್ಛತೆ, ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ಸೇರಿದಂತೆ ಹಲವು ಸಂಗತಿಗಳನ್ನು ಕುರಿತು ತರಬೇತಿ ನೀಡಬೇಕು.

### 2. ಸುರಕ್ಷಿತ ಹಾಗೂ ಸ್ನೇಹಪರ ವಾತಾವರಣ ನಿರ್ಮಾಣ

ಸಂಪೂರ್ಣ ಸುರಕ್ಷಿತ, ಸ್ನೇಹಮಯಿ ವಾತಾವರಣವನ್ನು ಬಾಲಕಿಯರಿಗೆ ಕಲ್ಪಿಸುವುದು ಮಹತ್ವದ್ದು. ನೀರು, ಸ್ವಚ್ಛ ಶೌಚಾಲಯ, ಪ್ರತ್ಯೇಕ ಹಾಸಿಗೆ ಹಾಗೂ ಕೊಠಡಿಗಳು ಸೇರಿದಂತೆ ಇತರ ಸೌಲಭ್ಯಗಳನ್ನು ಕಲ್ಪಿಸಬೇಕು. ಬಾಲಕಿಗೆ ದೈಹಿಕ ಹಾಗು ಮಾನಸಿಕವಾಗಿ ಬೆಂಬಲ ಕೊಡಲು ಆರೋಗ್ಯ ಶಿಬಿರಗಳನ್ನು ಆಗಾಗ್ಗೆ ಏರ್ಪಡಿಸುತ್ತಿರಬೇಕು. ಅದರಲ್ಲೂ ಅವರಿಗೆ ದೀರ್ಘಕಾಲೀನ ನಿರ್ಧಾರ ತೆಗೆದುಕೊಳ್ಳಲು ನೆರವು ಒದಗಿಸಬೇಕು. ಬಾಲಕಿಯ ಆರೋಗ್ಯ ಹಾಗೂ ಶುಚಿತ್ವವನ್ನು ಗಮನದಲ್ಲಿ ಇಟ್ಟುಕೊಂಡು ಸರಿಯಾಗಿ ಯೋಜಿಸಿದ ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ನಿಗದಿತವಾಗಿ ರೂಪಿಸಿ, ಅನುಷ್ಠಾನ ಮಾಡುತ್ತಲೇ ಇರಬೇಕು. ಇವೆಲ್ಲದರ ಜೊತೆಯಲ್ಲಿ ಪೌಷ್ಟಿಕ ಆಹಾರ, ಯೋಗ ತರಗತಿಗಳು ಉತ್ತಮ ಜೀವನಕ್ಕೆ ಸಹಕಾರಿಯಾಗಿರುತ್ತವೆ.

ಕೊನೆಯದಾಗಿ, ಕೆಜಿಬಿವಿ ಶಾಲೆಗಳಲ್ಲಿ ಪೂರಕ ವಾತಾವರಣ ನಿರ್ಮಾಣ ಮಾಡುವ ಪ್ರಕ್ರಿಯೆಯಲ್ಲಿ ಮುಖ್ಯ ಸಂಗತಿಗಳಾದ ಅರೋಗ್ಯ ಹಾಗೂ ಶುಚಿತ್ವದ ಅರಿವು ಒಳಗೊಂಡಿರಲೇಬೇಕು. ಈ ಪೈಕಿ ಬಹುತೇಕ ಸಂಗತಿಗಳ ಅನುಷ್ಠಾನಕ್ಕೆ ಶಿಕ್ಷಕರು ಹಾಗೂ ವಸತಿ ನಿಲಯದ ಮೇಲ್ವಿಚಾರಕರ ಸ್ನೇಹಪರ ನೆರವು ಸಾಕು. ಗೌಪ್ಯತೆಗೆ ಅವಕಾಶ ಕೊಡಬೇಕು; ಏಕೆಂದರೆ ಬಹುತೇಕ ಸಮಸ್ಯೆಗಳು ಶುರುವಾಗುವುದು ಇದರ ಕೊರತೆಯಿಂದಲೇ. ಹದಿಹರೆಯದ ಬಾಲಕಿಯರಲ್ಲಿ ಸುರಕ್ಷಿತ ಹಾಗೂ ಶುಚಿತ್ವದ ವಿಧಾನಗಳನ್ನು ಅನುಸರಿಸಲು ಬಾಲಕಿಯರನ್ನು ಪ್ರೇರೇಪಿಸಬೇಕು ಹಾಗೂ ಋತುಚಕ್ರ ಮತ್ತು ಅದಕ್ಕೆ ಸಂಬಂಧಿಸಿದ ಸಂಗತಿಗಳಿಗೆ ಅಂಟಿಕೊಂಡಿರುವ ತಪ್ಪು ಕಲ್ಪನೆಗಳ, ನಿರ್ಬಂಧದಿಂದ ಅವರನ್ನು ಹೊರಗೆ ತರಬೇಕು.



**ನಿರ್ಮಲ** ಅವರು ಅಜೀಂ ಪ್ರೇಂಜಿ ಪ್ರತಿಷ್ಠಾನದ ಕರ್ನಾಟಕದ ಯಾದಗಿರಿ ಜಿಲ್ಲಾ ಸಂಸ್ಥೆಯಲ್ಲಿ ಕಳೆದ ಒಂದು ವರ್ಷದಿಂದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಪ್ರಸ್ತುತ ಹದಿಹರೆಯದ ಹೆಣ್ಣುಮಕ್ಕಳಿಗಾಗಿ ಇರುವ ಯಾದಗಿರಿಯ ಕಸ್ತೂರಿಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಲ್ಲಿ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಕೇಂದ್ರೀಕರಿಸಿ ಕೆಲಸ ಮಾಡುತ್ತಿದ್ದಾರೆ. ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಮತ್ತು ಬೆಂಗಳೂರು ವಿಶ್ವವಿದ್ಯಾಲಯದಿಂದ ಮಾನವ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಕಳೆದ 12 ವರ್ಷಗಳಿಂದ ಅಭಿವೃದ್ಧಿ ವಲಯದಲ್ಲಿ ಇವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ, ಜೀವನೋಪಾಯ ಮತ್ತು ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರಗಳಲ್ಲಿ 12 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರನ್ನು nirmala.vg@azimpremjifoundation.org ನಲ್ಲಿ ಸಂಪರ್ಕಿಸಬಹುದು.

# ವಿದ್ಯಾರ್ಥಿವಾಣಿ



# ಇನ್ವೆಂಚರಿಂಗ್ ಸಪ್ತಾಹ

## ಅನನ್ಯ ರಾಮ್‌ಗೋಪಾಲ್

ಇನ್ವೆಂಚರ್ ಅಕಾಡೆಮಿಯ ಒಳಾಂಗಣಕ್ಕೆ ನಾನು ಮೊದಲಿಗೆ ಹೆಜ್ಜೆಯಿಡುವಾಗ ಬಹಳ ಅಳುಕುತ್ತಲೇ ಕಾಲಿಟ್ಟೆ ಎಂದು ಹೇಳಬೇಕು. ಹೊಚ್ಚ ಹೊಸ ನಗರದಲ್ಲಿ ತೀರ ಹೊಸದಾಗಿರುವ ಶಾಲೆಯಲ್ಲಿ–ಒಂಬತ್ತನೇ ತರಗತಿಗೆ ಸೇರಿ ಓದುವುದೆಂದರೆ ಧೈರ್ಯಕ್ಕೆ ಸವಾಲೇ ಸರಿ. ಈಗೇನೋ ನನ್ನ ತರಗತಿ ನನ್ನ ನೆಚ್ಚಿನ ತಾಣಗಳಲ್ಲಿ ಒಂದು. ಅಂದು ನನ್ನ ತರಗತಿಗೆ ಮೊದಲ ಬಾರಿ ಪ್ರವೇಶಿದಾಗ ಕಂಡದ್ದು, ಒಬ್ಬರ ಸುತ್ತ ಇನ್ನೊಬ್ಬರು ಗುಂಪುಗೂಡಿ, ಕೆಫೀನ್‌ನ ಪ್ರಭಾವದಲ್ಲಿರುವ ಶಿಶುಗಳಂತೆ ಹರಟೆ ಹೊಡೆಯುತ್ತಿದ್ದ ಮತ್ತು ಕಿರುಚಾಡುತ್ತಿದ್ದ ವಿದ್ಯಾರ್ಥಿಗಳ ಸಮೂಹ. ಅಲ್ಲದೇ, ಒಬ್ಬ ಹೊಸ ವಿದ್ಯಾರ್ಥಿಗೆ ಭಯ ಹುಟ್ಟಿಸಲು ಇದಕ್ಕಿಂತ ಹೆಚ್ಚು ಏನು ಬೇಕು? ಇದು ಅವರ ಅಖಾಡ ಮತ್ತು ನಾನು ಏನು ಮಾಡಬೇಕೆಂಬ ಯಾವ ಸುಳಿವೂ ನನ್ನಲ್ಲಿ ಇರಲಿಲ್ಲ.

ನನ್ನ ಅದೃಷ್ಟಕ್ಕೆ, ಇನ್ವೆಂಚರ್ ಇತರ ಹೆಚ್ಚಿನ ಶಾಲೆಗಳಂತಲ್ಲ. ವರ್ಷದ ಆರಂಭದಲ್ಲಿಯೇ ನೇರವಾಗಿ ಪಾಠ ಪ್ರವಚನಕ್ಕೆ ತೊಡಗುವುದರಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಅದರ ಬದಲಾಗಿ, ವಿದ್ಯಾರ್ಥಿಗಳನ್ನು ಅದರಲ್ಲೂ ಹೊಸಬರನ್ನು ಒಮ್ಮೆಲೆ ದೈನಂದಿನ ಯಾಂತ್ರಿಕತೆಗೆ ತಳ್ಳುವ ಬದಲಾಗಿ ತಮ್ಮ ಶಾಲಾ ಪರಿಸರಕ್ಕೆ ಹೊಂದಿಕೊಳ್ಳಲು ಅಥವಾ ಮರುಹೊಂದಿಕೊಳ್ಳಲು ಅವರಿಗೆ ಸಮಯವಕಾಶವನ್ನು ಅವರು ನೀಡುತ್ತಾರೆ. ಹೀಗಾಗಿ ಇನ್ವೆಂಚರಿಂಗ್ ಎಂಬ ಪರಿಕಲ್ಪನೆ ಹುಟ್ಟಿಕೊಂಡಿತು. ಮೋಜಿನ ಚಟುವಟಿಕೆಗಳ ಮೂಲಕ–ಸಾಮಾನ್ಯವಾಗಿ ಒಂದು ದೊಡ್ಡ ಪ್ರಮಾಣದ ಕಲಾ ಯೋಜನೆಯನ್ನು ಮಾಡುವ ಮೂಲಕ ವಿದ್ಯಾರ್ಥಿಗಳು ಪರಸ್ಪರರನ್ನು ಅರಿತುಕೊಳ್ಳುವುದಕ್ಕೆ ಇಡೀ ಶಾಲೆಗೆ ಮೀಸಲಾದ ವಾರ ಅದು. ಅಂಥ ಯೋಜನೆಯ ಮೂಲಕ ವಿದ್ಯಾರ್ಥಿಗಳು ತಾವು ಸಾಧಿಸುತ್ತಿರುವ ಪ್ರಗತಿಯನ್ನು ಕಾಣಲು ಸಾಧ್ಯವಾಗುತ್ತದೆ, ಮುಂದಿನ ಯೋಜಿನೆ ತಯಾರಿಸಬಹುದು, ಮತ್ತು ತಮಗೆ ನೀಡಲಾದ ಕೆಲಸವು ಪೂರ್ಣ–ಗೊಂಡಿರುವುದನ್ನು ಕುರಿತು ಸಂತೃಪ್ತಿಯ ಭಾವನೆಗಳನ್ನು ಹೊಂದಲು ಅವರಿಗೆ ಸಾಧ್ಯವಾಗುವುದು – ಇದೇ ಈ ಯೋಜನೆಯ ಹಿಂದಿನ ಮುಖ್ಯ ಆಶಯ. ವಿದ್ಯಾರ್ಥಿಗಳಿಗೆ ಅವರು ಮಾಡ ಬಹುದಾದ ವೈವಿಧ್ಯಮಯವಾದ ಯೋಜನೆಗಳನ್ನು ಒದಗಿಸಲಾಗುವುದು ಮತ್ತು ಅವರು ತಮಗೆ ಹಿಡಿಸಿದ ಯಾವುದಾದರೂ ಯೊಜನೆಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಅವರಿಗೆ ನೀಡಲಾಗುವುದು.

ಕಳೆದ ವರ್ಷ, ನಮಗೆ ವಿವಿಧ ಆಯ್ಕೆಗಳಿದ್ದವು–ಹಕ್ಕಿಗೂಡನ್ನು ನಿರ್ಮಿಸುವುದು, ಭಿತ್ತಿಚಿತ್ರಕ್ಕೆ ಬಣ್ಣ ಹಾಕುವುದು, ಹೂದೋಟವನ್ನು ಅಲಂಕರಿಸುವುದು, ಇತ್ಯಾದಿ. ನಾನು ಹಕ್ಕಿ ಗೂಡನ್ನು ನಿರ್ಮಿಸುವುದನ್ನು ಆಯ್ಕೆ ಮಾಡಿಕೊಂಡೆ. ಅದೇ ಚಟುವಟಿಕೆಯನ್ನು ಮಾಡಲಿರುವ ವಿವಿಧ ತರಗತಿಗಳಿಗೆ ಸೇರಿದ 10 ವಿದ್ಯಾರ್ಥಿಗಳ ಗುಂಪಿಗೆ ನನ್ನನ್ನು ಸೇರಿಸಲಾಗಿತ್ತು. ನಾನು ಮೊದಲು ಆಯ್ಕೆ ಮಾಡಿ ಕೊಂಡಾಗ ಎಲ್ಲ ಯೋಜನೆಗಳಲ್ಲಿಯೇ ಅದು ಅತ್ಯಂತ ಸುಲಭವಾದದ್ದೆಂದು ನನಗೆ ಅನಿಸಿತ್ತು. ಆದರೆ ಮಾಡುತ್ತಾ ಹೋದಾಗ ಹಕ್ಕಿ ಗೂಡನ್ನು ನಿರ್ಮಿಸುವುದು ಸರಳವಾದ ಕೆಲಸವೇನಲ್ಲವೆಂದು ಮನದಟ್ಟಾಯಿತು.

ನಾವು ಏನೆಲ್ಲಾ ಸಾಮಗ್ರಿಗಳು ಅಗತ್ಯ ಬೀಳಬಹುದು ಎಂಬುದನ್ನು ಒಳಗೊಂಡಂತೆ ಸಾಕಷ್ಟು ಯೋಜನೆ ಮಾಡಬೇಕಾಯಿತು. ಸಾಧ್ಯವಿರುವ ವಿನ್ಯಾಸಗಳನ್ನು ರೂಪಿಸುವುದು ಮತ್ತು ತಜ್ಞ ಸಲಹೆಗಳನ್ನು ಮತ್ತು ಅಗತ್ಯವಿರುವ ಇತರ ಸಹಾಯಗಳನ್ನು ಪಡೆದುಕೊಳ್ಳುವುದು ಇವನ್ನೆಲ್ಲಾ ಮಾಡಬೇಕಾಗಿ ಬಂತು. ನಮ್ಮ ಯೋಜನೆಯನ್ನು ಹೇಗೆ ಮಾಡಬಹುದು ಎಂಬ ಒಂದು ಸ್ಥೂಲ ಕಲ್ಪನೆಯು ನಮಗೆ ದೊರಕಿದ ಬಳಿಕ ಅದನ್ನು ವಾಸ್ತವವಾಗಿ ಕಾರ್ಯಗತಗೊಳಿಸುವ ಸಮಯ ಬಂತು. ಏನೆಲ್ಲಾ ಯೋಜನೆಗಳನ್ನು ನಾವು ರೂಪಿಸಿದ್ದರೂ ವಾಸ್ತವವಾಗಿ ಒಂದು

ಹಕ್ಕಿಗೂಡನ್ನು ನಿರ್ಮಿಸುವುದರಲ್ಲೇ ಇರೋದು ಪಜೀತಿ ಎಂಬುದು ಮನವರಿಕೆಯಾಯಿತು. ನಮ್ಮ ಸಮಸ್ಯೆ ಬಗೆಹರಿಸುವಿಕೆ ಕೌಶಲ್ಯಗಳು ಸಹಾಯಕ್ಕೆ ಬಂದಿರುವುದು ಈ ಹಂತದಲ್ಲೇ; ಹೇಗಾದರೂ ಮಾಡಿ ಸಂಪೂರ್ಣ ಸೋಲಿನಿಂದ ಪಾರಾಗಬೇಕೆಂದು ಕೊನೇ ಪ್ರಯತ್ನವನ್ನು ಮಾಡುತ್ತಿರ-ಬೇಕಾದರೆ, ಜೊತೆಯಾಗಿ ಕೆಲಸ ಮಾಡುವ ಹಾಗೂ ಪರಸ್ಪರರ ಮೇಲೆ ಅವಲಂಬಿಸಿ ಕೆಲಸವನ್ನು ಪೂರ್ತಿಗೊಳಸುವುದರ ಮಹತ್ವವನ್ನು ಕೂಡಾ ನಾವು ಮನಗಂಡೆವು.

ವಾರದ ಕೊನೆಯಲ್ಲಿ ನಾವು ಪೂರ್ತಿಗೊಳಸಿದ ಒಂದು ಸುಂದರವಾದ ಹಕ್ಕಿಗೂಡನ್ನು ಮೆಚ್ಚುಗೆಯಿಂದ ದಿಟ್ಟಿಸುವ ಪವಾಡ ನಮ್ಮದಾಯಿತು. ನನ್ನ ಮಟ್ಟಿಗೆ ಹೇಳುವುದಾದರೆ, ಆ ವಾರದಲ್ಲಿ ನಾನು ಸಾಧಿಸಿದ ಕೆಲಸವು ಅದೊಂದೇ ಆಗಿರಲಿಲ್ಲ. ಈ ಪ್ರಕ್ರಿಯೆಯಲ್ಲಿ ನಾನು ಅಚಾನಕ್ಕಾಗಿ ಹಲವಾರು ಗೆಳೆತಿಯರನ್ನು ಸಂಪಾದಿಸಿದ್ದೆ ಹಾಗೂ ಯಾರೋ ಹೊರಗಿನವಳಾಗಿ ನೋಡದೇ ಎಲ್ಲವನ್ನೂ ಒಳಗಿನವಳಾಗಿ ನೋಡುವುದು ಅದ್ಭುತ ಎನಿಸಿತು.

ಇನ್ವೆಂಚರಿಂಗ್ ಸಪ್ತಾಹದ ಕೊನೆಯಲ್ಲಿ ಶುಕ್ರವಾರದಂದು 4 ರಿಂದ 10 ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ರಾತ್ರಿ-ವಿಶ್ರಾಂತಿಯ ಕಾರ್ಯಕ್ರಮವಿರುತ್ತದೆ. ಈ ರಾತ್ರಿ ವಿಶ್ರಾಮದ ಕಾರ್ಯಕ್ರಮವು ಇನ್ವೆಂಚರ್ ಸಪ್ತಾಹದ ಬಹು ಮುಖ್ಯ ಭಾಗ. ಕೇವಲ ಒಂದು ವಾರ ಮಾತ್ರ ತನ್ನ ಸುತ್ತಲ ಜನರೊಂದಿಗೆ ಪರಿಚಿತಳಾದ ಒಬ್ಬ ಹೊಸ ವಿದ್ಯಾರ್ಥಿನಿಗೆ ಈ ರಾತ್ರಿ ವಿಶ್ರಾಂತಿಯ ಅವಧಿಯು ಒಂದು ಅತ್ಯದ್ಭುತವಾದ ಅನುಭವವಾಗಿತ್ತು. ಅದು ನನ್ನ ಎಲ್ಲಾ ನಿರೀಕ್ಷೆಗಳನ್ನು ಮೀರಿತ್ತು ಮತ್ತು ನಾನು ಇನ್ನಷ್ಟು ಹೆಚ್ಚು ಬಯಸುವಂತೆ ಮಾಡಿತ್ತು. ಅದು ಸೂರ್ಯೋದಯದವರೆಗೆ ಕಾಡು ಹರಟೆಯಲ್ಲಿ ಸಮಯ ಕಳೆದಿದ್ದಾಗಲೀ ಅಥವಾ ಮಧ್ಯರಾತ್ರಿ ಮೀರಿ ಅಂಗಳದಲ್ಲಿ ನರ್ತಿಸಿದ್ದಾಗಲೀ, ಅಲ್ಲಿ ಪ್ರತಿಯೊಬ್ಬರಿಗೂ ಏನಾದರೂ ಒಂದು ಇಂತಹ ಅನುಭವ ದೊರಕಿತ್ತು. ಇದೇ ಮೊದಲ ಬಾರಿಗೆ ನಾನು ಇನ್ವೆಂಚರ್‌ಗೆ ಸೇರಿದವಳಾಗಿದ್ದೇನೆಂಬ ಭಾವನೆಯೊಂದಿಗೆ ಮರುದಿನ ನಾನು ಮನೆಗೆ ಹಿಂತಿರುಗಿದೆ.

ಇನ್ವೆಂಚರಿಂಗ್ ಅನುಭವ ಇಲ್ಲದೆ ಇದ್ದರೂ ಕಾಲಾಂತರದಲ್ಲಿ ನಾನು ಶಾಲೆಯಲ್ಲಿ ಗೆಳೆಯರನ್ನು ಸಂಪಾದಿಸುತ್ತಿದ್ದೆ ನಿಜ. ಆದರೆ ಶಾಲೆಯ ಆ ಒಂದು ಸಪ್ತಾಹವು ಆ ಸಮಯದಲ್ಲಿ ನನಗೇನು ಅಗತ್ಯವಿತ್ತೋ ಅದನ್ನೇ ನಿಖರವಾಗಿ ನೀಡಿತ್ತು. ಅದು ನನ್ನಲ್ಲಿ ಆತ್ಮವಿಶ್ವಾಸ ಬೆಳೆಯಲು ಸಹಕಾರಿಯಾಯಿತು ಮತ್ತು ಅದು ನನ್ನಲ್ಲಿ ಹೊಣೆಹೊತ್ತು ಕೆಲಸಮಾಡುವ ಮನೋಭಾವವನ್ನು ಹುಟ್ಟುಹಾಕಿ ಒಂದು ತಂಡದಲ್ಲಿ ಹೇಗೆ ಕೆಲಸ ಮಾಡಬೇಕೆಂದು ಯೋಚಿಸಲು ಕೂಡಾ ಸಹಾಯ ಮಾಡಿತು. ಇವಿಷ್ಟೇ ಅಲ್ಲದೆ, ನಾನು ಸೃಜನಾತ್ಮಕವಾಗಿ ಮತ್ತು ನಾವೀನ್ಯಪೂರ್ಣವಾಗಿರಲು ಮತ್ತು ಅದೇ ಸಮಯದಲ್ಲಿ ನನಗೆ ನಾನೇ ಸವಾಲೊಡ್ಡಿಕೊಂಡು ನಾನು ಇಷ್ಟು ವರ್ಷಗಳಲ್ಲಿ ಸಂಪಾದಿಸಿದ ಕೌಶಲ್ಯಗಳನ್ನು ಬಳಸಲು ನನ್ನನ್ನು ಅದು ಪ್ರೋತ್ಸಾಹಿಸಿತು.

ಇನ್ವೆಂಚರಿಂಗ್ ಅನುಭವ ಇಲ್ಲದೆಯೂ ಕಾಲಾನಂತರದಲ್ಲಿ ನಾನು ಶಾಲೆಯಲ್ಲಿ ಗೆಳೆಯರನ್ನು ಸಂಪಾದಿಸುತ್ತಿದ್ದೆ ನಿಜ. ಆದರೆ ಶಾಲೆಯ ಆ ಒಂದು ವಾರವು ಆ ಸಮಯದಲ್ಲಿ ನನಗೆ ಏನೇನು ಅಗತ್ಯವಿತ್ತೋ ಅದನ್ನೇ ನಿಖರವಾಗಿ ನನಗೆ ನೀಡಿತ್ತು. ಅದು ನನ್ನಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಸಹಾಯಕಾರಿಯಾಯಿತು ಮತ್ತು ಅದು ನನ್ನಲ್ಲಿ ಜವಾಬ್ದಾರಿ ಹೊತ್ತು ಕೆಲಸಮಾಡುವ ಮನೋಭಾವವನ್ನು ಹುಟ್ಟುಹಾಕಿ ಒಂದು ತಂಡದಲ್ಲಿ ಹೇಗೆ ಕೆಲಸ ಮಾಡಬೇಕೆಂದು ಯೋಚಿಸಲು ಕೂಡಾ ಸಹಾಯ ಮಾಡಿತು. ಇವಿಷ್ಟೇ ಅಲ್ಲದೆ, ನಾನು ಸೃಜನಾತ್ಮಕವಾಗಿ ಮತ್ತು ನಾವೀನ್ಯ ಪೂರ್ಣವಾಗಿರಲು ಮತ್ತು ಅದೇ ಸಮಯದಲ್ಲಿ ನನಗೆ ನಾನೇ ಸವಾಲೊಡ್ಡಲು ಮತ್ತು ನಾನು ಇಷ್ಟು ವರ್ಷಗಳಲ್ಲಿ ಸಂಪಾದಿಸಿದ ಕೌಶಲ್ಯಗಳನ್ನು ಬಳಸಲು ನನ್ನನ್ನು ಅದು ಪ್ರೋತ್ಸಾಹಿಸಿತು.

ಎಲ್ಲಕ್ಕೂ ಮಿಗಿಲಾಗಿ, ನಾನು ಆನಂದವಾಗಿ ಸಮಯವನ್ನು ಕಳೆಯುವುದಕ್ಕೆ ಮತ್ತು ಕೆಲವು ಆತ್ಮೀಯ ಗೆಳತಿಯರನ್ನು ಸಂಪಾದಿಸುವುದಕ್ಕೆ ಸಹಾಯವಾಯಿತು-ಇವೆಲ್ಲವುಗಳಾಗಿ ನಾನು ಇನ್ವೆಂಚರಿಂಗ್‌ಗೆ ಚಿರಋಣಿಯಾಗಿದ್ದೇನೆ. ಈಗ ಒಂದು ವರ್ಷ ಕಳೆದಿದೆ. ಆದರೆ ನನ್ನ ಮೊದಲ ಇನ್ವೆಂಚರಿಂಗ್ ಅನುಭವ ನನ್ನ ಮನದಲ್ಲಿ ಹಚ್ಚ ಹಸುರಾಗಿಯೇ ಉಳಿದಿದೆ.

**ಅನನ್ಯ ರಾಂಗೋಪಾಲ್** ಅವರು ಇನ್ವೆಂಚರ್ ಅಕಾಡೆಮಿಯಲ್ಲಿ 10 ನೇ ತರಗತಿಯಲ್ಲಿ ಓದುತ್ತಿದ್ದಾರೆ. ಅವರನ್ನು ananya.ramgopal@gmail.com ನಲ್ಲಿ ಸಂಪರ್ಕಿಸಬಹುದು.



# ನನ್ನ ಶಾಲೆಯ ಸೋಪಾನ

**ಅಂಕಿತ ಕೊಡವೂರ್**




ವಿದ್ಯಾ ನಿಕೇತನ ಶಾಲೆಯ ಕೈಬೀಸಿ ಕರೆಯುತಿದ್ದ ದ್ವಾರಗಳತ್ತ ನಾನು ದಿಟ್ಟಿಸಿ ನೋಡಿದೆ. ನನ್ನ ಬದುಕಿನಲ್ಲಿ ಹೊಸದಾಗಿ ನಾನೇರುತ್ತಿರುವ ಈ ಮೆಟ್ಟಿಲು ನನಗೆ ಏನನ್ನು ನೀಡಬಹುದೆಂಬ ಅಳುಕಿನಿಂದಲೇ ಬಹಳ ಜಾಗರೂಕತೆಯಿಂದ ಹೆಜ್ಜೆಯಿರಿಸಿದೆ. ಅಷ್ಟರಲ್ಲಿ ಪುಟ್ಟ ಹುಡುಗಿಯೊಬ್ಬಳು ಬಂದು ನನ್ನ ಕೈಯನ್ನು ಕುಲುಕಿದಳು ಮತ್ತು ನಗುನಗುತ್ತಾ "ಗುಡ್ ಮಾರ್ನಿಂಗ್" ಎಂದು ನನ್ನನ್ನು ಸ್ವಾಗತಿಸಿದಳು. ಅದೇ ಉತ್ಸಾಹದಲ್ಲಿ ಆಕೆಯು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸ್ವಾಗತಿಸುತ್ತಾ ಮುಂದುವರೆದಳು. ಇದನ್ನು ಕಂಡು ನನಗೆ ಸಂತೋಷವೂ ಆಯಿತು ಮತ್ತು ಆಶ್ಚರ್ಯವೂ ಆಯಿತು, ಬಳಿಕ ನನಗೆ ತಿಳಿಯಿತು ಇದು ವಿದ್ಯಾ ನಿಕೇತನದ ಒಂದು ಸತ್ಪರಂಪರೆಯೆಂದು.

ನಾನು ಹೊಸಬಳಾಗಿದ್ದರೂ, ಇಲ್ಲಿಯ ತಿಳಿ ಹಳದಿ ಬಣ್ಣದ ಗೋಡೆಗಳಿಂದ ಹಿಡಿದು ನಗುನಗುತ್ತಾ ಬೆರೆಯುವ ಜನರವರೆಗೆ ಆತ್ಮೀಯತೆಯ ಭಾವನೆಗಳು ನನ್ನನ್ನು ಆವರಿಸಿದವು. ಎಲ್ಲೆಲ್ಲೂ ಆಶಾವಾದ ಸೂಸುತಿತ್ತು. ನನ್ನ ಶಾಲಾ ವಿದ್ಯಾಭ್ಯಾಸದ ಕೊನೆಯ ವರ್ಷಗಳನ್ನು ಕಳೆಯಲು ಇದಕ್ಕಿಂತ ಉತ್ತಮ ಪರಿಸರ ಬೇಕೇ? ಇದೇನೋ ಶಿಸ್ತಿನ ಶಾಲೆಯೇ, ಆದರೆ ಒಬ್ಬ ವಿದ್ಯಾರ್ಥಿಯ ನೈಜ ಸಾಮರ್ಥ್ಯಗಳನ್ನು ಅತಿಯಾಗಿ ನಿರ್ಬಂಧಿಸದೆ ಅಥವಾ ನಿಗ್ರಹಿಸದೆ ಅದು ಶಿಸ್ತನ್ನು ನಿರ್ವಹಿಸುತ್ತದೆ. ಇಲ್ಲಿ ವಿಚಾರಗಳು ಮುಕ್ತವಾಗಿ ಹರಿಯುತ್ತವೆ, ಆದರೆ ಎಂದೂ ಹತೋಟಿ ಮೀರಿ ಹೋಗುವುದಿಲ್ಲ.

ತರಗತಿಯಲ್ಲಿ ಸ್ಮಾರ್ಟ್‌ಬೋರ್ಡ್‌ಗಳ ಬಳಕೆಯು ಒಂದು ಸ್ವಾಗತಾರ್ಹ ಬದಲಾವಣೆಯಾಗಿತ್ತು. ಈ ಹಲಗೆಗಳು ತರಗತಿಯಲ್ಲಿ ವಿವಿಧ ಬಗೆಯ ಚಟುವಟಿಕೆಗಳಿಗೆ ಅವಕಾಶ ನೀಡುತ್ತಿದ್ದವು. ಹೌದು, ಪಠ್ಯಪುಸ್ತಕಗಳನ್ನು ಬಿಟ್ಟರೆ ಉತ್ತಮ ಮಾರ್ಗವಿಲ್ಲ ಎಂಬುದು ಹೆಚ್ಚಿನವರು ಒಪ್ಪಿರುವ ಮಾತೇ, ಆದರೆ ಬಹಳ ಸಲ ಪಠ್ಯ ಪುಸ್ತಕಗಳನ್ನೂ ದಾಟಿಹೋಗದೇ ನಾವು ನೀರಸ ಮತ್ತು ನಿರ್ಬಂಧಿತ ಜಗತ್ತಿನಲ್ಲಿ ಸಿಲುಕಿ ಹೋಗುತ್ತವೆ. ಇಲ್ಲಿನ ನಮ್ಮ ಶಿಕ್ಷಕರ ತೆರೆದ ಮನಸ್ಸು ಸ್ಫೂರ್ತಿದಾಯಕವಾಗಿದ್ದು ಮತ್ತು ಅನೇಕ ವೇಳೆ ಅವುಗಳು ತರಗತಿಯಲ್ಲಿ ಆರೋಗ್ಯಪೂರ್ಣ ಚರ್ಚೆಯನ್ನು ಪ್ರಚೋದಿಸುತ್ತದೆ. ಹೋಲಿಕೆಯಲ್ಲಿ ಕಡಿಮೆ ವಿದ್ಯಾರ್ಥಿಗಳಿದ್ದ ತರಗತಿಯಾದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಅಭಿಪ್ರಾಯವನ್ನು ತಿಳಿಸಲು ಅವಕಾಶ ದೊರೆಯುತ್ತದೆ.

"ಆಟವಿಲ್ಲ ಕೂಟವಿಲ್ಲ ಓದಿ ಓದಿ ಮರುಳಾದ ಕೂಚಂಭಟ್ಟ" ಎಂಬುದು ಒಂದು ಸವಕಲು ಗಾದೆಯಾಗಿದ್ದರೂ ಅದನ್ನೆ ಮತ್ತೆ ಹೇಳಬೇಕಾಗಿದೆ. ವಿದ್ಯಾ ನಿಕೇತನದಲ್ಲಿ ಓದು ಬರಹ ಮತ್ತು ಇತರ ಚಟುವಟಿಕೆಗಳು ಸಮ ಸಮವಾಗಿ ನಡೆಯುತ್ತವೆ. ಕ್ರೀಡಾ ಕೂಟಗಳು ಮತ್ತು ಅಂತರ್-ಶಾಲಾ ಉತ್ಸವಗಳು, ಮಾದರಿ ವಿಶ್ವ ಸಂಸ್ಥೆ ಮತ್ತು ಚರ್ಚಾಕೂಟಗಳಲ್ಲಿ ಮಕ್ಕಳನ್ನು ವ್ಯಾಪಕವಾಗಿ ತೊಡಗಿಸಿಕೊಳ್ಳುವುದರಿಂದ ನಾವು "ದಡ್ಡ"ರಾಗುವ ಸಾಧ್ಯತೆಯೇ ಇಲ್ಲ. ನಮ್ಮ ಎಲ್ಲಾ ಪಠ್ಯಜನ್ಯ ಜ್ಞಾನವನ್ನು ಅನ್ವಯಿಸಲು ನಾವು ಸಮರ್ಥರಾಗದಿದ್ದಲ್ಲಿ, ನಾವು ಕಲಿತದ್ದೆಲ್ಲಾ ಸೊನ್ನೆಗೆ ಸಮಾನ.

ಬೆಳವಣಿಗೆ ಮತ್ತು ಕಲಿಕೆಯ ಜೊತೆ ಜೊತೆಗೆ ಹೊಣೆಗಾರಿಕೆಯನ್ನೂ ವಹಿಸಿಕೊಳ್ಳಬೇಕಾಗುತ್ತದೆ. ಶಾಲೆಯಲ್ಲಿ ಸಮಾರಂಭ ನಡೆಸುವ ಜವಾಬ್ದಾರಿ ಮಾದರಿ ವಿಶ್ವ ಸಂಸ್ಥೆ ಸಭೆ ನಡೆಸುವುದು ಮತ್ತು ವಿವಿಧ ಪ್ರದರ್ಶನಗಳನ್ನು ಶಾಲೆಯಲ್ಲಿ ಏರ್ಪಡಿಸುವುದು ಮುಂತಾದ ಈ ಜವಾಬ್ದಾರಿಯನ್ನು ನಿರ್ವಹಿಸುವ ಅವಕಾಶವನ್ನು ವಿದ್ಯಾನಿಕೇತನ್ ಶಾಲೆಯು ನಮಗೆ ನೀಡುತ್ತದೆ. ಇಂತಹ ಅವಕಾಶಗಳಿಂದಲೇ ನಮ್ಮ ಆತ್ಮವಿಶ್ವಾಸವು ವೃದ್ಧಿಸುವುದು. ಇಂಥ ಸಂದರ್ಭಗಳಿಂದಲೇ ನಮ್ಮ ಸೃಜನಶೀಲತೆ ಮತ್ತು ನಾಯಕತ್ವದ ಗುಣಗಳು ಪ್ರಕಟವಾಗುತ್ತವೆ. ಶಾಲಾ ಜೀವನದಲ್ಲಿ ಓದು ಮತ್ತಿತರ ಚಟುವಟಿಕೆಗಳಷ್ಟೇ ಮಹತ್ವವಾದದ್ದು ನಮ್ಮ ಸಹಪಾಠಿಗಳು ಮತ್ತು ಶಿಕ್ಷಕರ ಜೊತೆಯಲ್ಲಿನ ಒಡನಾಟ. ನಮ್ಮ ಕಷ್ಟಗಳನ್ನು ಹಂಚಿಕೊಳ್ಳಬಹುದಾದ ನಮ್ಮೊಡನೆ ಸುಲಭವಾಗಿ ಬೆರೆಯುವ ಶಿಕ್ಷಕರು ನಮ್ಮೊಡನೆ ಇದ್ದಾರೆ ಎನ್ನುವುದೇ ಮನಸನ್ನು ಹಗುರಗೊಳಿಸುತ್ತದೆ. ಬಹಳ ಸಲ ನಮ್ಮ ಹುಡುಗಾಟದ ಉನ್ಮಾದದಲ್ಲಿ ನಾವು ಎಷ್ಟೊಂದು ಮೈಮರೆಯುತ್ತೇವೆಂದರೆ, ನಾವು ನಮ್ಮ ಒಡನಾಡಿಗಳನ್ನು ಮರೆಯುತ್ತೇವೆ ಇಲ್ಲವೇ ಅವರನ್ನು ಹೇಗೆ ನಾವು ನಡೆಸಿಕೊಳ್ಳುತ್ತಿದ್ದೇವೆ ಎಂಬುದರ ಪರಿವೆಯೇ ನಮಗಿರುವುದಿಲ್ಲ.

ಹಂಚಿ ಬಾಳಿದರೆ ಸ್ವರ್ಗ ಸುಖ ಎಂಬ ಮೌಲ್ಯವು ವಿದ್ಯಾ ನಿಕೇತನದಲ್ಲಿ ಆಳವಾಗಿ ಬೇರೂರಿದೆ ನಮಗೆ ವಾರಕೊಮ್ಮೆ ನಮ್ಮ ಚಿಂತನೆಗಳನ್ನು ಹಂಚಿಕೊಳ್ಳುವ ತರಗತಿಗಳಿದ್ದು ಅಲ್ಲಿ ನಾವು ನಿರ್ಭಿಡೆಯಿಂದ ಮನದ ಮಾತನ್ನು ಹೇಳುತ್ತೇವೆ ಮತ್ತು ಇಡೀ ತರಗತಿಯು ಇತರರ ಮಾತುಗಳನ್ನು ಆಲಿಸಲು ತನ್ನ ಸಮಯವನ್ನು ವಿನಿಯೋಗಿಸುತ್ತದೆ. ನಮ್ಮನ್ನು ಚಿಂತನೆಗೆ ಹಚ್ಚಲು ಜೀವನ ಕೌಶಲ್ಯ ಶಿಕ್ಷಕಿಯು ತಪ್ಪದೇ ಬದುಕಿನ ಒಂದಿಲ್ಲೊಂದು ಹೊಸ ಆಯಾಮವ'ನ್ನು ನಮ್ಮ ಮುಂದೆ ತೆರೆದಿಡುತ್ತಿದ್ದರು. ಇಲ್ಲಿ ದಾದಾಗಿರಿ (bullying) ಮಂತಾದ ಸೂಕ್ಷ್ಮ ವಿಷಯಗಳನ್ನು ಬಗೆಹರಿಸುತ್ತಿದ್ದ ಮತ್ತು ಆಗಿಂದಾಗಲೇ ಅದನ್ನು ತಿದ್ದುತ್ತಿದ್ದ ರೀತಿಯಲ್ಲಿ ತೋರುತ್ತಿದ್ದ ಕಾಳಜಿ ಕಂಡು ನನ್ನ ಹೃದಯ ತುಂಬಿ ಬರುತ್ತಿತ್ತು. ಶಾಲೆಯೆಂದರೆ ನಾವು ವಿಷಯಗಳನ್ನು ಕಲಿಯುವ ಸ್ಥಳ ಹಾಗೆಯೇ ನಾವು ಪೂರ್ಣವಾಗಿ ಅರಳುವ ಸ್ಥಳವೂ ಹೌದು. ಅದು ನಮ್ಮ (ವೇಗವಾಗಿ ಆಗಮಿಸುತ್ತಿರುವ) ವಯಸ್ಕ ಜೀವನದಲ್ಲಿ ನಾವು ಏನಾಗಲಿರುವೆವು ಎಂಬುದನ್ನು ರೂಪಿಸುವ ಸ್ಥಳ. "ತರಗತಿ ಕೋಣೆಯು ಜಗತ್ತಿಗೆ ಒಂದು ಪ್ರವೇಶದ್ವಾರವಾಗಿರಬೇಕೇ ಹೊರತು ಅದರಿಂದ ತಪ್ಪಿಸಿ ಅಡಗಿಕೊಳ್ಳುವ ಸ್ಥಳ ಆಗಿರಬಾರದು" ಎಂದು ಜಾನ್ ಷಿಯಾರ್ಡಿ (John Ciardi) ಹೇಳಿದ್ದಾನೆ ಈ ಮಾತಿಗೆ ನನ್ನ ಪೂರ್ಣ ಸಹಮತವಿದೆ.

**ಅಂಕಿತ ಕೊಡವೂರ್** ಬೆಂಗಳೂರಿನ ವಿದ್ಯಾನಿಕೇತನ್ ಶಾಲೆಯ 11 ನೇ ತರಗತಿಯ ವಿದ್ಯಾರ್ಥಿನಿ.
ಅವರನ್ನು anki.kodavoor@gmail.com ನಲ್ಲಿ ಸಂಪರ್ಕಿಸಬಹುದು



# ಶಿಕ್ಷಕರು

## ಕಟ್ಟಲೂ ಬಹುದು ಕೆಡವಲೂಬಹುದು

ಗುರುರಾಜ್ ಕೆ.ಎಸ್.

ನಾನು ಕರ್ನಾಟಕ ರಾಜ್ಯದ ಧಾರವಾಡದ ಒಂದು ಖಾಸಗಿ ಸಹ-ಶಿಕ್ಷಣ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಿಂಡರ್ ಗಾರ್ಟನ್‌ನಿಂದ 10ನೇ ತರಗತಿಯವರೆಗೆ ಕಲಿತಿದ್ದೇನೆ.

ಅನೇಕ ದಶಕಗಳಷ್ಟು ಹಳೆಯದಾದ ಒಂದು ಹೆಣ್ಣು ಮಕ್ಕಳ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ನಮ್ಮ ಶಾಲೆ ಪ್ರಾರಂಭವಾಗಿತ್ತು. ನಾನು 8ನೇ ತರಗತಿಯಲ್ಲಿರುವಾಗ ಅದೇ ಆವರಣದೊಳಗಿರುವ ನಮ್ಮದೇ ಸ್ವಂತ ಶಾಲಾ ಕಟ್ಟಡಕ್ಕೆ ಸ್ಥಳಾಂತರಗೊಂಡಿರುವುದು ನನಗೆ ನೆನಪಿದೆ.

ನಮ್ಮ ಶಾಲೆಯು ಶಿಕ್ಷಣಕ್ಕೆ ಪೂರಕವಾಗಿರುವ ಅಂಶ-ಗಳಾದಂತಹ ಸಾಕಷ್ಟು ಸಂಖ್ಯೆಯ ಶಿಕ್ಷಕರು, ಉತ್ತಮ ಗಾಳಿ ಬೆಳಕುಗಳಿರುವ ತರಗತಿ ಕೊಠಡಿಗಳು, ದೊಡ್ಡ ಆಟದ ಮೈದಾನ, ಮುಕ್ತ ಸ್ಥಳಾವಕಾಶಗಳು, ಶೌಚಾಲಯಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಹೊಂದಿತ್ತು. ನಮ್ಮ ಶಾಲೆಯು ಮನೆಗೆ ತುಂಬಾ ಹತ್ತಿರವಿತ್ತು ಮತ್ತು ಶುಲ್ಕವು ಭರಿಸಲು ಸಾಧ್ಯವಾಗುವಂತಿತ್ತು.

ನಮ್ಮ ಶಾಲೆಯು ಬ್ರೆಜಿಲ್ ದೇಶದ ಶಿಕ್ಷಣ ತಜ್ಞ ಮತ್ತು ತತ್ವಜ್ಞಾನಿಯಾದ ಪೌಲೋ ಫ್ರೇರೇಯು ಇಪ್ಪತ್ತನೇ ಶತಮಾನದ ಆದಿಯಲ್ಲಿ ಜನಪ್ರಿಯಗೊಳಿಸಿದ "ಶಿಕ್ಷಣದ ಬ್ಯಾಂಕಿಂಗ್ ಪರಿಕಲ್ಪನೆಯನ್ನು" ಅನುಸರಿಸುತ್ತಿತ್ತು. ಶಿಕ್ಷಣದ ಬ್ಯಾಂಕಿಂಗ್ ಪರಿಕಲ್ಪನೆಯಲ್ಲಿ ವಿದ್ಯಾರ್ಥಿಗೆ ನೀಡಲಾಗುವ ಕ್ರಿಯೆಯ ವ್ಯಾಪ್ತಿಯು ಠೇವಣಿಗಳನ್ನು ಸ್ವೀಕರಿಸುವುದು, ವ್ಯವಸ್ಥಿತವಾಗಿಡುವುದು ಮತ್ತು ಶೇಖರಿಸುವುದರ ಮಟ್ಟಿಗೆ ಮಾತ್ರ ವಿಸ್ತರಿಸಲ್ಪಟ್ಟಿತ್ತು-ಅಂದರೆ ಇಲ್ಲಿ ಶಿಕ್ಷಕ/ಶಿಕ್ಷಕಿ ಒಬ್ಬ 'ಠೇವಣಿದಾರ' ಮತ್ತು ವಿದ್ಯಾರ್ಥಿಗಳು "ಠೇವಣಿ-ಶೇಖರಣೆದಾರರಾಗಿರುವರು". ಶಾಲೆಯಲ್ಲಿ ನಾವು ಮಾಡಬೇಕಾಗಿದ್ದ ಇನ್ನೊಂದು ಹೆಚ್ಚುವರಿ ವಿಷಯವೆಂದರೆ ನಾವು ಪರೀಕ್ಷೆಗಳಲ್ಲಿ ನಮ್ಮ ನೆನಪಿನಿಂದ ಉತ್ತರ ಬರೆಯಬೇಕಾಗಿತ್ತು.

ಒಂದು ವರ್ಷದಲ್ಲಿ ನಮಗೆ ನಾಲ್ಕು ಪರೀಕ್ಷೆಗಳಿದ್ದವು- ತ್ರೈಮಾಸಿಕ, ಮಧ್ಯಾವಧಿ, ಮೂರನೇ ತ್ರೈಮಾಸಿಕ ಮತ್ತು ಅಂತಿಮ ಪರೀಕ್ಷೆ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ, ವಿದ್ಯಾರ್ಥಿಗಳಿಗೆ ರ‍್ಯಾಂಕುಗಳನ್ನು ನೀಡಲಾಗುತ್ತಿತ್ತು. ಆ ರ‍್ಯಾಂಕುಗಳ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ಜಾಣ, ಮತ್ತು ದಡ್ಡರೆಂಬ ಹಣೆಪಟ್ಟಿಯನ್ನು ನೀಡಲಾಗುತ್ತಿತ್ತು. ಮೊದಲನೇ ಮೂರು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣಗೊಳ್ಳಬಹುದು ಆದರೆ ಮುಂದಿನ ತರಗತಿಗೆ ತೇರ್ಗಡೆಯಾಗಬೇಕಾದರೆ, ಅಂತಿಮ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಬೇಕಿತ್ತು.

ನಾನು ಎಂಟನೇ ತರಗತಿಗೆ ಹೋಗುತ್ತಿದ್ದಂತೆ, ಎ. ಮತ್ತು ಬಿ. ವಿಭಾಗಗಳನ್ನು ಒಂದೇ ವಿಭಾಗದಡಿಯಲ್ಲಿ ತರಲಾಯಿತು. ಆದುದರಿಂದ ನಮ್ಮ ತರಗತಿಯ ವಿದ್ಯಾರ್ಥಿ ಶಿಕ್ಷಕರ ಅನುಪಾತವು 1:56ರಷ್ಟಾಯಿತು.

ಎಂಟನೇ ತರಗತಿಯ ವಿದ್ಯಾರ್ಥಿಗೆ ಎರಡು ಆಯ್ಕೆಗಳು ಲಭ್ಯವಿದ್ದವು; ಸಂಸ್ಕೃತವನ್ನು ಮೊದಲ ಭಾಷೆಯಾಗಿ ಆಯ್ಕೆ ಮಾಡಿದವರಿಗೆ ಇಂಗ್ಲಿಷ್ ಎರಡನೆ ಭಾಷೆಯಾಗಿತ್ತು ಮತ್ತು ಕನ್ನಡವು ಮೂರನೇ ಭಾಷೆಯಾಗಿತ್ತು. ಇಂಗ್ಲಿಷನ್ನು ಮೊದಲನೇ ಭಾಷೆಯಾಗಿ ಆಯ್ಕೆ ಮಾಡಿದ ವಿದ್ಯಾರ್ಥಿಗಳಿಗೆ ಕನ್ನಡವು ಎರಡನೇ ಭಾಷೆಯಾಗಿತ್ತು ಮತ್ತು ಹಿಂದಿಯು ಮೂರನೇ ಭಾಷೆಯಾಗಿತ್ತು. ಇತರ ಎಲ್ಲಾ ವಿಷಯಗಳಿಗೆ ಅಂದರೆ ಗಣಿತ, ವಿಜ್ಞಾನ ಮತ್ತು ಸಮಾಜ ಅಧ್ಯಯನಗಳಿಗೆ ನಾವು ಒಂದೇ ತರಗತಿಯಲ್ಲಿ ಕುಳಿತುಕೊಳ್ಳುತ್ತಿದ್ದೆವು.

ಬೋಧನೆಯನ್ನು ಒಂದು ಉದಾತ್ತ ವೃತ್ತಿಯೆಂದು ಪರಿಗಣಿಸಲಾಗಿದೆ. ತನ್ನ ವಿದ್ಯಾರ್ಥಿಗಳನ್ನು ವಿಮರ್ಶಾತ್ಮಕ ಚಿಂತಕರನ್ನಾಗಿ ರೂಪಿಸುವಲ್ಲಿ, ಅವರು ಸಮರ್ಥ ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ಅಭಿವೃದ್ಧಿ ಹೊಂದಿ, ಬಳಿಕ ಸಮಾಜದ ಒಟ್ಟು ಕಲ್ಯಾಣವನ್ನು ಸುಸ್ಥಿರಗೊಳಿಸಲು ಮತ್ತು

ಸುಧಾರಿಸಲು ಅಗತ್ಯವಿರುವ ವಿವಿಧ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವ ಶಿಕ್ಷಣವನ್ನು ಅವರಿಗೆ ಒದಗಿಸುವಲ್ಲಿ ಶಿಕ್ಷಕರಿಗೆ ಒಂದು ಪ್ರಮುಖವಾದ ಪಾತ್ರವಿದೆ.

ಎಂಟನೇ ತರಗತಿಯಲ್ಲಿ ನನಗೆ ಕಲಿಸಿದ ಇಬ್ಬರು ಶಿಕ್ಷಕರು ನನಗೆ ನೆನಪಿದೆ, ಒಬ್ಬರದ್ದು ಎಲ್ಲಾ ತಪ್ಪು ಕಾರಣಗಳಿಗಾದರೆ ಒನ್ನೊಬ್ಬರು ನೆನಪಿರುವುದು ಎಲ್ಲಾ ಸರಿಯಾದ ಕಾರಣಗಳಿಗಾಗಿ.

ನಮಗೊಬ್ಬರು ಹೊಸ ಗಣಿತ ಶಿಕ್ಷಕರಿದ್ದರು. ಅವರಿಗೆ ನಮ್ಮ ಹತ್ತಿರದ ಬಾಲಕರ ಶಾಲೆಯಲ್ಲಿ ಹಲವಾರು ವರ್ಷಗಳ ಕಾಲ ವಿಷಯವನ್ನು ಬೋಧಿಸಿದ ಅನುಭವವಿತ್ತು. ಅವರು ನಮ್ಮ ಪ್ರಾಂಶುಪಾಲರ ಕಿರಿಯ ಸಹೋದರ ಕೂಡಾ ಆಗಿದ್ದರು. ಎಡೆಬಿಡದ ಧೂಮಪಾನಿಯಾಗಿದ್ದ ಅವರು ತಮ್ಮ ವಿದ್ಯಾರ್ಥಿಗಳನ್ನು ದೈಹಿಕ ಶಿಕ್ಷೆಗೆ ಒಳಪಡಿಸುವುದರಲ್ಲಿ ತೋರಿಸಿದ ನವೀನತೆಗೆ ಹೆಸರುವಾಸಿಯಾದರು. ಹೋಂವರ್ಕನ್ನು ಮಾಡಿಕೊಂಡು ಬರಲು ತಪ್ಪಿದವರು ಮತ್ತು ಪರೀಕ್ಷೆಗಳಲ್ಲಿ ಕಡಿಮೆ ಅಂಕಗಳನ್ನು ಪಡೆದವರು ಶಿಕ್ಷೆಗೆ ಗುರಿಯಾಗುತ್ತಿದ್ದ ವಿದ್ಯಾರ್ಥಿಗಳಾಗಿದ್ದರು. ಅವರ ಶಿಕ್ಷೆಯು ಕೇವಲ ಹುಡುಗರಿಗಷ್ಟೇ ಮೀಸಲಾಗಿತ್ತು ಮತ್ತು ಅದರಲ್ಲಿ ಅನಿರೀಕ್ಷಿತತೆಯ ಅಂಶವೂ ಅಡಕವಾಗಿತ್ತು.

ಹೊಟ್ಟೆಯ ಮಾಂಸದ ಭಾಗವನ್ನು ಎಳೆದು ತಿರುಚುವುದು, ತಲೆಯನ್ನು ಗೋಡೆಗೆ ಅಪ್ಪಳಿಸುವುದು, ಮೊಣಗಂಟಿನ ಮೇಲೆ ಮರದ ಅಳತೆಕೋಲಿನಿಂದ ಹೊಡೆಯುವುದು–ಕೆಲವೊಮ್ಮೆ ಕೋಲು ತುಂಡಾಗುವವರೆಗೆ ಹೊಡೆಯುವುದು ಮತ್ತು ತನ್ನ ತರಗತಿಯಲ್ಲಿ ಗಮನ ನೀಡದ ವಿದ್ಯಾರ್ಥಿಗಳತ್ತ ಚಾಕ್ ಪೀಸ್ ಮತ್ತು ಡಸ್ಟರ್ ಗಳನ್ನು ಎಸೆಯುವುದು–ಇವುಗಳು ಶಿಕ್ಷೆಯ ಕೆಲವು ವಿಧಾನಗಳಾಗಿದ್ದವು. ಅವರು ಪರೀಕ್ಷೆಗೆ ಎರಡು ಬಗೆಯ ಪ್ರಶ್ನೆ ಪತ್ರಿಕೆಗಳನ್ನು ರೂಪಿಸುತ್ತಿದ್ದರು–ಒಂದು ಬುದ್ಧಿವಂತ ವಿದ್ಯಾರ್ಥಿಗಳಿಗೆ ಮತ್ತು ಇನ್ನೊಂದು ಉಳಿದವರಿಗೆ. ಆದುದರಿಂದಲೇ ನನ್ನ ಸಹಪಾಠಿಗಳಲ್ಲಿ ಹೆಚ್ಚಿನವರು ಅವರ ತರಗತಿಗೆ ಹಾಜರಾಗಲು ಭಯಪಡುತ್ತಿದ್ದುದರಲ್ಲಿ ಆಶ್ಚರ್ಯವೇನಿರಲಿಲ್ಲ.

ಇನ್ನೊಬ್ಬ ಶಿಕ್ಷಕಿ–ನಾನು ಒಳ್ಳೆಯ ಕಾರಣಗಳಿಗಾಗಿ ನೆನಪಿಸುವವರು–ನಮಗೆ ಇಂಗ್ಲಿಷ್ ಮತ್ತು ಕನ್ನಡವನ್ನು ಕಲಿಸುತ್ತಿದ್ದರು. ಅವರ ಜ್ಞಾನ, ಮಾರ್ಗದರ್ಶನ ಮತ್ತು ಪ್ರೋತ್ಸಾಹಗಳಿಗಾಗಿ ನಾನು ಅವರನ್ನು ಇಂದಿಗೂ ನೆನಪಿಸುತ್ತೇನೆ.

ರಾಮನ ಭಕ್ತೆಯಾದ ಶಬರಿಯ ಮೇಲಿನ ಒಂದು ಕವಿತೆಯನ್ನು ಅವರು ನಮಗೆ ಕಲಿಸಿದ್ದು ನನಗೆ ಅಚ್ಚಳಿಯದ ನೆನಪು. ಆಕೆಯು ತನ್ನ ಹಾವಭಾವ ಮತ್ತು ವಾಚನದ ಮೂಲಕ ಕವಿತೆಗೆ ಜೀವಂತಿಕೆಯನ್ನು ತುಂಬುತ್ತಿದ್ದರು. ಆಕೆ ಇಂಗ್ಲಿಷ್‌ನಲ್ಲಿ ಸುಲಲಿತವಾಗಿದ್ದಷ್ಟು ಕನ್ನಡದಲ್ಲಿರಲಿಲ್ಲವೆಂದು ನಮಗೆ ಗೊತ್ತಿತ್ತು ಆದರೆ ಆಕೆಯು ಯಾವಾಗಲೂ ಚೆನ್ನಾಗಿ ತಯಾರಿ ಮಾಡಿಕೊಂಡೇ ಬರುತ್ತಿದ್ದರು.

ಇಂಗ್ಲಿಷ್ ತರಗತಿಯಲ್ಲಿ ಇಂಗ್ಲಿಷ್ ಪಠ್ಯಪುಸ್ತಕದ ಆಯ್ದ ಭಾಗಗಳನ್ನು ಓದಿ ಹೇಳಲು ನಮಗೆ ಹೇಳಲಾಗುತ್ತಿತ್ತು. ನಮ್ಮ ಉಚ್ಚಾರಣೆಯ ಮೇಲೆ ನಾವು ಪ್ರಯೋಗ ನಡೆಸುವಂತೆ ಅವರು ನಮ್ಮನ್ನು ಉತ್ತೇಜಿಸುತ್ತಿದ್ದರು ಮತ್ತು ಓದನ್ನು ಪರಿಣಾಮಕಾರಿಯಾಗಿ ಮಾಡಲು ನಮಗೆ ಸಲಹೆ ನೀಡುತ್ತಿದ್ದರು. 'ಈ ಕೆಳಗಿನ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ' ಎಂಬ ಅಭ್ಯಾಸವನ್ನು ಮಾಡುವಾಗ ನಾವು ಪ್ರಯೋಗಶೀಲರಾಗುವಂತೆ ನಮ್ಮನ್ನು ಉತ್ತೇಜಿಸುತ್ತಿದ್ದರು. ಆಕೆಯು ಸ್ವಾರಸ್ಯಕರ ಹಾಸ್ಯಚಟಾಕಿಗಳನ್ನು ಸಿಡಿಸುತ್ತಿದ್ದರಿಂದ ಆಕೆಯ ತರಗತಿಗಳು ಮೋಜಿನಿಂದ ಕೂಡಿದ್ದವು.

ಸುಮಾರು ಮೂವತ್ತು ವರ್ಷಗಳು ಕಳೆದಿವೆ ಆದರೂ ಈ ಸ್ಫೂರ್ತಿದಾಯಕ ಶಿಕ್ಷಕಿಯಿಂದ ಬಂದಂತಹ ಪ್ರಶಂಸೆಯ ಮಾತುಗಳು ನನ್ನ ಮನದಲ್ಲಿ ಹಚ್ಚ ಹಸಿರು.

ನನ್ನ ಇಬ್ಬರು ಹೆಣ್ಣು ಮಕ್ಕಳು ಬೆಂಗಳೂರಿನಲ್ಲಿ ನಮ್ಮ ನೆರೆಹೊರೆಯ ಒಂದು ಜನಪ್ರಿಯ ಖಾಸಗಿ ಶಾಲೆಯಲ್ಲಿ ಓದುತ್ತಿರುವರು–ಇಲ್ಲಿ ಪ್ರವೇಶ ಸಿಗುವುದು ಬಹಳ ಕಷ್ಟ ಮತ್ತು ಶುಲ್ಕ ತುಂಬಾ ದುಬಾರಿ. ನಾನು ರಾಜ್ಯ ಮಂಡಳಿ ಪಠ್ಯಕ್ರಮ ಕಲಿತಿದ್ದರೆ ಅವರು ಸಿ.ಬಿ.ಎಸ್.ಇ. ಪಠ್ಯಕ್ರಮ ಕಲಿಯುತ್ತಿದ್ದಾರೆ. ರ್‍ಯಾಂಕ್ ಇಂದು ಗ್ರೇಡ್ ಗಳಾಗಿ ಬದಲಾಗಿದೆ–ಅತ್ಯುತ್ತಮ ಗ್ರೇಡ್ 'ಎ+' ಆಗಿದ್ದು ಅತ್ಯಂತ ಕೊನೆಯ ಗ್ರೇಡ್ 'ಇ' ಆಗಿರುತ್ತದೆ. ಪರೀಕ್ಷೆಗಳ ಸ್ಥಾನದಲ್ಲಿ ನಿರಂತರ ಸಮಗ್ರ ಮೌಲ್ಯಮಾಪನವಿದೆ. ಎಲ್ಲಾ ಸೆಮಿಸ್ಟರ್‌ಗಳಲ್ಲಿ 'ಎ+' ಪಡೆದ ವಿದ್ಯಾರ್ಥಿಗಳ ಹೆಸರುಗಳನ್ನು ಶಾಲೆಯ ಸ್ವಾಗತಾಗಾರದಲ್ಲಿ ಪ್ರದರ್ಶಿಸಲಾಗುವುದು. ಪೋಷಕ–ಶಿಕ್ಷಕ ಸಭೆಗಳಲ್ಲಿ ಅನೇಕ ಬಾರಿ, ಶಿಕ್ಷಕರು ಮಕ್ಕಳ ಪ್ರಗತಿಯ ಕುರಿತು ಮಕ್ಕಳ ಎದುರಿನಲ್ಲೇ ಚರ್ಚಿಸುವರು.

'ಡಿ' ಮತ್ತು 'ಇ' ದರ್ಜೆ ಪಡೆದ ಮಕ್ಕಳು ಪ್ರತಿ ಶನಿವಾರದಂದು ನಡೆಯುವ ಪರಿಹಾರ ಬೋಧನೆ ತರಗತಿಗೆ ಹಾಜರಾಗಬೇಕು. ಅವರ ಹೆಸರುಗಳನ್ನು ಇತರ ಸಹಪಾಠಿಗಳ ಮುಂದೆ ತರಗತಿ ಕೋಣೆಯೊಳಗೆ ಘೋಷಿಸಲಾಗುತ್ತದೆ. ಇದು ಮಕ್ಕಳ ಮೇಲೆ ಒತ್ತಡವನ್ನುಂಟುಮಾಡುತ್ತದೆ "3 ಈಡಿಯಟ್ಸ್" ಚಲನಚಿತ್ರದ ಅಮೀರ್ ಖಾನ್‌ನ ಹೇಳಿಕೆಯಾದ "ಶ್ರೇಣಿಗಳು ಸಂಬಂಧಗಳಲ್ಲಿ ಒಡಕು ಉಂಟುಮಾಡುತ್ತವೆ" ಎಂಬುದು ಇಲ್ಲಿ ಬಹಳ ಸತ್ಯ.

ನನ್ನ ಮಕ್ಕಳಿಂದ ಮತ್ತು ಅವರ ಸಹಪಾಠಿಗಳಿಂದ ಶಾಲೆಯಲ್ಲಿ ದೈಹಿಕ ಶಿಕ್ಷೆ ಅಸ್ತಿತ್ವದಲ್ಲಿದೆ ಎಂದು ನನಗೆ ತಿಳಿಯಿತು. ಕಿವಿಗಳನ್ನು ಹಿಂಡುವುದು, ಅಳತೆಗೋಲಿನಿಂದ ಹೊಡೆಯುವುದು, ಕೆನ್ನೆಗೆ ಬಾರಿಸುವುದು, ಪಠ್ಯಪುಸ್ತಕದಿಂದ ತಲೆಯ ಮೇಲೆ ಕುಟ್ಟುವುದು, ಉಂಗುರಗಳಿಂದ ತಲೆಯ ಮೇಲೆ ತಟ್ಟುವುದು ಮತ್ತು ಚಾಕ್ ತುಂಡುಗಳನ್ನು ಎಸೆಯುವುದು ಸಾಮಾನ್ಯವಾಗಿದೆ. ಶಿಸ್ತಿನ ಹೆಸರಿನಲ್ಲಿ, ಹೆಚ್ಚಿನ ಶಿಕ್ಷಕರು ತರಗತಿಯಲ್ಲಿ ಒಂದು ಭಯದ ವಾತಾವರಣವನ್ನು ಸೃಷ್ಟಿಸುವರು–ಈ ರೀತಿಯಾಗಿ ಮಕ್ಕಳು ಪ್ರಶ್ನೆಗಳನ್ನು ಕೇಳದಂತೆ ಅವರನ್ನು ನಿರುತ್ಸಾಹಗೊಳಿಸುವರು. ಹೆಚ್ಚಿನ ಶಿಕ್ಷಕರಿಗೆ/ಶಿಕ್ಷಕಿಯರಿಗೆ ಪಠ್ಯಕ್ರಮವನ್ನು ಪೂರ್ತಿ–ಗೊಳಿಸುವುದೇ ಏಕೈಕ ಗುರಿ.

ಪ್ರತಿಯೊಬ್ಬ ಮಗುವು ಅನನ್ಯವಾದುದು ಮತ್ತು ಅವು ಕಲಿಯುವ ರೀತಿ ಬೇರೆ ಬೇರೆ. ಮಕ್ಕಳು ತಾವು ಪ್ರಶಂಸೆ ಮತ್ತು ಪ್ರೋತ್ಸಾಹವನ್ನು ದೊರೆತಾಗ ಹೊಸ ಹುರುಪು, ಆತ್ಮವಿಶ್ವಾಸದಿಂದ ಉತ್ತಮವಾಗಿ ಕಲಿಯುತ್ತಾರೆ.

ಶಿಕ್ಷಕರು ವಿದ್ಯಾರ್ಥಿಯ ವ್ಯಕ್ತಿತ್ವ ಮತ್ತು ಭವಿಷ್ಯವನ್ನು ಕಟ್ಟಲೂ ಬಲ್ಲರು ಕೆಡವಲೂ ಬಲ್ಲರು.



**ಉಲ್ಲೇಖಗಳು:**

ಪೆಡಗಾಜಿ ಆಫ್ ದಿ ಅಪ್ರೆಸ್ಡ್: ಪೌಲೋ ಫ್ರೇರೆ.

ಜರ್ನಲ್ ಆಫ್ ಕೃಷ್ಣಮೂರ್ತಿ ಸ್ಕೂಲ್ಸ್, 11 ನೇ ಸಂಚಿಕೆ, ನಾಲೇಡ್ಜ್ ಎಂಡ್ ಡಯಲಾಗ್ ಇನ್ ಎಜುಕೇಶನ್, ಜೇವಿಯರ್ ಗೋಮೆಜ್ ರಾಡ್ರಿಗಸ್.

**ಗುರುರಾಜ್** ಅವರು ಕಳೆದ ಐದೂವರೆ ವರ್ಷಗಳಿಂದ ಅಜೀಂ ಪ್ರೇಂಜಿ ಫೌಂಡೇಶನ್ನಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಅವರು ಫೌಂಡೇಶನ್ನಿನ ಗ್ರಂಥಾಲಯ ಮತ್ತು ಚಟುವಟಿಕೆ ಕೇಂದ್ರವನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇವರು ಕಂಪ್ಯೂಟರ್ ಸೈನ್ಸ್ ಇಂಜಿನೀರಿಂಗ್ ಮತ್ತು ಗ್ರಂಥಾಲಯ ಹಾಗು ಇನ್ಫರ್ಮೇಶನ್ ಸೈನ್ಸ್ ನಲ್ಲಿ ಪದವಿಗಳನ್ನು ಪಡೆದಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಅಜೀಂ ಪ್ರೇಂಜಿ ಫೌಂಡೇಶನ್ನಿಗೆ ಬಂದಿರುತ್ತಾರೆ. ಇವರನ್ನು gururaj@azimpremjifoundation.org ಯಲ್ಲಿ ಸಂಪರ್ಕಿಸಬಹುದು.



# ಭ್ರಮನಿರಸಿತ ವಿದ್ಯಾರ್ಥಿನಿಯ ಲೇಖನಿಯಿಂದ

ಸಂವಿದಾ ಎಸ್. ವೆಂಕಟೇಶ್

ನಿನ್ನೆ ನನ್ನ ಕೆಳಗಿನ ತರಗತಿ ವಿದ್ಯಾರ್ಥಿನಿಯೊಬ್ಬಳು ಕರೆ ಮಾಡಿ "ಸಂವಿದಾ, ನಾಳೆ ನನ್ನ ಭೌತಶಾಸ್ತ್ರ ಪರೀಕ್ಷೆಯಿದೆ ಮತ್ತು ನನಗೆ ಅದರಲ್ಲಿ ಕೆಲವೊಂದು ವಿಷಯ ಸ್ಪಷ್ಟವಾಗಿಲ್ಲ. ಸ್ವಲ್ಪ ಹೇಳಿಕೊಡ್ತೀರಾ?" ಎಂದು ಕೇಳಿದಳು. ಸಂತೋಷದಿಂದಲೇ ಒಪ್ಪಿಕೊಂಡೆ ಮತ್ತು ಆಕೆಯೊಂದಿಗೆ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಲು ಕೆಲ ನಿಮಿಷಗಳನ್ನು ಕಳೆದೆ. ಆಕೆ ಇನ್ನೂ ಕಲಿಯದಿರುವ ಒಂದು ಪರಿಕಲ್ಪನೆಗೆ ನಾವು ತಲುಪಿದಾಗ, ನಾನು ಅದನ್ನು ಆಕೆಗೆ ವಿವರಿಸಲು ಪ್ರಾರಂಭಿಸಿದೆ, ಆದರೆ ಆಕೆ ನನ್ನನ್ನು ಅರ್ಧದಲ್ಲಿಯೇ ತಡೆದು ನಿಲ್ಲಿಸಿ, "ಅದು ಪರವಾಗಿಲ್ಲ ಬಿಡಿ, ನಮಗಿನ್ನೂ ಅದನ್ನು ಹೇಳಿಕೊಟ್ಟಿಲ್ಲ. ಅದು ಪ್ರಶ್ನೆ ಪತ್ರಿಕೆಯಲ್ಲಿ ಬರಲು ಸಾಧ್ಯವಿಲ್ಲ," ಎಂದು ಆಕೆ ಆತ್ಮವಿಶ್ವಾಸದಿಂದಲೇ ನನಗೆ ಭರವಸೆ ನೀಡಿದಳು. ನಾನು ತುಸು ಕಸಿವಿಸಿಯಿಂದಲೇ ಫೋನ್ ಕೆಳಗಿಟ್ಟೆ.

"ಅದು ನಿಗದಿತ ಪಠ್ಯದಲ್ಲಿ ಇಲ್ಲ"–ನನ್ನ ಮಟ್ಟಿಗೆ ಈ ಒಂದು ಮಾತು ನಮ್ಮ ಶಿಕ್ಷಣ ವ್ಯವಸ್ಥೆಯ ಅತ್ಯಂತ ದೊಡ್ಡ ನ್ಯೂನ್ಯತೆಯನ್ನು ಸಂಕೇತಿಸುತ್ತದೆ: ಅಂದರೆ ಪರೀಕ್ಷೆಯಲ್ಲಿ ಪಾಸಾಗಲೋಸ್ಕರ ಮಾತ್ರವೇ ಕಲಿಯುವುದು.

ನಾನು ಈಗ ಅರ್ಧ–ಅವಧಿಯ ಮಧ್ಯದಲ್ಲಿದ್ದೇನೆ. ನನ್ನ ಸಹಪಾಠಿಗಳೆಲ್ಲರೂ ಭೌತಶಾಸ್ತ್ರ, ಅಂಕಿಗಳು ಮತ್ತು ಸಾವಯವ ರಸಾಯನಶಾಸ್ತ್ರದ ಪಠ್ಯಪುಸ್ತಕಗಳನ್ನು ತಮ್ಮ ಪಕ್ಕ ಇಟ್ಟುಕೊಂಡು ರಾತ್ರಿಯಿಡೀ ಅವುಗಳ ಅಧ್ಯಯನದಲ್ಲಿ ತಲ್ಲೀನರಾಗಿರುತ್ತಾರೆ. ಆದರೆ ನಾನು? ವಿಜ್ಞಾನದ ವಿದ್ಯಾರ್ಥಿಯಾಗಿದ್ದೂ, ನಾನು ಜಾಗತಿಕ ಇತಿಹಾಸ ಮತ್ತು ಸಮಗ್ರ ಅರ್ಥಶಾಸ್ತ್ರದ (Macroeconomics) ಮೇಲಿನ ಖಾನ್ ಅಕಾಡೆಮಿಯ ವಿಡಿಯೋವನ್ನು ವೀಕ್ಷಿಸುತ್ತಿದ್ದೇನೆ ಯಾಕೆಂದರೆ ನನಗವು ಆಸಕ್ತಿದಾಯಕವಾಗಿವೆ ಆದರೆ ಮನಸ್ಸಿನಲ್ಲಿ ಒಂದು ಕುರುಕುರು ನನಗೆ ತಿಳಿಹೇಳುತ್ತಿದೆ "ಸಂವಿದಾ ಇವು ಯಾವುವೂ ನಿನ್ನ ನಿಗದಿತ ಪಠ್ಯದಲ್ಲಿಲ್ಲ, ಹೋಗು ಉಪಯುಕ್ತವಾದ ಕೆಲಸದಲ್ಲಿ ತೊಡಗಿಸಿಕೊ". ನ್ಯಾಯವಾಗಿ ನನಗೆ ಇಂಥ ಕುರುಕುರು ಭಾವ ಬರಕೂಡದು. ಯಾಕೆಂದರೆ ನನಗೆ ಕಲಿಯಲು ಸಹಾಯಕಾರಿಯಾಗುವುದು ಶಿಕ್ಷಣದ ಉದ್ದೇಶವಾಗಿರಬೇಕೇ ಹೊರತು, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಸಹಾಯ ಮಾಡುವುದಲ್ಲ, ಆದಾಗ್ಯೂ ನಾನು ನಾಳೆಯ ತರಗತಿ ಕೆಲಸದಲ್ಲಿ (assignment) ಅಥವಾ ಮುಂದಿನ ತಿಂಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಲೋಸ್ಕರ ಕಲಿಯುತ್ತಿದ್ದೇನೆಂಬುದನ್ನು ನಾನು ಗಮನಿಸುತ್ತಿದ್ದೇನೆ. ಈ ತೆರನಾದ ಧೋರಣೆ ಎಲ್ಲಿಂದ ಬಂತು?

ಪ್ರತಿದಿನವೂ, ತರಗತಿ ಕೋಣೆಗಳಲ್ಲಿ ಮತ್ತು ಮನೆಗಳಲ್ಲಿ ಈ ಮನೋ ಧೋರಣೆಯು ನನ್ನ ಸುತ್ತ ಇನ್ನಷ್ಟು ಬಿಗಿ ಬಳ್ಳಿಯಾಗಿ ಹಬ್ಬುತ್ತಿರುವುದನ್ನು ನಾನು ಗಮನಿಸುತ್ತೇನೆ. ತರಗತಿಯಲ್ಲಿ ಒಬ್ಬ ಗೆಳೆಯನಲ್ಲಿ ಯಾವುದಾದರು ಒಂದು ಸಂಶಯವನ್ನು ಕುರಿತು ವಿಚಾರಿಸುವಾಗ ಅದು ಮೆಲ್ಲಗೆ ಚಿಗುರಲಾರಂಭಿಸುತ್ತಿತ್ತು. –"ಅದು ಪೋರ್ಶನ್‌ನಲ್ಲಿ ಇಲ್ಲ, ಚಿಂತೆ ಮಾಡಬೇಡ." ಒಬ್ಬ ಶಿಕ್ಷಕರು ಒಂದು ಅಧ್ಯಾಯವನ್ನು ಇನ್ನೂ ವಿವರವಾಗಿ ಹೇಳಿಕೊಡಲಾ ಎಂದು ಕೇಳಿದಾಗ–"ಮ್ಯಾಡಂ, ಪಠ್ಯ ಪುಸ್ತಕದಲ್ಲಿ ಇದರ ಬಗ್ಗೆ ಕೇವಲ ನಾಲ್ಕು ವಾಕ್ಯಗಳು ಮಾತ್ರ ಇವೆ, ಇವುಗಳ ಕುರಿತು ನಮಗೆ ಹೆಚ್ಚಿಗೆ ಹೇಳಿದರೆ ಅದು ನಮ್ಮಲ್ಲಿ ಮತ್ತಷ್ಟು ಗೊಂದಲವನ್ನು ಮಾತ್ರ ಉಂಟುಮಾಡುತ್ತವೆ" ಎಂಬ ಪ್ರತಿಕ್ರಿಯೆ ಬರುವುದು. ಒಬ್ಬ ಜೀವಶಾಸ್ತ್ರದ ವಿದ್ಯಾರ್ಥಿಯು ತಾನು ಮೋಜಿಗಾಗಿ ಕಂಪ್ಯೂಟರ್ ಪ್ರೋಗ್ರಾಮ್‌ಗಳನ್ನು ಬರೆಯುತ್ತೇನೆ ಎಂದು ಹೇಳಿದರೆ ಆಕೆಯು ಹಲವು ವಿಧದ ನೋಟಗಳಿಗೆ ಗುರಿಯಾಗುವಳು–ಕೆಲವು ಕುತೂಹಲಭರಿತ ನೋಟಗಳಾದರೆ ಇನ್ನು ಕೆಲವು ಮಹಾ ಮಹಾ ಎಂದು ಅಣಕಿಸುವಂತಹದಾಗಿರುತ್ತವೆ.

ಆದರೆ ಅದು ಇನ್ನಷ್ಟು ಬೆಳೆಯುತ್ತಾ ಹೋಗುತ್ತದೆ. ನಿಗದಿತ

ಪಠ್ಯವಸ್ತುವಿನ ಹೊರಗಿರುವ ವಿಷಯಗಳನ್ನು ಕೈಗೆತ್ತಿಕೊಳ್ಳಲು ಶಿಕ್ಷಕರು ನಿರಾಕರಿಸುವರು. ಪೋಷಕರು ನಿಮ್ಮ ವಿಶೇಷ ಪಠ್ಯ ವಿಷಯಗಳಿಗೆ ಸಂಬಂಧಿಸದಿರುವ ವಿಷಯಗಳನ್ನು ಓದದಂತೆ ನಿಮ್ಮನ್ನು ನಿರ್ಬಂಧಿಸುವರು. ನೀವು ಜಂಟಿ ಪ್ರವೇಶ ಪರೀಕ್ಷೆ (JEE) ಆಕಾಂಕ್ಷಿಯಾಗಿದ್ದರೆ, ನಿಮ್ಮ ಕೋಚಿಂಗ್ ಸಂಸ್ಥೆಯು ಜೀವಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ವಾಸ್ತುಶಿಲ್ಪ ಮತ್ತು ಸಾವಿರಾರು ಇತರ ವಿಷಯಗಳ ಮೇಲಿನ ಪುಸ್ತಕಗಳಿಂದ ನಿಮ್ಮನ್ನು ಬಹು ದೂರವಿಡುತ್ತದೆ. –"ನಿಮ್ಮ ಗಮನವನ್ನು ಕೇಂದ್ರೀಕರಿಸಲು ನಿಮಗೆ ಸಹಾಯ ಮಾಡಲು ಮಾತ್ರ ಹೀಗೆ ಮಾಡಲಾಗಿದೆ" ಎನ್ನುವುದು ನಿಮಗೆ ನೀಡಲಾಗುವ ನೆಪವಾಗಿರುತ್ತದೆ. ಯಾವುದರ ಮೇಲೆ ಗಮನ ಕೇಂದ್ರೀಕರಿಸುವುದು? ಪರೀಕ್ಷೆಯಲ್ಲಿ ಉತ್ತಮವಾಗಿ ಸಾಧನೆ ಮಾಡುವುದೆ?

ಆದುದರಿಂದ, ನನ್ನ ಪ್ರಕಾರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಮಾತ್ರ ಅಧ್ಯಯನ ಮಾಡುವುದರ ಮೇಲಿನ ಅತಿಯಾದ ಒತ್ತು ಒಂದು ಅತ್ಯಂತ ಅಶಕ್ತಗೊಳಿಸುವ ಶಾಲಾ ಪರಿಸರಕ್ಕೆ ಕಾರಣವಾಗುತ್ತದೆ. ಒಂದು ಪರೀಕ್ಷೆಗಾಗಿ ಮಾತ್ರವೇ ಕಲಿಯುವ ವಿದ್ಯಾರ್ಥಿಗಳನ್ನು ಹೊಣೆ ಮಾಡಲು (ನನ್ನನ್ನೂ ಒಳಗೊಂಡಂತೆ) ನನಗೆ ಸಾಧ್ಯವಾಗದು. ಆ ಪರೀಕ್ಷೆಯು ನಿಮ್ಮ ಕಾಲೇಜು, ನಿಮ್ಮ ವೃತ್ತಿ ಜೀವನ ಮತ್ತು ಇವೆಲ್ಲದರ ಬಳಿಕ ನೀವು ನಡೆಸಬೇಕಾದ ಬದುಕಿನ ರೀತಿಯನ್ನು ನಿರ್ಧರಿಸುವಂತಹದ್ದಾಗಿರಬಹುದು. ಆದರೆ ಅದು ಹಾಗಿರಕೂಡದು. ನೀವು ಹದಿನಾರು ವರ್ಷ ಪ್ರಾಯದವರಾಗಿರುವಾಗ ಬರೆಯುವ ಪರೀಕ್ಷೆಗಳ ಗೊಂಚಲುಗಳ ಮೇಲೆ ನಿಮ್ಮ ಭವಿಷ್ಯ ನೇತಾಡಬಾರದು. ನಿಮ್ಮ ಒಂದು ಪರೀಕ್ಷೆಯ ಅಂಕದ ಆಧಾರದಲ್ಲಿ ನಿಮ್ಮ ಕಾಲೇಜು ನಿಮ್ಮನ್ನು ಅಳೆಯಬಾರದು. ನಿಮ್ಮ ಭಾವೀ ಉದ್ಯೋಗದಾತರು ನಿಮ್ಮ ಕಾಲೇಜಿನ ಶ್ರೇಣಿ ಬಿಂದು ಸರಾಸರಿಯನ್ನು (GPA) ಆಧರಿಸಿ ನಿಮ್ಮನ್ನು ನೇಮಕಾತಿ ಮಾಡಬಾರದು.


ನಾನು ಇಲ್ಲಿ ಪರೀಕ್ಷೆಗಳನ್ನೇ ರದ್ದುಗೊಳಿಸಬೇಕೆಂಬುದನ್ನು ಸೂಚಿಸುತ್ತಿಲ್ಲ. ಅದು ಹುಟ್ಟು ಹಾಕುವ ಗೊಂದಲಗಳನ್ನು ಕುರಿತು ಊಹಿಸುವುದೇ ಭಯಾನಕವಾಗಿದೆ. ಆದರೆ ಪರೀಕ್ಷೆ ನಡೆಸುವ ಹೆಚ್ಚು ಪರಿಣಾಮಕಾರಿಯಾದ ವಿಧಾನವನ್ನು ನಾವು ಕಂಡು ಹಿಡಿಯಬೇಕು. "ಪರೀಕ್ಷೆಯು" ಒಂದು ಕಟ್ಟುನಿಟ್ಟಿನ ಕಣ್ಗಾವಲಿನಡಿಯಲ್ಲಿರುವ ಪರೀಕ್ಷಾ ಕೊಠಡಿಯಲ್ಲಿ ನೀವು ಮೂರು ಗಂಟೆಗಳ ಕಾಲ ಬರೆಯುವ ಪತ್ರಿಕೆಯಾಗಿರಬೇಕಾದ ಅಗತ್ಯವಿಲ್ಲ. ಪರೀಕ್ಷೆಗಳು ಮತ್ತು ಅಂತಿಮವಾಗಿ ಈ ಪರೀಕ್ಷೆಗಳಿಗೆ ನಾವು ಎಷ್ಟು ಪ್ರಾಮುಖ್ಯತೆ ನೀಡುವೆವು ಎಂಬುದರ ಮೇಲಿನ ನಮ್ಮ ಚಿಂತನೆಗಳನ್ನು ಇನ್ನಷ್ಟು ವಿಸ್ತಾರಗೊಳಿಸಬೇಕಾದ ಅಗತ್ಯವಿದೆ.

ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಗೊಣಗಾಡುವುದು ಸುಲಭ, ಆದರೆ ಪ್ರಶಂಸಿಸುವುದು ಬಹಳ ಕಷ್ಟ. ಭಾರತೀಯ ಶಾಲಾ ವ್ಯವಸ್ಥೆಯ ಒಂದು ಉತ್ಪನ್ನವಾಗಿ (ಅಥವಾ ಒಬ್ಬ ಬಲಿಪಶುವೆಂದು ನಾನು ಹೇಳಬೇಕೆ?), ನನ್ನ ಶಾಲಾ ಪರಿಸರದ ಬಗ್ಗೆ ನನ್ನಲ್ಲಿ ಕೇಳಿದಾಗ ನಾನು ಯಾವಾಗಲೂ ಸಿನಿಕಳಾಗಿರುತ್ತೇನೆ. ಆದರೆ ನನ್ನಂತೆ ಇರುವವರ ದೂರುಗಳ ಮೂಲಕವೇ ವ್ಯವಸ್ಥೆಯು ವಿಕಸನಗೊಳ್ಳುವುದು? ನನ್ನಂತಹ ವಿದ್ಯಾರ್ಥಿಗಳು ಇಲ್ಲಿನ ಆಭಾಸಗಳನ್ನು ಎತ್ತಿತೋರಿಸದ ಹೊರತು, ಇಲ್ಲಿ ಪ್ರತಿಯೊಂದು ಕೂಡಾ ಅತ್ಯುತ್ಕೃಷ್ಟವೆಂದು ಕಾಣುವುದು ಹಾಗು ಯಾವುದೂ ಎಂದಿಗೂ ಬದಲಾಗದು. ಒಂದು ಶಿಕ್ಷಣ ವ್ಯವಸ್ಥೆಯು ನಿಂತ ನೀರಾಗಬಾರದು, ಅದು ತಾನು ರೂಪಿಸುವ ಸಮಾಜದ ಬೇಡಿಕೆಗಳನ್ನು ನೆರವೇರಿಸಲು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಒಂದು ಹರಿಯುವ ನದಿಯಾಗಿ ಪರಿವರ್ತನೆಗೊಳ್ಳಬೇಕು.



**ಸಂವಿದಾ** ಬೆಂಗಳೂರಿನ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಓದುತ್ತಿರುವ 16 ವರ್ಷದ ವಿದ್ಯಾರ್ಥಿನಿ ಅವರನ್ನು samvida.venkatesh@gmail.com ನಲ್ಲಿ ಸಂಪರ್ಕಿಸಬಹುದು




ವಿಜ್ಞಾನವೆಂಬುದು ಬಲು ದೊಡ್ಡ ಆಟ...
ವಿಶ್ವವೇ ಅದರ ಆಡುಂಬೊಲ.
ಇಸಿಡೋರ್ ಐಸಾಕ್ ರಾಬಿ
Azim Premji University
Teachers of India
www.teachersofindia.org
This image was the cover illustration for the Physics (May-June 2015) edition of Teacher Plus magazine

ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ

# ಪುಟಾಣಿ ಮಕ್ಕಳ ಶಿಕ್ಷಣ




**ಅಜೀಂ ಪ್ರೇಂಜಿ ಫೌಂಡೇಶನ್**
ನಂ 134, ದೊಡ್ಡಕನ್ನೆಳ್ಳಿ,
ವಿಪ್ರೋ ಕಾರ್ಪೋರೇಷನ್ ಕಚೇರಿ ಪಕ್ಕ,
ಸರ್ಜಾಪುರ ರಸ್ತೆ, ಬೆಂಗಳೂರು – 560035, ಭಾರತ
ದೂರವಾಣಿ : 91 80 6614 4900 / 01 / 02 ಫ್ಯಾಕ್ಸ್ : 91 80 6614 4903
ಇ–ಅಂಚೆ : learningcurve@azimpremjifoundation.org
ವೆಬ್‌ಸೈಟ್ : **www.azimpremjifoundation.org**

ಹಾಗೆಯೇ : **www.azimpremjiuniversity.edu.in** ನಲ್ಲಿ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಅಂತರಜಾಲ ತಾಣವನ್ನು ಭೇಟಿ ಮಾಡಿರಿ.



Azim Premji University

**ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಒಂದು ಪ್ರಕಟಣೆ**


ನಿಮ್ಮ ಸಲಹೆಗಳು, ವಿಮರ್ಶೆ, ವೈಯಕ್ತಿಕ ಅಭಿಪ್ರಾಯ ಮತ್ತು ಅನುಭವಗಳನ್ನು ಹಂಚಿಕೊಳ್ಳಲು– **www.azimpremjifoundation.org** ವಿಳಾಸಕ್ಕೆ ಬರೆಯಿರಿ